ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	597
ವಿಧಾನಸಭೆ ಸದಸ್ಯರ ಹೆಸರು	:	ಶ್ರೀ ಅಬ್ಬಯ್ಯ ಪ್ರಸಾದ್,
ಉತ್ತರಿಸುವ ದಿನಾಂಕ	:	04-02-2021
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಹುಬ್ಬಳ್ಳಿ ಧಾರವಾಡ (ಪೂರ್ವ) ಮತಕ್ಷೇತ್ರದಲ್ಲಿ ಪರೀಕ್ಷಾ ಪೂರ್ವ ತರಬೇತಿ ಕೇಂದ್ರ ಸ್ಥಾಪಿಸುವ ವಿಷಯ ಸರ್ಕಾರದ ಗಮನದಲ್ಲಿದೆಯೇ;	ಹುಬ್ಬಳ್ಳಿ ಧಾರವಾಡ ಪೂರ್ವ ಮತಕ್ಷೇತ್ರದಲ್ಲಿ ಪರೀಕ್ಷಾ ಪೂರ್ವ ತರಬೇತಿ ಕೇಂದ್ರದ ಕಟ್ಟಡ ನಿರ್ಮಾಣ ಮಾಡುವ ಬಗ್ಗೆ ಸಕಾರದ ಆದೇಶ ಸಂಖ್ಯೆ: ಸಕಇ 98 ಪಕವಿ 2019, ದಿನಾಂಕ:12-07-2019ರಲ್ಲಿ ಈ ಕಾರ್ಯಕ್ರಮಕ್ಕೆ ತಗಲುವ ವೆಚ್ಚವನ್ನು ವಿವಿಧ ಅಭಿವೃದ್ಧಿ ಕಾಮಗಾರಿಗಳ ಲೆಕ್ಕಶೀರ್ಷಿಕೆ: 4225-01-796-0-01ರಡಿ ಪರೀಕ್ಷಾ ಪೂರ್ವ ತರಬೇತಿ ಕಟ್ಟಡ ನಿರ್ಮಾಣಕ್ಕೆ ರೂ. 300.00ಲಕ್ಷಗಳ ವೆಚ್ಚದಲ್ಲಿ ನಿರ್ಮಾಣ ಮಾಡಲು ಆದೇಶಿಸಲಾಗಿತ್ತು. ದಿನಾಂಕ: 15-06-2020ರಂದು ನಡೆದ ರಾಜ್ಯ ಮಟ್ಟದ ಉನ್ನತ ಸಮಿತಿ ಸಭೆಯಲ್ಲಿ ಚರ್ಚಿಸಲಾಗಿ ಸದರಿ ಸ್ಥಳದಲ್ಲಿ ಯಾವ ರೀತಿ ತರಬೇತಿ ನೀಡುವ ಕುರಿತು ಸ್ಪಷ್ಟತೆ ಇಲ್ಲದೇ ಇರುವುದರಿಂದ, ಸದ್ಯಕ್ಕೆ ಕಟ್ಟಡ ನಿರ್ಮಾಣವನ್ನು ಕೈಗೊಳ್ಳುವ ಅವಶ್ಯಕತೆ ಇರುವುದಿಲ್ಲವೆಂದು ತೀರ್ಮಾನಿಸಲಾಗಿರುತ್ತದೆ.
ಆ)	ಇದ್ದಲ್ಲಿ, ಪರೀಕ್ಷಾ ಪೂರ್ವ ತರಬೇತಿ ಕೇಂದ್ರವನ್ನು ನಿರ್ಮಾಣ ಮಾಡಲು ನಿಗದಿ ಪಡಿಸಿರುವ ಮೊತ್ತವೆಷ್ಟು;	
ಇ)	ನಿರ್ಮಾಣ ಮಾಡಲು ವಿಳಂಬಕ್ಕೆ ಕಾರಣವೇನು?	

ಸಕಇ 38 ಪಕವಿ 2021

(ಬಿ. ಶ್ರೀರಾಮುಲು)
ಮಾನ್ಯ ಸಮಾಜ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 599
2. ಮಾನ್ಯ ಸದಸ್ಯರ ಹೆಸರು : ಶ್ರೀ ವೆಂಟಕರಮಣಯ್ಯ ಟಿ(ದೊಡ್ಡಬಳ್ಳಾಪುರ)
3. ಉತ್ತರಿಸಬೇಕಾದ ದಿನಾಂಕ : 4/2/2021
4. ಉತ್ತರಿಸುವವರು : ಮಾನ್ಯ ಕಾರ್ಮಿಕ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ರಾಜ್ಯದ ನೇಯ್ಗೆ ಕಾರ್ಮಿಕರನ್ನು ಅಸಂಘಟಿತ ಕಾರ್ಮಿಕರ ಪಟ್ಟಿಗೆ ಸೇರ್ಪಡೆ ಮಾಡುವುದು ಹಾಗೂ ಅಸಂಘಟಿತ ಕಾರ್ಮಿಕರಿಗೆ ಸಿಗುವ ಎಲ್ಲಾ ಸೌಲಭ್ಯಗಳನ್ನು ನೇಯ್ಗೆ ಕಾರ್ಮಿಕರಿಗೆ ದೊರಕಿಸಿ ಕೊಡುವ ಯೋಜನೆ ಸರ್ಕಾರದ ಮುಂದಿದೆಯೇ;	ಕರ್ನಾಟಕ ರಾಜ್ಯ ಸರ್ಕಾರವು 43 ವರ್ಗಗಳ ಕಾರ್ಮಿಕರನ್ನು ಅಸಂಘಟಿತ ಕಾರ್ಮಿಕರೆಂದು ಗುರುತಿಸಿದ್ದು, ಅದರಲ್ಲಿ "ಮನೆಗಳಲ್ಲಿ ನೇಯ್ಗೆ ಕೆಲಸ ಮಾಡುವ ನೇಕಾರರು" ಈ ವರ್ಗದ ಕಾರ್ಮಿಕರನ್ನು ಸಹ ಅಸಂಘಟಿತ ಕಾರ್ಮಿಕರೆಂದು ಗುರುತಿಸಿ ಸೇರ್ಪಡೆಗೊಳಿಸಲಾಗಿದೆ. ಪ್ರಸ್ತುತ, ಸದರಿ ಕಾರ್ಮಿಕರಿಗೆ ಸೌಲಭ್ಯ ಒದಗಿಸುವ ಯಾವುದೇ ಯೋಜನೆಗಳನ್ನು ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಜಾರಿಗೊಳಿಸುತ್ತಿಲ್ಲ.
(ಆ)	ಹಾಗಿದ್ದಲ್ಲಿ, ಸರ್ಕಾರವು ಕೈಗೊಂಡಿರುವ ಕ್ರಮಗಳೇನು;	ಈ ಕುರಿತು ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಸಂಖ್ಯೆ: ಕಾಇ 34 ಎಲ್ಇಟಿ 2021

(ಅರಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 773
ವಿಧಾನಸಭೆ ಸದಸ್ಯರ ಹೆಸರು : ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್,
ಉತ್ತರಿಸುವ ದಿನಾಂಕ : 04-02-2021
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ವಿಜಯಪುರ ಜಿಲ್ಲೆಯ ತಾಲ್ಲೂಕು ಕೇಂದ್ರವಾದ ಇಂಡಿ ಪಟ್ಟಣದಲ್ಲಿ ಶ್ರೀ ಸಮಗಾರ ಹರಳಯ್ಯ ಭವನ ನಿರ್ಮಾಣ ಪ್ರಸ್ತಾವನೆಯು ಸರ್ಕಾರಕ್ಕೆ ಬಂದಿರುವುದು ನಿಜವೇ; ಸದರಿ ಯೋಜನೆಯ ರೂಪುರೇಷೆಗಳೇನು;	ಹೌದು. ವಿಜಯಪುರ ಜಿಲ್ಲೆ, ಇಂಡಿ ತಾಲ್ಲೂಕು ಕೇಂದ್ರದಲ್ಲಿ ಶ್ರೀ ಸಮಗಾರ ಹರಳಯ್ಯ ಭವನ ನಿರ್ಮಾಣ ಸಂಬಂಧ ಪಟ್ಟಣ ಪಂಚಾಯತಿಯ ರಿ.ನಂ.647/ಬ ಪ್ಲಾಟ್ ನಂ.32 ಕ್ಷೇತ್ರ 517.46 ಚ.ಮೀ (5570 ಚ.ಅ) ಸಿ.ಎ ನಿವೇಶನವನ್ನು ರೂ.15,39,856/-ಗಳ ವೆಚ್ಚದಲ್ಲಿ ಖರೀದಿಸಲು ಅನುಮತಿ ನೀಡಿ, ಅನುದಾನ ಬಿಡುಗಡೆ ಮಾಡುವ ಕುರಿತಾದ ಪ್ರಸ್ತಾವನೆಯಾಗಿರುತ್ತದೆ.
ಆ)	ಹಾಗಿದ್ದಲ್ಲಿ ಪ್ರಸ್ತಾವನೆ ಬಂದಿದ್ದು ಯಾವಾಗ; ಇದುವರೆಗೂ ಅನುದಾನ ಮಂಜೂರು ಮಾಡದಿರಲು ಕಾರಣವೇನು;	ಸರ್ಕಾರದಲ್ಲಿ ದಿನಾಂಕ: 22-11-2019ರಂದು ಸ್ವೀಕೃತಗೊಂಡಿರುತ್ತದೆ. ಈಗಾಗಲೇ, ಇಂಡಿ ತಾಲ್ಲೂಕು ಕೇಂದ್ರದಲ್ಲಿ ಡಾ: ಬಿ.ಆರ್. ಅಂಬೇಡ್ಕರ್ ಭವನ ಡಾ: ಬಾಬು ಜಗಜೀವನ ರಾಂ ಭವನ ನಿರ್ಮಾಣಕ್ಕೆ ಮಂಜೂರಾತಿ ನೀಡಲಾಗಿದ್ದು ಅದೇ ಸ್ಥಳದಲ್ಲಿ ಶ್ರೀ ಸಮಗಾರ ಹರಳಯ್ಯ ಸಮುದಾಯ ಭವನ ನಿರ್ಮಾಣ ಮಾಡಲು ಪರಿಶೀಲಿಸಿ ಕ್ರಮ ವಹಿಸಲಾಗುವುದು.
ಇ)	ಸದರಿ ಕಾಮಗಾರಿಗೆ ಅನುದಾನ ಮಂಜೂರು ಮಾಡುವ ಆಸಕ್ತಿ ಸರ್ಕಾರಕ್ಕೆ ಇದೆಯೇ;	
ಈ)	ಹಾಗಿದ್ದಲ್ಲಿ, ಯಾವಾಗ ಮತ್ತು ಎಷ್ಟು ಅನುದಾನವನ್ನು ಯಾವ ಕಾಲಮಿತಿಯೊಳಗೆ ಮಂಜೂರು ಮಾಡಲಾಗುವುದು; ಅದಕ್ಕಾಗಿ ಸರ್ಕಾರ ಕೈಗೊಳ್ಳುವ ಕ್ರಮಗಳೇನು? (ವಿವರ ಒದಗಿಸುವುದು)	

ಸಕಇ 39 ಪಕವಿ 2021

(ಬಿ. ಶ್ರೀರಾಮುಲು)
ಮಾನ್ಯ ಸಮಾಜ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 775
ಮಾನ್ಯ ಸದಸ್ಯರ ಹೆಸರು : ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ)
ಉತ್ತರಿಸಬೇಕಾದ ದಿನಾಂಕ : 04-02-2021
ಉತ್ತರಿಸುವ ಸಚಿವರು : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ವಿಜಯಪುರ ಜಿಲ್ಲೆಯ ಇಂಡಿ ಪಟ್ಟಣವು ತಾಲ್ಲೂಕು ಕೇಂದ್ರವಾಗಿದ್ದು, ಗಡಿಭಾಗದಲ್ಲಿ ಬರುವ ಹಾಗೂ ಅತ್ಯಂತ ಹಿಂದುಳಿದ ಪ್ರದೇಶವಾಗಿದ್ದು, ಸದರಿ ಇಂಡಿ ಪಟ್ಟಣದಲ್ಲಿ ತಾಯಿ ಮತ್ತು ಮಗುವಿನ ಆಸ್ಪತ್ರೆ (ಎಮ್.ಸಿ.ಹೆಚ್) ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ವಿಜಯಪುರ ಜಿಲ್ಲೆಯ ಇಂಡಿ ಪಟ್ಟಣದಲ್ಲಿ ಸಾರ್ವಜನಿಕ ಆಸ್ಪತ್ರೆಯು ಕಾರ್ಯನಿರ್ವಹಿಸುತ್ತಿದ್ದು, ಈ ಆಸ್ಪತ್ರೆಯಲ್ಲಿ ತಾಯಿ ಮತ್ತು ಮಗುವಿನ ಚಿಕಿತ್ಸೆಗೆ ಅವಶ್ಯವಿರುವ ಸೇವೆಗಳನ್ನು ನೀಡಲಾಗುತ್ತಿದೆ. ವಿಶೇಷವಾಗಿ ತಾಯಿ ಮತ್ತು ಮಕ್ಕಳ ಆಸ್ಪತ್ರೆಯನ್ನು ಮಂಜೂರು ಮಾಡಲು ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿಯಮದಂತೆ ಆಸ್ಪತ್ರೆಯಲ್ಲಿ Bed Occupancy rate ಶೇ.70ಕ್ಕಿಂತ ಹೆಚ್ಚಿಗೆ ಇರಬೇಕಾಗಿದ್ದು, ಪ್ರಸ್ತುತ ಶೇ.60 ಇರುವುದರಿಂದ ಸದ್ಯದಲ್ಲಿ ವಿಶೇಷ ತಾಯಿ ಮತ್ತು ಮಕ್ಕಳ ಆಸ್ಪತ್ರೆಯನ್ನು ಮಂಜೂರು ಮಾಡಲು ಅವಕಾಶವಿರುವುದಿಲ್ಲ.
ಆ	ಹಾಗಿದ್ದಲ್ಲಿ, ಮಹಿಳೆಯರ ಮತ್ತು ಮಕ್ಕಳ ಆರೋಗ್ಯದ ಹಿತದೃಷ್ಟಿಯಿಂದ ಇಂಡಿ ಪಟ್ಟಣದಲ್ಲಿ ತಾಯಿ ಮತ್ತು ಮಗುವಿನ ಆಸ್ಪತ್ರೆಯನ್ನು ಮಂಜೂರು ಮಾಡಲು ಸರ್ಕಾರ ಆಸಕ್ತಿವಹಿಸಿದೆಯೇ;	2019-20 ನೇ ಸಾಲಿನಲ್ಲಿ ಎಂ.ಸಿ.ಹೆಚ್ ಆಸ್ಪತ್ರೆಯ ನಿರ್ಮಾಣಕ್ಕಾಗಿ ರಾಷ್ಟ್ರೀಯ ಆರೋಗ್ಯ ಅಭಿಯಾನದಲ್ಲಿ ಪ್ರಸ್ತಾವನೆ ಸಲ್ಲಿಸಿದ್ದು ಮೇಲೆ ತಿಳಿಸಿದ ಕಾರಣಗಳಿಂದ ಅನುಮೋದನೆಗೊಂಡಿರುವುದಿಲ್ಲ.
ಇ	ಹಾಗಿದ್ದಲ್ಲಿ, ಯಾವಾಗ ಸದರಿ ಆಸ್ಪತ್ರೆಯನ್ನು ಮಂಜೂರು ಮಾಡಲಾಗುವುದು; ಅದಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)	ಪ್ರಸ್ತುತ ಆಸ್ಪತ್ರೆಯ ಸೇವಾ ಗುಣಮಟ್ಟ ಮತ್ತು ಸೇವಾ ಪೂರೈಕೆದಾರರ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ತರಬೇತಿಯನ್ನು ನೀಡಲಾಗುತ್ತಿದೆ ಹಾಗೂ ಮುಂಬರುವ ದಿನಗಳಲ್ಲಿ ಹೆಚ್ಚಿನ ಹೆರಿಗೆ ಪ್ರಕರಣಗಳು ಸಂಭವಿಸಿದಲ್ಲಿ ವಿಶೇಷ ತಾಯಿ ಮತ್ತು ಮಕ್ಕಳ ಆಸ್ಪತ್ರೆಯನ್ನು ತೆರೆಯಲು ಅವಕಾಶವಿರುತ್ತದೆ.

ಆಕುಕ 10 ಎಸ್‌ಬಿವಿ 2021

(ಡಾ॥ ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 781
ಮಾನ್ಯ ಸದಸ್ಯರ ಹೆಸರು : ಶ್ರೀ ಸೋಮನಗೌಡ ಬಿ. ಪಾಟೀಲ್ (ಸಾಸನೂರು) (ದೇವರ ಹಿಪ್ಪರಗಿ)
ಉತ್ತರಿಸಬೇಕಾದ ದಿನಾಂಕ : 04-02-2021
ಉತ್ತರಿಸುವ ಸಚಿವರು : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ದೇವರಹಿಪ್ಪರಗಿ ಪಟ್ಟಣದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ತಾಲ್ಲೂಕು ಆಸ್ಪತ್ರೆಯನ್ನಾಗಿ ಯಾವಾಗ ಆಸ್ಪತ್ರೆಯನ್ನಾಗಿ ಯಾವಾಗ ಮೇಲ್ದರ್ಜೆಗೇರಿಸುವುದು;	ಸರ್ಕಾರದ ಆದೇಶ ಸಂಖ್ಯೆ: ಕಂಇ 35 ಭೂದಾಪು 2017, ದಿನಾಂಕ: 06.09.2017ರಲ್ಲಿ ದೇವರಹಿಪ್ಪರಗಿಯನ್ನು ಹೊಸ ತಾಲ್ಲೂಕಾಗಿ ರಚನೆ ಮಾಡಲು ತಾತ್ವಿಕವಾಗಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿರುತ್ತದೆ. ಅದರಂತೆ, ದೇವರಹಿಪ್ಪರಗಿಯಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ತಾಲ್ಲೂಕು ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ.
ಆ	ಹಾಗಿದ್ದಲ್ಲಿ, ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯು ಸರ್ಕಾರಕ್ಕೆ ಸಲ್ಲಿಸಲಾಗಿದೆಯೇ;	
ಇ	ಸಲ್ಲಿಸಿದ್ದಲ್ಲಿ, ಸದರಿ ಪ್ರಸ್ತಾವನೆಯು ಯಾವ ಹಂತದಲ್ಲಿದೆ; ಇದಕ್ಕೆ ಬೇಕಾಗುವ ಕಾಲಮಿತಿ ಎಷ್ಟು?	

ಆಕುಕ 19 ಎಸ್‌ಬಿವಿ 2021

(ಡಾ।। ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನಸಭೆ

1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	783
2)	ಮಾನ್ಯ ಸದಸ್ಯರ ಹೆಸರು	ಶ್ರೀ ಸೋಮನಗೌಡ ಬಿ.ಪಾಟೀಲ್ (ಸಾಸನೂರು) (ದೇವರ ಹಿಪ್ಪರಗಿ)
3)	ಉತ್ತರಿಸಬೇಕಾದ ದಿನಾಂಕ	04/02/2021
4)	ಉತ್ತರಿಸುವವರು	ಉಪ ಮುಖ್ಯಮಂತ್ರಿಗಳು ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವರು

****

ಕ್ರ ಸಂ	ಪ್ರಶ್ನೆ	ಉತ್ತರ
ಅ)	ದೇವರಹಿಪ್ಪರಗಿ ಪಟ್ಟಣದಲ್ಲಿ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರದ ಕಟ್ಟಡವನ್ನು ಯಾವಾಗ ನಿರ್ಮಿಸಲಾಗುವುದು;	ದೇವರಹಿಪ್ಪರಗಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗೆ ನಿವೇಶನ ಲಭ್ಯವಿದ್ದು, ನಬಾರ್ಡ್ ಮಂಜೂರಾತಿ ಹಾಗೂ ಅನುದಾನದ ಲಭ್ಯತೆಯನ್ನಾಧರಿಸಿ, ಕಟ್ಟಡವನ್ನು ನಿರ್ಮಿಸಲಾಗುವುದು.
ಆ)	ಸದರಿ ಕಟ್ಟಡವನ್ನು ನಿರ್ಮಿಸಲು ಜಾಗದ ಲಭ್ಯತೆ ಇರುವುದು ಇಲಾಖೆಯ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸದರಿ ಜಮೀನನ್ನು ಇಲಾಖೆಯ ವಶಕ್ಕೆ ಪಡೆಯಲಾಗಿದೆಯೇ;	ದೇವರಹಿಪ್ಪರಗಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗೆ ಜಾಗದ ಲಭ್ಯತೆ ಇರುವುದು ಇಲಾಖೆಯ ಗಮನಕ್ಕೆ ಬಂದಿದೆ. ಸದರಿ ಜಮೀನನ್ನು ಇಲಾಖೆಯ ವಶಕ್ಕೆ ಪಡೆಯಲಾಗಿದೆ.
ಇ)	ಪಡೆದಿದ್ದಲ್ಲಿ, ಜಮೀನಿನ ವಿಸ್ತೀರ್ಣ ಹಾಗೂ ಸರ್ವೆ ನಂಬರ್ ಸಹಿತ ಸಂಪೂರ್ಣ ವಿವರ ನೀಡುವುದು?	ಇಂಗಳಗಿ ಗ್ರಾಮದ ಸ.ನಂ.106ರಲ್ಲಿ 3.00 ಎಕರೆ ಜಮೀನು ಮಂಜೂರಾಗಿರುತ್ತದೆ.

ಸಂಖ್ಯೆ: ಕೌಉಜೀಇ 6 ಕೈತಪ್ರ 2021

(ಡಾ.ಸಿ.ಎನ್.ಅಶ್ವಥ ನಾರಾಯಣ)
ಉಪ ಮುಖ್ಯಮಂತ್ರಿಗಳು ಹಾಗೂ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	784
ಮಾನ್ಯ ಸದಸ್ಯರ ಹೆಸರು	:	ಶ್ರೀ ಹಾಲಪ್ಪ ಹರತಾಳ್ ಹೆಚ್. (ಸಾಗರ)
ಉತ್ತರಿಸಬೇಕಾದ ದಿನಾಂಕ	:	4-2-2021
ಉತ್ತರಿಸುವ ಸಚಿವರು	:	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
1	ಸಾಗರ ತಾಲ್ಲೂಕು ವಿಭಾಗೀಯ ತಾಲ್ಲೂಕಾಗಿದ್ದು, ಸದರಿ ಪಟ್ಟಣದ ತಾಲ್ಲೂಕು ವೈದ್ಯಾಧಿಕಾರಿಗಳ ಕಛೇರಿಗೆ ಸ್ವಂತ ಕಟ್ಟಡ ಇಲ್ಲದೇ ಸಾಗರದ ತಾಯಿ ಮಕ್ಕಳ ಆಸ್ಪತ್ರೆಯ ಕಟ್ಟಡದಲ್ಲಿ ಸದರಿ ಕಛೇರಿಯು ಕಾರ್ಯನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
2	ಸದರಿ ಆಸ್ಪತ್ರೆಯಲ್ಲಿ ಹೆರಿಗೆ ಪ್ರಕರಣಗಳು ಹೆಚ್ಚಾಗುತ್ತಿದ್ದು, ಆಸ್ಪತ್ರೆಯಲ್ಲಿ ಬೆಡ್‌ಗಳ ಕೊರತೆ ಹಾಗೂ ಸೂಕ್ತ ಚಿಕಿತ್ಸೆ ನೀಡಲು ತುಂಬಾ ಅಡಚಣೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
3	ಹಾಗಿದ್ದಲ್ಲಿ, ವೈದ್ಯಾಧಿಕಾರಿಗಳ ಕಛೇರಿಗೆ ಕಟ್ಟಡ ನಿರ್ಮಿಸಲು ಇರುವ ತೊಂದರೆಗಳೇನು; (ವಿವರ ನೀಡುವುದು)	ಅನುದಾನದ ಲಭ್ಯತೆಗೆ ಅನುಗುಣವಾಗಿ ತಾಲ್ಲೂಕು ಆರೋಗ್ಯಾಧಿಕಾರಿಗಳ ಕಚೇರಿಗೆ ಕಟ್ಟಡ, ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.
4	ತಾಲ್ಲೂಕು ವೈದ್ಯಾಧಿಕಾರಿಗಳ ಕಟ್ಟಡ ನಿರ್ಮಿಸಲು ಕೈಗೊಂಡ ಕ್ರಮಗಳೇನು? (ವಿವರ ಒದಗಿಸುವುದು)	

ಆಕುಕ 24 ಎಸ್.ಎಂ.ಎಂ. 2021

(ಡಾ: ಕೆ.ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	785
ಸದಸ್ಯರ ಹೆಸರು	:	ಶ್ರೀ ಕುಮಾರ ಬಂಗಾರಪ್ಪ ಎಸ್.
ಉತ್ತರಿಸುವ ದಿನಾಂಕ	:	04-02-2021
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಸಚಿವರು.

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಸೊರಬ ತಾಲ್ಲೂಕಿನ ಅನೇಕ ವಸತಿ ಶಾಲೆಗಳಲ್ಲಿ ಕಾಂಪೌಂಡ್‌ಗಳು ಇಲ್ಲದಿರುವುದು ನಿಜವೇ;</td><td>ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ಒಟ್ಟು 04 ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿದ್ದು, ವಿವರಗಳು ಈ ಕೆಳಕಂಡಂತಿವೆ.
<table>
<tr><td>1.</td><td>ಮೊರಾರ್ಜಿ ದೇಸಾಯಿ ವಸತಿ ಶಾಲೆ(ಪ.ಜಾತಿ), ಹಿರೇಮಾಗಡಿ</td><td>ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಆವರಣ ಗೋಡೆ ನಿರ್ಮಿಸಲಾಗಿದೆ.</td></tr>
<tr><td>2.</td><td>ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ,(ಪ.ಜಾತಿ) ಹುಣಸವಳ್ಳಿ</td><td>ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಆವರಣ ಗೋಡೆ ನಿರ್ಮಿಸಲಾಗಿದೆ</td></tr>
<tr><td>3.</td><td>ಇಂದಿರಾಗಾಂಧಿ ವಸತಿ ಶಾಲೆ (ಪ.ಜಾತಿ), ಚಂದ್ರಗುತ್ತಿ</td><td>ಪ್ರಸ್ತುತ ವಸತಿ ಶಾಲೆಯ ಕಟ್ಟಡ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿದ್ದು, ಆವರಣ ಗೋಡೆಯನ್ನು ನಿರ್ಮಿಸಲು ಅವಕಾಶ ಕಲ್ಪಿಸಲಾಗಿದೆ.</td></tr>
<tr><td>4.</td><td>ಡಾ|| ಬಿ.ಆರ್.ಅಂಬೇಡ್ಕರ್ ವಸತಿ ಶಾಲೆ (ಪ.ಜಾತಿ), ಕುಪಗಡ್ಡೆ</td><td>ಕಾಮಗಾರಿ ಪ್ರಾರಂಭವಾಗಿರುವುದಿಲ್ಲ</td></tr>
</table></td></tr>
<tr><td>ಆ)</td><td>ಈ ತಾಲ್ಲೂಕಿನಲ್ಲಿರುವ ಕುಪಗಡ್ಡೆ ವಸತಿ ಶಾಲೆ ಮಂಜೂರಾತಿಯಾಗಿದ್ದು, ಕಾಮಗಾರಿ ಪ್ರಾರಂಭವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td rowspan="2">ಕುಪಗಡ್ಡೆ ವಸತಿ ಶಾಲೆಯ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಲೋಕೋಪಯೋಗಿ ಇಲಾಖೆಗೆ ವಹಿಸಲಾಗಿದೆ. ಸದರಿ ಕಾಮಗಾರಿಗೆ ರೂ.23.80 ಕೋಟಿಗಳ ಮೊತ್ತದಲ್ಲಿ ಅಂದಾಜು ಪಟ್ಟಿಯನ್ನು ತಯಾರಿಸಿದ್ದು, ಕಾಮಗಾರಿಗೆ ಆಡಳಿತಾತ್ಮಕ ಮಂಜೂರಾತಿ ದೊರಕಿರುವುದಿಲ್ಲ.</td></tr>
<tr><td>ಇ)</td><td>ಬಂದಿದ್ದಲ್ಲಿ, ಯಾವಾಗ ಕ್ರಮವಹಿಸಲಾಗುವುದು?</td></tr>
</table>

ಸಕಇ 32 ಪಕವಿ 2021

(ಬಿ. ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು.

<u>ಕರ್ನಾಟಕ ವಿಧಾನ ಸಭೆ</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**789**
ಮಾನ್ಯ ಸದಸ್ಯರ ಹೆಸರು	:	**ಶ್ರೀ ನಂಜೇಗೌಡ ಕೆ.ವೈ.**
ಉತ್ತರಿಸಬೇಕಾದ ದಿನಾಂಕ	:	**04.02.2021**
ಉತ್ತರಿಸಬೇಕಾದ ಸಚಿವರು	:	**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು**

ಕ್ರ. ಸಂ	ಪ್ರಶ್ನೆಗಳು	ಉತ್ತರ
ಅ)	ಮಾಲೂರು ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ಅಗತ್ಯ ಸಲಕರಣೆ, ಯಂತ್ರೋಪಕರಣಗಳು ಹಾಗೂ ಮೂಲಭೂತ ಸೌಕರ್ಯಗಳು ಇಲ್ಲದಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ಒದಗಿಸುವುದು)	ಬಂದಿದೆ. ಮಾಲೂರು ಸಾರ್ವಜನಿಕ ಆಸ್ಪತ್ರೆಗೆ ಎನ್.ಎಫ್.ಡಿ.ಎಸ್. ಕಾರ್ಯಕ್ರಮದಡಿಯಲ್ಲಿ ಪ್ರಯೋಗಾಲಯಕ್ಕೆ ಅಗತ್ಯವಾದ ಉಪಕರಣಗಳನ್ನು ಒದಗಿಸಿ, ಇವುಗಳಿಗೆ ಅವಶ್ಯವಿರುವ ರಾಸಾಯನಿಕಗಳು ಮತ್ತು ಡಯೋಗ್ನಸ್ಟಿಕ್ ಕಿಟ್‌ಗಳನ್ನು ರಾಜ್ಯ ಮಟ್ಟದಿಂದ ಸರಬರಾಜು ಮಾಡಲಾಗುತ್ತಿದೆ. ಸಾರ್ವಜನಿಕ ಆಸ್ಪತ್ರೆಯ ಪ್ರಯೋಗಾಲಯಕ್ಕೆ ಅಗತ್ಯವಾದ ಅತ್ಯಾಧುನಿಕ ಯಂತ್ರೋಪಕರಣ ಹಾಗೂ ಸಲಕರಣೆಗಳನ್ನು ಈಗಾಗಲೇ ಸರಬರಾಜು ಮಾಡಲಾಗಿದ್ದು, ಇದರಿಂದ ಸಾರ್ವಜನಿಕರಿಗೆ ಉಚಿತವಾಗಿ ರೋಗಪತ್ತೆ ಸೇವೆಗಳನ್ನು ಒದಿಗಸಲಾಗುತ್ತಿದೆ. ಮುಂದುವರೆದು, ಕರ್ನಾಟಕ ರಾಜ್ಯ ಡ್ರಗ್ಸ್ ಲಾಜಿಸ್ಟಿಕ್ಸ್ ಮತ್ತು ವೇರ್ ಹೌಸಿಂಗ್ ಸೊಸೈಟಿ ಮೂಲಕ 5 Part Haematology Analyzer ಮತ್ತು Fully Automated Bio Chemistry Analyzer ಉಪಕರಣಗಳನ್ನು ಖರೀದಿಸಿ ಸರಬರಾಜು ಮಾಡುವ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ.
ಆ)	ಈ ಸಾರ್ವಜನಿಕ ಆಸ್ಪತ್ರೆಗೆ ಮೂಲಭೂತ ಸೌಕರ್ಯ ಹಾಗೂ ಪ್ರಯೋಗಾಲಯಕ್ಕೆ ಅಗತ್ಯವಾದ ಅತ್ಯಾಧುನಿಕ ಯಂತ್ರೋಪಕರಣಗಳ ಹಾಗೂ ಸಲಕರಣೆಗಳ ಸರಬರಾಜು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; (ವಿವರ ಒದಗಿಸುವುದು)	
ಇ)	ಹಾಗಿದ್ದಲ್ಲಿ; ಅತ್ಯಾಧುನಿಕ ಯಂತ್ರೋಪಕರಣಗಳನ್ನು ಸರಬರಾಜು ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ವಿವರ ಒದಗಿಸುವುದು)	

ಸಂಖ್ಯೆ: ಆಕುಕ 13 ಎಸ್.ಟಿ.ಕ್ಯೂ 2021

(ಡಾ|| ಕೆ.ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 796

ಮಾನ್ಯ ಸದಸ್ಯರ ಹೆಸರು : ಶ್ರೀ ನಂಜೇಗೌಡ ಕೆ.ವೈ. (ಮಾಲೂರು)

ಉತ್ತರಿಸುವ ಸಚಿವರು : ಪ್ರವಾಸೋದ್ಯಮ, ಪರಿಸರ ಹಾಗೂ ಜೀವಿಶಾಸ್ತ್ರ ಸಚಿವರು

ಉತ್ತರಿಸುವ ದಿನಾಂಕ : 04-02-2021

****

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಮಾಲೂರು ವಿಧಾನಸಭಾ ಕ್ಷೇತ್ರಕ್ಕೆ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಮಂಜೂರು ಮಾಡಲಾಗಿರುವ ಅನುದಾನವೆಷ್ಟು; (ವಿವರ ಒದಗಿಸುವುದು)	ಮಾಲೂರು ವಿಧಾನಸಭಾ ಕ್ಷೇತ್ರಕ್ಕೆ 2018-19ನೇ ಸಾಲಿನಲ್ಲಿ ಬಂಡವಾಳ ವೆಚ್ಚಗಳ ಲೆಕ್ಕಶೀರ್ಷಿಕೆ ಅಡಿ ಮಾಲೂರು ತಾಲ್ಲೂಕು, ಚಿಕ್ಕತಿರುಪತಿ ಶ್ರೀ ಪ್ರಸನ್ನ ವೆಂಕಟೇಶ್ವರಸ್ವಾಮಿ ದೇವಾಲಯದ ಬಳಿ ಯಾತ್ರಿನಿವಾಸ, ಉದ್ಯಾನವನ ಹಾಗೂ ಇತರೆ ಅಭಿವೃದ್ಧಿ ಕಾಮಗಾರಿಗಳನ್ನು ರೂ.100.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಅನುಮೋದನೆ ನೀಡಲಾಗಿದೆ. ಸದರಿ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಕೆ.ಆರ್.ಐ.ಡಿ.ಎಲ್., ಸಂಸ್ಥೆಗೆ ವಹಿಸಿ, ಕಾಮಗಾರಿಯನ್ನು ಪ್ರಾರಂಭಿಸಲು ಮೊದಲ ಕಂತಾಗಿ ರೂ.50.00 ಲಕ್ಷಗಳನ್ನು ಅನುಷ್ಠಾನ ಸಂಸ್ಥೆಗೆ ಬಿಡುಗಡೆ ಮಾಡಲಾಗಿದೆ. ಕಾಮಗಾರಿ ಪ್ರಗತಿಯಲ್ಲಿದೆ. 2019-20 ಮತ್ತು 2020-21ನೇ ಸಾಲಿನಲ್ಲಿ ಮಾಲೂರು ವಿಧಾನಸಭಾ ಕ್ಷೇತ್ರಕ್ಕೆ / ತಾಲ್ಲೂಕಿಗೆ ಅನುದಾನವನ್ನು ಮಂಜೂರು ಮಾಡಿರುವುದಿಲ್ಲ.
ಆ)	ಸದರಿ ಅನುದಾನದಲ್ಲಿ ಕೈಗೊಂಡಿರುವ ಕಾಮಗಾರಿಗಳಾವುವು; ಕಾಮಗಾರಿವಾರು ಮಾಹಿತಿ ಒದಗಿಸುವುದು;	
ಇ)	ಮಾಲೂರು ವಿಧಾನಸಭಾ ಕ್ಷೇತ್ರ ಟೇಕಲ್ ಹೋಬಳಿ, ಬನಹಳ್ಳಿ ಗ್ರಾಮದ ಬೆಟ್ಟದ ಮೇಲೆ ಇರುವ ಶ್ರೀ ಚಾಮುಂಡೇಶ್ವರಿ ದೇವಾಲಯದ ಅಭಿವೃದ್ಧಿ ಕಾಮಗಾರಿಗೆ ಮಂಜೂರಾದ ರೂ.2.00 ಕೋಟಿ ಅನುದಾನವನ್ನು ತಡೆಹಿಡಿದಿರಲು ಕಾರಣವೇನು; ಸದರಿ ಅನುದಾನವನ್ನು ಯಾವಾಗ ಬಿಡುಗಡೆ ಮಾಡಿ ದೇವಾಲಯದ ಅಭಿವೃದ್ಧಿ ಕಾಮಗಾರಿಯನ್ನು ಪ್ರಾರಂಭ ಮಾಡಲಾಗುವುದು? (ವಿವರ ಒದಗಿಸುವುದು).	ಕೋಲಾರ ಜಿಲ್ಲೆ, ಮಾಲೂರು ತಾಲ್ಲೂಕು, ಟೇಕಲ್ ಹೋಬಳಿ, ಬನಹಳ್ಳಿ ಗ್ರಾಮದ ಶ್ರೀ ಚಾಮುಂಡೇಶ್ವರಿ ದೇವಾಲಯದ ಬಳಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಯನ್ನು 2019-20 ನೇ ಸಾಲಿನಲ್ಲಿ ಬಂಡವಾಳ ವೆಚ್ಚಗಳ ಲೆಕ್ಕಶೀರ್ಷಿಕೆ ಅಡಿ ರೂ.200.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಆದೇಶ ಸಂಖ್ಯೆ:TOR/35/TDP/2019, ದಿನಾಂಕ: 11-07-2019 ರಲ್ಲಿ ಮಂಜೂರಾತಿ ನೀಡಲಾಗಿದೆ. ಆದರೆ, ಸರ್ಕಾರದ ಮುಖ್ಯ ಕಾರ್ಯದರ್ಶಿರವರ ದಿನಾಂಕ: 26.07.2019ರ ಸೂಚನೆಯನ್ವಯ, ಜುಲೈ-2019ರ ಮಾಹೆಯಲ್ಲಿ ಅನುಮೋದನೆಗೊಂಡಿರುವ ಎಲ್ಲಾ ಹೊಸ ಕಾಮಗಾರಿಗಳಿಗೆ ಸಂಬಂಧಿತ ಆದೇಶಗಳನ್ನು [illegible] ಮುಂದಿನ ಪರಿಶೀಲನೆ ಆಗುವವರೆಗೆ ತಡೆಹಿಡಿಯಲಾಗಿತ್ತು. ಪ್ರಸಕ್ತ ಸಾಲಿನಲ್ಲಿ ಇಲಾಖೆಗೆ ಒದಗಿಸಿರುವ ಅನುದಾನವನ್ನು ಮುಂದುವರೆದ ಯೋಜನೆಗಳಿಗೆ ವಿನಿಯೋಗಿಸ ಬೇಕಾಗಿರುವುದರಿಂದ ಯಾವುದೇ ಹೊಸ ಯೋಜನೆಗಳನ್ನು ಕೈಗೆತ್ತಿಕೊಳ್ಳುವುದು ಕಷ್ಟ ಸಾಧ್ಯವಾಗಿರುತ್ತದೆ.

ಕಡತ ಸಂಖ್ಯೆ: ಟಿಓಆರ್ 25 ಟಿಡಿವಿ 2021

(ಸಿ.ಪಿ.ಯೋಗೇಶ್ವರ)
ಪ್ರವಾಸೋದ್ಯಮ,
ಪರಿಸರ ಮತ್ತು ಜೀವಿಶಾಸ್ತ್ರ, ಸಚಿವರು

<u>ಕರ್ನಾಟಕ ವಿಧಾನ ಸಭೆ</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**797**
ಮಾನ್ಯ ಸದಸ್ಯರ ಹೆಸರು	:	**ಶ್ರೀ ಶ್ರೀನಿವಾಸ್ (ವಾಸು) ಎಸ್.ಆರ್.**
ಉತ್ತರಿಸಬೇಕಾದ ದಿನಾಂಕ	:	**04.02.2021**
ಉತ್ತರಿಸಬೇಕಾದ ಸಚಿವರು	:	**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು**

ಕ್ರ. ಸಂ	**ಪ್ರಶ್ನೆಗಳು**	**ಉತ್ತರ**
ಅ)	ರಾಜ್ಯಕ್ಕೆ ಕೊರೋನಾ ಸಂಕಷ್ಟಕ್ಕೆಂದು ಕೇಂದ್ರ ಸರ್ಕಾರದಿಂದ ಎಷ್ಟು ಕೋಟಿ ಹಣ ಬಿಡುಗಡೆಯಾಗಿದೆ;	ಕೋರೋನಾ ಸಂಕಷ್ಟಕ್ಕೆಂದು ರಾಷ್ಟ್ರೀಯ ಆರೋಗ್ಯ ಅಭಿಯಾನಕ್ಕೆ ಕೇಂದ್ರ ಸರ್ಕಾರದಿಂದ ಒಟ್ಟಾರೆ ರೂ.373.14 ಕೋಟಿಗಳನ್ನು ರಾಜ್ಯ ಸರ್ಕಾರಕ್ಕೆ ಬಿಡುಗಡೆಯಾಗಿದೆ. ಕೇಂದ್ರ ಸರ್ಕಾರದಿಂದ ಬಂದ ಹಣದಲ್ಲಿ ಖಾಸಗಿ ಆಸ್ಪತ್ರೆಗಳಿಗೆ ಯಾವುದೇ ಹಣವನ್ನು ಪಾವತಿಸಿರುವುದಿಲ್ಲ.
ಆ)	ಹಾಗಿದ್ದಲ್ಲಿ, ಕೊರೋನಾ ಬಾಧಿತರಿಗೆ ಯಾವ ಯಾವ ಆಸ್ಪತ್ರೆಯ ಮೂಲಕ ಎಷ್ಟು ಎಷ್ಟು ಹಣವನ್ನು ಉಪಯೋಗ ಮಾಡಲಾಗುತ್ತಿದೆ; (ವಿವರ ನೀಡುವುದು)	
ಇ)	ಕೇಂದ್ರ ಸರ್ಕಾರದಿಂದ ಬಂದ ಹಣದಲ್ಲಿ ಖಾಸಗಿ ಆಸ್ಪತ್ರೆಗಳಿಗೆ ಎಷ್ಟು ಹಣ ನೀಡಲಾಗಿದೆ;	
ಈ)	ಖಾಸಗಿ ಆಸ್ಪತ್ರೆಯವರಿಂದ ಕೊರೋನಾ ಬಾಧಿತರಿಗೆ ಸರಿಯಾದ ರೀತಿ ಚಿಕಿತ್ಸೆ ನೀಡಲಾಗುತ್ತಿದೆಯೇ; (ವಿವರ ನೀಡುವುದು)	ಹೌದು. ಖಾಸಗಿ ಆಸ್ಪತ್ರೆಗಳಿಂದ ಕೊರೋನಾ ಬಾಧಿತರಿಗೆ ರಾಜ್ಯದಿಂದ ಹೊರಡಿಸಲಾಗಿರುವ ಮಾರ್ಗಸೂಚಿಯಂತೆ ಚಿಕಿತ್ಸೆಯನ್ನು ನೀಡಲಾಗುತ್ತಿದೆ.

ಸಂಖ್ಯೆ: ಆಕುಕ 15 ಎಸ್.ಟಿ.ಕ್ಯೂ 2021

(ಡಾ|| ಕೆ.ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	799
ಮಾನ್ಯ ಸದಸ್ಯರ ಹೆಸರು	:	ಶ್ರೀ ವೀರಭದ್ರಯ್ಯ ಎಂ.ವಿ. (ಮಧುಗಿರಿ)
ಉತ್ತರಿಸುವ ದಿನಾಂಕ	:	04.02.2021
ಉತ್ತರಿಸುವ ಸಚಿವರು	:	ಪ್ರವಾಸೋದ್ಯಮ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಮಧುಗಿರಿ ಪಟ್ಟಣದಲ್ಲಿ ಐತಿಹಾಸಿಕ ಹಾಗೂ ಸುಪ್ರಸಿದ್ಧವಾದ ಏಕಶಿಲಾ ಬೆಟ್ಟವಿದ್ದು, ಈ ಏಕಶಿಲಾ ಬೆಟ್ಟವು ಏಷ್ಯಾ ಖಂಡದಲ್ಲಿಯೇ ಏಕೈಕ ಬೆಟ್ಟವಾಗಿರುತ್ತದೆ; ಈ ಬೆಟ್ಟವನ್ನು ಪ್ರವಾಸೋದ್ಯಮ ಕ್ಷೇತ್ರವಾಗಿ ಅಭಿವೃದ್ಧಿಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಕರ್ನಾಟಕ ಪ್ರವಾಸೋದ್ಯಮ ನೀತಿ 2020-25ರಡಿ ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನಲ್ಲಿರುವ ಏಕಶಿಲಾ ಬೆಟ್ಟವನ್ನು ಪ್ರವಾಸಿ ತಾಣವೆಂದು ಗುರುತಿಸಲಾಗಿದೆ. ಈ ಏಕಶಿಲಾ ಬೆಟ್ಟವು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ವ್ಯಾಪ್ತಿಗೆ ಒಳಪಡುವುದರಿಂದ, ಸದರಿ ಇಲಾಖೆಯ ಅನುಮತಿ ದೊರೆತ ನಂತರ ಈ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಕಾಮಗಾರಿಗಳ ಬಗ್ಗೆ ನಿಯಮಾನುಸಾರ ಮುಂದಿನ ಕ್ರಮ ವಹಿಸಲಾಗುವುದು.
ಆ)	ಹಾಗಿದ್ದಲ್ಲಿ, ಯಾವಾಗ ಅನುದಾನ ಮಂಜೂರು ಮಾಡಿ, ಕಾಮಗಾರಿಯನ್ನು ಕೈಗೊಳ್ಳಲಾಗುವುದು? (ಸಂಪೂರ್ಣ ವಿವರ ನೀಡುವುದು)	

ಸಂಖ್ಯೆ: ಟಿಓಆರ್ 21 ಟಿಡಿವಿ 2021.

(ಸಿ.ಪಿ. ಯೋಗೇಶ್ವರ)
ಪ್ರವಾಸೋದ್ಯಮ ಹಾಗೂ
ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	801
ಮಾನ್ಯ ಸದಸ್ಯರ ಹೆಸರು	ಶ್ರೀ ರವಿ ಸುಬ್ರಹ್ಮಣ್ಯ ಎಲ್.ಎ. (ಬಸವನಗುಡಿ)
ಉತ್ತರಿಸಬೇಕಾದ ದಿನಾಂಕ	04-02-2021
ಉತ್ತರಿಸುವ ಸಚಿವರು	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು 2017 ರಲ್ಲಿ ಅಧಿಕಾರ ಹಂಚಿಕೆಗೊಳಿಸಿ ಆಡಳಿತ ಇಲಾಖೆಯ ಮುಖ್ಯಸ್ಥರುಗಳು / ನೇಮಕಾತಿ ಪ್ರಾಧಿಕಾರಗಳು ತತ್ಸಮಾನ ವಿದ್ಯಾರ್ಹತೆಯನ್ನು ನಿಗಧಿಗೊಳಿಸಿ ಆದೇಶವನ್ನು ಹೊರಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿಲ್ಲ.
ಆ	ಬಂದಿದ್ದಲ್ಲಿ, ಕೇಂದ್ರ ಸರ್ಕಾರದ ಮಾದರಿಯಲ್ಲೇ ತತ್ಸಮಾನ ವಿದ್ಯಾರ್ಹತೆಯನ್ನು ನಿಗದಿಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?	ಅನ್ವಯಿಸುವುದಿಲ್ಲ.

ಸಂಖ್ಯೆ: ಆಕುಕ 29 ಹೆಚ್‌ಎಸ್‌ಎಂ 2021

(ಡಾ: ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	802
ಸದಸ್ಯರ ಹೆಸರು	:	ಶ್ರೀ ಕುಮಾರಸ್ವಾಮಿ ಎಂ.ಪಿ
ಉತ್ತರಿಸುವ ದಿನಾಂಕ	:	04-02-2021
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಸಚಿವರು.

ಕ್ರಸಂ	ಪ್ರಶ್ನೆ	ಉತ್ತರ
ಅ)	ಅನ್ಯ ಕಾಮಗಾರಿಗೆ ಅನ್ಯ ಇಲಾಖೆಗೆ ಬಳಸಿದ್ದ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅನುದಾನವನ್ನು ಹಿಂಪಡೆಯಲಾಗಿದೆಯೇ;	ಅನ್ಯ ಕಾಮಗಾರಿಗೆ ಅನ್ಯ ಇಲಾಖೆಗೆ ಎಸ್.ಸಿ.ಎಸ್.ಪಿ /ಟಿ.ಎಸ್.ಪಿ ಅನುದಾನ ಬಳಸಿರುವುದಿಲ್ಲ. ಆದ್ದರಿಂದ ಹಿಂಪಡೆಯುವ ಪ್ರಶ್ನೆ ಉದ್ಭವಿಸುವುದಿಲ್ಲ.
ಆ)	ಮೂಡಿಗೆರೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಅನೇಕ ವಸತಿ ನಿಲಯ ಹಾಗೂ ವಸತಿ ಶಾಲೆಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದ್ದರೂ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಉಳಿಕೆ ಅನುದಾನವನ್ನು ಡೀಮ್ಡ್ ಎಂದು ಪರಿಗಣಿಸಲು ಕಾರಣವೇನು? (ವಿವರ ನೀಡುವುದು)	ಎಸ್.ಸಿ.ಎಸ್.ಪಿ /ಟಿ.ಎಸ್.ಪಿ ಅನುದಾನವನ್ನು ಎಸ್.ಸಿ/ಎಸ್.ಟಿ ರಾಜ್ಯ ಅಭಿವೃದ್ಧಿ ಪರಿಷತ್ತಿನಲ್ಲಿ ಅನುಮೋದಿಸಿರುವ ಕಾರ್ಯಕ್ರಮಗಳಿಗೆ ಮಾತ್ರ ಬಳಕೆ ಮಾಡಲಾಗುತ್ತಿದೆ. ಯಾವುದೇ ಇಲಾಖೆಗೆ ಎಸ್.ಸಿ.ಎಸ್.ಪಿ /ಟಿ.ಎಸ್.ಪಿ ಅಡಿ ಹಂಚಿಕೆಯಾದ ಅನುದಾನವು ಉಳಿಕೆಯಾಗುತ್ತಿದ್ದಲ್ಲಿ ಅದನ್ನು ಎಸ್.ಸಿ/ಎಸ್.ಟಿ ಜನರ ಕಾರ್ಯಕ್ರಮಗಳಿಗೆ ಮಾತ್ರ ಬಳಸಲು ಮರು ಹಂಚಿಕೆ ಮಾಡಲಾಗುತ್ತಿದ್ದು, ಇದನ್ನು ಡೀಮ್ಡ್ ಎಂದು ಪರಿಗಣಿಸುವುದಿಲ್ಲ.

ಸಕಇ 26 ಎಸ್‌ಎಲ್‌ಪಿ 2021

(ಬಿ.ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	803
ಸದಸ್ಯರ ಹೆಸರು	:	ಶ್ರೀ ಶ್ರೀನಿವಾಸ್ ಎಂ.(ಮಂಡ್ಯ)
ಉತ್ತರಿಸಬೇಕಾದ ದಿನಾಂಕ	:	04-02-2021
ಉತ್ತರಿಸುವ ಸಚಿವರು	:	ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
1	ಮಂಡ್ಯ ನಗರದಲ್ಲಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರವು ದುಃಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	• ಹೌದು.
2	ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;	• 2019-20ನೇ ಸಾಲಿನಲ್ಲಿ ಜಿಲ್ಲಾ ರಂಗಮಂದಿರ ದುರಸ್ತಿ ಕಾಮಗಾರಿಗೆ ರೂ. 25.00 ಲಕ್ಷಗಳ ಅನುದಾನವನ್ನು ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯ ಇವರಿಗೆ ಬಿಡುಗಡೆ ಮಾಡಲಾಗಿದೆ. ರೂ. 25.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿ, ಯೋಜನಾ ವ್ಯವಸ್ಥಾಪಕರು, ನಿರ್ಮಿತಿ ಕೇಂದ್ರ, ಮಂಡ್ಯ, ಇವರಿಗೆ ಬಿಡುಗಡೆ ಮಾಡಲಾಗಿದೆ. ಕಾಮಗಾರಿ ಮುಕ್ತಾಯಗೊಂಡಿದ್ದು ಹಣಬಳಕೆ ಪ್ರಮಾಣಪತ್ರವನ್ನು ಸಲ್ಲಿಸಿರುತ್ತಾರೆ.
3	ಸದರಿ ಕಲಾಮಂದಿರದ ಕಾಮಗಾರಿ ಕಾರ್ಯ ಯಾವಾಗ ಪ್ರಾರಂಭವಾಗುವುದು?	• ಉದ್ಭವಿಸುವುದಿಲ್ಲ.

ಕಡತ ಸಂಖ್ಯೆ: ಕಸಂಪಾ 09 ಕವಿಸ 2021

(ಅರವಿಂದ ಲಿಂಬಾ,ವಳಿ)
ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 809

ಮಾನ್ಯ ಸದಸ್ಯರ ಹೆಸರು : ಶ್ರೀ ಈಶ್ವರ್ ಖಂಡ್ರೆ (ಭಾಲ್ಕಿ)

ಉತ್ತರಿಸುವ ದಿನಾಂಕ : 04.02.2021

ಉತ್ತರಿಸುವ ಸಚಿವರು : ಪ್ರವಾಸೋದ್ಯಮ ಮತ್ತು ಪರಿಸರ ಹಾಗೂ ಜೀವಿಶಾಸ್ತ್ರ, ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಬೀದರ್ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಇಲಾಖಾ ವತಿಯಿಂದ ಕರೇಜ್ ಕಾಮಗಾರಿಗಾಗಿ ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ಮಂಜೂರಾದ ಮೊತ್ತವೆಷ್ಟು ಹಾಗೂ ಬಿಡುಗಡೆಯಾದ ಮೊತ್ತವೆಷ್ಟು ಮತ್ತು ಖರ್ಚಾದ ಮೊತ್ತವೆಷ್ಟು; (ಸಂಪೂರ್ಣ ವಿವರ ಒದಗಿಸುವುದು)	ಬೀದರ್ ನಗರದ ವ್ಯಾಪ್ತಿಯಲ್ಲಿ ಬರುವ ಶಿಕಾರಗ ಮತ್ತು ಕರೇಜ್ ಪುನರುತ್ಥಾನ, ಕರೇಜ್‌ದಲ್ಲಿ ಹೂಳು ತೆಗೆಯುವುದು, ಸುತ್ತು ಗೋಡೆ, ನೀರು ಶುದ್ಧೀಕರಣ ಕಿಂಡಿಗಳ ಸಂರಕ್ಷಣೆ, ಪ್ರವಾಸಿಗರಿಗೆ ಮೂಲಭೂತ ಸೌಕರ್ಯ ಹಾಗೂ ಉದ್ಯಾನವನ ಕಾಮಗಾರಿಯನ್ನು 2015-16ನೇ ಸಾಲಿನಲ್ಲಿ ರೂ.300.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ನೀಡಿರುವ ಅನುಮೋದನೆಯನ್ನು ಮಾರ್ಪಡಿಸಿ, 2016-17ನೇ ಸಾಲಿನಲ್ಲಿ ರೂ.270.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಪರಿಷ್ಕೃತ ಮಂಜೂರಾತಿಯನ್ನು ನೀಡಲಾಗಿದೆ. ಇದರಂತೆ, ಈ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಮೊದಲ ಕಂತಾಗಿ ರೂ.50.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ, ಬೀದರ್ ಜಿಲ್ಲೆ ಇವರಿಗೆ ಬಿಡುಗಡೆ ಮಾಡಲಾಗಿರುತ್ತದೆ. ಈ ಕಾಮಗಾರಿಗೆ ಲೋಕೋಪಯೋಗಿ ಇಲಾಖೆ, ಬೀದರ್ ಜಿಲ್ಲೆಯಿಂದ ಎರಡು ಬಾರಿ ಟೆಂಡರ್ ಕರೆಯಲಾಗಿದ್ದು, ಈ ಎರಡು ಟೆಂಡರ್‌ಗಳಲ್ಲಿ ಅರ್ಹ ಗುತ್ತಿಗೆದಾರರು ಆಯ್ಕೆಯಾಗಿರುವುದಿಲ್ಲ. ಸದರಿ ಕಾಮಗಾರಿಯನ್ನು ಪ್ರಾರಂಭಿಸದಿರುವುದರಿಂದ, 2019-20ನೇ ಸಾಲಿನಲ್ಲಿ ದಿನಾಂಕ: 20.07.2019ರ ಆದೇಶದಲ್ಲಿ ಈ ಕಾಮಗಾರಿಯನ್ನು ರದ್ದುಪಡಿಸಲಾಗಿದೆ. ಆದ್ದರಿಂದ, ಈ ಕಾಮಗಾರಿಗೆ ಬಿಡುಗಡೆ ಮಾಡಿರುವ ಮೊತ್ತ ರೂ.50.00 ಲಕ್ಷಗಳು ಖರ್ಚಾಗಿರುವುದಿಲ್ಲ.
ಆ)	ಕರೇಜ್ ಕಾಮಗಾರಿಗೆ ಬಿಡುಗಡೆಯಾದ ಮೊತ್ತದಲ್ಲಿ ಬೀದರ್‌ನ ಹಿಂದಿನ ಜಿಲ್ಲಾಧಿಕಾರಿಗಳು, ನಿರ್ಮಿತಿ ಕೇಂದ್ರದಿಂದ ಕೈಗೆತ್ತಿಕೊಳ್ಳಲಾದ ಇತರೆ ಕಾಮಗಾರಿಗಳಿಗೆ ಸದರಿ ಮೊತ್ತದಿಂದ ಹಣ ಪಾವತಿ ಮಾಡಲು ಆದೇಶಿಸಿ ಹಣ ದುರ್ಬಳಕೆ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಇಲ್ಲ.
ಇ)	ಹಾಗಿದ್ದಲ್ಲಿ, ಇದರ ಬಗ್ಗೆ ತನಿಖೆಗೆ ಆದೇಶಿಸಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಜರುಗಿಸುವುದೇ?	ಉದ್ಭವಿಸುವುದಿಲ್ಲ.

ಸಂಖ್ಯೆ: ಟಿಒಆರ್ 16 ಟಿಡಿವಿ 2021.

Yogeshwar

(ಸಿ. ಪಿ. ಯೋಗೇಶ್ವರ)
ಪ್ರವಾಸೋದ್ಯಮ ಮತ್ತು ಪರಿಸರ ಹಾಗೂ
ಜೀವಿಶಾಸ್ತ್ರ, ಸಚಿವರು.

ಕರ್ನಾಟಕ ವಿಧಾನ ಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	813
2	ಸದಸ್ಯರ ಹೆಸರು	ಶ್ರೀ ಗೂಳಿಹಟ್ಟಿ ಡಿ. ಶೇಖರ್
3	ಉತ್ತರಿಸಬೇಕಾದ ದಿನಾಂಕ	04/02/2021
4	ಉತ್ತರಿಸಬೇಕಾದ ಸಚಿವರು	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಚಿತ್ರದುರ್ಗ ಜಿಲ್ಲೆಯಲ್ಲಿ ವೈದ್ಯಕೀಯ ಕಾಲೇಜನ್ನು ಮಂಜೂರು ಮಾಡುವುದು ಯಾವ ಹಂತದಲ್ಲಿದೆ; ಇದಕ್ಕೆ ನಿಗಧಿಪಡಿಸಿದ ಅನುದಾನ ಎಷ್ಟು; ಪ್ರಸಕ್ತ ಸಾಲಿನಲ್ಲಿ ಸರ್ಕಾರದಿಂದ ಅಂದಾಜು ಎಷ್ಟು ಮೊತ್ತದ ಮಂಜೂರಾತಿ ನೀಡಲಾಗುವುದು.	2013-14 ನೇ ಸಾಲಿನ ಆಯವ್ಯಯ ಘೋಷಣೆಯಲ್ಲಿ ಚಿತ್ರದುರ್ಗದಲ್ಲಿ ಹೊಸ ವೈದ್ಯಕೀಯ ಕಾಲೇಜನ್ನು ಪ್ರಾರಂಭಿಸಲು ಪ್ರಸ್ತಾಪಿಸಲಾಗಿದ್ದು, ಸರ್ಕಾರದ ಆದೇಶ ಸಂಖ್ಯೆ ಆಕುಕ 172 ಎಂಪಿಎಸ್ 2014 ದಿನಾಂಕ 12/06/2014 ರಲ್ಲಿ ಸದರಿ ವೈದ್ಯಕೀಯ ಕಾಲೇಜಿನ ಸ್ಥಾಪನೆಗೆ ಮಂಜೂರಾತಿ ನೀಡಲಾಗಿದೆ. ಆದರೆ ಆರ್ಥಿಕ ಮಿತವ್ಯಯದ ಕಾರಣದಿಂದಾಗಿ ಆಯವ್ಯಯ ಘೋಷಣೆಯಂತೆ ಸದರಿ ಆರ್ಥಿಕ ವರ್ಷದಲ್ಲಿ ವೈದ್ಯಕೀಯ ಕಾಲೇಜನ್ನು ಪ್ರಾರಂಭಿಸಲಾಗಿರುವುದಿಲ್ಲ. ರಾಜ್ಯ ಸರ್ಕಾರದ ವತಿಯಿಂದ ಹೊಸ ವೈದ್ಯಕೀಯ ಕಾಲೇಜನ್ನು ಸ್ಥಾಪಿಸಲು ಅಂದಾಜು ರೂ.610.00 ಕೋಟಿಗಳ ಅನಾವರ್ತಕ ವೆಚ್ಚ ಹಾಗೂ ವಾರ್ಷಿಕ ರೂ.60.00 ಕೋಟಿಗಳ ಆವರ್ತಕ ವೆಚ್ಚದ ಅವಶ್ಯಕತೆ ಇರುತ್ತದೆ. ಪ್ರಸಕ್ತ ಸಾಲಿನಲ್ಲಿ ಚಿತ್ರದುರ್ಗ ವೈದ್ಯಕೀಯ ಕಾಲೇಜಿನ ಸ್ಥಾಪನೆಗಾಗಿ ಯಾವುದೇ ಅನುದಾನವನ್ನು ಒದಗಿಸಿರುವುದಿಲ್ಲ.
ಆ)	ಚಿತ್ರದುರ್ಗಕ್ಕೆ ಮೆಡಿಕಲ್ ಕಾಲೇಜು ಮಂಜೂರಾತಿ ಯಾವ ಕಾಲಮಿತಿಯಲ್ಲಿ ಮಾಡಲಾಗುವುದು? (ವಿವರ ನೀಡುವುದು)	ಪ್ರಸ್ತುತ ಅನುದಾನದ ಕೊರತೆಯ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ವತಿಯಿಂದಲೇ ಪೂರ್ಣ ವೆಚ್ಚ ಭರಿಸಿ, ಚಿತ್ರದುರ್ಗದಲ್ಲಿ ಹೊಸ ವೈದ್ಯಕೀಯ ಕಾಲೇಜನ್ನು ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.

ಸಂಖ್ಯೆ: ಎಂಇಡಿ 101 ಎಂಎಂಸಿ 2021

(ಡಾ|| ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	819
ಮಾನ್ಯ ಸದಸ್ಯರ ಹೆಸರು	ಶ್ರೀ ಕೃಷ್ಣಾರೆಡ್ಡಿ ಎಂ (ಚಿಂತಾಮಣಿ)
ಉತ್ತರಿಸಬೇಕಾದ ದಿನಾಂಕ	04-02-2021
ಉತ್ತರಿಸುವ ಸಚಿವರು	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಚಿಕ್ಕಬಳ್ಳಾಪುರ ಜಿಲ್ಲೆ ಚಿಂತಾಮಣಿ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಸಾರ್ವಜನಿಕ ಆಸ್ಪತ್ರೆಯು ತಾಯಿ ಮಕ್ಕಳ ಆಸ್ಪತ್ರೆಯಾಗಿ ಕಾರ್ಯ ನಿರ್ವಹಿಸುತ್ತಿದ್ದು, ಸದರಿ ಆಸ್ಪತ್ರೆಯಲ್ಲಿ ಮೂಳೆ ತಜ್ಞರ ಹುದ್ದೆಯು ಅನುಮೋದನೆಯಾಗದೆ ಇರುವ ಕಾರಣ ಮೂಳೆಗೆ ಸಂಬಂಧಪಟ್ಟ ಕಾಯಿಲೆಗೆ ಚಿಕಿತ್ಸೆ ಪಡೆಯಲು ಬರುವ ರೋಗಿಗಳಿಗೆ ತೀರಾ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ	ಬಂದಿದ್ದಲ್ಲಿ, ಎಷ್ಟು ಕಾಲಮಿತಿಯೊಳಗೆ ಮೂಳೆ ತಜ್ಞರ ಹುದ್ದೆಯನ್ನು ಮಂಜೂರು ಮಾಡಿ ಭರ್ತಿಮಾಡಲಾಗುವುದು? (ವಿವರ ನೀಡುವುದು)	ಚಿಂತಾಮಣಿ ಸಾರ್ವಜನಿಕ ಆಸ್ಪತ್ರೆಯು ತಾಯಿ ಮಕ್ಕಳ ಆಸ್ಪತ್ರೆಯಾಗಿರುವುದರಿಂದ ಈ ಆಸ್ಪತ್ರೆಯಲ್ಲಿ ಮೂಳೆ ತಜ್ಞರ ಹುದ್ದೆಯು ಮಂಜೂರಾಗಿರುವುದಿಲ್ಲ. ಆದರೆ ಸಾರ್ವಜನಿಕ ಆಸ್ಪತ್ರೆ ಚಿಂತಾಮಣಿಯಲ್ಲಿ ಕೀಲು ಮತ್ತು ಮೂಳೆ ತಜ್ಞರ ಹುದ್ದೆ ಮಂಜೂರಾಗಿದ್ದು, ಪ್ರಸ್ತುತ ಸದರಿ ಹುದ್ದೆ ಖಾಲಿ ಇರುತ್ತದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ತಜ್ಞರು/ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ/ದಂತ ಆರೋಗ್ಯಾಧಿಕಾರಿಗಳ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಪ್ರಕ್ರಿಯೆ ಜಾರಿಯಲ್ಲಿದ್ದು, ವಿಶೇಷ ನೇಮಕಾತಿ ಸಮಿತಿ, ಅಧಿಸೂಚನೆ ಸಂಖ್ಯೆ:ಎಸ್‌ಆರ್‌ಸಿ/68/2019-20, ದಿ:10.09.20ರಲ್ಲಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಿ, ಈಗಾಗಲೇ ಮೂಲ ದಾಖಲೆಗಳನ್ನು ಪರಿಶೀಲಿಸಿಕೊಳ್ಳಲಾಗಿದೆ. ಸಮಾಲೋಚನೆಯ ಸಂದರ್ಭದಲ್ಲಿ ಖಾಲಿ ಇರುವ ಹುದ್ದೆಗಳನ್ನು ಪ್ರಚುರಪಡಿಸಿ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಆಕುಕ 05 ಹೆಚ್ ಎಸ್ ಡಿ 2021.

(ಡಾ. ಕೆ. ಸುಧಾಕರ್)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	821
ಮಾನ್ಯ ಸದಸ್ಯರ ಹೆಸರು	:	ಶ್ರೀ ಕೃಷ್ಣಾರೆಡ್ಡಿ. ಎಂ (ಚಿಂತಾಮಣಿ)
ಉತ್ತರಿಸಬೇಕಾದ ದಿನಾಂಕ	:	04.02.2021
ಉತ್ತರಿಸಬೇಕಾದ ಸಚಿವರು	:	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ. ಸಂ	ಪ್ರಶ್ನೆಗಳು	ಉತ್ತರ
ಅ)	ಚಿಕ್ಕಬಳ್ಳಾಪುರ ಜಿಲ್ಲೆ ಚಿಂತಾಮಣಿ ನಗರದಲ್ಲಿರುವ ಸಾರ್ವಜನಿಕರ ಆಸ್ಪತ್ರೆಯಲ್ಲಿ 2017-18ನೇ ಸಾಲಿನ ವಿವಿಧ ಲೆಕ್ಕ ಶೀರ್ಷಿಕೆಯಡಿಯಲ್ಲಿ ಮಾರುಕಟ್ಟೆ ದರಕ್ಕಿಂತ ಹೆಚ್ಚಿನ ದರ ನೀಡಿ ಆಸ್ಪತ್ರೆಗೆ ಬೇಕಾಗಿರುವ ಉಪಕರಣಗಳು, ಪೀಠೋಪಕರಣಗಳು, ಔಷಧಿಗಳು ಲ್ಯಾಬ್ ಸಲಕರಣೆಗಳನ್ನು ಖರೀದಿ ಮಾಡಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ:	ಬಂದಿದೆ.
ಆ)	ಬಂದಿದ್ದಲ್ಲಿ ಈ ಬಗ್ಗೆ ಇಲಾಖೆಯಿಂದ ಸೂಕ್ತ ತನಿಖೆ ಮಾಡಲಾಗಿದೆಯೇ; ಮಾಡಿದ್ದಲ್ಲಿ, ಸಂಬಂಧಪಟ್ಟ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗಿದೆಯೇ? (ವಿವರ ನೀಡುವುದು)	ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಸಂಖ್ಯೆ: ಆಕುಕ 11 ಎಸ್.ಟಿ.ಕ್ಯೂ 2021

(ಸಹಿ)
(ಡಾ|| ಕೆ.ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	825
ಮಾನ್ಯ ಸದಸ್ಯರ ಹೆಸರು	:	ಶ್ರೀ ವೆಂಕಟರಮಣಯ್ಯ ಟಿ. (ದೊಡ್ಡಬಳ್ಳಾಪುರ)
ಉತ್ತರಿಸುವ ದಿನಾಂಕ	:	04.02.2021
ಉತ್ತರಿಸುವ ಸಚಿವರು	:	ಪ್ರವಾಸೋದ್ಯಮ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ದೊಡ್ಡಬಳ್ಳಾಪುರ ತಾಲ್ಲೂಕಿನ ಹುಲಕುಡಿ ಬೆಟ್ಟದ ಗಂಗರಾಜರ ಆಳ್ವಿಕೆಯ ಕಾಲದ ಶ್ರೀ ವೀರಭದ್ರೇಶ್ವರಸ್ವಾಮಿ ದೇವಸ್ಥಾನವು ನಾಡಿನ ಅಪಾರ ಭಕ್ತರನ್ನು ಹೊಂದಿದ್ದು, ಈ ದೇವಸ್ಥಾನವನ್ನು ಪ್ರವಾಸಿ ತಾಣವಾಗಿಸುವ ಯೋಜನೆಯು ಸರ್ಕಾರದ ಮುಂದಿದೆಯೇ;	ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕಿನ ಹುಲಕುಡಿ ಬೆಟ್ಟದ ಗಂಗರಾಜರ ಆಳ್ವಿಕೆಯ ಕಾಲದ ಶ್ರೀ ವೀರಭದ್ರೇಶ್ವರಸ್ವಾಮಿ ದೇವಸ್ಥಾನ ಪ್ರದೇಶವನ್ನು ಪ್ರವಾಸಿ ಸ್ಥಳವಾಗಿ ರೂ. 100.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಂದ ಪ್ರವಾಸೋದ್ಯಮ ನಿರ್ದೇಶಕರಿಗೆ ಪ್ರಸ್ತಾವನೆ ಸ್ವೀಕೃತವಾಗಿರುತ್ತದೆ.
ಆ)	ಹಾಗಿದ್ದಲ್ಲಿ, ಸರ್ಕಾರವು ಕೈಗೊಂಡ ಕ್ರಮಗಳೇನು?	ರಾಜ್ಯದ ವಿವಿಧ ಕಾಮಗಾರಿಗಳಿಗೆ ಪ್ರಸಕ್ತ ಆರ್ಥಿಕ ಸಾಲಿನಲ್ಲಿ ಬಂಡವಾಳ ವೆಚ್ಚಗಳ ಲೆಕ್ಕಶೀರ್ಷಿಕೆ ಅಡಿಯಲ್ಲಿ ರೂ.35.00 ಕೋಟಿ ಅನುದಾನ ಮಾತ್ರ ಒದಗಿಸಿದ್ದು, ಈ ಅನುದಾನದಲ್ಲಿ ಮುಂದುವರೆದ ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿರುತ್ತದೆ. ಅನುದಾನದ ಲಭ್ಯತೆಗನುಗುಣವಾಗಿ ಹಾಗೂ ಕಾಮಗಾರಿಯ ಅಗತ್ಯತೆಗೆ ಅನುಗುಣವಾಗಿ ನಿಯಮಾನುಸಾರ ಪರಿಶೀಲಿಸಿ ಕ್ರಮವಹಿಸಲಾಗುವುದು.

ಸಂಖ್ಯೆ: ಟಿಓಆರ್ 18 ಟಿಡಿವಿ 2021.

(ಸಿ.ಪಿ. ಯೋಗೇಶ್ವರ)
ಪ್ರವಾಸೋದ್ಯಮ, ಪರಿಸರ ಮತ್ತು
ಜೀವಿಶಾಸ್ತ್ರ ಸಚಿವರು.

ಕರ್ನಾಟಕ ವಿಧಾನ ಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	827
2	ಸದಸ್ಯರ ಹೆಸರು	ಶ್ರೀ ಅವಿನಾಶ್ ಉಮೇಶ್ ಜಾಧವ್
3	ಉತ್ತರಿಸಬೇಕಾದ ದಿನಾಂಕ	04/02/2021
4	ಉತ್ತರಿಸಬೇಕಾದ ಸಚಿವರು	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಕಲಬುರಗಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಗೆ ಮಂಜೂರಾದ ಸ್ಟಾಫ್ ನರ್ಸಸ್ ಹುದ್ದೆಗಳ ಸಂಖ್ಯೆ ಎಷ್ಟು; ಪ್ರಸ್ತುತ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; ಇಲ್ಲಿಯವರೆಗೆ ಎಷ್ಟು ಹುದ್ದೆಗಳನ್ನು ಭರ್ತಿ ಮಾಡಲಾಗಿದೆ; ಖಾಲಿ ಹುದ್ದೆಗಳನ್ನು ಸರ್ಕಾರ ಯಾವ ಕಾಲಮಿತಿಯೊಳಗೆ ಭರ್ತಿ ಮಾಡಲಾಗುವುದು (ಪೂರ್ಣ ವಿವರ ನೀಡುವುದು)?	(see table below) ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಬೆಂಗಳೂರು ಇವರನ್ನು ಕೋರಲಾಗಿದೆ.

	ಮಂಜೂರಾದ ಹುದ್ದೆಗಳ ಸಂಖ್ಯೆ	ಕಾರ್ಯ ನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ	ಖಾಲಿ ಇರುವ ಹುದ್ದೆಗಳ ಸಂಖ್ಯೆ
ಜಿಮ್ಸ್, ಕಲಬುರಗಿ	27	27	0
ಟ್ರಾಮಾ ಕೇರ್ ಸೆಂಟರ್, ಜಿಮ್ಸ್ ಕಲಬುರಗಿ	100	0	100

ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಬೆಂಗಳೂರು ಇವರನ್ನು ಕೋರಲಾಗಿದೆ.

ಸಂಖ್ಯೆ: ಎಂಇಡಿ 102 ಎಂಎಂಸಿ 2021

(ಡಾ|| ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	829
ಮಾನ್ಯ ಸದಸ್ಯರ ಹೆಸರು	:	ಶ್ರೀ ನರೇಂದ್ರು ಆರ್. (ಹನೂರು)
ಉತ್ತರಿಸುವ ದಿನಾಂಕ	:	04.02.2021
ಉತ್ತರಿಸುವ ಸಚಿವರು	:	ಪ್ರವಾಸೋದ್ಯಮ ಮತ್ತು ಪರಿಸರ ಹಾಗೂ ಜೀವಿಶಾಸ್ತ್ರ, ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಚಾಮರಾಜನಗರ ಜಿಲ್ಲೆ ಹನೂರು ತಾಲ್ಲೂಕಿನ ಬೂದುಬಾಳು ವೆಂಕಟರಮಣಸ್ವಾಮಿ ದೇವಾಲಯವು ಪ್ರವಾಸಿಗರ ಪವಿತ್ರ ಯತ್ರಾಸ್ಥಳವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಅ)	ಸದರಿ ದೇವಸ್ಥಾನದ ಆವರಣದಲ್ಲಿ ಈಗಾಗಲೇ ನಿರ್ಮಾಣವಾಗಿರುವ ಡಾರ್ಮಿಟರಿಯನ್ನು (ಪ್ರವಾಸಿಗಳ ತಂಗುದಾಣ) ಸಾರ್ವಜನಿಕರ ಉಪಯೋಗಕ್ಕೆ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಈ ಸಂಬಂದ ಕಾಮಗಾರಿಯು ಪೂರ್ಣಗೊಂಡಿರುವ ಪ್ರಮಾಣ ಪತ್ರ ಹಾಗೂ ಡಾರ್ಮಿಟರಿ ಕಟ್ಟಡವನ್ನು ಪ್ರವಾಸೋದ್ಯಮ ಇಲಾಖೆಗೆ ಹಸ್ತಾಂತರಿಸುವಂತೆ ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಚಾಮರಾಜನಗರ ಇವರು ಅನುಷ್ಠಾನ ಸಂಸ್ಥೆಯಾದ ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ತಿಳಿಸಿರುತ್ತಾರೆ.
ಇ)	ಬಂದಿದ್ದಲ್ಲಿ, ಇದನ್ನು ಸಾರ್ವಜನಿಕರ ಬಳಕೆಗೆ ನೀಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು (ಸಂಪೂರ್ಣ ವಿವರ ನೀಡುವುದು)?	ಸದರಿ ಕಟ್ಟಡ ಹಸ್ತಾಂತರವಾದ ನಂತರ ಸಾರ್ವಜನಿಕರ ಬಳಕೆಗೆ ನೀಡಲು ಪರಿಶೀಲಿಸಿ, ಕ್ರಮವಹಿಸಲಾಗುವುದು.

ಸಂಖ್ಯೆ: ಟಿಓಆರ್ 12 ಟಿಡಿವಿ 2021.

Yogeshwar

(ಸಿ. ಪಿ. ಯೋಗೇಶ್ವರ)
ಪ್ರವಾಸೋದ್ಯಮ ಹಾಗೂ
ಪರಿಸರ ಮತ್ತು ಜೀವಿಶಾಸ್ತ್ರ, ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 832
ಸದಸ್ಯರ ಹೆಸರು : ಶ್ರೀ ಸಂಜೀವ ಮಠಂದೂರ್ (ಪುತ್ತೂರು)
ಉತ್ತರಿಸಬೇಕಾದ ದಿನಾಂಕ : 04-02-2021
ಉತ್ತರಿಸುವ ಸಚಿವರು : ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
1.	ಕರ್ನಾಟಕ ಅರೆಭಾಷೆ ಸಾಹಿತ್ಯ ಅಕಾಡೆಮಿಗೆ 2020-21ನೇ ಸಾಲಿನಲ್ಲಿ ಎಷ್ಟು ಅನುದಾನ ಮೀಸಲಿಡಲಾಗಿದೆ; ಅನುದಾನ ಮೀಸಲಿರಿಸಿದ್ದಲ್ಲಿ, ಯಾವ ರೀತಿಯಲ್ಲಿ ಉಪಯೋಗಿಸಲಾಗುತ್ತಿದೆ (ವಿವರ ನೀಡುವುದು);	ಕರ್ನಾಟಕ ಅರೆಭಾಷೆ ಸಾಹಿತ್ಯ ಅಕಾಡೆಮಿಗೆ 2020-21ನೇ ಸಾಲಿನಲ್ಲಿ ಕಾರ್ಯಚಟುವಟಿಕೆಗೆ ಹಾಗೂ ವೇತನ ವೆಚ್ಚಗಳಿಗೆ ರೂ.36.00ಲಕ್ಷಗಳನ್ನು ಮೀಸಲಿಡಲಾಗಿದೆ. ಸದರಿ ಅನದಾನವನ್ನು ಈ ಕೆಳಕಂಡ ಕಾರ್ಯಕ್ರಮ/ವಿವಿಧ ಯೋಜನೆಗಳಿಗೆ ಉಪಯೋಗಿಸಲಾಗುತ್ತಿದೆ. 1. ಅರೆಭಾಷೆ ಶಬ್ದಕೋಶ ರಚನೆ. 2. ಅರೆಭಾಷೆ ವಿಶ್ವಕೋಶರಚನೆ. 3. ಅರೆಭಾಷೆಗೆ ಅಂತರಾಷ್ಟ್ರೀಯ ಮಾನ್ಯತೆಯನ್ನು ಒದಗಿಸುವ ಕಾರ್ಯ. 4. ಗೌರವ ಪ್ರಶಸ್ತಿ ಮತ್ತು ಪುಸ್ತಕ ಬಹುಮಾನ ಯೋಜನೆ. 5. ಅರೆಭಾಷೆ ಸಾಂಸ್ಕೃತಿಕ ತರಬೇತಿ ಕಾರ್ಯಗಾರ. 6. ಪಾರಂಪರಿಕ ವಸ್ತುಗಳ ಮಾಹಿತಿ ಛಾಯಾಚಿತ್ರ ದಾಖಲೀಕರಣ. 7. ಅರೆಭಾಷೆ ಮಾತನಾಡುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಲಾವಿದರನ್ನು ಗುರುತಿಸಿ ವಾದ್ಯಪರಿಕರ ಮತ್ತು ವೇಷಭೂಷಣ ವಿತರಣೆ. 8. ಅರೆಭಾಷೆ ವರ್ಣಚಿತ್ರಕಾರ್ಯಾಗಾರ. 9. ಪುಸ್ತಕ ಪ್ರಕಟಣೆ. 10. ಅಮರ ಸುಳ್ಯ ಸ್ವಾತಂತ್ರ್ಯ ಸಮರ ವೀರರ ಸಂಸ್ಮರಣಾ ಯೋಜನೆ. 11. ಅರೆಭಾಷೆ ಸಾಹಿತ್ಯ ಸಮ್ಮೇಳನ. 12. ಗ್ರಂಥಾಲಯಕ್ಕೆ ಪುಸ್ತಕ ಸಂಗ್ರಹಿಸುವುದು. 13. ರಂಗತರಬೇತಿ ಶಿಬಿರ. 14. ಸಂಘ-ಸಂಸ್ಥೆಯೊಂದಿಗೆ ಕಾರ್ಯಕ್ರಮ.
2.	2020-21ನೇ ಆರ್ಥಿಕ ವರ್ಷದಲ್ಲಿ ಅರೆಭಾಷೆ ಸಾಹಿತ್ಯ ಅಕಾಡೆಮಿ ಹಮ್ಮಿಕೊಂಡಿರುವ ಯೋಜನೆಗಳಿಗೆ ಅಂದಾಜು ರೂ.25.00 ಕೋಟಿಗಳ ಅವಶ್ಯಕತೆ ಇರುವ ಅನುದಾನವನ್ನು ಯಾವಾಗ ಬಿಡುಗಡೆ ಮಾಡಲಾಗುವುದು?	ಈ ಬಗ್ಗೆ ಯಾವುದೇ ಪ್ರಸ್ತಾವನೆ ಬಂದಿರುವುದಿಲ್ಲ.

ಸಂಖ್ಯೆ: ಕಸಂಪಾ 08 ಕವಿಸ 2021

(ಅರವಿಂದ ಲಿಂಬಾವಳಿ)
ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು.

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 833
2. ಮಾನ್ಯ ಸದಸ್ಯರ ಹೆಸರು ಶ್ರೀ ಉಮಾನಾಥ ಎ. ಕೋಟ್ಯಾನ್ (ಮೂಡಬಿದ್ರೆ)
3. ಉತ್ತರಿಸಬೇಕಾದ ದಿನಾಂಕ 04/02/2021
4. ಉತ್ತರಿಸುವವರು ಮಾನ್ಯ ಕಾರ್ಮಿಕ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಖಾಸಗಿ ಕ್ಷೇತ್ರದಲ್ಲಿ ಸೃಷ್ಟಿಯಾಗುತ್ತಿರುವ ಉದ್ಯೋಗಗಳಲ್ಲಿ ಕನ್ನಡಿಗರಿಗೆ ಮೀಸಲಾತಿ ಖಾತರಿಪಡಿಸಲು ಪ್ರಸ್ತುತ ಸರ್ಕಾರ ಅನುಸರಿಸುತ್ತಿರುವ ನೀತಿ ನಿಯಮಗಳು ಯಾವುವು;	ರಾಜ್ಯದಲ್ಲಿ ಖಾಸಗಿ ಕ್ಷೇತ್ರದ ಸಂಸ್ಥೆಗಳಲ್ಲಿ ಕನ್ನಡಿಗರಿಗೆ ಉದ್ಯೋಗದಲ್ಲಿ ಮೀಸಲಾತಿ ಖಾತರಿ ಪಡಿಸಲು ಕಾರ್ಮಿಕ ಇಲಾಖೆಯಿಂದ ಯಾವುದೇ ನೀತಿ ನಿಯಮಗಳನ್ನು ರೂಪಿಸಿರುವುದಿಲ್ಲ. ಕರ್ನಾಟಕ ರಾಜ್ಯದಲ್ಲಿ ಖಾಸಗಿ ವಲಯದಲ್ಲಿ ಬರುವ 50 ಕ್ಕಿಂತ ಹೆಚ್ಚು ಕಾರ್ಮಿಕರನ್ನು ನೇಮಿಸಿಕೊಳ್ಳುವ ಕೈಗಾರಿಕಾ ಸಂಸ್ಥೆಗಳಲ್ಲಿ ಉದ್ಯೋಗ ಒದಗಿಸುವಲ್ಲಿ ಆದ್ಯತೆ ಕಲ್ಪಿಸಿಕೊಡಲು 1961ರ ಕರ್ನಾಟಕ ಔದ್ಯೋಗಿಕ ಉದ್ಯೋಗ (ಸ್ಥಾಯೀ ಆದೇಶ) ನಿಯಮಗಳಿಗೆ ತಿದ್ದುಪಡಿ ಮಾಡಿ ಅವಕಾಶ ಕಲ್ಪಿಸಲಾಗಿದೆ. ಕನ್ನಡಿಗರಿಗೆ ಉದ್ಯೋಗದಲ್ಲಿ ಮೀಸಲಾತಿ ಕೊಡುವ ಸಂಬಂಧ ಡಾ॥ ಸರೋಜಿನಿ ಮಹಿಷಿ ವರದಿಯನ್ನು ಪ್ರಕಟಿಸಿದ್ದು, ಅದನ್ನು ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ಪ್ರಸ್ತುತ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯು ಹೊಂದಿರುತ್ತದೆ.
(ಆ)	ಕನ್ನಡಿಗರು ಹಾಗೂ ಸ್ಥಳೀಯ ಮೂಲ ನಿವಾಸಿಗರು ಹಾಗೂ ತಮ್ಮ ಜಮೀನು ಮನೆ ಇತ್ಯಾದಿಗಳನ್ನು ಬಿಟ್ಟು ಕೊಟ್ಟು ಅನಾಥರಾಗಿರುವ ಜನರಿಗೆ ಪ್ರಥಮ ಹಾಗೂ ಕಡ್ಡಾಯವಾಗಿ ಉದ್ಯೋಗ ಮತ್ತಿತರ ಸೂಕ್ತ ಸೌಲಭ್ಯಗಳನ್ನು ಒದಗಿಸಿಕೊಡಲು ಸರ್ಕಾರದ ಪರಿಣಾಮಕಾರಿ ಕ್ರಮಗಳು ಯಾವುವು;	ಡಾ: ಸರೋಜಿನಿ ಮಹಿಷಿ ಸಮಿತಿ ವರದಿಯನ್ವಯ 50 ಕ್ಕಿಂತ ಹೆಚ್ಚು ಕಾರ್ಮಿಕರುಳ್ಳ ಬೃಹತ್, ಮಧ್ಯಮ ಮತ್ತು ಸಣ್ಣ ಕೈಗಾರಿಕಾ ಘಟಕಗಳಲ್ಲಿ 'ಎ' ಮತ್ತು 'ಬಿ' ವರ್ಗಗಳಲ್ಲಿ ಕ್ರಮವಾಗಿ ಶೇ. 65 ಮತ್ತು ಶೇ. 80 ಹಾಗೂ 'ಸಿ' ಮತ್ತು 'ಡಿ' ವರ್ಗಗಳಲ್ಲಿ ಶೇಕಡ 100 ರಷ್ಟು ಉದ್ಯೋಗಗಳನ್ನು ಕನ್ನಡಿಗರಿಗೆ/ಸ್ಥಳೀಯರಿಗೆ ನಿಗಧಿಪಡಿಸುವಂತೆ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಗಳು ಹಾಗೂ ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಗಳಲ್ಲಿ ಹೊಸ ಕೈಗಾರಿಕಾ ಘಟಕಗಳನ್ನು ಸ್ಥಾಪಿಸಲು ಒಪ್ಪಿಗೆಯನ್ನು ನೀಡುವ ಸಂದರ್ಭದಲ್ಲಿ ಷರತ್ತನ್ನು ವಿಧಿಸಲಾಗುತ್ತಿದೆ.
(ಇ)	ರಾಜ್ಯದಲ್ಲಿ ಉದ್ಯಮ ಸ್ಥಾಪನೆಗೆ ಕನ್ನಡಿಗರ ನೆಲ ಜಲವನ್ನು ಬಳಸಿಕೊಳ್ಳುವ ಕಂಪನಿಗಳು ಕೆಳ ಹಂತದ ಕೆಲವು ಉದ್ಯೋಗಗಳನ್ನು ಮಾತ್ರ ನೀಡಿ ಕಾನೂನು ಪಾಲಿಸಿದ್ದೇವೆ ಎಂದು ಹೇಳಿಕೊಳ್ಳುವುದನ್ನು ತಡೆಗಟ್ಟಲು ಮತ್ತು ಸಂತ್ರಸ್ತರೆಲ್ಲರಿಗೂ ಉದ್ಯೋಗ ಖಾತರಿಗೊಳಿಸುವಲ್ಲಿ ಸರ್ಕಾರದ ಕ್ರಮಗಳೇನು?	ಚಾಲ್ತಿಯಲ್ಲಿರುವ 50 ಕ್ಕಿಂತ ಹೆಚ್ಚು ಕಾರ್ಮಿಕರುಳ್ಳ ಕೈಗಾರಿಕೆಗಳಲ್ಲಿ ಸದರಿ ವರದಿಯನ್ವಯ ಕನ್ನಡಿಗರಿಗೆ/ಸ್ಥಳೀಯರಿಗೆ ಉದ್ಯೋಗ ನೀಡಿರುವ ಬಗ್ಗೆ ಜಿಲ್ಲಾ ಮಟ್ಟದಲ್ಲಿ ನಿಗದಿತ ನಮೂನೆಯಲ್ಲಿ ಮಾಹಿತಿಯನ್ನು ಕ್ರೂಢೀಕರಿಸಿ ಪರಿಶೀಲಿಸಿ ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶನಾಲಯಕ್ಕೆ ಸಲ್ಲಿಸಲಾಗುತ್ತಿದೆ. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯುವ ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಗಳಲ್ಲಿ ಸದರಿ ಮಾಹಿತಿಯನ್ನು ಪರಿಶೀಲಿಸಲಾಗುತ್ತದೆ. ನ್ಯೂನ್ಯತೆಗಳು ಕಂಡುಬಂದ ಕೈಗಾರಿಕೆಗಳಿಗೆ ಕೂಡಲೇ ಸರಿಪಡಿಸಲು ಸೂಚನೆಗಳನ್ನು ನೀಡಲಾಗುತ್ತದೆ. ಅಲ್ಲದೆ, ಕೈಗಾರಿಕಾ ನೀತಿಯನ್ವಯ ಸರ್ಕಾರದಿಂದ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ಪಡೆಯುವ ಕೈಗಾರಿಕಾ ಘಟಕಗಳು 'ಡಿ' ವರ್ಗದ ಉದ್ಯೋಗಗಳಲ್ಲಿ ಶೇ. 100 ರಷ್ಟು ಹಾಗೂ ಘಟಕದ ಒಟ್ಟಾರೆ ಉದ್ಯೋಗಗಳಲ್ಲಿ ಶೇ.70 ರಷ್ಟನ್ನು ಕನ್ನಡಿಗರಿಗೆ/ಸ್ಥಳೀಯರಿಗೆ ನೀಡುವ ನಿಬಂಧನೆ ಇದ್ದು ಅದರಂತೆ ಉದ್ಯೋಗಗಳನ್ನು ನೀಡಿದ ಘಟಕಗಳಿಗೆ ಮಾತ್ರ ಅರ್ಹ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ಮಂಜೂರು ಮಾಡಲಾಗುತ್ತಿದೆ.

ಕಾಇ 39 ಎಲ್ಇಟಿ 2021

(ಅರಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ : 834
ಮಾನ್ಯ ವಿಧಾನ ಸಭೆ ಸದಸ್ಯರು : ಶ್ರೀ ನಿಂಬಣ್ಣನವರ್. ಸಿ. ಎಂ (ಕಲಘಟಗಿ)
ಉತ್ತರಿಸುವ ಸಚಿವರು ಪ್ರವಾಸೋದ್ಯಮ ಮತ್ತು ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು
ಉತ್ತರಿಸಬೇಕಾದ ದಿನಾಂಕ : 04.02.2021

ಕ್ರ ಸಂ	ವಿಷಯ	ಉತ್ತರ
ಅ)	ಕಲಘಟಗಿ ಮತಕ್ಷೇತ್ರದಲ್ಲಿ ಅನೇಕ ಪ್ರಾಚೀನ ದೇವಸ್ಥಾನಗಳಿದ್ದು, ಅವುಗಳ ಜೀರ್ಣೋದ್ಧಾರ ಮಾಡುವುದು ಅವಶ್ಯವೆಂಬ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ
ಆ)	ಈ ದೇವಸ್ಥಾನಗಳಿಗೆ ವರ್ಷವಿಡೀ ಭಕ್ತಾಧಿಗಳು ದರ್ಶನಾಶೀರ್ವಾದ ಪಡೆಯಲು ಆಗಮಿಸುತ್ತಿದ್ದು, ಈ ಕ್ಷೇತ್ರಗಳಲ್ಲಿ ಯಾತ್ರಾರ್ಥಿಗಳಿಗಾಗಿ ಪ್ರವಾಸೋದ್ಯಮ ಇಲಾಖೆ ಅನುದಾನ ಬಿಡುಗಡೆ ಮಾಡಿದೆಯೇ (ವಿವರ ನೀಡುವುದು)?	ಧಾರವಾಡ ಜಿಲ್ಲೆ, ಕಲಘಟಗಿ ತಾಲ್ಲೂಕು, ಕಾಮಧೇನು ಗ್ರಾಮದಲ್ಲಿರುವ ಶ್ರೀ ಕಲ್ಮೇಶ್ವರ ದೇವಾಲಯವು ಪುರಾತನ ಸ್ಮಾರಕಗಳ ಪಟ್ಟಿಯಲ್ಲಿದ್ದು, ಈ ಸ್ಮಾರಕದ ಸುತ್ತಲೂ ಚೈನ್ ಲಿಂಕ್ ಫೆನ್ಸಿಂಗ್ ಅಳವಡಿಸಲು 2020-21ನೇ ಸಾಲಿನಲ್ಲಿ ರೂ.35.00ಲಕ್ಷಗಳ ಅಂದಾಜುಪಟ್ಟಿಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿಯನ್ನು ಪಡೆದು ಟೆಂಡರ್ ಕರೆಯಲಾಗಿದ್ದು, ಆಯ್ಕೆಗೊಳ್ಳುವ ಗುತ್ತಿಗೆದಾರರ ಮೂಲಕ ಕಾಮಗಾರಿಯನ್ನು ಅನುಷ್ಠಾನಗೊಳಿಸಿ ಪೂರ್ಣಗೊಳಿಸಲಾಗುವುದು. ಈ ಕ್ಷೇತ್ರಗಳಲ್ಲಿ ಯಾತ್ರಾರ್ಥಿಗಳ ಅನುಕೂಲಕ್ಕಾಗಿ ಪ್ರವಾಸೋದ್ಯಮ ಇಲಾಖೆಯಿಂದ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಬಿಡುಗಡೆ ಮಾಡಿರುವ ಅನುದಾನದ ವಿವರ ಕೆಳಕಂಡಂತಿದೆ.

(ರೂ.ಲಕ್ಷಗಳಲ್ಲಿ)

ಕ್ರ. ಸಂ	ಕಾಮಗಾರಿಯ ವಿವರ	ಅಂದಾಜು ಮೊತ್ತ	ಬಿಡುಗಡೆ ಮಾಡಿದ ಮೊತ್ತ
1	ಕಲಘಟಗಿ ತಾಲ್ಲೂಕಿನ ನಾಗನೂರು ಗ್ರಾಮದ ಶ್ರೀ ಬಸವೇಶ್ವರ ದೇವಸ್ಥಾನ ಹತ್ತಿರ ಯಾತ್ರಿನಿವಾಸ ನಿರ್ಮಾಣ	100.00	100.00
2	ಕಲಘಟಗಿ ತಾಲ್ಲೂಕಿನ ತಾವರಗೇರಿಯ ಶ್ರೀ ಸಿದ್ಧಾರೂಢ ದೇವಸ್ಥಾನದ ಬಳಿ ಯಾತ್ರಿನಿವಾಸ ನಿರ್ಮಾಣ	25.00	10.00
3	ಕಲಘಟಗಿ ಪಟ್ಟಣದ ಶ್ರೀ ಹನ್ನೆರಡು ಮಠದ ಬಳಿ ಯಾತ್ರಿನಿವಾಸ ನಿರ್ಮಾಣ	25.00	18.75
4	ಕಲಘಟಗಿ ತಾಲ್ಲೂಕಿನ ಬೋಗೆನಾಗರ ಕೊಪ್ಪ ಗ್ರಾಮದ ಶ್ರೀ ಬಸವೇಶ್ವರ ಮಠದ ಹತ್ತಿರ ಯಾತ್ರಿನಿವಾಸ ನಿರ್ಮಾಣ	25.00	25.00
	ಒಟ್ಟು	**175.00**	**153.75**

ಕಡತ ಸಂಖ್ಯೆ : ಟಿಓಆರ್ 7 ಟಿಡಿವಿ 2021

(ಸಿ. ಪಿ. ಯೋಗೇಶ್ವರ)
ಪ್ರವಾಸೋದ್ಯಮ, ಪರಿಸರ ಮತ್ತು
ಜೀವಿಶಾಸ್ತ್ರ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	835
ಮಾನ್ಯ ಸದಸ್ಯರ ಹೆಸರು	:	ಶ್ರೀ ದೇವಾನಂದ್ ಫುಲಸಿಂಗ್ ಚವಾಣ್ (ನಾಗಠಾಣ)
ಉತ್ತರಿಸಬೇಕಾದ ದಿನಾಂಕ	:	04-02-2021
ಉತ್ತರಿಸುವ ಸಚಿವರು	:	ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ಮಂಜೂರು ಮಾಡಲಾದ ಪ್ರಾಥಮಿಕ ಆರೋಗ್ಯ ಕೇಂದ್ರಗಳೆಷ್ಟು; (ವಿಧಾನಸಭಾ ಕ್ಷೇತ್ರವಾರು ಮಾಹಿತಿ ನೀಡುವುದು)	ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲಾಗಿರುವುದಿಲ್ಲ.
ಆ	ವಿಜಯಪುರ ಜಿಲ್ಲೆಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಇ	ವೈದ್ಯರ ಕೊರತೆ ನೀಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ತಜ್ಞರು/ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ/ದಂತ ಆರೋಗ್ಯಾಧಿಕಾರಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಪ್ರಕ್ರಿಯೆ ಜಾರಿಯಲ್ಲಿದ್ದು, ವಿಶೇಷ ನೇಮಕಾತಿ ಸಮಿತಿಯಿಂದ ನೇರ ನೇಮಕಾತಿ ಮುಖಾಂತರ 824 ತಜ್ಞ ವೈದ್ಯರು (ಬ್ಯಾಕ್‌ಲಾಗ್ ಒಳಗೊಂಡಂತೆ) ಹಾಗೂ 1246 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲು ಈಗಾಗಲೇ ಅಧಿಸೂಚನೆ ಹೊರಡಿಸಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಈಗಾಗಲೇ ದಾಖಲೆಗಳ ಪರಿಶೀಲನೆ ಮುಗಿದಿರುತ್ತದೆ. ತಾತ್ಕಾಲಿಕ ಪಟ್ಟಿಯನ್ನು ಪ್ರಚುರಪಡಿಸುವ ಹಂತದಲ್ಲಿದೆ.

ಆಕುಕ 09 ಎಸ್‌ಬಿವಿ 2021

(ಡಾ॥ ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	839
ಸದಸ್ಯರ ಹೆಸರು	:	**ಶ್ರೀ ಬಸವರಾಜ್ ದಢೆಸುಗೂರ್ (ಕನಕಗಿರಿ)**
ಉತ್ತರಿಸುವ ದಿನಾಂಕ	:	04.02.2021
ಉತ್ತರಿಸುವ ಸಚಿವರು	:	ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

<table>
<tr><th>ಕ್ರ.
ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕೊಪ್ಪಳ ಜಿಲ್ಲೆಯ ಕಾರಟಗಿ ಪಟ್ಟಣದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಬಂದಿದೆ.</td></tr>
<tr><td>ಆ)</td><td>ಕಾರಟಗಿಯು ತಾಲ್ಲೂಕು ಕೇಂದ್ರವಾಗಿದ್ದು ಕೇಂದ್ರ ಸ್ಥಾನದಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿರುವುದರಿಂದ ನಗರದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಮಂಜೂರಾತಿ ನೀಡಿ ಪ್ರಾರಂಭಿಸಲಾಗುವುದೇ?
(ಮಾಹಿತಿಯನ್ನು ನೀಡುವುದು)</td><td>ಪ್ರಸ್ತುತ ಕಾರಟಗಿ ಸುತ್ತಮುತ್ತ ಕಾರ್ಯನಿರ್ವಹಿಸುತ್ತಿರುವ ಕಾಲೇಜುಗಳು ವಿವರ ಈ ಕೆಳಕಂಡಂತಿದೆ;
<table>
<tr><th>ಕಾಲೇಜಿನ ಹೆಸರು</th><th>ಸರ್ಕಾರಿ/ ಅನುದಾನಿತ</th><th>ಅಂತರಕಿ.ಮೀ</th><th>ವಿದ್ಯಾರ್ಥಿಗಳಸಂಖ್ಯೆ</th><th>ಲಭ್ಯವಿರು ಕೋರ್ಸುಗಳು</th></tr>
<tr><td>ಸ.ಪ್ರ.ದ. ಕಾಲೇಜು, ಸಿಂಧನೂರು</td><td>ಸರ್ಕಾರಿ</td><td>22 ಕಿ.ಮೀ</td><td>2541</td><td>ಬಿ.ಎ. ಬಿ.ಎಸ್ಸಿ. ಬಿ.ಕಾಂ.ಬಿಬಿಎ</td></tr>
<tr><td>ಸ.ಪ್ರ.ದ. ಮಹಿಳಾಕಾಸಿಂಧ ನೂರು</td><td>ಸರ್ಕಾರಿ</td><td>22 ಕಿ.ಮೀ</td><td>435</td><td>ಬಿ.ಎಬಿ.ಕಾಂ</td></tr>
<tr><td>ಸ.ಪ್ರದ.ಕಾಲೇಜು ಶ್ರೀರಾಮನಗರ</td><td>ಸರ್ಕಾರಿ</td><td>14 ಕಿ.ಮೀ</td><td>203</td><td>ಬಿ.ಎಬಿ.ಕಾಂ</td></tr>
<tr><td>ಸ.ಪ್ರ.ದ.ಕಾಲೇಜು ಗಂಗಾವತಿ</td><td>ಸರ್ಕಾರಿ</td><td>26 ಕಿ.ಮೀ</td><td>2660</td><td>ಬಿ.ಎ. ಬಿ.ಎಸ್ಸಿ, ಬಿ.ಕಾಂ., ಬಿಬಿಎ</td></tr>
<tr><td>ಸ.ಪ್ರ.ದ.ಕಾಲೇಜು ಕಂಪ್ಲಿ</td><td>ಸರ್ಕಾರಿ</td><td>30 ಕಿ.ಮೀ</td><td>790</td><td>ಬಿ.ಎಬಿ.ಕಾಂ</td></tr>
<tr><td>ಸ.ಪ್ರ.ದ.ಕಾಲೇಜು ಕನಕಗಿರಿ</td><td>ಸರ್ಕಾರಿ</td><td>33 ಕಿ.ಮೀ</td><td>496</td><td>ಬಿ.ಎಬಿ.ಕಾಂ</td></tr>
<tr><td>ಹೆಚ್‌ಆರ್‌ಎಸ್‌ಎಂ ಪದವಿಕಾಲೇಜು, ಗಂಗಾವತಿ</td><td>ಖಾಸಗಿಅನುದಾನಿತ</td><td>26ಕಿ.ಮೀ</td><td>231</td><td>ಬಿ.ಎಬಿ.ಕಾಂ</td></tr>
</table>
ಮೇಲಿನ ಅಂಕಣದಲ್ಲಿ ತಿಳಿಸಿರುವಂತೆ ಕಾರಟಗಿ ತಾಲ್ಲೂಕಿನ ವಿದ್ಯಾರ್ಥಿಗಳು ಆರು ಸರ್ಕಾರಿ ಮತ್ತು ಒಂದು ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಪ್ರವೇಶ ಪಡೆಯಬಹುದಾಗಿರುತ್ತದೆ.</td></tr>
</table>

ಕಡತ ಸಂಖ್ಯೆ: ಇಡಿ 11 ಹೆಚ್‌ಪಿಸಿ 2021

(ಡಾ: ಅಶ್ವಥ್ ನಾರಾಯಣ ಸಿ.ಎನ್)
ಉಪ ಮುಖ್ಯಮಂತ್ರಿಗಳು ಹಾಗೂ
ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ
ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 840
ಸದಸ್ಯರ ಹೆಸರು : ಶ್ರೀ. ಬಸವರಾಜ್ ದಡೆಸುಗೂರ್ (ಕನಕಗಿರಿ ಕ್ಷೇತ್ರ)
ಉತ್ತರಿಸುವ ದಿನಾಂಕ : 04-02-2021
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು.

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಕೊಪ್ಪಳ ಜಿಲ್ಲೆಯ, ನೂತನ ಕಾರಟಗಿ ತಾಲ್ಲೂಕಿನಲ್ಲಿ ದಿನಾಂಕ: 07.12.2018 ರಂದು ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯವನ್ನು ಸರ್ಕಾರವು ಮಂಜೂರು ಮಾಡಿದ್ದು, ಇಲ್ಲಿಯವರೆಗೂ ವಿದ್ಯಾರ್ಥಿನಿಲಯವು ನಿರ್ಮಾಣ ವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಕೊಪ್ಪಳ ಜಿಲ್ಲೆಯ, ಕಾರಟಗಿ ತಾಲ್ಲೂಕಿನಲ್ಲಿ ಸಮಾಜ ಕಲ್ಯಾಣ ಇಲಾಖೆ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ಯಾವುದೇ ವಿದ್ಯಾರ್ಥಿನಿಲಯಗಳು ಮಂಜೂರು ಮಾಡಿರುವುದಿಲ್ಲ.
ಆ)	ಬಂದಿದ್ದಲ್ಲಿ, ಸಂಬಂಧಪಟ್ಟ ಇಲಾಖೆಯಿಂದ ಅಗತ್ಯವಿರುವ ಮಾಹಿತಿಗಳನ್ನು ಪಡೆದು ಯಾವ ಕಾಲಮಿತಿಯೊಳಗೆ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯದ ಕಟ್ಟಡವನ್ನು ನಿರ್ಮಾಣ ಮಾಡಿ ಪ್ರಾರಂಭಿಸಲಾಗುವುದು?	ಉದ್ಭವಿಸುವುದಿಲ್ಲ.

ಸಕಇ 33 ಪಕವಿ 2021

(ಬಿ. ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 841
ಮಾನ್ಯ ಸದಸ್ಯರ ಹೆಸರು : ಶ್ರೀ ಬಸವರಾಜ್ ದಡೆಸುಗೂರ್ (ಕನಕಗಿರಿ)
ಉತ್ತರಿಸಬೇಕಾದ ದಿನಾಂಕ : 04-02-2021
ಉತ್ತರಿಸುವ ಸಚಿವರು : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಕೊಪ್ಪಳ ಜಿಲ್ಲೆಯ, ಕನಕಗಿರಿ ವ್ಯಾಪ್ತಿಯಲ್ಲಿ ನೂತನ ಕನಕಗಿರಿ ಮತ್ತು ಕಾರಟಗಿಯು ತಾಲ್ಲೂಕು ಕೇಂದ್ರಗಳಾಗಿ ಘೋಷಣೆಯಾಗಿದ್ದು, ಸದರಿ ತಾಲ್ಲೂಕುಗಳಲ್ಲಿನ ಆಸ್ಪತ್ರೆಗಳನ್ನು 100 ಹಾಸಿಗೆಯ ಆಸ್ಪತ್ರೆಗಳನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ	ಸರ್ಕಾರವು ಇದರ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು?	ಹೊಸದಾಗಿ ರಚನೆಯಾದ ತಾಲ್ಲೂಕುಗಳಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರ/ಸಮುದಾಯ ಆರೋಗ್ಯ ಕೇಂದ್ರಗಳನ್ನು ತಾಲ್ಲೂಕು ಆಸ್ಪತ್ರೆಗಳನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಆಕುಕ 14 ಎಸ್‌ಬಿವಿ 2021.

(ಡಾ|| ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 845
ಮಾನ್ಯ ಸದಸ್ಯರ ಹೆಸರು : ಡಾ|| ಶ್ರೀನಿವಾಸಮೂರ್ತಿ ಕೆ (ನೆಲಮಂಗಲ)
ಉತ್ತರಿಸಬೇಕಾದ ದಿನಾಂಕ : 04-02-2021
ಉತ್ತರಿಸುವ ಸಚಿವರು : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ನೆಲಮಂಗಲ ಕ್ಷೇತ್ರಕ್ಕೆ ಆಂಬ್ಯುಲೆನ್ಸ್ ವ್ಯವಸ್ಥೆ ಕಲ್ಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ಆಂಬ್ಯುಲೆನ್ಸ್‌ಗಳನ್ನು ಒದಗಿಸಲಾಗುವುದು;	ನೆಲಮಂಗಲ ಕ್ಷೇತ್ರದ ಸಾರ್ವಜನಿಕ ಆಸ್ಪತ್ರೆ ಇಲ್ಲಿಗೆ ನೂತನವಾಗಿ ಮಾರುತಿ ಇಕೋ ಬಿ.ಎಲ್.ಎಸ್ ಆಂಬ್ಯುಲೆನ್ಸ್ ವಾಹನವನ್ನು ನೀಡಲಾಗಿರುತ್ತದೆ.
ಆ	ನೆಲಮಂಗಲ ಸಾರ್ವನಿಕರ ಆಸ್ಪತ್ರೆಯ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರ ಪ್ರತಿ ವರ್ಷ ನಿಗದಿಪಡಿಸಿದ ಅನುದಾನವೆಷ್ಟು; (ಕಳೆದ ಮೂರು ವರ್ಷಗಳ ವಿವರ ನೀಡುವುದು)	ಆಸ್ಪತ್ರೆಯ ಅಭಿವೃದ್ಧಿ ಕಾಮಗಾರಿಗೆ ಕಳೆದ ಮೂರು ವರ್ಷಗಳಲ್ಲಿ ಇಂಜಿನಿಯರಿಂಗ್ ಘಟಕದ ವತಿಯಿಂದ ಒದಗಿಸಿರುವ ವೆಚ್ಚದ ವಿವರಗಳು ಈ ಕೆಳಕಂಡಂತಿವೆ: 2018-19ನೇ ಸಾಲಿನ ಅನುದಾನ ರೂ.26.23 ಲಕ್ಷಗಳು 2019-20ನೇ ಸಾಲಿನ ಅನುದಾನ ರೂ.15.82 ಲಕ್ಷಗಳು 2020-21ನೇ ಸಾಲಿನ ಅನುದಾನ ರೂ.40.71 ಲಕ್ಷಗಳು.
ಇ	ನೆಲಮಂಗಲ ಸಾರ್ವಜನಿಕರ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲಾಗುವುದೇ;	ಸರ್ಕಾರದ ಆದೇಶ ಸಂಖ್ಯೆ: ಆಕುಕ 1068 ಸಿಜಿಎಂ 2006 ದಿನಾಂಕ:25-01-2007ರಂತೆ 100 ಹಾಸಿಗೆಗಳ ಸಾಮರ್ಥ್ಯಕ್ಕೆ ಮೇಲ್ದರ್ಜೆಗೇರಿಸಿದ್ದು, ಆದರೆ 50 ಹಾಸಿಗೆಗಳಿಗೆ ಮಾತ್ರ ಕಟ್ಟಡ ಸೀಮಿತವಾಗಿರುತ್ತದೆ. ಅನುದಾನ ಲಭ್ಯತೆ ಆಧಾರದ ಮೇಲೆ ಕಟ್ಟಡ ಕಾಮಗಾರಿಗಳು ಪ್ರಾರಂಭಿಸಲಾಗುವುದು.
ಈ	ನೆಲಮಂಗಲ ಸಾರ್ವಜನಿಕರ ಆಸ್ಪತ್ರೆಯಲ್ಲಿ ನೂತನವಾಗಿ ಐ.ಸಿ.ಯು ಪ್ರಾರಂಭಿಸಲು ಸರ್ಕಾರಕ್ಕೆ ಸಲ್ಲಿಸಲಾಗಿರುವ ಪ್ರಸ್ತಾವನೆ ಯಾವ ಹಂತದಲ್ಲಿದೆ; (ವಿವರ ನೀಡುವುದು)	2017-18ನೇ ಸಾಲಿನಲ್ಲಿ 3 ಹಾಸಿಗೆಯ ಒಂದು ವೆಂಟಿಲೇಟರ್ ಒಳಗೊಂಡ ತೀವ್ರ ನಿಗಾ ಘಟಕವನ್ನು ಸ್ಥಾಪಿಸಲಾಗಿರುತ್ತದೆ. ಕೋವಿಡ್ ಹಿನ್ನೆಲೆಯಲ್ಲಿ ಹೆಚ್ಚುವರಿಯಾಗಿ 3 ವೆಂಟಿಲೇಟರ್‌ಗಳನ್ನು ಒದಗಿಸಲಾಗಿದೆ. ಅಲ್ಲದೆ ಮೆಡಿಕಲ್ ಗ್ಯಾಸ್ ಪೈಪ್‌ಲೈನ್ ವ್ಯವಸ್ಥೆ ಹಾಗೂ ಜಂಬೊ ಆಕ್ಸಿಜನ್ ಸಿಲಿಂಡರ್ ವ್ಯವಸ್ಥೆ ಸಹ ಮಾಡಲಾಗಿದೆ.
ಉ	ನೆಲಮಂಗಲ ಕ್ಷೇತ್ರದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳೆಷ್ಟು; ಈ ಕ್ಷೇತ್ರಕ್ಕೆ ಹೊಸದಾಗಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಿ ಪ್ರಾರಂಭ ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ;	ನೆಲಮಂಗಲ ಕ್ಷೇತ್ರದಲ್ಲಿ 11 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಹೊಸದಾಗಿ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರು ಮಾಡಿ ಪ್ರಾರಂಭ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಆಕುಕ 23 ಎಸ್‌ಬಿವಿ 2021.

(ಡಾ|| ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 853
ಮಾನ್ಯ ಸದಸ್ಯರ ಹೆಸರು	: ಶ್ರೀ ಐಹೋಳೆ ಡಿ ಮಹಾಲಿಂಗಪ್ಪ (ರಾಯಭಾಗ)
ಉತ್ತರಿಸಬೇಕಾದ ದಿನಾಂಕ	: 04–02–2021
ಉತ್ತರಿಸುವ ಸಚಿವರು	: ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಬೆಳಗಾವಿ ಜಿಲ್ಲೆ, ರಾಯಭಾಗ ತಾಲ್ಲೂಕಿನ ದಿಗ್ಗೇವಾಡಿ, ಬೆಂಡವಾಡ ಗ್ರಾಮಗಳಲ್ಲಿ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಇಲ್ಲ.
ಆ	ಹಾಗಿದ್ದಲ್ಲಿ, ಸದರಿ ಪ್ರಸ್ತಾವನೆಗಳು ಯಾವ ಹಂತದಲ್ಲಿವೆ; ಯಾವ ಕಾಲಮಿತಿಯಲ್ಲಿ ಈ ಗ್ರಾಮಗಳಲ್ಲಿ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದು;	ಉದ್ಭವಿಸುವುದಿಲ್ಲ.
ಇ	ಇಲ್ಲದಿದ್ದಲ್ಲಿ, ಜನಸಂಖ್ಯೆ ಹೆಚ್ಚಿರುವ ಗ್ರಾಮೀಣ ಭಾಗದಲ್ಲಿ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಿ ಇಲ್ಲಿನ ಬಡ ಸಾರ್ವಜನಿಕರಿಗೆ ಆರೋಗ್ಯ ಸೇವೆ ಒದಗಿಸಲು ಸರ್ಕಾರಕ್ಕಿರುವ ತೊಂದರೆಗಳೇನು;	ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಜನಸಂಖ್ಯೆಗೆ ಅನುಗುಣವಾಗಿ ಪುನರ್ ವಿಂಗಡಣೆ ಮಾಡುವ ಪೈಲೆಟ್ ಅಧ್ಯಯನವನ್ನು ಕೈಗೊಂಡಿದ್ದು, ಸದರಿ ಪೈಲೆಟ್ ಅಧ್ಯಯನದ ವರದಿಯು ಬಂದನಂತರ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲು ಪರಿಶೀಲಿಸಲಾಗುವುದು.
ಈ	ಡಾ: ನಂಜುಂಡಪ್ಪ ವರದಿಯನ್ವಯ ಹಿಂದುಳಿದ ತಾಲ್ಲೂಕುಗಳ ಆಸ್ಪತ್ರೆಗಳ ಅಭಿವೃದ್ಧಿಗೆ ಮೀಸಲಿರಿಸಿರುವ ಅನುದಾನವನ್ನು ಬಳಸಿ ಇಲ್ಲಿ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ (ವಿವರ ನೀಡುವುದು)?	

ಆಕುಕ 16 ಎಸ್‌ಬಿವಿ 2021

(ಡಾ|| ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 854
ಮಾನ್ಯ ಸದಸ್ಯರ ಹೆಸರು : ಶ್ರೀ ಐಹೋಳೆ ಡಿ ಮಹಾಲಿಂಗಪ್ಪ (ರಾಯಭಾಗ)
ಉತ್ತರಿಸಬೇಕಾದ ದಿನಾಂಕ : 04-02-2021
ಉತ್ತರಿಸುವ ಸಚಿವರು : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಬೆಳಗಾವಿ ಜಿಲ್ಲೆ, ರಾಯಭಾಗ ಮತಕ್ಷೇತ್ರದ ರಾಯಭಾಗ ಹಾಗೂ ಚಿಕ್ಕೋಡಿ ತಾಲ್ಲೂಕುಗಳಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ರಾಯಭಾಗ ಮತಕ್ಷೇತ್ರದಲ್ಲಿರುವ ರಾಯಭಾಗ ಹಾಗೂ ಚಿಕ್ಕೋಡಿ ತಾಲ್ಲೂಕು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರ ಮುಂದಿರುವುದಿಲ್ಲ.
ಆ	ಹಾಗಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ಈ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲಾಗುವುದು; ಈ ಕಾರ್ಯಕ್ಕಾಗಿ ಸರ್ಕಾರ ಮೀಸಲಿರಿಸಿರುವ ಅನುದಾನವೆಷ್ಟು (ವಿವರ ನೀಡುವುದು);	ಉದ್ಭವಿಸುವುದಿಲ್ಲ.
ಇ	ಇಲ್ಲದಿದ್ದಲ್ಲಿ, ಕಾರಣಗಳೇನು (ವಿವರ ನೀಡುವುದು)?	ಆರ್ಥಿಕ ವಿಸ್ತರತೆ ಇಲ್ಲದಿರುವುದರಿಂದ ಯಾವುದೇ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆಗಳು ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.

ಆಕುಕ 15 ಎಸ್‌ಬಿವಿ 2021

(ಡಾ॥ ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 856

ಮಾನ್ಯ ಸದಸ್ಯರ ಹೆಸರು : ಶ್ರೀ ಐಹೋಳೆ ಡಿ.ಮಹಾಲಿಂಗಪ್ಪ(ರಾಯಭಾಗ)

ಉತ್ತರಿಸಬೇಕಾದ ದಿನಾಂಕ : 04.02.2021

ಉತ್ತರಿಸುವ ಸಚಿವರು : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ	ಬೆಳಗಾವಿ ಜಿಲ್ಲೆ, ರಾಯಭಾಗ ಮತಕ್ಷೇತ್ರದ ರಾಯಭಾಗ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬೆಳಗಾವಿ ಜಿಲ್ಲೆ ,ರಾಯಭಾಗ ಮತಕ್ಷೇತ್ರದಲ್ಲಿನ ನಸಲಾಪೂರ ಹಾಗೂ ಕರಗಾಂವ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಶಿಥಿಲಾವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಆ	ಬಂದಿದ್ದಲ್ಲಿ, ಈ ಕೇಂದ್ರಗಳಲ್ಲಿ ಶುದ್ಧ ಕುಡಿಯುವ ನೀರು, ಕೇಂದ್ರಗಳ ಸುತ್ತಲೂ ಕಾಂಪೌಂಡ್ ನಿರ್ಮಾಣ, ಕೇಂದ್ರಗಳಿಗೆ ಸಂಪರ್ಕ ಕಲ್ಪಿಸುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ;	ರಾಯಭಾಗ ತಾಲೂಕಿನ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಶುದ್ಧ ಕುಡಿಯುವ ನೀರು ಸೌಲಭ್ಯ ಇರುತ್ತದೆ. ಪ್ರಾಥಮಿಕ ಆರೋಗ್ಯ ಕೇಂದ್ರ ಚಿಂಚಲಿ, ಬ್ಯಾಕೂಡ ಹಾಗೂ ಸಮುದಾಯ ಆರೋಗ್ಯ ಕೇಂದ್ರ ಕಬ್ಬೂರ ಇವುಗಳಿಗೆ ಆವರಣ ಗೋಡೆ ಹಾಗೂ ಸಂಪರ್ಕ ರಸ್ತೆ ಕಲ್ಪಿಸಲು ಮುಂದಿನ ವರ್ಷಗಳಲ್ಲಿ ಉಪಯೋಗಿ ಇಲಾಖೆಯ ಕೋರಿಕೆ ಹಾಗೂ ಅನುದಾನದ ಲಭ್ಯತೆಗನುಗುಣವಾಗಿ ಕ್ರಮವಹಿಸಲಾಗುವುದು.
ಇ	ಹಾಗಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ಈ ಕೇಂದ್ರಗಳಲ್ಲಿ ಕೊರತೆಯಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುವುದು;	ಮುಂದಿನ ವರ್ಷಗಳಲ್ಲಿ ಅನುದಾನದ ಲಭ್ಯತೆಗನುಗುಣವಾಗಿ ಕ್ರಮ ವಹಿಸಲಾಗುವುದು.
ಈ	ಇಲ್ಲದಿದ್ದಲ್ಲಿ, ಕಾರಣಗಳೇನು? (ವಿವರ ನೀಡುವುದು)	

ಆಕುಕ 22 ಎಸ್‌ಎಂಎಂ 2021

(ಡಾ||ಕೆ.ಸುಧಾಕರ್)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ

ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 858
ಸದಸ್ಯರ ಹೆಸರು : ಶ್ರೀಮತಿ ಸೌಮ್ಯರೆಡ್ಡಿ
ಉತ್ತರಿಸುವ ದಿನಾಂಕ : 04.02.2021.
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಸಮಾಜ ಕಲ್ಯಾಣ ಇಲಾಖೆಯಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಅಭಿವೃದ್ಧಿಗಾಗಿ ವಿವಿಧ ನಿಗಮಗಳನ್ನು ಸ್ಥಾಪಿಸಿ ಸದರಿ ಸಮುದಾಯದವರು ಉದ್ಯಮ ಶೀಲತಾ ಸಾಲ ಸೌಲಭ್ಯ ಪಡೆಯಲು ಅವಕಾಶವಿರುವುದು ಸರ್ಕಾರದಗಮನದಲ್ಲಿಯೇ;	ಹೌದು.
ಆ)	ಹಾಗಿದ್ದಲ್ಲಿ, ನಿಗಮಗಳಿಂದ ಸಾಲ ಸೌಲಭ್ಯ ಪಡೆಯಲು ಸಲ್ಲಿಸುವ ಜಾತಿ ಪ್ರಮಾಣ ಪತ್ರದಲ್ಲಿ ಎಸ್.ಸಿ ಆದಿಕರ್ನಾಟಕ ಎಂದು ಮಾತ್ರ ಮುದ್ರಣಗೊಂಡು ಉಪ ಜಾತಿಯ ಹೆಸರುಗಳು ಮುದ್ರಣಗೊಳ್ಳದಿರಲು ಕಾರಣಗಳೇನು;	ಕೇಂದ್ರ ಸರ್ಕಾರದ ಅಧಿಸೂಚನೆ ಸಂಖ್ಯೆ : BC 12016/34/76-SCT-V, Dated:27-07-1977 ರಲ್ಲಿ ಹೊರಡಿಸಲಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜಾತಿ ಪಟ್ಟಿಯಲ್ಲಿರುವ ಹೆಸರುಗಳನ್ನು ನಾಡ ಕಛೇರಿ ತಂತ್ರಾಂಶದಲ್ಲಿ ಅಳವಡಿಸಿ ಸದರಿ ಪಟ್ಟಿಯಲ್ಲಿರುವ ಜನಾಂಗದವರಿಗೆ ಜಾತಿ ಪ್ರಮಾಣ ಪತ್ರವನ್ನು ನಾಡ ಕಛೇರಿ ತಂತ್ರಾಂಶದ ಮೂಲಕ ವಿತರಿಸಲಾಗುತ್ತಿದೆ. ಅದರಂತೆ, ಸದರಿ ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ನಮೂದಿಸಿರುವ ಆದಿ ಕರ್ನಾಟಕ ಜಾತಿಗೆ ಉಪ ಜಾತಿ ಎಂದು ನಮೂದು ಮಾಡಿ ಪ್ರಮಾಣ ಪತ್ರವನ್ನು ವಿತರಿಸಲು ಅವಕಾಶವಿರುವುದಿಲ್ಲ.
ಇ)	ಇದರ ಬಗ್ಗೆ ಯಾವ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು? (ವಿವರ ನೀಡುವುದು)	

ಸಂಖ್ಯೆ: ಸಕಇ 19 ಆರ್&ಐ 2021

(ಬಿ.ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	862
ಸದಸ್ಯರ ಹೆಸರು	:	ಶ್ರೀಮತಿ ಸೌಮ್ಯ ರೆಡ್ಡಿ
ಉತ್ತರಿಸುವ ದಿನಾಂಕ	:	04.02.2021.
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ಅಲ್ಪಸಂಖ್ಯಾತರ ಇಲಾಖೆಯಲ್ಲಿ ಆದಿ ಜಾಂಬವ ಅಭಿವೃದ್ಧಿ ನಿಗಮವು ಉದ್ಯಮ ಶೀಲತಾ ಸಾಲ ಯೋಜನೆಗೆ ಆನ್‌ಲೈನ್ ಅರ್ಜಿಗಳನ್ನು ಸ್ವೀಕರಿಸಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮದಿಂದ ಉದ್ಯಮ ಶೀಲತಾ ಯೋಜನೆಗೆ ಆನ್‌ಲೈನ್ ಅರ್ಜಿಗಳನ್ನು ಸ್ವೀಕರಿಸಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.
(ಆ)	ಹಾಗಿದ್ದಲ್ಲಿ, ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೂ ಕೂಡ ಆನ್‌ಲೈನ್ ಅರ್ಜಿಗಳನ್ನು ಸ್ವೀಕಾರ ಮಾಡಲು ಸೂಕ್ತ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದೇ? (ಮಾಹಿತಿ ನೀಡುವುದು)	ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದಲೂ ವಿವಿಧ ಯೋಜನೆಗಳಡಿ ಫಲಾನುಭವಿಗಳನ್ನು ಆಯ್ಕೆ ಮಾಡಲು ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಸ್ವೀಕರಿಸಲು ಕ್ರಮ ಕೈಗೊಳ್ಳಲಾಗಿದೆ. ಈ ಸಂಬಂಧ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಆನ್‌ಲೈನ್‌ನಲ್ಲಿ ಈಗಾಗಲೇ ಒಟ್ಟು 44646 ಅರ್ಜಿಗಳನ್ನು ಸ್ವೀಕರಿಸಲಾಗಿದೆ.

ಸಂಖ್ಯೆ: ಸಕಇ 37 ಎಸ್‌ಡಿಸಿ 2021

(ಬಿ.ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು.

<u>ಕರ್ನಾಟಕ ವಿಧಾನಸಭೆ</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 868
ಮಾನ್ಯ ಸದಸ್ಯರ ಹೆಸರು	: ಶ್ರೀ ಭೀಮಾ ನಾಯ್ಕ ಎಸ್ (ಹಗರಿಬೊಮ್ಮನಹಳ್ಳಿ)
ಉತ್ತರಿಸಬೇಕಾದ ದಿನಾಂಕ	: 04-02-2021
ಉತ್ತರಿಸುವ ಸಚಿವರು	: ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಕೊಟ್ಟೂರು ಪಟ್ಟಣ ತಾಲ್ಲೂಕು ಕೇಂದ್ರವಾಗಿ ಕಾರ್ಯಾರಂಭ ಮಾಡಿದ್ದು, ಪಟ್ಟಣದಲ್ಲಿ ಹಾಲಿ ಇರುವ ಸರ್ಕಾರಿ ಆಸ್ಪತ್ರೆಯನ್ನು 100 ಬೆಡ್‌ಗೆ ಪರಿವರ್ತನೆ ಮಾಡುವ ಪ್ರಸ್ತಾವನೆ ಸರ್ಕಾರದಲ್ಲಿದೆಯೇ;	ಇದೆ.
ಆ	ಇದ್ದಲ್ಲಿ, ಯಾವಾಗ ಪರಿವರ್ತಿಸಲಾಗುವುದು?	ಹೊಸದಾಗಿ ರಚನೆಯಾದ ತಾಲ್ಲೂಕುಗಳಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರ/ಸಮುದಾಯ ಆರೋಗ್ಯ ಕೇಂದ್ರಗಳನ್ನು ತಾಲ್ಲೂಕು ಆಸ್ಪತ್ರೆಗಳನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಆಕುಕ 25 ಎಸ್‌ಬಿವಿ 2021

(ಡಾ|| ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 869
ಸದಸ್ಯರ ಹೆಸರು : ಶ್ರೀ. ಭೀಮಾ ನಾಯ್ಕ ಎಸ್.
ಉತ್ತರಿಸುವ ದಿನಾಂಕ : 04/02/2021
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ)	ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಕೊಟ್ಟೂರು, ದಶಮಾಪುರ ಮತ್ತು ಮರಿಯಮ್ಮನಹಳ್ಳಿ ಸ್ಥಳಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳು ಹೆಚ್ಚಾಗಿದ್ದು, ಸದರಿ ಸ್ಥಳಗಳಲ್ಲಿ ವಿದ್ಯಾರ್ಥಿನಿಲಯ ತೆರೆಯುವ ಪ್ರಸ್ತಾವನೆ ಸರ್ಕಾರದಲ್ಲಿದೆಯೇ;	ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಕೊಟ್ಟೂರು ಗ್ರಾಮದಲ್ಲಿ ಈಗಾಗಲೇ ಒಂದು ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ ಕಾರ್ಯನಿರ್ವಹಿಸುತ್ತಿದೆ. ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಕೊಟ್ಟೂರಿಗೆ ಒಂದು ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ ಮತ್ತು ಒಂದು ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯ ಮಂಜೂರು ಮಾಡಲು ಪ್ರಸ್ತಾವನೆ ಸ್ವೀಕೃತವಾಗಿದ್ದು ಪರಿಶೀಲನೆಯಲ್ಲಿದೆ. ದಶಮಾಪುರ ಮತ್ತು ಮರಿಯಮ್ಮನಹಳ್ಳಿ ಸ್ಥಳಗಳಲ್ಲಿ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಲು ಪ್ರಸ್ತಾವನೆ ಇರುವುದಿಲ್ಲ.
ಆ)	ಇದ್ದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು?	ಕ್ಲಿಷ್ಟಕರ ಆರ್ಥಿಕ ಪರಿಸ್ಥಿತಿ ಹಿನ್ನಲೆಯಲ್ಲಿ ಪ್ರಸ್ತುತ ಸಾಲಿನಲ್ಲಿ ಯಾವುದೇ ಹೊಸ ವಿದ್ಯಾರ್ಥಿ ನಿಲಯವನ್ನು ಪ್ರಾರಂಭಿಸಲು ಅನುಮತಿ ನೀಡಲು ಸಾಧ್ಯವಿಲ್ಲವೆಂದು ಆರ್ಥಿಕ ಇಲಾಖೆಯು ಅಭಿಪ್ರಾಯ ಪಟ್ಟಿರುತ್ತದೆ. ಆದ್ದರಿಂದ ಮುಂದಿನ ದಿನಗಳಲ್ಲಿ ಅನುದಾನ ಲಭ್ಯತೆಯನ್ನಾಧರಿಸಿ, ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಲು ಕ್ರಮವಹಿಸಲಾಗುವುದು.

ಸಕಇ 34 ಪಕವಿ 2021

(ಬಿ. ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 872

ಸದಸ್ಯರ ಹೆಸರು : ಶ್ರೀ ವೆಂಕಟರಾವ್ ನಾಡಗೌಡ (ಸಿಂಧನೂರು)

ಉತ್ತರಿಸಬೇಕಾದ ದಿನಾಂಕ : 04.02.2021

ಉತ್ತರಿಸುವ ಸಚಿವರು : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಸರ್ವ ಶಿಕ್ಷಣ ಅಭಿಯಾನದಲ್ಲಿ ಸಿಂಧನೂರು ತಾಲ್ಲೂಕಿಗೆ ಕಳೆದ ಮೂರು ವರ್ಷಗಳಿಂದ ಮಂಜೂರಾದ ಪ್ರೌಢಶಾಲೆಗಳು ಎಷ್ಟು;	ಸರ್ವ ಶಿಕ್ಷಣ ಅಭಿಯಾನ ಮತ್ತು ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಯೋಜನೆಗಳನ್ನು ವಿಲೀನಗೊಳಿಸಿ ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯಾಗಿ ಜಾರಿಗೆ ತರಲಾಗಿದೆ. ಸಿಂಧನೂರು ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷಗಳಿಂದ ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯಡಿ ಕೆಳಕಂಡ 04 ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು ಪ್ರೌಢ ಶಾಲೆಗಳನ್ನಾಗಿ ಉನ್ನತೀಕರಿಸಲಾಗಿದೆ. 1) ಉರ್ದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹೆಡಿಗಿನಾಳ್. 2) ಉರ್ದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮೀರಪುರ. 3) ಉರ್ದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಅರಲಿಹಳ್ಳಿ. 4) ಉರ್ದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ವಾಲ್ಕಮ್‌ದಿನ್ನಿ.
ಆ)	ಈ ಪೈಕಿ ಕಟ್ಟಡ ನಿರ್ಮಾಣವಾಗಿರುವ ಪ್ರೌಢ ಶಾಲೆಗಳ ಸಂಖ್ಯೆ ಎಷ್ಟು;	ಸದರಿ ಪ್ರೌಢಶಾಲೆಗಳ ನಿರ್ಮಾಣ ಕಾಮಗಾರಿಗಳಿಗೆ ಕೇಂದ್ರ ಸರ್ಕಾರದ ಪಾಲಿನ ಅನುದಾನ ಬಿಡುಗಡೆಯಾಗಿರದ ಕಾರಣ ಸಮಗ್ರ ಶಿಕ್ಷಣ ಕರ್ನಾಟಕ ವತಿಯಿಂದ ಕಾಮಗಾರಿಗಳನ್ನು ಕೈಗೊಳ್ಳಲಾಗಿರುವುದಿಲ್ಲ.
ಇ)	2018–19ರಲ್ಲಿ ಈ ತಾಲ್ಲೂಕಿನ ಕಾಡಕುಂದ ಹಾಗೂ ದಿದ್ದಾಗಿ ಹೈಸ್ಕೂಲ್‌ಗಳಲ್ಲಿ ಕಟ್ಟಡ ನಿರ್ಮಾಣಕ್ಕೆ ಟೆಂಡರ್ ಕರೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಇದುವರೆಗೂ ಕಟ್ಟಡ ನಿರ್ಮಾಣವಾಗದಿರಲು ಕಾರಣವೇನು;	ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯಡಿ 2018–19ನೇ ಸಾಲಿನಲ್ಲಿ ಸಿಂಧನೂರು ತಾಲ್ಲೂಕಿನ ಕಾಡಕುಂದ ಹಾಗೂ ದಿದ್ದಾಗಿ ಪ್ರೌಢಶಾಲೆಗಳ ಕಟ್ಟಡ ನಿರ್ಮಾಣಕ್ಕೆ ಟೆಂಡರ್ ಕರೆದಿರುವುದಿಲ್ಲ.
ಈ)	ಪ್ರಸ್ತುತ ಕಟ್ಟಡಗಳನ್ನು ನಿರ್ಮಿಸುವ ಇಚ್ಛಾಶಕ್ತಿ ಸರ್ಕಾರಕ್ಕೆ ಇದೆಯೇ;	ಆಯವ್ಯಯದಲ್ಲಿ ಅನುದಾನ ಲಭ್ಯತೆ ಹಾಗೂ ಅವಶ್ಯಕತೆಗಳಿಗೆ ಅನುಸಾರವಾಗಿ ಸರ್ಕಾರಿ ಪ್ರೌಢಶಾಲಾ ಕೊಠಡಿಗಳ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತದೆ.

ಇಪಿ 35 ಯೋಸಕ 2021

S. S. —

(ಎಸ್. ಸುರೇಶ್ ಕುಮಾರ್)

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 873

ಸದಸ್ಯರ ಹೆಸರು : ಶ್ರೀ ನಿರಂಜನ್‌ಕುಮಾರ್ ಸಿ.ಎಸ್. (ಗುಂಡ್ಲುಪೇಟೆ)

ಉತ್ತರಿಸಬೇಕಾದ ದಿನಾಂಕ : 04.02.2021

ಉತ್ತರಿಸುವವರು : ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಗುಂಡ್ಲುಪೇಟೆ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಗುಂಡ್ಲುಪೇಟೆ ತಾಲ್ಲೂಕಿನ ಕಾಡಂಚಿನ ಗ್ರಾಮಗಳ ರೈತರುಗಳು ತಮ್ಮ ಜಮೀನುಗಳನ್ನು ಅರಣ್ಯ ಇಲಾಖೆಗೆ ಮಾರಾಟ ಮಾಡಲು ಒಪ್ಪಿಗೆ ಸೂಚಿಸಿರುವ ಪ್ರಸ್ತಾವನೆ ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಬಂದಿದ್ದಲ್ಲಿ, ಅರಣ್ಯ ಇಲಾಖೆಯ ವತಿಯಿಂದ ಯಾವಾಗ ರೈತರ ಜಮೀನುಗಳನ್ನು ವಶಕ್ಕೆ ಪಡೆಯಲಾಗುವುದು; ಹಾಗೂ ರೈತರ ಜಮೀನುಗಳಿಗೆ ಪ್ರತಿ ಎಕರೆಗೆ ಎಷ್ಟು ಪರಿಹಾರ ನಿಗದಿಪಡಿಸಲಾಗಿದೆ? (ಸಂಪೂರ್ಣ ವಿವರ ನೀಡುವುದು)	ಸರ್ಕಾರದ ಆದೇಶ ಸಂಖ್ಯೆ: ಅಪಜೀ 139 ಎಫ್‌ಎಎಫ್ 2012 ದಿನಾಂಕ:22.02.2014 ರಲ್ಲಿ, ಕಾಯ್ದಿಟ್ಟ ಅರಣ್ಯ ಮತ್ತು ರಕ್ಷಿತ ಅರಣ್ಯಗಳ ಮಧ್ಯಭಾಗದಲ್ಲಿ ಮತ್ತು ಅರಣ್ಯದಂಚಿನಲ್ಲಿರುವ ಖಾಸಗಿ ಪ್ರದೇಶವನ್ನು ಸರ್ಕಾರಕ್ಕೆ ಸ್ವಾಧೀನಪಡಿಸಿಕೊಳ್ಳುವ ಕುರಿತಂತೆ ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದ್ದು, ಖಾಸಗಿ ಪ್ರದೇಶಗಳನ್ನು ಅರಣ್ಯ ಇಲಾಖೆ ಸ್ವಾಧೀನಪಡಿಸಿಕೊಳ್ಳುವ ಬಗ್ಗೆ ಅನುಸರಿಸಬೇಕಾದ ವಿಧಿ ವಿಧಾನಗಳು ಮತ್ತು ಮಾರ್ಗಸೂಚಿಗಳನ್ನು ವಿವರಿಸಲಾಗಿರುತ್ತದೆ. ಸ್ವೀಕೃತವಾಗುವ ಮನವಿಗಳನ್ನು ಸಮಿತಿಯಲ್ಲಿ ಚರ್ಚಿಸಿ, ನಿರ್ಧಾರವಾಗುವ ಪರಿಹಾರದ ಮೊತ್ತಕ್ಕೆ ಅನುದಾನ ಬೇಡಿಕೆಯನ್ನು ಸಮಿತಿಯು ಸಲ್ಲಿಸಿದಲ್ಲಿ ಅನುದಾನ ಹಂಚಿಕೆ ಮತ್ತು ಲಭ್ಯತೆ ಆಧಾರದ ಮೇಲೆ ರೈತರ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗುವುದು.

ಸಂಖ್ಯೆ: ಅಪಜೀ 11 ಎಫ್‌ಎಎಫ್ 2021

(ಅರವಿಂದ ಲಿಂಬಾವಳಿ)
ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	875
ಮಾನ್ಯ ಸದಸ್ಯರ ಹೆಸರು	:	ಶ್ರೀ ನಿರಂಜನ್ ಕುಮಾರ್ ಸಿ.ಎಸ್. (ಗುಂಡ್ಲುಪೇಟೆ)
ಉತ್ತರಿಸುವ ಸಚಿವರು	:	ಪ್ರವಾಸೋದ್ಯಮ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು
ಉತ್ತರಿಸುವ ದಿನಾಂಕ	:	04.02.2021

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಬಂಡಿಪುರ ಸಫಾರಿ ಕೇಂದ್ರಕ್ಕೆ ಪ್ರತಿನಿತ್ಯ ದೇಶವಿದೇಶಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಆಗಮಿಸುತ್ತಿದ್ದು, ಇಲ್ಲಿ ಪ್ರವಾಸಿಗರಿಗೆ ಮೂಲಭೂತ ಸೌಕರ್ಯಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಇಲಾಖೆಯ ಗಮನಕ್ಕೆ ಬಂದಿದೆ.
ಆ)	ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಬಂಡಿಪುರ ಸಫಾರಿ ಕೇಂದ್ರದ ಅಭಿವೃದ್ಧಿ ಕಾಮಗಾರಿಗಳಿಗೆ ಪ್ರವಾಸೋದ್ಯಮ ಇಲಾಖೆಯಿಂದ ಅನುದಾನ ಮಂಜೂರು ಮಾಡುವ ಪ್ರಸ್ತಾವನ ಸರ್ಕಾರದ ಗಮನಕ್ಕೆ ಬಂದಿದೆಯೇ;	ಜಿಲ್ಲಾಧಿಕಾರಿಗಳು, ಮೈಸೂರು,ಇವರಿಂದ ಪ್ರವಾಸೋದ್ಯಮ ನಿರ್ದೇಶಕರಿಗೆ ಪ್ರಸ್ತಾವನೆ ಸ್ವೀಕೃತವಾಗಿದೆ. ಪ್ರಸ್ತುತ ಕೋವಿಡ್-19ರ ಪರಿಣಾಮದಿಂದಾಗಿ 2020-21ನೇ ಸಾಲಿನಲ್ಲಿ ಯಾವುದೇ ಹೊಸ ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ.
ಇ)	ಬಂದಿದ್ದಲ್ಲಿ, ಯಾವಾಗ ಅನುದಾನ ಮಂಜೂರು ಮಾಡಲಾಗುವುದು? (ಸಂಪೂರ್ಣ ವಿವರ ನೀಡುವುದು)	

ಕಡತ ಸಂಖ್ಯೆ : ಟಿಓಆರ್ 9 ಟಿಡಿವಿ 2021

(ಸಿ.ಪಿ. ಯೋಗೇಶ್ವರ)
ಪ್ರವಾಸೋದ್ಯಮ, ಪರಿಸರ
ಮತ್ತು ಜೀವಿಶಾಸ್ತ್ರ ಸಚಿವರು

ಕರ್ನಾಟಕ ವಿಧಾನಸಭೆ

1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	880
2)	ಮಾನ್ಯ ಸದಸ್ಯರ ಹೆಸರು	ಶ್ರೀ ಹೂಲಗೇರಿ ಡಿ.ಎಸ್. (ಲಿಂಗಸುಗೂರು)
3)	ಉತ್ತರಿಸಬೇಕಾದ ದಿನಾಂಕ	04/02/2021
4)	ಉತ್ತರಿಸುವವರು	ಉಪ ಮುಖ್ಯಮಂತ್ರಿಗಳು ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವರು

****

ಕ್ರ ಸಂ	ಪ್ರಶ್ನೆ	ಉತ್ತರ
ಅ)	ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ಹಟ್ಟಿ ಪಟ್ಟಣದಲ್ಲಿ ಹೊಸದಾಗಿ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರ ಪ್ರಾರಂಭಿಸಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು;	2014-15 ರಲ್ಲಿ 100 ಮತ್ತು 2017-18 ರಲ್ಲಿ 12 ಒಟ್ಟು 112 ಹೊಸ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ರಾಜ್ಯದಲ್ಲಿ ಪ್ರಾರಂಭಿಸಲಾಗಿದೆ. ಪ್ರಸ್ತುತ ಈ ಸಂಸ್ಥೆಗಳಿಗೆ ಡಿ.ಜಿ.ಟಿಯ ನಿಯಮಾನುಸಾರ ಅಗತ್ಯವಿರುವ ಮೂಲಭೂತ ಸೌಲಭ್ಯಗಳಾದ ಯಂತ್ರೋಪಕರಣ, ಸಲಕರಣೆಗಳು, ಪೀಠೋಪಕರಣಗಳು, ಕಟ್ಟಡಗಳು ಹಾಗೂ ಸಿಬ್ಬಂದಿಗಳನ್ನು ಒದಗಿಸುವುದು ಸರ್ಕಾರದ ಸಧ್ಯದ ಆದ್ಯತೆಯಾಗಿರುವುದರಿಂದ ಪ್ರಸಕ್ತ ಸಾಲಿನಲ್ಲಿ ಲಿಂಗಸುಗೂರು ತಾಲ್ಲೂಕಿನ ಹಟ್ಟಿ ಪಟ್ಟಣದಲ್ಲಿ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರವನ್ನು ಪ್ರಾರಂಭಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ. ಆದರೆ, ಮಾನ್ಯ ಶಾಸಕರು ಲಿಂಗಸುಗೂರು ವಿಧಾನಸಭಾ ಕ್ಷೇತ್ರ ಇವರು ದಿ: 10/10/2019 ರಲ್ಲಿ ಹಟ್ಟಿ ಪಟ್ಟಣಕ್ಕೆ ಹೊಸದಾಗಿ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರ ಮಂಜೂರು ಮಾಡಲು ಸಲ್ಲಿಸಿದ್ದ ಕೋರಿಕೆಯು ಪರಿಶೀಲನೆಯಲ್ಲಿದೆ.
ಆ)	ಈ ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ಮುದಗಲ್ಲ ಪಟ್ಟಣದ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರದ ಕಟ್ಟಡದ ಕಾಮಗಾರಿ ಯಾವ ಹಂತದಲ್ಲಿದೆ; ಕಾಮಗಾರಿ ಕಾಲಮಿತಿ ಅವಧಿಯಲ್ಲಿ ಪೂರ್ಣಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?	ಮುದಗಲ್ಲ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಕಟ್ಟಡ ಕಾಮಗಾರಿಯು ಪ್ರಸ್ತುತ Roof ಹಂತದಲ್ಲಿರುತ್ತದೆ. ಕಾಮಗಾರಿಯನ್ನು ಪೂರ್ಣಗೊಳಿಸಲು ನಿಯಮಿತವಾಗಿ ನಿರ್ಮಾಣ ಏಜೆನ್ಸಿಯಾದ ಕರ್ನಾಟಕ ಗೃಹಮಂಡಳಿಯೊಂದಿಗೆ ಪ್ರಗತಿ ಪರಿಶೀಲನೆಯನ್ನು ಮಾಡುತ್ತಿದ್ದು, ದಿನಾಂಕ: 31/03/2021 ರೊಳಗಾಗಿ ಕಟ್ಟಡ ಕಾಮಗಾರಿಯನ್ನು ಪೂರ್ಣಗೊಳಿಸಿ ಇಲಾಖೆಗೆ ಹಸ್ತಾಂತರಿಸಲಾಗುವುದು ಎಂದು ಕರ್ನಾಟಕ ಗೃಹಮಂಡಳಿಯ ಅಧಿಕಾರಿಗಳು ತಿಳಿಸಿರುತ್ತಾರೆ.

ಸಂಖ್ಯೆ: ಕೌಉಜೀಇ 7 ಕೈತಪ್ರ 2021

(ಡಾ.ಸಿ.ಎನ್.ಅಶ್ವಥ ನಾರಾಯಣ)
ಉಪ ಮುಖ್ಯಮಂತ್ರಿಗಳು ಹಾಗೂ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	885
ವಿಧಾನಸಭೆ ಸದಸ್ಯರ ಹೆಸರು	:	ಶ್ರೀ ತುಕಾರಾಮ್ ಈ.
ಉತ್ತರಿಸುವ ದಿನಾಂಕ	:	04-02-2021
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಸಂಡೂರು ತಾಲ್ಲೂಕಿನ ಸಂಡೂರು ಪಟ್ಟಣದಲ್ಲಿ 2017ರಲ್ಲಿ ನಿರ್ಮಾಣ ಪ್ರಾರಂಭಗೊಂಡ ಡಾ: ಬಿ.ಆರ್. ಅಂಬೇಡ್ಕರ್ ಭವನ ಈಗಲೂ ಪೂರ್ಣಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಬಂದಿದ್ದಲ್ಲಿ, ಭವನ ಪೂರ್ಣಗೊಳ್ಳದಿರುವುದಕ್ಕೆ ಕಾರಣವೇನು; ಯಾವಾಗ ಸದರಿ ಭವನವನ್ನು ಪೂರ್ಣಗೊಳಿಸಲಾಗುವುದು.	ಸರ್ಕಾರದ ಆದೇಶ ಸಂಖ್ಯೆ: ಸಕಇ 141 ಪಕವಿ 2018, ದಿನಾಂಕ: 20-03-2018ರಲ್ಲಿ ಬಳ್ಳಾರಿ ಜಿಲ್ಲೆ, ಸಂಡೂರು ತಾಲ್ಲೂಕು ಕೇಂದ್ರದಲ್ಲಿ ಡಾ॥ಬಿ.ಆರ್.ಅಂಬೇಡ್ಕರ್ ಭವನ ನಿರ್ಮಾಣ ಮಾಡಲು ಈಗಾಗಲೇ ಬಿಡುಗಡೆ ಮಾಡಿದ ಅನುದಾನ ರೂ.50.00 ಲಕ್ಷಗಳನ್ನು ಹೊರತುಪಡಿಸಿ, ಹೆಚ್ಚುವರಿ ಅನುದಾನ ರೂ.100.00 ಲಕ್ಷಗಳನ್ನು ಬಿಡುಗಡೆ ಮಾಡಲು ಮಂಜೂರಾತಿ ನೀಡಲಾಗಿರುತ್ತದೆ. ಅದರನ್ವಯ, ರೂ.150.00 ಲಕ್ಷಗಳ ಒಟ್ಟು ಮಂಜೂರಾತಿ ಮೊತ್ತಕ್ಕೆ ಅನುಗುಣವಾಗಿ ಇದುವರೆವಿಗೂ ರೂ.100.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಈ ಸಂಬಂಧವಾಗಿ, ಸದರಿ ಭವನದ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲು ಕೆ.ಆರ್.ಐ.ಡಿ.ಎಲ್ ವತಿಯಿಂದ ಸಿದ್ಧಪಡಿಸಲಾಗಿದ್ದ ರೂ.150.00 ಲಕ್ಷಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಪ್ರಸ್ತುತ ಮೊದಲನೇ ಮಹಡಿಯ ಲಿಂಟಲ್ ಹಂತದ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಸದರಿ ಭವನದ ಕಾಮಗಾರಿಯ ಭೌತಿಕ ಹಾಗೂ ಆರ್ಥಿಕ ಪ್ರಗತಿಯನ್ನು ಆಧರಿಸಿ ಉಳಿಕೆ ರೂ.50.00 ಲಕ್ಷಗಳನ್ನು ಬಿಡುಗಡೆ ಮಾಡುವ ಬಗ್ಗೆ ಪರಿಶೀಲಿಸಿ ಕ್ರಮವಹಿಸಲಾಗುವುದು.

ಸಕಇ 40 ಪಕವಿ 2021

(ಬಿ. ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	886
ಸದಸ್ಯರ ಹೆಸರು	ಶ್ರೀ ತುಕಾರಾಮ್.ಈ [ಸಂಡೂರ್]
ಉತ್ತರಿಸಬೇಕಾದ ದಿನಾಂಕ	04-02-2021
ಉತ್ತರಿಸಬೇಕಾದ ಸಚಿವರು	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

ಪ್ರಶ್ನೆ	ಉತ್ತರ
ಅ) ಕೊರೋನಾ ಮಹಾಮಾರಿ ಬಂದಾಗಿನಿಂದ, ರಾಜ್ಯಾದ್ಯಂತ ಖಾಸಗಿ ಶಾಲೆಗಳ ಶಿಕ್ಷಕರಿಗೆ ಸಂಬಳ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಖಾಸಗಿ ಶಾಲಾ ಶಿಕ್ಷಕರಿಗೆ ಸಮರ್ಪಕವಾಗಿ ಪೂರ್ಣ ಸಂಬಳ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ.
ಆ) ಹಾಗಿದ್ದಲ್ಲಿ, ಸರ್ಕಾರ ಇವರಿಗೆ ಗೌರವಧನ ನೀಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ; ಇದ್ದಲ್ಲಿ ಯಾವಾಗಿನಿಂದ ನೀಡಲಾಗುವುದು?	ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಸುತ್ತೋಲೆ ದಿನಾಂಕ:05-09-2020ರಲ್ಲಿ ರಾಜ್ಯದ ಖಾಸಗಿ ಶಾಲೆಗಳಲ್ಲಿ ದಾಖಲಾಗಿರುವ ವಿದ್ಯಾರ್ಥಿಗಳ ಪೋಷಕರು ಮೊದಲನೇ ಕಂತಿನ ಶುಲ್ಕವನ್ನು ಪಾವತಿಸುವಂತೆ ಆದೇಶಿಸಲಾಗಿದ್ದು, ಈ ಶುಲ್ಕದಲ್ಲಿ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ಕಡ್ಡಾಯವಾಗಿ ವೇತನ ಪಾವತಿ ಮಾಡಲು ಸೂಚಿಸಲಾಗಿದೆ. ಗೌರವಧನ ನೀಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿ ಇಲ್ಲ.

ಇಪಿ 39 ಪಿಜಿಸಿ 2021

[ಎಸ್.ಸುರೇಶ್ ಕುಮಾರ್]
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ
ಸಕಾಲ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	889
ಮಾನ್ಯ ಸದಸ್ಯರ ಹೆಸರು	ಶ್ರೀ ಖಾದರ್ ಯು ಟಿ (ಮಂಗಳೂರು)
ಉತ್ತರಿಸಬೇಕಾದ ದಿನಾಂಕ	04.02.2021
ಉತ್ತರಿಸುವ ಸಚಿವರು	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯಕೀಯ ಮತ್ತು ಇತರೆ ಸಿಬ್ಬಂದಿಗಳ ಹಾಗೂ ಮೂಲಭೂತ ಸೌಲಭ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಹಾಗಿದ್ದಲ್ಲಿ, ಉಳ್ಳಾಲ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಅಗತ್ಯವಿರುವ ಸಿಬ್ಬಂದಿ ಎಕ್ಸರೆ ಉಪಕರಣಗಳನ್ನು ಒದಗಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?(ವಿವರಗಳನ್ನು ಒದಗಿಸುವುದು)	ಮೂಲಭೂತ ಸೌಲಭ್ಯಗಳ ಬಗ್ಗೆ ಈಗಾಗಲೇ ಮಾನ್ಯ ಆಯುಕ್ತರು, ಆಕುಕ ಸೇವೆಗಳು, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ:- ಹೆಚ್‌ಬಿಡಿ (2) 175/2014-15 ದಿನಾಂಕ:-16-11-2015 ರನ್ವಯ ರಾಜ್ಯದ ಎಲ್ಲಾ ಆಸ್ಪತ್ರೆಗಳಿಗೆ ಮುಕ್ತನಿಧಿ ಹಾಗೂ ಕಟ್ಟಡ ನಿಧಿಗಳಿಗೆ ಎನ್.ಹೆಚ್.ಎಂ ವತಿಯಿಂದ ವಾರ್ಷಿಕ ಅನುದಾನವನ್ನು ನೀಡಲಾಗುತ್ತಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಎಕ್ಸರೆ ಉಪಕರಣಗಳು ಇರುವುದಿಲ್ಲ. ಆದರೆ ಸಮುದಾಯ ಆರೋಗ್ಯ ಕೇಂದ್ರ, ಸಾರ್ವಜನಿಕ ಆಸ್ಪತ್ರೆ ಮತ್ತು ಜಿಲ್ಲಾ ಆಸ್ಪತ್ರೆಗಳಿಗೆ ಮಾತ್ರ ಎಕ್ಸರೆ ಉಪಕರಣಗಳನ್ನು ಸರಬರಾಜು ಮಾಡಲಾಗುವುದು. ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ತೆಗೆದುಕೊಂಡ ಕ್ರಮದ ಬಗ್ಗೆ ಅನುಬಂಧದಲ್ಲಿ ವಿವರ ನೀಡಲಾಗಿದೆ.

ಆಕುಕ 9 ಹೆಚ್‌ಎಸ್‌ಡಿ 2021

(ಡಾ|| ಕೆ ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 892
ಸದಸ್ಯರ ಹೆಸರು : ಶ್ರೀ ರಾಜೇಗೌಡ ಟಿ.ಡಿ
ಉತ್ತರಿಸಬೇಕಾದ ದಿನಾಂಕ : 04-02-2021
ಉತ್ತರಿಸುವ ಸಚಿವರು : ಮಾನ್ಯ ಸಮಾಜ ಕಲ್ಯಾಣ ಸಚಿವರು.

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಚಿಕ್ಕಮಗಳೂರು ಜಿಲ್ಲೆ, ಎನ್.ಆರ್.ಪುರ ತಾಲ್ಲೂಕು ಸೀತೂರಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ಮಂಜೂರಾಗಿದ್ದು, ನಿರ್ಮಾಣ ಕಾಮಗಾರಿ ಪ್ರಾರಂಭವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಬಂದಿದ್ದಲ್ಲಿ, ಕಾಮಗಾರಿ ವಿಳಂಬಕ್ಕೆ ಕಾರಣವೇನು; (ವಿವರ ನೀಡುವುದು)	ಚಿಕ್ಕಮಗಳೂರು ಜಿಲ್ಲೆ, ಎನ್.ಆರ್.ಪುರ ತಾಲ್ಲೂಕು ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗೆ ಸ್ವಂತ ಕಟ್ಟಡ ನಿರ್ಮಾಣ ಮಾಡಲು ಸೀತೂರು ಗ್ರಾಮದ ಸರ್ವೇ ನಂ.23 ರಲ್ಲಿ 03-27-00 ಎಕರೆ ನಿವೇಶನವು ಮಂಜೂರಾಗಿರುತ್ತದೆ. ಅನುದಾನದ ಲಭ್ಯತೆಯ ಆಧಾರದ ಮೇಲೆ ವಸತಿ ಶಾಲಾ ಸಂಕೀರ್ಣ ನಿರ್ಮಾಣ ಮಾಡಲು ಕ್ರಮವಹಿಸಲಾಗುವುದು.
ಇ)	ವಸತಿ ಶಾಲೆ ನಿರ್ಮಾಣಕ್ಕಾಗಿ ಸರ್ಕಾರ ಮಂಜೂರು ಮಾಡಿರುವ ಅನುದಾನವೆಷ್ಟು; ಆ ಪೈಕಿ ಬಿಡುಗಡೆಯಾದ ಅನುದಾನವೆಷ್ಟು;	
ಈ)	ಯಾವ ಕಾಲಮಿತಿಯೊಳಗೆ ಕಾಮಗಾರಿಯನ್ನು ಪ್ರಾರಂಭಿಸಲಾಗುತ್ತದೆ?	

ಸಂಖ್ಯೆ: ಸಕಇ 24 ಮೊದೇಶಾ 2021

(ಬಿ. ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: ೯೦೫
ಮಾನ್ಯ ಸದಸ್ಯರ ಹೆಸರು	: ಶ್ರೀ ಶ್ರೀನಿವಾಸ್ ಎಂ (ಮಂಡ್ಯ)
ಉತ್ತರಿಸಬೇಕಾದ ದಿನಾಂಕ	: 04-02-2021
ಉತ್ತರಿಸುವ ಸಚಿವರು	: ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಮಂಡ್ಯ ವಿಧಾನಸಭಾ ಕ್ಷೇತ್ರದಲ್ಲಿ ಮೂರು ಹೋಬಳಿಗಳಿದ್ದು ಇವುಗಳ ಪೈಕಿ ಒಂದೇ ಒಂದು ಸ್ಥಳದಲ್ಲಿ ಮಾತ್ರ ಸಮುದಾಯ ಆಸ್ಪತ್ರೆಯಿದ್ದು, ಉಳಿದ ಹೋಬಳಿಗಳ ಜನರು ಆರೋಗ್ಯದ ಸಮಸ್ಯೆಗಳಿಗೆ ಜಿಲ್ಲಾ ಕೇಂದ್ರ ಸ್ಥಾನಕ್ಕೆ ಹೋಗಲು ಕಷ್ಟಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ	ಬಂದಿದ್ದಲ್ಲಿ, ಈಗಾಗಲೇ ಈ ಸಂಬಂಧ ಅನೇಕ ಬಾರಿ ಸಮುದಾಯ ಆಸ್ಪತ್ರೆಗಳನ್ನು ಮಂಜೂರು ಮಾಡುವಂತೆ ಮನವಿ ಸಲ್ಲಿಸಿದ್ದರೂ ಯಾವುದೇ ಕ್ರಮಕೈಗೊಳ್ಳದಿರಲು ಕಾರಣವೇನು;	2011ರ ಜನಗಣತಿ ಅನುಸಾರ ಮಂಡ್ಯ ತಾಲ್ಲೂಕಿನ ಗ್ರಾಮೀಣ ಜನಸಂಖ್ಯೆ- 277795 ಇದ್ದು 2 ಸಮುದಾಯ ಆರೋಗ್ಯ ಕೇಂದ್ರ ಸ್ಥಾಪನೆಗೆ ಅವಕಾಶವಿದ್ದು, ಹಾಲಿ 2 ಸಮುದಾಯ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.
ಇ	ಹನಕೆರೆ ಸಮುದಾಯ ಆಸ್ಪತ್ರೆಗೆ ಸಂಬಂಧಿಸಿದಂತೆ, ಸಾಕಷ್ಟು ಬಾರಿ ಮನವಿ ಸಲ್ಲಿಸಿದ್ದರೂ ಆಸ್ಪತ್ರೆಗೆ ಮಂಜೂರಾತಿ ನೀಡದಿರಲು ಕಾರಣವೇನು;	
ಈ	ಹನಕೆರೆ ಗ್ರಾಮಕ್ಕೆ ಸಮುದಾಯ ಆಸ್ಪತ್ರೆ ಮಂಜೂರು ಮಾಡುವುದು ಯಾವಾಗ?	

ಆಕುಕ 17 ಎಸ್‌ಬಿವಿ 2021

(ಡಾ|| ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 908
ಮಾನ್ಯ ಸದಸ್ಯರ ಹೆಸರು	: ಶ್ರೀ ಲಾಲಾಜಿ ಆರ್. ಮೆಂಡನ್ (ಕಾಪು)
ಉತ್ತರಿಸಬೇಕಾದ ದಿನಾಂಕ	: 04-02-2021
ಉತ್ತರಿಸುವ ಸಚಿವರು	: ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಹೊಸದಾಗಿ ಅಸ್ತಿತ್ವಕ್ಕೆ ಬಂದಿರುವ ಕಾಪು ತಾಲ್ಲೂಕು ಕೇಂದ್ರಕ್ಕೆ ತಾಲ್ಲೂಕು ಆಸ್ಪತ್ರೆ ಪ್ರಾರಂಭಿಸುವ ಪ್ರಸ್ತಾವನೆ ಬಂದಿದೆಯೇ; ಬಂದಿದ್ದರೆ ಪ್ರಸ್ತಾವನೆ ಯಾವ ಹಂತದಲ್ಲಿದೆ;	ಬಂದಿದೆ.
ಆ	ರಾಜ್ಯದಲ್ಲಿ ಈಗಾಗಲೇ ಹೊಸ ತಾಲ್ಲೂಕಿನಲ್ಲಿ ಎಷ್ಟು ಹೊಸ ತಾಲ್ಲೂಕು ಆಸ್ಪತ್ರೆ ಅಥವಾ ತಾಲ್ಲೂಕು ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲು ಮಂಜೂರಾತಿ ದೊರೆತಿದೆ; (ತಾಲ್ಲೂಕುವಾರು ವಿವರ ನೀಡುವುದು)	ಕಾಪು ತಾಲ್ಲೂಕು ಸೇರಿದಂತೆ ಹೊಸದಾಗಿ ರಚನೆಯಾದ ತಾಲ್ಲೂಕುಗಳಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರ/ಸಮುದಾಯ ಆರೋಗ್ಯ ಕೇಂದ್ರಗಳನ್ನು ತಾಲ್ಲೂಕು ಆಸ್ಪತ್ರೆಗಳನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.
ಇ	ಹೊಸದಾಗಿ ಅಸ್ತಿತ್ವಕ್ಕೆ ಬಂದ ಕಾಪು ತಾಲ್ಲೂಕಿನಲ್ಲಿ ತಾಲ್ಲೂಕು ಆಸ್ಪತ್ರೆ ಮೇಲ್ದರ್ಜೆಗೇರಿಸಲು ಮಂಜೂರಾತಿ ನೀಡಲಾಗಿದೆಯೇ?	

ಆಕುಕ 12 ಎಸ್‌ಬಿವಿ 2021

(ಡಾ|| ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 913

ಮಾನ್ಯ ಸದಸ್ಯರ ಹೆಸರು : ಶ್ರೀ ಉಮಾನಾಥ ಎ. ಕೋಟ್ಯಾನ್ (ಮೂಡಬಿದ್ರೆ)

ಉತ್ತರಿಸಬೇಕಾದ ದಿನಾಂಕ : 04-02-2021

ಉತ್ತರಿಸುವ ಸಚಿವರು : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಮೂಡಬಿದರೆ ತಾಲ್ಲೂಕು ಕೇಂದ್ರದಲ್ಲಿರುವ ಸಮುದಾಯ ಆರೋಗ್ಯ ಕೇಂದ್ರವನ್ನು ತಾಲ್ಲೂಕು ಆಸ್ಪತ್ರೆಯನ್ನಾಗಿ ಮೇಲ್ದರ್ಜೇಗೇರಿಸುವ ಕುರಿತು ದೀರ್ಘಕಾಲದ ಬೇಡಿಕೆಗೆ ಸರ್ಕಾರದ ಸಕಾಲಿಕ ಕ್ರಮಗಳೇನು;	ಸರ್ಕಾರದ ಆದೇಶ ಸಂಖ್ಯೆ: ಕಂಇ 35 ಭೂದಾಪು 2017, ದಿನಾಂಕ: 06.09.2017ರಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಮೂಡುಬಿದರೆಯನ್ನು ಮೂನತ ತಾಲ್ಲೂಕಾಗಿ ರಚನೆ ಮಾಡಿ ತಾತ್ವಿಕವಾಗಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿರುತ್ತದೆ. ಸದರಿ ತಾಲ್ಲೂಕಿನಲ್ಲಿರುವ ಸಮುದಾಯ ಆರೋಗ್ಯ ಕೇಂದ್ರವನ್ನು ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ.
ಆ	ಮೂಡಬಿದರೆ ತಾಲ್ಲೂಕು ಹೆಚ್ಚಿನ ಗ್ರಾಮಾಂತರ ಪ್ರದೇಶಗಳನ್ನು ಹೊಂದಿದ್ದು ಬಡ, ಮಧ್ಯಮ ವರ್ಗದವರು ಸರ್ಕಾರಿ ಆಸ್ಪತ್ರೆಯನ್ನು ಅವಲಂಬಿಸಿರುವುದನ್ನು ಗಮನಿಸಿ ಅತಿ ಶೀಘ್ರಗತಿಯಲ್ಲಿ ಸಮುದಾಯ ಆರೋಗ್ಯ ಕೇಂದ್ರವನ್ನು ತಾಲ್ಲೂಕು ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸುವುದರೊಂದಿಗೆ, ಆಸ್ಪತ್ರೆಯನ್ನು ಮೂಲಭೂತ ಸೌಲಭ್ಯಗಳೊಂದಿಗೆ ವ್ಯವಸ್ಥೆಗೊಳಿಸಿ ಸಾರ್ವಜನಿಕರಿಗೆ ವ್ಯವಸ್ಥೆಗೊಳಿಸಿ ಸಾರ್ವಜನಿಕರಿಗೆ ವೈದ್ಯಕೀಯ ಸೇವೆಯನ್ನು ಒದಗಿಸಿಕೊಡಲು ಸರ್ಕಾರವು ಸಕಾಲಿಕ ಕ್ರಮ ಕೈಗೊಳ್ಳುವುದೇ?	

ಆಕುಕ 11 ಎಸ್‌ಬಿವಿ 2021

(ಡಾ|| ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 915

ಸದಸ್ಯರ ಹೆಸರು : ಶ್ರೀ ರಘುಪತಿ ಭಟ್ ಕೆ (ಉಡುಪಿ)

ಉತ್ತರಿಸಬೇಕಾದ ದಿನಾಂಕ : 04.02.2021

ಉತ್ತರಿಸುವವರು : ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಡೀಮ್ಡ್ ಫಾರೆಸ್ಟ್ ಎಂದು ಗುರುತಿಸಿರುವ ಅರಣ್ಯ ಸ್ವರೂಪ ಇಲ್ಲದಿರುವ ಎಷ್ಟು ಎಕರೆ ಡೀಮ್ಡ್ ಫಾರೆಸ್ಟ್‌ನ್ನು ವಿರಹಿತಗೊಳಿಸಲು ಗುರುತಿಸಲಾಗಿದೆ; ಯಾವಾಗ ವಿರಹಿತ ಗೊಳಿಸಲಾಗುವುದು; (ಉಡುಪಿ ಜಿಲ್ಲೆಯ ಸಂಪೂರ್ಣ ವಿವರಗಳನ್ನು ಒದಗಿಸುವುದು.)	ಉಡುಪಿ ಜಿಲ್ಲೆಗೆ ಸಂಬಂಧಿಸಿದಂತೆ, ಒಟ್ಟು 26804.99 ಹೆಕ್ಟೇರ್ ಪ್ರದೇಶವನ್ನು ಅರಣ್ಯ ಸ್ವರೂಪ ಇಲ್ಲದಿರುವುದರಿಂದ ಡೀಮ್ಡ್ ಫಾರೆಸ್ಟ್ ಪಟ್ಟಿಯಿಂದ ವಿರಹಿತಗೊಳಿಸಲು ಗುರುತಿಸಲಾಗಿದೆ. ಈ ಕುರಿತು ವಿಷಯವು ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿದ್ದು, ಮುಂದಿನ ಬೆಳವಣಿಗೆಗಳನ್ನು ನಿರೀಕ್ಷಿಸಲಾಗಿದೆ.
ಆ)	ಅರಣ್ಯ ಸ್ವರೂಪ ಇಲ್ಲದಿರುವ ಎಷ್ಟು ಎಕರೆ ಪ್ರದೇಶಗಳನ್ನು ಡೀಮ್ಡ್ ಫಾರೆಸ್ಟ್ ಎಂದು ಗುರುತಿಸಲಾಗಿದೆ; (ಉಡುಪಿ ಜಿಲ್ಲೆಯ ಸಂಪೂರ್ಣ ವಿವರಗಳನ್ನು ನೀಡುವುದು)	ಉಡುಪಿ ಜಿಲ್ಲೆಗೆ ಸಂಬಂಧಿಸಿದಂತೆ, 2.00 ಹೆಕ್ಟೇರ್‌ಗಿಂತ ಕಡಿಮೆ ಇರುವ ಪ್ರದೇಶ (5487.94 ಹೆಕ್ಟೇರ್) ಹಾಗೂ ಪ್ರತಿ ಹೆಕ್ಟೇರ್‌ಗೆ 50 ಕ್ಕಿಂತ ಕಡಿಮೆ ಮರಗಳಿರುವ ಪ್ರದೇಶಗಳನ್ನು (21317.05 ಹೆಕ್ಟೇರ್) ಹೊರತುಪಡಿಸಿ ಇನ್ಯಾವುದೇ ಅರಣ್ಯ ಸ್ವರೂಪ ಇಲ್ಲದಿರುವ ಪ್ರದೇಶಗಳನ್ನು ಡೀಮ್ಡ್ ಫಾರೆಸ್ಟ್ ಎಂದು ಗುರುತಿಸಲಾಗಿರುವುದಿಲ್ಲ.
ಇ)	ಡೀಮ್ಡ್ ಫಾರೆಸ್ಟ್ ಎಂದು ಗುರುತಿಸಿರುವ ಪ್ರದೇಶಗಳನ್ನು ವಿರಹಿತ ಮಾಡುವ ಬಗ್ಗೆ ಸರ್ಕಾರದ ನಿಲುವೇನು; ಪ್ರಸ್ತುತ ಪ್ರಸ್ತಾವನೆ ಯಾವ ಹಂತದಲ್ಲಿದೆ?	ಈ ಕುರಿತು ವಿಷಯವು ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿದ್ದು, ಮುಂದಿನ ಬೆಳವಣಿಗೆಗಳನ್ನು ನಿರೀಕ್ಷಿಸಲಾಗಿದೆ.

ಸಂಖ್ಯೆ: ಅಪಜೀ 09 ಎಫ್‌ಎಫ್ 2021

(ಅರವಿಂದ ಲಿಂಬಾವಳಿ)

ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	927
ಸದಸ್ಯರ ಹೆಸರು	:	ಶ್ರೀ ರವೀಂದ್ರ ಶ್ರೀಕಂಠಯ್ಯ (ಶ್ರೀರಂಗಪಟ್ಟಣ)
ಉತ್ತರಿಸುವ ದಿನಾಂಕ	:	04-02-2021
ಉತ್ತರಿಸುವ ಸಚಿವರು	:	ಮಾನ್ಯ ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಹಲವಾರು ವರ್ಷಗಳಿಂದ ಅರಣ್ಯ ಭೂಮಿಯಲ್ಲಿ ವ್ಯವಸಾಯ ಮಾಡಿಕೊಂಡಿರುವವರಿಗೆ ಉಳಿಮೆ ಮಾಡುವ ಜಮೀನನ್ನು ಅವರ ಹೆಸರಿಗೆ ಬಿಟ್ಟು ಕೊಡುವ ಪ್ರಸ್ತಾವನೆ ಸರ್ಕಾರದ ಗಮನಕ್ಕೆ ಬಂದಿದೆಯೇ;	ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಹಲವಾರು ವರ್ಷಗಳಿಂದ ಅರಣ್ಯ ಭೂಮಿಯಲ್ಲಿ ವ್ಯವಸಾಯ ಮಾಡಿಕೊಂಡಿರುವವರಿಗೆ ಉಳಿಮೆ ಮಾಡುವ ಜಮೀನನ್ನು ಅವರ ಹೆಸರಿಗೆ ಬಿಟ್ಟು ಕೊಡುವ ಪ್ರಸ್ತಾವನೆ ಯಾವುದು ಇರುವುದಿಲ್ಲ.
ಆ)	ಹಾಗಿದ್ದಲ್ಲಿ, ರೈತರಿಗೆ ಯಾವ ಯಾವ ಹಂತದಲ್ಲಿ ಜಮೀನುಗಳನ್ನು ಮಂಜೂರು ಮಾಡಲಾಗುತ್ತದೆ?	ಉದ್ಭವಿಸುವುದಿಲ್ಲ.

ಸಂಖ್ಯೆ: ಅಪಜೀ 08 ಎಫ್‌ಜಿಎಲ್ 2021

(ಅರವಿಂದ ಲಿಂಬಾವಳಿ)
ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **933**

ಮಾನ್ಯ ಸದಸ್ಯರ ಹೆಸರು : **ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ್**

ಉತ್ತರಿಸಬೇಕಾದ ದಿನಾಂಕ : **04.02.2021**

ಉತ್ತರಿಸಬೇಕಾದ ಸಚಿವರು : **ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು**

ಕ್ರ. ಸಂ	ಪ್ರಶ್ನೆಗಳು	ಉತ್ತರ
ಅ)	ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಸ್ತುತವಿರುವ ಡಯಾಲಿಸಿಸ್ ಯಂತ್ರಗಳೆಷ್ಟು;	ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಸ್ತುತ 02 ಡಯಾಲಿಸಿಸ್ ಯಂತ್ರಗಳಿವೆ.
ಆ)	ಇಲ್ಲಿ ಪ್ರತಿನಿತ್ಯ ಚಿಕಿತ್ಸೆ ಪಡೆಯಲಿರುವ ರೋಗಿಗಳ ಸಂಖ್ಯೆಗಳಿಗನುಗುಣವಾಗಿ ಇನ್ನು ಹೆಚ್ಚಿನ ಯಂತ್ರಗಳ ಅವಶ್ಯಕತೆಯಿರುವುದು ಮತ್ತು ಪ್ರತಿನಿತ್ಯ ಸಾಕಷ್ಟು ಜನರು ಸರದಿ ಸಾಲಿನಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿರುತ್ತದೆ.
ಇ)	ಹಾಗಾದರೇ; ಇಲ್ಲಿಗೆ ಇನ್ನೂ 2 ಡಯಾಲಿಸಿಸ್ ಯಂತ್ರಗಳನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ? (ವಿವರ ನೀಡುವುದು)	ಅಗತ್ಯಕ್ಕನುಗುಣವಾಗಿ ಹೆಚ್ಚುವರಿ ಡಯಾಲಿಸಿಸ್ ಯಂತ್ರಗಳನ್ನು ಒದಗಿಸಲು ಕ್ರಮವಹಿಸಲಾಗುವುದು.

ಸಂಖ್ಯೆ: ಆಕುಕ 14 ಎಸ್.ಟಿ.ಕ್ಯೂ 2021

(ಡಾ|| ಕೆ.ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 948

ಮಾನ್ಯ ಸದಸ್ಯರ ಹೆಸರು : ಶ್ರೀ ಗುತ್ತೇದಾರ್ ಸುಭಾಷ್ ರುಕ್ಮಯ್ಯ (ಆಳಂದ)

ಉತ್ತರಿಸುವ ಸಚಿವರು : ಪ್ರವಾಸೋದ್ಯಮ ಮತ್ತು ಪರಿಸರ ಹಾಗು ಜೀವಿಶಾಸ್ತ್ರ ಸಚಿವರು

ಉತ್ತರಿಸುವ ದಿನಾಂಕ : 04.02.2021

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಕಲಬುರಗಿ ಜಿಲ್ಲೆ ಆಳಂದ ತಾಲ್ಲೂಕಿನ ಅಮರ್ಜಾ ಡ್ಯಾಂ ಬಳಿ ಲಭ್ಯವಿರುವ ಸರ್ಕಾರಿ ಜಮೀನಿನಲ್ಲಿ ಮೈಸೂರು ಕೆ.ಆರ್.ಎಸ್. ಮಾದರಿಯಲ್ಲಿ ಸಾರ್ವಜನಿಕರಿಗೆ / ಪ್ರವಾಸಿಗರಿಗೆ ಸುಸಜ್ಜಿತವಾದ ಉದ್ಯಾನವನ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;	ಕಲಬುರಗಿ ಜಿಲ್ಲೆ ಆಳಂದ ತಾಲ್ಲೂಕಿನ ಅಮರ್ಜಾ ಡ್ಯಾಂ ಬಳಿ ಕೆ.ಆರ್.ಎಸ್. ಮಾದರಿಯಲ್ಲಿ ಉದ್ಯಾನವನ ನಿರ್ಮಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.
ಆ)	ಹಾಗಿದ್ದಲ್ಲಿ, ಯಾವಾಗ ಅನುದಾನ ಮಂಜೂರು ಮಾಡಿ, ಕಾಮಗಾರಿ ಪ್ರಾರಂಭಿಸಲಾಗುವುದು ? (ಸಂಪೂರ್ಣ ವಿವರ ನೀಡುವುದು)	ಅನುದಾನದ ಲಭ್ಯತೆಗೆ ಅನುಗುಣವಾಗಿ ಕಾಮಗಾರಿ ಪ್ರಾರಂಭಿಸಲು ಪರಿಶೀಲಿಸಲಾಗುವುದು.

ಕಡತ ಸಂಖ್ಯೆ : ಟಿಓಆರ್ 10 ಟಿಡಿವಿ 2021

(ಸಿ. ಪಿ. ಯೋಗೇಶ್ವರ)
ಪ್ರವಾಸೋದ್ಯಮ ಮತ್ತು ಪರಿಸರ
ಹಾಗೂ ಜೀವಿಶಾಸ್ತ್ರ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 950
ವಿಧಾನಸಭೆ ಸದಸ್ಯರ ಹೆಸರು : ಶ್ರೀ ಆನಂದ್ ಸಿದ್ದು ನ್ಯಾಮಗೌಡ
ಉತ್ತರಿಸುವ ದಿನಾಂಕ : 04-02-2021
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	2019-20 ಮತ್ತು 2020-21ನೇ ಸಾಲಿನಲ್ಲಿ ಬಾಗಲಕೋಟೆ ಜಿಲ್ಲೆ ಮತಕ್ಷೇತ್ರವಾರು ಮಂಜೂರಾದ ಡಾ॥ ಅಂಬೇಡ್ಕರ್ ಹಾಗೂ ಡಾ॥ ಬಾಬು ಜಗಜೀವನರಾಮ್ ಸಮುದಾಯ ಭವನಗಳು ಎಷ್ಟು:	ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ 2019-20 ಮತ್ತು 2020-21ನೇ ಸಾಲಿನಲ್ಲಿ ಬಾಗಲಕೋಟೆ ಜಿಲ್ಲೆಗೆ ಮಂಜೂರು ಮಾಡಲಾದ ಡಾ॥ ಅಂಬೇಡ್ಕರ್ ಹಾಗೂ ಡಾ॥ ಬಾಬು ಜಗಜೀವನರಾಮ್ ಸಮುದಾಯ ಭವನಗಳ ವಿಧಾನಸಭಾ ಕ್ಷೇತ್ರವಾರು ವಿವರ ಈ ಕೆಳಕಂಡಂತಿದೆ.

ಕ್ರ. ಸಂ	ವರ್ಷ	ವಿಧಾನಸಭಾ ಕ್ಷೇತ್ರ	ಮಂಜೂರು ಮಾಡಲಾದ ಡಾ॥ ಅಂಬೇಡ್ಕರ್ / ಡಾ॥ ಬಾಬು ಜಗಜೀವನರಾಮ್ ಭವನಗಳ ಸಂಖ್ಯೆ
1	2019-20	ಬೀಳಗಿ	3
2		ಹುನಗುಂದ	3
3		ಮುಧೋಳ	1
4	2020-21	ಮುಧೋಳ	2

ಕ್ರ. ಸಂ.	ಪ್ರಶ್ನೆ	ಉತ್ತರ
ಆ)	2015-16 ಮತ್ತು 2017-18ನೇ ಸಾಲಿನಲ್ಲಿ ಜಮಖಂಡಿ ಮತಕ್ಷೇತ್ರದ ಹಿರೆಪಡಸಲಗಿ, ಕಂಕನವಾಡಿ, ಜಂಬಗಿ ಬಿ.ಕೆ, ಟಕ್ಕಳಕಿ, ಕುಂಬಾರಹಳ್ಳಿ, ಕುಂಚನೂರ, ಕಾಜಿಬೀಳಗಿ, ಕಡಕೋಳ, ಸಿದ್ಧಾಪೂರ ಹಾಗೂ ತೇದಲಬಾಗಿ ಈ ಹತ್ತು ಗ್ರಾಮಗಳಲ್ಲಿ ಡಾ॥ ಅಂಬೇಡ್ಕರ್ ಸಮುದಾಯ ಭವನ ಹಾಗೂ ಡಾ॥ ಬಾಬು ಜಗಜೀವನರಾಮ್ ಸಮುದಾಯ ಭವನಗಳು ಮಂಜೂರಾಗಿದ್ದರೂ ಇಲ್ಲಿಯವರೆಗೂ ಹಣ ಬಿಡುಗಡೆಯಾಗದಿರಲು ಕಾರಣವೇನು?	ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ 2015-16 ಮತ್ತು 2017-18ನೇ ಸಾಲಿನಲ್ಲಿ ಜಮಖಂಡಿ ಮತಕ್ಷೇತ್ರದ ಹಿರೆಪಡಸಲಗಿ, ಜಂಬಗಿ ಬಿ.ಕೆ, ಟಕ್ಕಳಕಿ, ಕುಂಬಾರಹಳ್ಳಿ, ಕುಂಚನೂರ, ಕಾಜಿಬೀಳಗಿ, ಕಡಕೋಳ, ಸಿದ್ಧಾಪೂರ ಹಾಗೂ ತೇದಲಬಾಗಿ ಈ 9 ಗ್ರಾಮಗಳಲ್ಲಿ ಡಾ॥ ಅಂಬೇಡ್ಕರ್ ಸಮುದಾಯ ಭವನ ಹಾಗೂ ಡಾ॥ ಬಾಬು ಜಗಜೀವನರಾಮ್ ಭವನಗಳು ಮಂಜೂರಾಗಿರುವುದಿಲ್ಲ. ಉಳಿದಂತೆ, 2016-17ನೇ ಸಾಲಿನಲ್ಲಿ ಜಮಖಂಡಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಕಂಕಣವಾಡಿ ಗ್ರಾಮದಲ್ಲಿ ಡಾ॥ ಬಿ.ಆರ್ ಅಂಬೇಡ್ಕರ್ ಭವನ ನಿರ್ಮಾಣ ಮಾಡಲು ದಿನಾಂಕ:10-11-2016ರಲ್ಲಿ ತಾತ್ವಿಕ ಮಂಜೂರಾತಿ ನೀಡಲಾಗಿರುತ್ತದೆ. ಆದರೆ, ಸದರಿ ಗ್ರಾಮದಲ್ಲಿ ನಿವೇಶನ ಲಭ್ಯವಿಲ್ಲದ ಕಾರಣ ಮಂಜೂರಾತಿಯನ್ನು ರದ್ದುಪಡಿಸಲಾಗಿದೆ.

ಸಕಇ 43 ಪಕವಿ 2021

(ಬಿ. ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನಸಭೆ

(15ನೇ ವಿಧಾನಸಭೆ, 9ನೇ ಅಧಿವೇಶನ)

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 951

2) ಸದಸ್ಯರ ಹೆಸರು : ಶ್ರೀ ಆನಂದ್ ಸಿದ್ದು ನ್ಯಾಮಗೌಡ (ಜಮಖಂಡಿ)

3) ಉತ್ತರಿಸುವ ದಿನಾಂಕ : 04.02.2021.

4) ಉತ್ತರಿಸುವವರು : ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ)	ಜಮಖಂಡಿ ನಗರದ ಕಟ್ಟೆಕೆರೆ ಉದ್ಯಾನವನದಲ್ಲಿ "ಮಿನಿ ಜೂ" ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ.
ಆ)	ಕಟ್ಟೆಕೆರೆ ಉದ್ಯಾನವನದಲ್ಲಿ "ಮಿನಿ ಜೂ" ಅತೀ ಅವಶ್ಯಕತೆ ಇರುವ ಕಾರಣ, "ಮಿನಿ ಜೂ"ವನ್ನು ಯಾವಾಗ ಪ್ರಾರಂಭಿಸಲಾಗುವುದು?	ಉದ್ಭವಿಸುವುದಿಲ್ಲ.

ಸಂಖ್ಯೆ: ಅಪಜೀ 26 ಎಫ್‌ಡಬ್ಲ್ಯೂಎಲ್ 2021

(ಅರವಿಂದ ಲಿಂಬಾವಳಿ)
ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	952
ಸದಸ್ಯರ ಹೆಸರು	ಶ್ರೀ ದೇವಾನಂದ್ ಫುಲಸಿಂಗ್ ಚವಾಣ್(ನಾಗಠಾಣ)
ಉತ್ತರಿಸಬೇಕಾದ ದಿನಾಂಕ	04.02.2021
ಉತ್ತರಿಸುವವರು	ಮಾನ್ಯ ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು.

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಅರಣ್ಯ ಇಲಾಖೆಯ ಹಲವು ವೃತ್ತಗಳಲ್ಲಿ 2017 ರ ಜೇಷ್ಠತೆ ಅಧಿನಿಯಮವನ್ನು ಅನುಷ್ಠಾನಗೊಳಿಸುವಲ್ಲಿ ಸಕ್ಷಮ ಪ್ರಾಧಿಕಾರದ ಅಧಿಕಾರಿಗಳು ಲೋಪ ಎಸಗಿರುವುದು. ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದಲ್ಲಿ, ಈ ಬಗ್ಗೆ ಸರ್ಕಾರ ಯಾವ ಕ್ರಮ ಜರುಗಿಸಲಾಗಿದೆ.	ಜೇಷ್ಠತಾ ಪಟ್ಟಿಯಲ್ಲಿನ ನ್ಯೂನತೆಗಳ ಬಗ್ಗೆ ಆಕ್ಷೇಪಣೆ ಗಳು/ಮನವಿಗಳು ಸರ್ಕಾರದಲ್ಲಿ ಸ್ವೀಕೃತವಾಗಿದೆ. ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಗಳು 1957 ರ ನಿಯಮ 10 ರನ್ವಯ ಸಂಬಂಧಿಸಿದ ವೃಂದಗಳ ಜೇಷ್ಠತಾ ಪಟ್ಟಿಯನ್ನು ಸಕ್ಷಮ ಪ್ರಾಧಿಕಾರವು ತಯಾರಿಸಿ ಪ್ರಕಟಿಸಬೇಕು. ಉಪ ವಲಯ ಅರಣ್ಯಾಧಿಕಾರಿ ವೃಂದದ ಜೇಷ್ಠತಾ ಪಟ್ಟಿಯನ್ನು ತಯಾರಿಸಿ ಪ್ರಕಟಿಸಲು ವೃತ್ತ ಮಟ್ಟದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ / ಅರಣ್ಯ ಸಂರಕ್ಷಣಾಧಿಕಾಗಳು ಸಕ್ಷಮ ಪ್ರಾಧಿಕಾರಿವಾಗಿರುತ್ತಾರೆ. ಅದರಂತೆ ಸಕ್ಷಮ ಪ್ರಾಧಿಕಾರಿಗಳಾದ ಆಯಾ ವೃತ್ತಗಳ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು /ಅರಣ್ಯ ಸಂರಕ್ಷಣಾಧಿಕಾಗಳು ಜೇಷ್ಠತಾ ಪಟ್ಟಿಗಳನ್ನು ಅಧಿಸೂಚಿಸಿರುವುದರಿಂದ ರಾಜ್ಯ ಮಟ್ಟದ ಸಂಯೋಜಿತ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. ಹೀಗಾಗಿ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. ಅದಾಗ್ಯೂ ರಾಜ್ಯ ಮಟ್ಟದ ಸಂಯೋಜಿತ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ ಕಾನೂನು ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು) ಇವರ ಅಭಿಪ್ರಾಯವನ್ನು ಕೋರಲಾಗಿದ್ದು, ಸದರಿ ಇಲಾಖೆಗಳು ನೀಡುವ ಅಭಿಪ್ರಾಯವನ್ನು ಪರಿಶೀಲಿಸಿ ಕ್ರಮವಹಿಸಲಾಗುತ್ತದೆ.
ಆ)	ಉಪ ವಲಯ ಅರಣ್ಯ ಅಧಿಕಾರಿ ಹುದ್ದೆಯ ರಾಜ್ಯ ಮಟ್ಟದ ಸಂಯೋಜಿತ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಹಾಗಿದ್ದಲ್ಲಿ ತಪ್ಪಿತಸ್ಥರ ವಿರುದ್ದ ಯಾವ ಕ್ರಮ ಜರುಗಿಸಲಾಗುವುದು ?	

ಸಂಖ್ಯೆ: ಅಪಜೀ 50 ಅಪಸೇ 2021

(ಅರವಿಂದ ಲಿಂಬಾವಳಿ)
ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	959
ಸದಸ್ಯರ ಹೆಸರು	ಶ್ರೀ ಭರತ್ ಶೆಟ್ಟಿ ವೈ(ಮಂಗಳೂರು ನಗರ ಉತ್ತರ)
ಉತ್ತರಿಸಬೇಕಾದ ದಿನಾಂಕ	04.02.2021
ಉತ್ತರಿಸುವವರು	ಮಾನ್ಯ ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು.

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಪೋಷಕರ ವೃಂದದ ಜೇಷ್ಠತಾ ಪಟ್ಟಿಯನ್ನು ರಾಜ್ಯ ಮಟ್ಟದಲ್ಲಿ ಸಂಯೋಜಿಸಿ ಪ್ರಕಟಿಸುವ ಪೂರ್ವದಲ್ಲಿ ಅಂತಿಮಗೂಳಿಸಿರುವ ವಲಯ ಅರಣ್ಯ ಅಧಿಕಾರಿ ಜೇಷ್ಠತಾ ಪಟ್ಟಿಯನ್ನು ಸರ್ಕಾರ ರದ್ದು ಪಡಿಸಿ ಹೊಸದಾಗಿ ಪ್ರಕಟಿಸುವುದೇ: ಕೈಬಿಟ್ಟಿರುವ ಆರ್ಹ ನೌಕರರನ್ನು ಜೇಷ್ಠತೆ ಪಟ್ಟಿಗೆ ಸೇರಿಸಲು ಕ್ರಮ ಜರುಗಿಸುವುದೇ:	ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಗಳು 1957 ನಿಯಮ 10ರನ್ವಯ ಸಂಬಂಧಿಸಿದ ವೃಂದಗಳ ಜೇಷ್ಠತಾ ಪಟ್ಟಿಯನ್ನು ಸಕ್ಷಮ ಪ್ರಾಧಿಕಾರವು ತಯಾರಿಸಿ ಪ್ರಕಟಿಸಬೇಕು. ಉಪ ವಲಯಅರಣ್ಯಾಧಿಕಾರಿ ವೃಂದದಜೇಷ್ಠತಾ ಪಟ್ಟಿಯನ್ನು ತಯಾರಿಸಿ ಪ್ರಕಟಿಸಲು ವೃತ್ತ ಮಟ್ಟದ ಮುಖ್ಯಅರಣ್ಯ ಸಂರಕ್ಷಣಾಧಿಕಾರಿ/ಅರಣ್ಯ ಸಂರಕ್ಷಣಾಧಿಕಾರಿಗಳು ಸಕ್ಷಮ ಪ್ರಾಧಿಕಾರವಾಗಿರುತ್ತದೆ. ಅದರಂತೆ ಸಕ್ಷಮ ಪ್ರಾಧಿಕಾರಗಳಾದ ಆಯಾ ವೃತ್ತಗಳ ಮುಖ್ಯಅರಣ್ಯಸಂರಕ್ಷಣಾಧಿಕಾರಿ/ಅರಣ್ಯ ಸಂರಕ್ಷಣಾಧಿಕಾರಿಗಳು ಜೇಷ್ಠತಾ ಪಟ್ಟಿಯನ್ನು ಅಧಿಸೂಚಿಸಿರುತ್ತಾರೆ. ಅಧಿಸೂಚನೆಗೊಂಡ ಉಪ ವಲಯ ಅರಣ್ಯಾಧಿಕಾರಿಗಳ ಜೇಷ್ಠತಾ ಪಟ್ಟಿಗಳನ್ನು ಆಧರಿಸಿ ರಾಜ್ಯ ಮಟ್ಟದ ವಲಯ ಅರಣ್ಯಾಧಿಕಾರಿಗಳ ಜೇಷ್ಠತಾ ಪಟ್ಟಿಯನ್ನು ನಿಯಮಾನುಸಾರ ಪ್ರಕಟಿಸಲಾಗಿದೆ. ವಲಯಅರಣ್ಯಾಧಿಕಾರಿ ವೃಂದದಜೇಷ್ಠತಾ ಪಟ್ಟಿಯಲ್ಲಿಎಲ್ಲಾಅರ್ಹ ನೌಕರರನ್ನು ಸೇರಿಸಿ ತಯಾರಿಸಲಾಗಿರುತ್ತದೆ.
ಆ)	ಅನರ್ಹ ನೌಕರರನ್ನು ಮುಂಬಡ್ತಿ ನೀಡಲು ಮುಂಬಡ್ತಿ ಸಮಿತಿ ಸಭೆಯನ್ನು ನಡೆಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಬಂದಿದ್ದಲ್ಲಿ ಕೈಗೊಂಡಿರುವ ಕ್ರಮವೇನು?	ಜೇಷ್ಠತಾ ಪಟ್ಟಿ ಅನುಸಾರ ಅರ್ಹ ನೌಕರರಿಗೆ ಇಲಾಖಾ ಮುಂಬಡ್ತಿ ಸಮಿತಿಯ ಸಭೆಯನ್ನು ನಡೆಸಲಾಗಿದೆ.

ಸಂಖ್ಯೆ: ಅಪಜೀ 49 ಅಪಸೇ 2021

(ಅರವಿಂದ ಲಿಂಬಾವಳಿ)
ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	965
ಮಾನ್ಯ ಸದಸ್ಯರ ಹೆಸರು	:	ಶ್ರೀ ರಾಜೀವ್ ಪಿ. (ಕುಡಚಿ)
ಉತ್ತರಿಸಬೇಕಾದ ದಿನಾಂಕ	:	4-2-2021
ಉತ್ತರಿಸುವ ಸಚಿವರು	:	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
1	ಬೆಳಗಾವಿ ಜಿಲ್ಲೆ, ಕುಡಚಿ ಮತಕ್ಷೇತ್ರದ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿರುತ್ತದೆ.
2	ಬಂದಿದ್ದಲ್ಲಿ, ಈ ಕೇಂದ್ರಗಳಲ್ಲಿ ಶುದ್ಧ ಕುಡಿಯುವ ನೀರು, ಕೇಂದ್ರಗಳ ಸುತ್ತ ಕಾಂಪೌಂಡ್ ನಿರ್ಮಾಣ, ಕೇಂದ್ರಗಳಿಗೆ ಸಂಪರ್ಕ ರಸ್ತೆ ಕಲ್ಪಿಸುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ;	ಕುಡಚಿ ಮತಕ್ಷೇತ್ರದ ಕುಡಚಿ ಹಾಗೂ ಮುಗಳಖೋಡ ಸಮುದಾಯ ಆರೋಗ್ಯ ಕೇಂದ್ರಗಳ ಹಾಗೂ ಹಂದಿಗುಂದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಕುರಿತು ಮುಂದಿನ ವರ್ಷಗಳಲ್ಲಿ ಸಂಬಂಧಪಟ್ಟ ಆಸ್ಪತ್ರೆಯ ಕೋರಿಕೆ ಹಾಗೂ ಅನುದಾನದ ಲಭ್ಯತೆಗನುಗುಣವಾಗಿ ಕ್ರಮ ವಹಿಸಲಾಗುವುದು.
3	ಹಾಗಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ಈ ಕೇಂದ್ರಗಳಲ್ಲಿ ಕೊರತೆಯಿರುವ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗುವುದು? (ವಿವರ ನೀಡುವುದು)	ಮುಂದಿನ ವರ್ಷಗಳಲ್ಲಿ ಸಂಬಂಧಪಟ್ಟ ಆಸ್ಪತ್ರೆಯ ಕೋರಿಕೆ ಹಾಗೂ ಅನುದಾನದ ಲಭ್ಯತೆಗನುಗುಣವಾಗಿ ಕ್ರಮವಹಿಸಲಾಗುವುದು.

ಆಕುಕ 16 ಎಸ್.ಎಂ.ಎಂ. 2021

(ಡಾ: ಕೆ.ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 966
ಮಾನ್ಯ ಸದಸ್ಯರ ಹೆಸರು : ಶ್ರೀ ಸಂಜೀವ ಮಠಂದೂರ್ (ಪುತ್ತೂರು)
ಉತ್ತರಿಸಬೇಕಾದ ದಿನಾಂಕ : 4-2-2021
ಉತ್ತರಿಸುವ ಸಚಿವರು : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
1	ಪುತ್ತೂರು ತಾಲ್ಲೂಕು ವ್ಯಾಪ್ತಿಯ ಉಪ ವಿಭಾಗದಲ್ಲಿ 4 ತಾಲ್ಲೂಕಿಗೆ ಸಂಬಂಧಪಟ್ಟಂತೆ ಇರುವ ಪುತ್ತೂರು ಸರ್ಕಾರಿ ಆಸ್ಪತ್ರೆಯ ಹಳೆ ಕಾಲದ ಕಟ್ಟಡವು ಸಂಪೂರ್ಣವಾಗಿ ಶಿಥಿಲಾವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದಿಯೇ:	ಬಂದಿದೆ. ಪುತ್ತೂರು ತಾಲ್ಲೂಕು ಆಸ್ಪತ್ರೆ ಕಟ್ಟಡವು ಭಾಗಶ: ಮಂಗಳೂರು ಹೆಂಚಿನ ಛಾವಣಿಯ ಈ ಕಟ್ಟಡವನ್ನು 1962 ರಲ್ಲಿ ನಿರ್ಮಿಸಲಾಗಿರುತ್ತದೆ ಹಾಗೂ ಭಾಗಶ: ಆರ್.ಸಿ.ಸಿ. ಛಾವಣಿಯ ಕಟ್ಟಡವಾಗಿದ್ದು, ಇದನ್ನು 2002 ರಲ್ಲಿ ನಿರ್ಮಿಸಲಾಗಿರುತ್ತದೆ. ಮಳೆಗಾಲದಲ್ಲಿ ಸೋರುವಿಕೆಯಿಂದಾಗಿ ಕಟ್ಟಡಕ್ಕೆ ತುಂಬಾ ಹಾನಿಯಾಗುತ್ತಿದ್ದು, ಕಟ್ಟಡವನ್ನು ಹಂತ ಹಂತವಾಗಿ ದುರಸ್ಥಿಗೊಳಿಸಲಾಗುತ್ತಿದೆ.
2	ಬಂದಿದ್ದಲ್ಲಿ, ಈ ಆಸ್ಪತ್ರೆಗೆ ಹೊಸ ಕಟ್ಟಡವನ್ನು ನಿರ್ಮಾಣ ಮಾಡಿ ಮೇಲ್ದರ್ಜೆಗೇರಿಸಿ, ಅಭಿವೃದ್ಧಿಪಡಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?	ಹೊಸ ಕಟ್ಟಡ ನಿರ್ಮಾಣ ಮಾಡಲು ಪ್ರಸ್ತಾವನೆ ಬಂದಲ್ಲಿ ಪರಿಶೀಲಿಸಿ, ಅನುದಾನ ಲಭ್ಯತೆಗೆ ಅನುಗುಣವಾಗಿ ಈ ಕಾಮಗಾರಿಯನ್ನು ಕೈಗೊಳ್ಳಲು ಕ್ರಮವಹಿಸಲಾಗುವುದು.

ಆಕುಕ 15 ಎಸ್.ಎಂ.ಎಂ. 2021

(ಡಾ. ಕೆ.ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	967
ಸದಸ್ಯರ ಹೆಸರು	ಶ್ರೀ ಸಂಜೀವ ಮಠಂದೂರ್ (ಪುತ್ತೂರು)
ಉತ್ತರಿಸಬೇಕಾದ ದಿನಾಂಕ	04.02.2021
ಉತ್ತರಿಸಬೇಕಾದ ಸಚಿವರು	ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ)

	ಪ್ರಶ್ನೆ	ಉತ್ತರ
(ಅ)	ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹಾಗೂ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿರುವ ಖಾಲಿ ಹುದ್ದೆಗಳು ಭರ್ತಿಯಾಗದೇ ಇರುವುದರಿಂದ ಅತಿಥಿ ಉಪನ್ಯಾಸಕರುಗಳನ್ನು ನೇಮಕಾತಿ ಮಾಡಿಕೊಳ್ಳುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	2020-21 ನೇ ಶೈಕ್ಷಣಿಕ ಸಾಲಿನಲ್ಲಿ ಕಾಲೇಜು ಶಿಕ್ಷಣ ಇಲಾಖೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೆಚ್ಚುವರಿ ಬೋಧನಾ ಕಾರ್ಯಭಾರಕ್ಕನುಗುಣವಾಗಿ ಒಟ್ಟು 14183 ಅತಿಥಿ ಉಪನ್ಯಾಸಕರನ್ನು ಆಯ್ಕೆ ಮಾಡಿಕೊಳ್ಳಲು ಪ್ರಸ್ತಾವನೆ ಸಲ್ಲಿಸಿದ್ದು, ಈ ಪೈಕಿ ಶೇಕಡ 50 ರಷ್ಟು (7091) ಅತಿಥಿ ಉಪನ್ಯಾಸಕರನ್ನು ಮಾತ್ರ ಆಯ್ಕೆ ಮಾಡಿಕೊಳ್ಳಲು ಆರ್ಥಿಕ ಇಲಾಖೆಯು ಸಹಮತಿಸಿರುವಂತೆ 7091 ಅತಿಥಿ ಉಪನ್ಯಾಸಕರನ್ನು ಆಯ್ಕೆ ಮಾಡಿಕೊಳ್ಳಲು ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಇವರು ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ನಿರ್ದೇಶನ ನೀಡಿರುತ್ತಾರೆ.
(ಆ)	ಜನವರಿ 2021 ರಿಂದ ಕಾಲೇಜುಗಳು ಆರಂಭಗೊಂಡು ತರಗತಿ ಪ್ರಾರಂಭವಾಗಿದ್ದರೂ ಸಹ ಉಪನ್ಯಾಸಕರುಗಳು ಇಲ್ಲದೇ ವಿದ್ಯಾರ್ಥಿಗಳು ತೀವ್ರ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಈ ಬಗ್ಗೆ ಯಾವ ಕ್ರಮ ಕೈಗೊಂಡಿದೆ?	ಇಲಾಖಾ ವ್ಯಾಪ್ತಿಯಲ್ಲಿ ಬರುವ ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಇಲಾಖಾವತಿಯಿಂದ ಅತಿಥಿ ಉಪನ್ಯಾಸಕರುಗಳನ್ನು ನೇಮಕಾತಿ ಮಾಡಿಕೊಳ್ಳುವುದಿಲ್ಲ. ಮುಂದುವರೆದು, ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಬಾಕಿ ಉಳಿದ ಶೇಕಡ 50 ರಷ್ಟು 7092 ಅತಿಥಿ ಉಪನ್ಯಾಸಕರುಗಳನ್ನು ಆಯ್ಕೆ ಮಾಡಿಕೊಳ್ಳಲು ಆರ್ಥಿಕ ಇಲಾಖೆಯ ಸಹಮತಿಯನ್ನು ಕೋರಿದ್ದು, ಆರ್ಥಿಕ ಇಲಾಖೆಯಿಂದ ಅನುಮತಿ ಬಂದ ನಂತರ ಪೂರ್ಣ ಪ್ರಮಾಣದಲ್ಲಿ ಅತಿಥಿ ಉಪನ್ಯಾಸಕರನ್ನು ನೇಮಕಾತಿ ಮಾಡಿಕೊಳ್ಳಲಾಗುವುದು.

ಇಡಿ 33 ಡಿಸಿಇ 2021

(ಡಾ. ಅಶ್ವತ್ಥ ನಾರಾಯಣ ಸಿ.ಎನ್.)
ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ)

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 968
ಮಾನ್ಯ ಸದಸ್ಯರ ಹೆಸರು	: ಶ್ರೀ ಸಂಜೀವ ಮಠಂದೂರ್(ಮಠಂದೂರ್)
ಉತ್ತರಿಸುವ ದಿನಾಂಕ	: 04.02.2021
ಉತ್ತರಿಸುವ ಸಚಿವರು	:ಪ್ರಾಥಮಿಕಮತ್ತುಪ್ರೌಢಶಿಕ್ಷಣಹಾಗೂಸಕಾಲಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ವಿದ್ಯಾಗಮ ಯೋಜನೆಯಡಿಯಲ್ಲಿ ತರಗತಿಗಳನ್ನು ನಡೆಸಲು ಅನುಕೂಲವಾಗುವಂತೆ ಶಿಕ್ಷಕರ ಕೊರತೆ ನೀಗಿಸಲು ಹಾಗೂ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಹುದ್ದೆಗಳು ಭರ್ತಿಯಾಗದೇ ಇರುವುದರಿಂದ ಪ್ರಾಥಮಿಕ ಶಾಲೆಗಳಲ್ಲಿ ಅತಿಥಿ ಶಿಕ್ಷಕರುಗಳನ್ನು ನೇಮಕಾತಿ ಮಾಡಿಕೊಳ್ಳುವ ಪ್ರಸ್ತಾವನೆ ಮುಂದಿದೆಯೇ; ಇದ್ದಲ್ಲಿ, ಈ ಬಗ್ಗೆ ಯಾವಾಗ ಕ್ರಮ ಕೈಗೊಳ್ಳಲಾಗುವುದು(ಮಾಹಿತಿ ನೀಡುವುದು)?	ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿಯಿರುವ ಹುದ್ದೆಗಳಿಗೆ ಎದುರಾಗಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಅತಿಥಿ ಶಿಕ್ಷಕರನ್ನು ತಾತ್ಕಾಲಿಕವಾಗಿ ಅಗತ್ಯವಿರುವ ಕಡೆಗಳಲ್ಲಿ ನೇಮಕಾತಿ ಮಾಡಿಕೊಳ್ಳುವ ಪ್ರಸ್ತಾವನೆ ಸರ್ಕಾರದ ಮುಂದಿರುತ್ತದೆ. ಫೆಬ್ರುವರಿ 1ರಿಂದ ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳಲ್ಲಿ 9ನೇ ತರಗತಿಯಿಂದ 12ನೇ ತರಗತಿವರೆಗೆ ಪೂರ್ಣ ಪ್ರಮಾಣದಲ್ಲಿ ತರಗತಿಗಳನ್ನು ಪ್ರಾರಂಭಿಸಿರುವ ಹಿನ್ನೆಲೆಯಲ್ಲಿ ಪ್ರೌಢಶಾಲೆ ಹಾಗೂ ಪದವಿಪೂರ್ವ ವಿಭಾಗಗಳಲ್ಲಿ ಅತಿಥಿ ಬೋಧಕರನ್ನು ನೇಮಿಸಿಕೊಳ್ಳಲು ಆರ್ಥಿಕ ಇಲಾಖೆಯ ಸಹಮತಿ ಕೋರಲಾಗಿದೆ. ಸಹಮತಿ ದೊರೆತ ಕೂಡಲೇ ನೇಮಕಾತಿ ಮಾಡಿಕೊಳ್ಳಲಾಗುವುದು.

ಸಂಖ್ಯೆ:ಇಪಿ 300 ಎಸ್ಇಎಸ್ 2020

S. S—

(ಎಸ್. ಸುರೇಶ್ ಕುಮಾರ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ
ಹಾಗೂ ಸಕಾಲ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	970
ವಿಧಾನ ಸಭೆಯ ಸದಸ್ಯರ ಹೆಸರು	ಶ್ರೀ ಬಸನಗೌಡ ಆರ್ ಪಾಟೀಲ್ (ಯತ್ನಾಳ್) (ವಿಜಯಪುರ ನಗರ)
ಉತ್ತರಿಸಬೇಕಾದ ದಿನಾಂಕ	04.02.2021
ಉತ್ತರಿಸಬೇಕಾದ ಸಚಿವರು	ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ಕೋವಿಡ್-19 ಕೊರೂನಾ ವೈರಸ್‌ನಿಂದ ಬಾಧಿತರಾಗಿರುವ ರೋಗಿಗಳ ಸಂಖ್ಯೆ ಎಷ್ಟು; ಈ ಪೈಕಿ ಗುಣಮುಖ ಹೊಂದಿರುವವರ ಮತ್ತು ಚಿಕಿತ್ಸೆ ಪಡೆಯುತ್ತಿರುವವರ ಸಂಖ್ಯೆ ಎಷ್ಟು; (ದಿನಾಂಕ:15.01.2021 ರವರೆಗಿನ ಜಿಲ್ಲಾವಾರು ವಿವರವನ್ನು ನೀಡುವುದು)	ರಾಜ್ಯದಲ್ಲಿ ಕೊರೋನಾ ವೈರಸ್‌ನಿಂದ ದಿನಾಂಕ:02/02/2021 ರವರೆಗೆ ಬಾಧಿತರಾಗಿರುವವರ ಸಂಖ್ಯೆ: 9,40,170. ಈ ಪೈಕಿ ದಿನಾಂಕ:02/02/2021 ರವರೆಗೆ ಗುಣಮುಖ ಹೊಂದಿರುವವರ ಸಂಖ್ಯೆ: 9,22,004 ಮತ್ತು ದಿನಾಂಕ:02/02/2021 ರವರೆಗೆ ಚಿಕಿತ್ಸೆ ಪಡೆಯುತ್ತಿರುವವರ ಸಂಖ್ಯೆ 5,924. (ದಿನಾಂಕ:15.01.2021ರವರೆಗಿನ ಜಿಲ್ಲಾವಾರು ವಿವರವನ್ನು ಅನುಬಂಧ-1ರಲ್ಲಿದೆ)
ಆ	ಕೊರೋನಾ ವೈರಸ್ ಆರಂಭ ಆದ ನಂತರ ದಿನಾಂಕ:15.01.2021ರವರೆಗೆ ವೈರಸ್ ಸೋಂಕು ನಿವಾರಣೆಗೆ ಮತ್ತು ಅಗತ್ಯ ಚಿಕಿತ್ಸೆಗೆ ರಾಜ್ಯ ಸರ್ಕಾರ ವೆಚ್ಚ ಮಾಡಿರುವ ಹಣ ಎಷ್ಟು; ಕೇಂದ್ರ ಸರ್ಕಾರದಿಂದ ಬಂದಿರುವ ಅನುದಾನ ಎಷ್ಟು;	ಕರೋನಾ ವೈರಸ್ ಆರಂಭವಾದ ನಂತರ ದಿನಾಂಕ:15-01-2021ರ ವರೆಗೆ ವೈರಸ್ ಸೋಂಕು ನಿವಾರಣೆಗೆ ಮತ್ತು ಅಗತ್ಯ ಚಿಕಿತ್ಸೆಗೆ ರಾಜ್ಯ ಸರ್ಕಾರದಿಂದ ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಯಡಿ ಬಿಡುಗಡೆ ಮಾಡಲಾದ ಅನುದಾನ ರೂ.2213,29,81,000. ಕೇಂದ್ರ ಸರ್ಕಾರದಿಂದ NHM ಗೆ ಬಿಡುಗಡೆಯಾದ ಅನುದಾನ ರೂ. 373.14 ಕೋಟಿಗಳು.
ಇ	ಕೊರೋನಾ ವೈರಸ್ ಹಿನ್ನಲೆಯಲ್ಲಿ ಖರೀದಿ ಮಾಡಲಾದ ವಿವಿಧ ಉಪಕರಣಗಳಿಗೆ ಎಷ್ಟು ಹಣ ವೆಚ್ಚ ಮಾಡಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು)	ಕರೋನಾ ವೈರಸ್ ಹಿನ್ನಲೆಯಲ್ಲಿ ಖರೀದಿ ಮಾಡಲಾದ ವಿವಿಧ ಉಪಕರಣಗಳಿಗೆ ರೂ. 449.59 ಕೋಟಿಗಳನ್ನು ವೆಚ್ಚ ಮಾಡಲಾಗಿದೆ.
ಈ	ಈ ಖರೀದಿ ಪ್ರಕ್ರಿಯೆಯಲ್ಲಿ ಅಕ್ರಮಗಳು ನಡೆದಿರುವ ಕುರಿತು ಆರೋಪಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಸಂಪೂರ್ಣ ವಿವರ ನೀಡುವುದು)	ಖರೀದಿ ಪ್ರಕ್ರಿಯೆಯಲ್ಲಿ ಅಕ್ರಮಗಳು ನಡೆದಿರುವುದರ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.
ಉ	ಈ ಆರೋಪಗಳ ಕುರಿತು ಸರ್ಕಾರ ತನಿಖೆ ನಡೆಸಿದೆಯೇ; ತನಿಖೆ ನಡೆಸುವ ಕುರಿತು ಸರ್ಕಾರದ ನಿಲುವೇನು?	ಉದ್ಭವಿಸುವುದಿಲ್ಲ.

ಆಕುಕ 14 ಎಸ್ ಎಂ ಎಂ 2021

(ಡಾ|| ಕೆ. ಸುಧಾಕರ್)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಇಲಾಖೆ ಸಚಿವರು

ಕರ್ನಾಟಕ ವಿಧಾನಸಭೆ

(15ನೇ ವಿಧಾನಸಭೆ, 9ನೇ ಅಧಿವೇಶನ)

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 971

2) ಸದಸ್ಯರ ಹೆಸರು : ಶ್ರೀ ಸುರೇಶ ಬಿ.ಎಸ್ (ಹೆಬ್ಬಾಳ)

3) ಉತ್ತರಿಸುವ ದಿನಾಂಕ : 04.02.2021.

4) ಉತ್ತರಿಸುವವರು : ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ)	ಕಳೆದ ಮೂರು ವರ್ಷಗಳಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಾಮಾಜಿಕ ಅರಣ್ಯ ಇಲಾಖಾ ವತಿಯಿಂದ ರಸ್ತೆ ಬದಿಗಳಲ್ಲಿ ನೆಟ್ಟಿರುವ ಗಿಡಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಎಷ್ಟು ಸಸಿಗಳು ಜೀವಂತವಾಗಿವೆ; ಇವುಗಳ ನಿರ್ವಹಣೆಯ ಜವಾಬ್ದಾರಿ ಯಾರದು (ವಿವರ ನೀಡುವುದು);	ಬೆಂಗಳೂರು ನಗರ ಸಾಮಾಜಿಕ ಅರಣ್ಯ ವಿಭಾಗದ ವತಿಯಿಂದ ಕಳೆದ ಮೂರು ವರ್ಷಗಳಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಯಾವುದೇ ಸಸಿಗಳನ್ನು ನೆಟ್ಟಿರುವುದಿಲ್ಲ.
ಆ)	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿರುವ ಪ್ರತ್ಯೇಕ ಅರಣ್ಯ ಇಲಾಖೆಯ ವಿಭಾಗದ ವತಿಯಿಂದ ಕೈಗೊಂಡಿರುವ ಕಾರ್ಯಕ್ರಮಗಳಾವುವು ಈ ವಿಭಾಗದಿಂದ ನೆಡಲಾಗಿರುವ ಸಸಿಗಳೆಷ್ಟು; ಆ ಪೈಕಿ ಜೀವಂತ ಸಸಿಗಳೆಷ್ಟು? (ವಿವರ ನೀಡುವುದು)	ಅನ್ವಯಿಸುವುದಿಲ್ಲ

ಸಂಖ್ಯೆ: ಅಪಜೀ 08 ಎಫ್‌ಟಿಎಸ್ 2021

(ಅರವಿಂದ ಲಿಂಬಾವಳಿ)
ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕರ್ನಾಟಕ ವಿಧಾನಸಭೆ

(15ನೇ ವಿಧಾನಸಭೆ, 9ನೇ ಅಧಿವೇಶನ)

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 978

2) ಸದಸ್ಯರ ಹೆಸರು : ಶ್ರೀಲಿಂಗೇಶ ಕೆ.ಎಸ್ (ಬೇಲೂರು)

3) ಉತ್ತರಿಸುವ ದಿನಾಂಕ : 04.02.2021.

4) ಉತ್ತರಿಸುವವರು : ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ)	ಬೇಲೂರು ಮತ್ತು ಹಳೆಬೀಡಿಗೆ ಬರುವ ಪ್ರವಾಸಿಗರ ಅನುಕೂಲಕ್ಕಾಗಿ ಸಾಲುಮರದ ತಿಮ್ಮಕ್ಕ ಟ್ರೀ ಪಾರ್ಕ್ ಮತ್ತು ದೇವಿವನ ನಿರ್ಮಾಣ ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;	ಬೇಲೂರು ತಾಲ್ಲೂಕಿನ ಕಲ್ಲಹಳ್ಳಿ ಅರಣ್ಯ ಪ್ರದೇಶದಲ್ಲಿ "ಸಾಲುಮರದ ತಿಮ್ಮಕ್ಕ ಟ್ರೀ ಪಾರ್ಕ್" ಸ್ಥಾಪಿಸಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಆದರೆ, ವೃಕ್ಷೋದ್ಯಾನ ಮಾರ್ಗಸೂಚಿ ಕೈಪಿಡಿ ಪ್ರಕಾರ ಯಾವುದೇ ಒಂದು ಪಾರ್ಕ್ ನಿರ್ಮಿಸಲು ಜಿಲ್ಲಾ ಅಥವಾ ತಾಲ್ಲೂಕು ಕೇಂದ್ರದಿಂದ 5.00 ಕಿಮೀ ವ್ಯಾಪ್ತಿಯೊಳಗಿನ ಪ್ರದೇಶದಲ್ಲಿ ನಿರ್ಮಿಸುವುದು ಸೂಕ್ತವೆಂದು ತಿಳಿಸಿರುವುದರಿಂದ ಕಲ್ಲಹಳ್ಳಿ ಅರಣ್ಯ ಪ್ರದೇಶದಲ್ಲಿ "ಸಾಲುಮರದ ತಿಮ್ಮಕ್ಕ ಟ್ರೀ ಪಾರ್ಕ್" ಸ್ಥಾಪಿಸುವುದು ಸೂಕ್ತ ಸ್ಥಳವಾಗಿಲ್ಲವೆಂದು ವೃಕ್ಷೋದ್ಯಾನದ ಮಾರ್ಗಸೂಚಿಯನ್ವಯ ಪಟ್ಟಣ/ ನಗರ ಪ್ರದೇಶಗಳಲ್ಲಿ ಸ್ಥಾಪಿಸಬೇಕಾಗಿರುತ್ತದೆ ಎಂದು ಅರಣ್ಯ/ ಕಂದಾಯ/ ಪುರಸಭೆ/ ಇತರೆ ಭೂಮಿಯಲ್ಲಿ ನಿರ್ದಿಷ್ಟ ಜಮೀನು ಇದ್ದರೆ ಟ್ರೀ ಪಾರ್ಕ್ ನಿರ್ಮಾಣಕ್ಕೆ ಒಪ್ಪಬಹುದೆಂದು, ಅಂತಹ ಸ್ಥಳವನ್ನು ಆಯ್ಕೆ ಮಾಡಿ ಪ್ರಸ್ತಾವನೆ ಸಲ್ಲಿಸಲು ಹಾಗೂ ಬೇಲೂರು ತಾಲ್ಲೂಕಿಗೆ "ಸಾಲುಮರದ ತಿಮ್ಮಕ್ಕ ಟ್ರೀ ಪಾರ್ಕ್" ಸ್ಥಾಪಿಸಲು ರೂ.200.00 ಲಕ್ಷಗಳ ಅನುದಾನವನ್ನು ಮೀಸಲಿರಿಸಲಾಗಿದೆ. ಮುಂದುವರೆದು, ದೈವೀವನ ನಿರ್ಮಾಣ ಮಾಡಲು ಯಾವುದೇ ಪ್ರಸ್ತಾವನೆಯು ಬಂದಿರುವುದಿಲ್ಲ.
ಆ)	ಇದ್ದಲ್ಲಿ, ಸದರಿ ಪ್ರಸ್ತಾವನೆಯು ಈಗ ಯಾವ ಹಂತದಲ್ಲಿದೆ; ಎಷ್ಟು ಕಾಲಮಿತಿಯೊಳಗೆ ಸಾಲುಮರದ ತಿಮ್ಮಕ್ಕ ಟ್ರೀ ಪಾರ್ಕ್ ಮತ್ತು ದೇವಿವನ ನಿರ್ಮಾಣ ಮಾಡಲಾಗುವುದು? (ಸಂಪೂರ್ಣ ವಿವರ ನೀಡುವುದು)	ಮೇಲೆ ವಿವರಿಸಿರುವಂತೆ ವೃಕ್ಷೋದ್ಯಾನ ನಿರ್ಮಾಣ ಮಾಡಲು ಮತ್ತು ದೈವೀವನ ನಿರ್ಮಾಣ ಮಾಡಲು ಸೂಕ್ತ ಸ್ಥಳವನ್ನು ಮಾರ್ಗ ಸೂಚಿಯನ್ವಯ ಆಯ್ಕೆ ಮಾ ಡಿದ ನಂತರ ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ: ಅಪಜೀ 09 ಎಫ್‌ಟಿಎಸ್ 2021

(ಅರವಿಂದ ಲಿಂಬಾವಳಿ)
ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 980
ಮಾನ್ಯ ಸದಸ್ಯರ ಹೆಸರು	: ಶ್ರೀ ಲಿಂಗೇಶ ಕೆ.ಎಸ್ (ಬೇಲೂರು)
ಉತ್ತರಿಸಬೇಕಾದ ದಿನಾಂಕ	: 04-02-2021
ಉತ್ತರಿಸುವ ಸಚಿವರು	: ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಬೇಲೂರು ವಿಧಾನಸಭಾ ಕ್ಷೇತ್ರದ ಅರಸೀಕೆರೆ ತಾಲ್ಲೂಕಿನ ಜಾವಗಲ್‌ನ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;	ಇಲ್ಲ
ಆ	ಸದರಿ ಪ್ರಸ್ತಾವನೆಯು ಈಗ ಯಾವ ಹಂತದಲ್ಲಿದೆ; ಯಾವ ಕಾಲಮಿತಿಯಲ್ಲಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲಾಗುವುದು? (ಸಂಪೂರ್ಣ ವಿವರ ನೀಡುವುದು)	ಉದ್ಭವಿಸುವುದಿಲ್ಲ

ಆಕುಕ 13 ಎಸ್‌ಬಿವಿ 2021

(ಡಾ॥ ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನಸಭೆ

1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	985
2)	ಮಾನ್ಯ ಸದಸ್ಯರ ಹೆಸರು	ಶ್ರೀ ಸುಬ್ಬಾರೆಡ್ಡಿ ಎಸ್.ಎನ್. (ಬಾಗೇಪಲ್ಲಿ)
3)	ಉತ್ತರಿಸಬೇಕಾದ ದಿನಾಂಕ	04/02/2021
4)	ಉತ್ತರಿಸುವವರು	ಉಪ ಮುಖ್ಯಮಂತ್ರಿಗಳು ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವರು

****

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಗುಡಿಬಂಡೆ ತಾಲ್ಲೂಕಿನ ಐ.ಟಿ.ಐ. ಕಾಲೇಜಿನ ಕಟ್ಟಡ ನಿರ್ಮಾಣಕ್ಕೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ; ನಿರ್ಮಾಣ ಕಾರ್ಯವನ್ನು ಯಾವ ಸಂಸ್ಥೆಗೆ ವಹಿಸಲಾಗಿದೆ;(ವಿವರ ನೀಡುವುದು)	ಮೆ॥ ರೈಟ್ಸ್ ಸಂಸ್ಥೆ, ಬೆಂಗಳೂರು ಇವರಿಗೆ ನಿರ್ಮಾಣ ಕಾರ್ಯವನ್ನು ವಹಿಸಿದ್ದು, ರೂ.254.13 ಲಕ್ಷಗಳನ್ನು ಬಿಡುಗಡೆ ಮಾಡಿದೆ.
ಆ)	ಈ ಕಟ್ಟಡವನ್ನು ನಿಗದಿತ ಅಂದಾಜು ಮೊತ್ತದಲ್ಲಿ ಮತ್ತು ಕಟ್ಟಡದ ನಕ್ಷೆಯ ವಿನ್ಯಾಸದಂತೆ ನಿರ್ಮಾಣ ಮಾಡಲಾಗಿದೆಯೇ;	ಗುಡಿಬಂಡೆ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಕಟ್ಟಡವನ್ನು ನಿಗದಿತ ಅಂದಾಜು ಮೊತ್ತದಲ್ಲಿ, ಕಟ್ಟಡ ನಕ್ಷೆಯ ವಿನ್ಯಾಸದಲ್ಲಿ ಒಂದು ಕೊಠಡಿಯನ್ನು ಬಾಕಿ ಇರಿಸಿ ನಿರ್ಮಾಣ ಮಾಡಿರುತ್ತದೆ.
ಇ)	ಕಟ್ಟಡ ಕಾಮಗಾರಿಯು ಗುಣಮಟ್ಟದಿಂದ ಕೂಡಿದೆಯೇ;	ಹೌದು.
ಈ)	ಈ ಕಟ್ಟಡವನ್ನು ಯಾವಾಗ ಪೂರ್ಣಗೊಳಿಸಲಾಗುವುದು?	ದಿನಾಂಕ: 15-01-2021 ರಂದು ನಡೆದ ನಬಾರ್ಡ್ ಪ್ರಗತಿ ಪರಿಶೀಲನಾ ಸಭೆಯಲ್ಲಿ, ಬಾಕಿ ಇರುವ ಒಂದು ಕೊಠಡಿಯ ಕಾಮಗಾರಿಯನ್ನು ದಿನಾಂಕ: 31-03-2021 ರೊಳಗಾಗಿ ಪೂರ್ಣಗೊಳಿಸುವುದಾಗಿ ತಿಳಿಸಿರುತ್ತಾರೆ.

ಸಂಖ್ಯೆ: ಕೌಉಜೀಇ 8 ಕೈತಪ್ರ 2021

(ಡಾ.ಸಿ.ಎನ್.ಅಶ್ವಥ ನಾರಾಯಣ)
ಉಪ ಮುಖ್ಯಮಂತ್ರಿಗಳು ಹಾಗೂ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	993
ಸದಸ್ಯರ ಹೆಸರು	:	ಶ್ರೀ ದಿನಕರ್ ಕೇಶವ್ ಶೆಟ್ಟಿ (ಕುಮಟ)
ಉತ್ತರಿಸುವ ದಿನಾಂಕ	:	04.02.2021
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಉತ್ತರ ಕನ್ನಡ ಜಿಲ್ಲೆಯ ಹಾಲಕ್ಕಿ ಒಕ್ಕಲಿಗರ ಜಾತಿಯವರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಹೌದು
ಆ)	ಹಾಲಕ್ಕಿ ಒಕ್ಕಲಿಗರ ಜನಾಂಗದವರನ್ನು ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆ ಮಾಡದಿರಲು ಕಾರಣವೇನು; ಈ ಕುರಿತು ಸರ್ಕಾರ ನಿರ್ಧಾರ ಕೈಗೊಂಡಿದ್ದರೆ ವಿವರ ನೀಡುವುದು?	ಹಾಲಕ್ಕಿ ಒಕ್ಕಲಿಗರ ಜನಾಂಗವನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸುವ ಬಗ್ಗೆ ಕುಲಶಾಸ್ತ್ರೀಯ ಅಧ್ಯಯನ ವರದಿಯನ್ನು ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು ಇವರಿಂದ ಪಡೆದು ಸಚಿವ ಸಂಪುಟದ ಅನುಮೋದನೆ ಪಡೆದು ದಿನಾಂಕ:21/10/2009 ರಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಕೇಂದ್ರ ಸರ್ಕಾರದ ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾರವರು ವರದಿಯನ್ನು ಸೂಕ್ತ ಸಮರ್ಥನೆಯೊಂದಿಗೆ ಸಲ್ಲಿಸಲು ಹಿಂದಿರುಗಿಸಿದ್ದು, ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾರವರು ವ್ಯಕ್ತಪಡಿಸಿರುವ ಎಲ್ಲಾ ಅಂಶಗಳನ್ನು ಅಧ್ಯಯನಕ್ಕೆ ಒಳಪಡಿಸುವ ಮೂಲಕ ಮತ್ತೊಮ್ಮೆ ಆಳವಾದ ಕುಲಶಾಸ್ತ್ರೀಯ ಅಧ್ಯಯನ ವರದಿಯನ್ನು ತಯಾರಿಸಿ ನಿರ್ದೇಶಕರು, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು ಇವರು ಸರ್ಕಾರಕ್ಕೆ ಸಲ್ಲಿಸಿದ್ದು, ದಿನಾಂಕ: 08/02/2017 ರಂದು ಕೇಂದ್ರ ಸರ್ಕಾರಕ್ಕೆ ಸದರಿ ವರದಿಯನ್ನು ಸಲ್ಲಿಸಲಾಗಿದ್ದು, ಪ್ರಸ್ತುತ ಪ್ರಸ್ತಾವನೆಯು ಕೇಂದ್ರ ಸರ್ಕಾರದಲ್ಲಿ ಬಾಕಿ ಇರುತ್ತದೆ.

ಸಕಇ 35 ಎಸ್‌ಎಡಿ 2021

(ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನಸಭೆ

1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	997
2)	ಮಾನ್ಯ ಸದಸ್ಯರ ಹೆಸರು	ಶ್ರೀ ಶಿವಣ್ಣ.ಬಿ. (ಆನೇಕಲ್)
3)	ಉತ್ತರಿಸಬೇಕಾದ ದಿನಾಂಕ	04/02/2021
4)	ಉತ್ತರಿಸುವವರು	ಉಪ ಮುಖ್ಯಮಂತ್ರಿಗಳು ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವರು

****

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಆನೇಕಲ್ ತಾಲ್ಲೂಕು ಕೇಂದ್ರದಲ್ಲಿರುವ ಐ.ಟಿ.ಐ. ಕಾಲೇಜಿನ ಕಟ್ಟಡ ನಿರ್ಮಾಣಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆಯು ಬಂದಿದೆಯೇ; (ಪೂರ್ಣ ಮಾಹಿತಿ ನೀಡುವುದು)	ಇಲ್ಲ.
ಆ)	ಐ.ಟಿ.ಐ ಕಾಲೇಜಿನ ಕಟ್ಟಡದ ಕಾಮಗಾರಿಯನ್ನು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು? (ಪೂರ್ಣ ಮಾಹಿತಿ ನೀಡುವುದು)	ನಿವೇಶನವು ಲಭ್ಯವಿಲ್ಲದೇ ಇರುವುದರಿಂದ, ನಿವೇಶನವು ದೊರೆತ ಕೂಡಲೇ ಅನುದಾನದ ಲಭ್ಯತೆಯನ್ನಾಧರಿಸಿ ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ: ಕೌಉಜೀಇ 9 ಕೈತಪ್ರ 2021

(ಡಾ.ಸಿ.ಎನ್.ಅಶ್ವಥ ನಾರಾಯಣ)
ಉಪ ಮುಖ್ಯಮಂತ್ರಿಗಳು ಹಾಗೂ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1009
ಮಾನ್ಯ ಸದಸ್ಯರ ಹೆಸರು : ಶ್ರೀ ಮಂಜುನಾಥ್.ಆರ್ (ದಾಸರಹಳ್ಳಿ)
ಉತ್ತರಿಸಬೇಕಾದ ದಿನಾಂಕ : 04.02.2021
ಉತ್ತರಿಸಬೇಕಾದ ಸಚಿವರು : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ. ಸಂ	ಪ್ರಶ್ನೆಗಳು	ಉತ್ತರ
ಅ)	ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಇರುವ 03 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ರೋಗಿಗಳಿಗೆ ಚಿಕಿತ್ಸೆ ನೀಡಲು ಸೂಕ್ತ ಉಪಕರಣಗಳು, ಸಿಬ್ಬಂಧಿ ಇನ್ನಿತರೆ ವೈದ್ಯಕೀಯ ಸವಲತ್ತುಗಳ ಸಂಪೂರ್ಣ ವಿವರ ನೀಡುವುದು;	ದಾಸರಹಳ್ಳಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯಾಧಿಕಾರಿಗಳು, ಶುಶ್ರೂಷಕಿ, ಫಾರ್ಮಸಿಸ್ಟ್, ಕಿರಿಯ ಪ್ರಯೋಗಶಾಲ ತಂತ್ರಜ್ಞ, ಹಿರಿಯ ಆರೋಗ್ಯ ಮಹಿಳಾ ಸಹಾಯಕಿ, ಕಿರಿಯ ಮಹಿಳಾ ಆರೋಗ್ಯ ಸಹಾಯಕಿ/ಕಿರಿಯ ಪುರುಷ ಆರೋಗ್ಯ ಸಹಾಯಕ ಮತ್ತು ಗ್ರೂಪ್-ಡಿ ಹುದ್ದೆಯಲ್ಲಿ ಪೂರ್ಣ ಪ್ರಮಾಣದ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಸದರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಒ.ಪಿ.ಡಿ. ಸೇವೆಗಳು, ಎಂ.ಎಲ್.ಸಿ, ಪೋಸ್ಟ್ ಮಾರ್ಟಮ್, ಹೆರಿಗೆ ಪ್ರಕರಣಗಳು ಹಾಗೂ ಎಲ್ಲಾ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. **ಲಭ್ಯವಿರುವ ಉಪಕರಣಗಳ ವಿವರ ಈ ಕೆಳಕಂಡಂತಿವೆ:-** Thermometer/Thermal Guns — BP Appartus D/C Set — Delivery Set Nebulization Device — Copper T Set Semi Auto Analyzer — ILR, Defrizer, Pulse Oximeter
ಆ)	ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕಿಡ್ನಿ ಸಮಸ್ಯೆಯಿಂದ ಬಳಲುತ್ತಿರುವ ರೋಗಿಗಳೆಷ್ಟು; ಬಡತನ ರೇಖೆಯಿಂದ ಕೆಳಮಟ್ಟದಲ್ಲಿ ಇರುವವರ ಚಿಕಿತ್ಸೆಗೆ ಸರ್ಕಾರದ ವತಿಯಿಂದ ಯಾವ ಸವಲತ್ತು ಒದಗಿಸಲಾಗಿದೆ; ರೋಗಿಗಳ ಚಿಕಿತ್ಸೆಗೆಂದು ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸರ್ಕಾರಿ ಡಯಾಲಿಸಿಸ್ ಕೇಂದ್ರ ಸ್ಥಾಪಿಸಲಾಗಿದೆಯೇ?	ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕಿಡ್ನಿ ಸಮಸ್ಯೆಯಿಂದ ಬಳಲುತ್ತಿರುವ ರೋಗಿಗಳ ಬಗ್ಗೆ ಗಣತಿ ನಡೆಸಿರುವುದಿಲ್ಲ. ಆದರೆ ಪ್ರತಿ 10 ಲಕ್ಷ ಜನ ಸಂಖ್ಯೆಗೆ 221 ಮಂದಿಗೆ ಕಿಡ್ನಿ ಸಮಸ್ಯೆ ಇರಬಹುದೆಂದು ಅಂದಾಜಿಸಲಾಗಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಬಡತನ ರೇಖೆಯಿಂದ ಕೆಳಮಟ್ಟದಲ್ಲಿರುವ ರೋಗಿಗಳಿಗೆ ಡಯಾಲಿಸಿಸ್ ಚಿಕಿತ್ಸೆಯು ಸೇರಿದಂತೆ ಎಲ್ಲಾ ರೀತಿಯ ಆರೋಗ್ಯ ಸೇವೆಗಳನ್ನು ಉಚಿತವಾಗಿ ಒದಗಿಸಲಾಗುತ್ತಿದೆ. ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯವತಿಯಿಂದ ಡಯಾಲಿಸಿಸ್ ಕೇಂದ್ರವನ್ನು ಸ್ಥಾಪಿಸಿರುವುದಿಲ್ಲ.

ಸಂಖ್ಯೆ: ಆಕುಕ 12 ಎಸ್.ಟಿ.ಕ್ಯೂ 2021

(ಡಾ|| ಕೆ.ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

ವಿಧಾನ ಸಭೆ	
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :	**1011**
ಸದಸ್ಯರ ಹೆಸರು :	**ಶ್ರೀ ಸಂಗಮೇಶ್ವರ ಬಿ.ಕೆ (ಭದ್ರಾವತಿ)**
ಉತ್ತರಿಸಬೇಕಾದ ದಿನಾಂಕ :	**04.02.2021**
ಉತ್ತರಿಸುವವರು :	**ಮಾನ್ಯ ಅರಣ್ಯ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು**

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಪೋಷಕರ ವೃಂದದ ಜೇಷ್ಠತಾ ಪಟ್ಟಿಯನ್ನು ರಾಜ್ಯ ಮಟ್ಟದಲ್ಲಿ ಸಂಯೋಜಿಸಿ ಪ್ರಕಟಿಸುವ ಪೂರ್ವದಲ್ಲಿ ಅಂತಿಮಗೊಳಿಸಿರುವ ವಲಯ ಅರಣ್ಯಾಧಿಕಾರಿ ಜೇಷ್ಠತಾ ಪಟ್ಟಿಯನ್ನು ಸರ್ಕಾರ ರದ್ದುಪಡಿಸಿ ಹೊಸದಾಗಿ ಪ್ರಕಟಿಸುವುದೇ; ಕೈಬಿಟ್ಟಿರುವ ಅರ್ಹ ನೌಕರರನ್ನು ಜೇಷ್ಠತಾ ಪಟ್ಟಿಗೆ ಸೇರಿಸಲು ಕ್ರಮ ಜರುಗಿಸುವುದೇ;	ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಗಳು 1957 ನಿಯಮ 10ರನ್ವಯ ಸಂಬಂಧಿಸಿದ ವೃಂದಗಳ ಜೇಷ್ಠತಾ ಪಟ್ಟಿಯನ್ನು ಸಕ್ಷಮ ಪ್ರಾಧಿಕಾರವು ತಯಾರಿಸಿ ಪ್ರಕಟಿಸಬೇಕು. ಉಪ ವಲಯ ಅರಣ್ಯಾಧಿಕಾರಿ ವೃಂದದ ಜೇಷ್ಠತಾ ಪಟ್ಟಿಯನ್ನು ತಯಾರಿಸಿ ಪ್ರಕಟಿಸಲು ವೃತ್ತ ಮಟ್ಟದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ /ಅರಣ್ಯ ಸಂರಕ್ಷಣಾಧಿಕಾರಿಗಳು ಸಕ್ಷಮ ಪ್ರಾಧಿಕಾರವಾಗಿರುತ್ತದೆ. ಅದರಂತೆ ಸಕ್ಷಮ ಪ್ರಾಧಿಕಾರಗಳಾದ ಆಯಾ ವೃತ್ತಗಳ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ /ಅರಣ್ಯ ಸಂರಕ್ಷಣಾಧಿಕಾರಿಗಳು ಜೇಷ್ಠತಾ ಪಟ್ಟಿಯನ್ನು ಅಧಿಸೂಚಿಸಿರುತ್ತಾರೆ. ಅಧಿಸೂಚನೆಗೊಂಡ ಉಪ ವಲಯ ಅರಣ್ಯಾಧಿಕಾರಿಗಳ ಜೇಷ್ಠತಾ ಪಟ್ಟಿಗಳನ್ನು ಆಧರಿಸಿ ರಾಜ್ಯ ಮಟ್ಟದ ವಲಯ ಅರಣ್ಯಾಧಿಕಾರಿಗಳ ಜೇಷ್ಠತಾ ಪಟ್ಟಿಯನ್ನು ನಿಯಮಾನುಸಾರ ಪ್ರಕಟಿಸಲಾಗಿದೆ. ವಲಯ ಅರಣ್ಯಾಧಿಕಾರಿ ವೃಂದದ ಜೇಷ್ಠತಾ ಪಟ್ಟಿಯಲ್ಲಿ ಎಲ್ಲಾ ಅರ್ಹ ನೌಕರರನ್ನು ಸೇರಿಸಿ ತಯಾರಿಸಲಾಗಿರುತ್ತದೆ.
ಆ)	ಅನರ್ಹ ನೌಕರರನ್ನು ಮುಂಬಡ್ತಿ ನೀಡಲು ಮುಂಬಡ್ತಿ ಸಮಿತಿ ಸಭೆಯನ್ನು ನಡೆಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ, ಕೈಗೊಂಡಿರುವ ಕ್ರಮವೇನು?	ಜೇಷ್ಠತಾ ಪಟ್ಟಿ ಅನುಸಾರ ಅರ್ಹ ನೌಕರರಿಗೆ ಬಡ್ತಿ ನೀಡಲು ಮುಂಬಡ್ತಿ ಸಭೆಯನ್ನು ನಡೆಸಲಾಗಿದೆ.

(ಅರವಿಂದ ಲಿಂಬಾವಳಿ)
ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:593
ಮಾನ್ಯ ಸದಸ್ಯರ ಹೆಸರು	:ಶ್ರೀ ಮಸಾಲ ಜಯರಾಮ್ (ತುರುವೇಕೆರೆ)
ಉತ್ತರಿಸಬೇಕಾದ ದಿನಾಂಕ	:04-02-2021
ಉತ್ತರಿಸುವ ಸಚಿವರು	:ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

<table>
<tr><th>ಕ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ತುಮಕೂರು ಜಿಲ್ಲೆಯ ತುರುವೇಕರೆ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ವಿವಿಧ ಬಗೆಯ ಸರ್ಕಾರಿ ಆಸ್ಪತ್ರೆಗಳು ಯಾವುವು; ಸದರಿ ಆಸ್ಪತ್ರೆಗಳು ಯಾವ ಯಾವ ಸೌಲಭ್ಯಗಳನ್ನು ಹೊಂದಿವೆ; ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಸಿಬ್ಬಂದಿ ಕೊರತೆ ನೀಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು)</td><td>ತುಮಕೂರು ಜಿಲ್ಲೆ, ತುರುವೇಕೆರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 01 ಸಾರ್ವಜನಿಕ ಆಸ್ಪತ್ರೆ, ಈ ಕೆಳಕಂಡ 10 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಈ ಪ್ರಾಥಮಿಕ ಆರೋಗ್ಯ ಕೇಂದ್ರಗಳಡಿ 43 ಉಪಕೇಂದ್ರಗಳು ಇರುತ್ತವೆ.
<table><tr><th>ಕ.ಸಂ</th><th>ಪ್ರಾ.ಆ.ಕೇಂದ್ರ</th></tr><tr><td>1.</td><td>ಮಾಯಸಂದ್ರ,</td></tr><tr><td>2.</td><td>ಬಾಣಸಂದ್ರ,</td></tr><tr><td>3.</td><td>ದಂಡಿನಶಿವರ,</td></tr><tr><td>4.</td><td>ಮಾವಿನಕೆರೆ,</td></tr><tr><td>5.</td><td>ದಬ್ಬೇಘಟ್ಟ,</td></tr><tr><td>6.</td><td>ಕಣತ್ತೂರು,</td></tr><tr><td>7.</td><td>ಶೆಟ್ಟಿಗೊಂಡನಹಳ್ಳಿ,</td></tr><tr><td>8.</td><td>ತಾಳಿಕೆರೆ,</td></tr><tr><td>9.</td><td>ಸಂಪಿಗೆ,</td></tr><tr><td>10.</td><td>ಮಾಚೆನಹಳ್ಳಿ</td></tr></table>ಸದರಿ ಅಸ್ಪತ್ರೆಗಳಲ್ಲಿ ಸಾರ್ವಜನಿಕ ವೈದ್ಯಕೀಯ ಚಿಕಿತ್ಸಾ ಸೌಲಭ್ಯ, ಹೆರಿಗೆ ಸೌಲಭ್ಯ., ಮಕ್ಕಳ ಚಿಕಿತ್ಸೆ ವ್ಯವಸ್ಥೆ, ಲ್ಯಾಬ್ ವ್ಯವಸ್ಥೆ, ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲು ಕ್ರಮವಹಿಸಲಾಗುತ್ತಿದೆ.
ಸದರಿ ಅಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.
ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ತೆಗೆದುಕೊಂಡ ಕ್ರಮದ ಬಗ್ಗೆ ಅನುಬಂಧ-2ರಲ್ಲಿ ನೀಡಲಾಗಿದೆ.</td></tr>
</table>

ಆ	ತುರುವೇಕರೆ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 24x7 ಯೋಜನೆಯಲ್ಲಿರುವ ಆಸ್ಪತ್ರೆಗಳು ಯಾವುವು, ಈ ಆಸ್ಪತ್ರೆಗಳಲ್ಲಿ ಇರಬೇಕಾದ ಮೂಲಸೌಕರ್ಯ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು;	ತುರುವೇಕೆರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 24*7 ಯೋಜನೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು:- 1)ಮಾಯಸಂದ್ರ 2)ದಂಡಿನಶಿವರ. ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿನ ಮೂಲಭೂತ ಸೌಕರ್ಯ ನಿರ್ವಹಣೆಗಾಗಿ ಆರೋಗ್ಯ ರಕ್ಷಾ ಸಮಿತಿ ಮತ್ತು NRHM ಯೋಜನೆಯಡಿ ವಾರ್ಷಿಕವಾಗಿ ನೀಡುವ ಅನುದಾನದಲ್ಲಿ ನಿರ್ವಹಿಸಲಾಗುತ್ತದೆ. ಈ ಆಸ್ಪತ್ರೆಗಳಲ್ಲಿ ಮೂಲಭೂತ ಸೌಕರ್ಯ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ
ಇ	ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಶಿಥಿಲಾವಸ್ಥೆಯಲ್ಲಿರುವ ಆಸ್ಪತ್ರೆಗಳು ಯಾವುವು; ಅವುಗಳ ಪುನರುಜ್ಜೀವನಕ್ಕೆ / ದುರಸ್ಥಿಗಾಗಿ ಕೈಗೊಂಡಿರುವ ಕ್ರಮಗಳೇನು?	ಬಾಣಸಂದ್ರ, ಮಾಚೇನಹಳ್ಳಿ ಮತ್ತು ಸಂಪಿಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಶಿಥಿಲಾವಸ್ಥೆಯಲ್ಲಿದ್ದು ಸದರಿ ಕೇಂದ್ರಗಳ ದುರಸ್ತಿ ಕಾರ್ಯಗಳನ್ನು 2021-22 ನೇ ಸಾಲಿನ ಆರ್ಥಿಕ ಸಾಲಿನಲ್ಲಿ ಅನುದಾನದ ಲಭ್ಯತೆಗೆ ಅನುಗುಣವಾಗಿ ಕೈಗೊಳ್ಳಲಾಗುವುದು.

ಆಕುಕ 20 ಎಸ್ ಎಸ್ ಎಂ 2021

(ಡಾ||ಕೆ.ಸುಧಾಕರ್)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ

ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 772
ಸದಸ್ಯರ ಹೆಸರು : ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್
ಉತ್ತರಿಸುವ ದಿನಾಂಕ : 04.02.2021.
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	2018-19ನೇ ಸಾಲಿನಿಂದ 2020-21ನೇ ಸಾಲಿನ ಜನವರಿ ತಿಂಗಳ ಅಂತ್ಯದವರೆಗೆ ಕರ್ನಾಟಕ ತಾಂಡ ಅಭಿವೃದ್ಧಿ ನಿಗಮದಿಂದ ಇಂಡಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ವಿವಿಧ ಯೋಜನೆಗಳಡಿ ಮಂಜೂರು ಮಾಡಿರುವ ಕಾಮಗಾರಿಗಳು ಯಾವುವು	2018-19ನೇ ಸಾಲಿನಿಂದ 2020-21ನೇ ಸಾಲಿನ ಜನವರಿ ತಿಂಗಳ ಅಂತ್ಯದವರೆಗೆ ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದಿಂದ ಇಂಡಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ವಿವಿಧ ಯೋಜನೆಗಳಡಿಯಲ್ಲಿ ಸಿಸಿ ರಸ್ತೆ, ಚರಂಡಿ, ಸೇವಾಲಾಲ್ ಸಮುದಾಯ ಭವನ, ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಾಣ ಹಾಗೂ ಹೈಮಾಸ್ಟ್ ದೀಪಗಳ ನಿರ್ಮಾಣ ಕಾಮಗಾರಿಗಳನ್ನು ಮಂಜೂರು ಮಾಡಲಾಗಿರುತ್ತವೆ.
ಆ)	ಸದರಿ ಕಾಮಗಾರಿಗಳಿಗೆ ಮಂಜೂರು ಮಾಡಿದ ಅನುದಾನ ಎಷ್ಟು (ವಿವರ ನೀಡುವುದು)	ಅನುಬಂಧ-1 ರಲ್ಲಿ ನೀಡಿದೆ.
ಇ)	ಸದರಿ ಕಾಮಗಾರಿಗಳು ಪ್ರಸ್ತುತ ಯಾವ ಹಂತದಲ್ಲಿವೆ; ಸದರಿ ಕಾಮಗಾರಿಗಳನ್ನು ಯಾವ ನಿಗಧಿತ ಸಮಯದೊಳಗೆ ಸಂಪೂರ್ಣಗೊಳಿಸಲಾಗುವುದು; ಅದಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು? ವಿವರ ನೀಡುವುದು	ಕಾಮಗಾರಿಗಳ ವಿವರಗಳನ್ನು ಅನುಬಂಧ-2 ರಲ್ಲಿ ನೀಡಿದೆ. ಸದರಿ ಕಾಮಗಾರಿಗಳನ್ನು ಜೂನ್ ಅಂತ್ಯದ ವೇಳೆಗೆ ಪೂರ್ಣಗೊಳಿಸಲಾಗುವುದು.

ಸಂಖ್ಯೆ: ಸಕಇ 21 ಆರ್&ಐ 2021

(ಬಿ.ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು.

ಅನುಬಂಧ–1

ವರ್ಷ	ಸಿಸಿ ರಸ್ತೆ/ ಚರಂಡಿ, ರಸ್ತೆ ಅಭಿವೃದ್ಧಿ		ಸೇವಾಲಾಲ್ ಸಮುದಾಯ ಭವನ/ ಸಾಂಸ್ಕೃತಿಕ ಕೇಂದ್ರ		ಶುದ್ಧ ಕುಡಿಯುವ ನೀರಿನ ಘಟಕ		ಹೈಮಾಸ್ಟ್ ದೀಪಗಳ	
	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
2017–18	5	36.00	2	17.00	–	–	–	–
2018–19	7	34.97	2	27.00	1	5.99	–	–
2019–20	6	265.00	–	–	11	110.00	1	5.00

ಅನುಬಂಧ–2

ವರ್ಷ	ಸಿಸಿ ರಸ್ತೆ/ ಚರಂಡಿ, ರಸ್ತೆ ಅಭಿವೃದ್ಧಿ		ಸೇವಾಲಾಲ್ ಸಮುದಾಯ ಭವನ/ ಸಾಂಸ್ಕೃತಿಕ ಕೇಂದ್ರ		ಶುದ್ಧ ಕುಡಿಯುವ ನೀರಿನ ಘಟಕ		ಹೈಮಾಸ್ಟ್ ದೀಪಗಳ	
	ಪೂರ್ಣಗೊಂಡ ಕಾಮಗಾರಿ	ಪ್ರಗತಿಯಲ್ಲಿರುವ ಕಾಮಗಾರಿ	ಪೂರ್ಣಗೊಂಡ ಕಾಮಗಾರಿ	ಪ್ರಗತಿಯಲ್ಲಿರುವ ಕಾಮಗಾರಿ	ಪೂರ್ಣಗೊಂಡ ಕಾಮಗಾರಿ	ಪ್ರಗತಿಯಲ್ಲಿರುವ ಕಾಮಗಾರಿ	ಪೂರ್ಣಗೊಂಡ ಕಾಮಗಾರಿ	ಪ್ರಗತಿಯಲ್ಲಿರುವ ಕಾಮಗಾರಿ
2017–18	5	–	–	2	–	–	–	–
2018–19	3	4	1	1	1	–	–	–
2019–20	–	6	–	–	1	10	–	1

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 792
ಸದಸ್ಯರ ಹೆಸರು	: ಶ್ರೀ ಹಾಲಪ್ಪ ಹರತಾಳ್ ಹೆಚ್.
ಉತ್ತರಿಸುವ ದಿನಾಂಕ	: 04.02.2021
ಉತ್ತರಿಸುವ ಸಚಿವರು	: ಸಮಾಜ ಕಲ್ಯಾಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಕರ್ನಾಟಕ ಮೂಲ ಅರಣ್ಯಾ ಬುಡಕಟ್ಟು ಜನಾಂಗದವರಾದ ಹಸಲರು ಮತ್ತು ಗೊಂಡ ಜನಾಂಗದವರು ಮೂಲಭೂತ ಸೌಲಭ್ಯಗಳಾದ ವಸತಿ ಸೌಲಭ್ಯ ಬಗುರುಕುಂ ಜಾಗ ಮಂಜೂರಾತಿ ಶಿಕ್ಷಣ, ಇತರೆ ಸರ್ಕಾರಿ ಸೌಲಭ್ಯಗಳಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಸದರಿ ಜನಾಂಗದವರಿಗೆ ಇದುವರೆವಿಗೂ ಮೂಲಭೂತ ಸೌಲಭ್ಯಗಳನ್ನು ನೀಡದಿರಲು ಕಾರಣಗಳೇನು;	ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ಚಿಕ್ಕಮಗಳೂರು ಹಾಗೂ ಶಿವಮೊಗ್ಗ ಜಿಲ್ಲೆಯಲ್ಲಿರುವ ಹಸಲರು ಮತ್ತು ಗೊಂಡ ಜನಾಂಗದವರಿಗೆ ಈ ಕೆಳಕಂಡ ಸೌಲಭ್ಯಗಳನ್ನು ನಿಯಮಾನುಸಾರ ನೀಡಲಾಗುತ್ತಿದೆ. 1. ಅರಣ್ಯ ಹಕ್ಕು ಕಾಯ್ದೆಯಡಿ ಸಲ್ಲಿಸಿರುವ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ ಹಕ್ಕು ಪತ್ರ ಮಂಜೂರಾತಿ ನೀಡಲಾಗುತ್ತಿದೆ. 2. ಕಾಲೋನಿಗಳಲ್ಲಿ ಮೂಲಭೂತ ಸೌಲಭ್ಯಗಳಾದ ಸಿ.ಸಿ. ರಸ್ತೆ, ಚರಂಡಿ ಹಾಗೂ ಹೈಮಾಸ್ಕ್ ಲೈಟ್ ನೀಡಲಾಗಿದೆ. 3. ಪೌಷ್ಠಿಕ ಆಹಾರ ಯೋಜನೆಯಡಿ ಪೌಷ್ಠಿಕ ಅಹಾರ ವಿತರಿಸಲಾಗುತ್ತಿದೆ. 4. ವಿದ್ಯಾರ್ಥಿ ವೇತನ, ಪ್ರೋತ್ಸಾಹಧನ ನೀಡಲಾಗುತ್ತಿದೆ. 5. ವಿದ್ಯಾರ್ಥಿಗಳಿಗೆ ವಸತಿ ಶಾಲೆಗಳಲ್ಲಿ ಪ್ರವೇಶವನ್ನು ನೀಡಲಾಗಿದೆ. 6. ಅರಣ್ಯ ವಾಸಿಗಳಿಗೆ ಅರಣ್ಯದಲ್ಲಿನ ಕಿರು ಉತ್ಪನ್ನ ಸಂಗ್ರಹಿಸಲು ದುಡಿಯುವ ಬಂಡವಾಳ ನೀಡಲಾಗುತ್ತಿದೆ.

ಇ)	ಸದರಿ ಸೌಲಭ್ಯಗಳನ್ನು ನೀಡಲು ಕೈಗೊಂಡ ಕ್ರಮಗಳೇನು? (ವಿವರ ಒದಗಿಸುವುದು)	ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ಹಸಲರು ಮತ್ತು ಗೊಂಡ ಜನಾಂಗದವರಿಗೆ ಸೌಲಭ್ಯಗಳನ್ನು ನೀಡಲು ಕೈಗೊಂಡ ಕ್ರಮಗಳ ವಿವರ ಈ ಕೆಳಕಂಡಂತಿದೆ. **ಶಿವಮೊಗ್ಗ ಜಿಲ್ಲೆ:-** 1. ಅರಣ್ಯ ಹಕ್ಕು ಕಾಯ್ದೆಯಡಿ ಅರ್ಜಿ ಸಲ್ಲಿಸಿರುವ ಹಸಲರು ಮತ್ತು ಗೊಂಡ ಜನಾಂಗದವರಿಗೆ ನಿಯಮಾನುಸಾರ ಹಕ್ಕು ಪತ್ರ ಮಂಜೂರಾತಿ ನೀಡಲಾಗುತ್ತಿದೆ. 2. ವಸತಿ ಶಾಲೆಗಳಲ್ಲಿ ಅರ್ಜಿ ಸಲ್ಲಿಸಿದ ಪರಿಶಿಷ್ಟ ವರ್ಗದ ಹಸಲರು ಮತ್ತು ಗೊಂಡ ಜನಾಂಗದ ಎಲ್ಲಾ ವಿದ್ಯಾರ್ಥಿಗಳಿಗೆ ವಸತಿ ಶಾಲೆಗಳಲ್ಲಿ ಪ್ರವೇಶವನ್ನು ನೀಡಲಾಗಿದೆ. 3. ಪ್ರತಿ ವರ್ಷ ವಿದ್ಯಾರ್ಥಿ ವೇತನ, ಪ್ರೋತ್ಸಾಹಧನ ನೀಡಲಾಗುತ್ತಿದೆ. 4. ಶಿವಮೊಗ್ಗ ಜಿಲ್ಲೆಯಲ್ಲಿ 2000 ಹಸಲರು ಕುಟುಂಬಗಳಿಗೆ 99 ಗೊಂಡ ಕುಟುಂಬಗಳಿಗೆ ವರ್ಷದಲ್ಲಿ 06 ಬಾರಿ ಪೌಷ್ಠಿಕ ಆಹಾರ ವಿತರಿಸಲಾಗುತ್ತಿದೆ. 5. ಮೂಲಭೂತ ಸೌಲಭ್ಯಗಳಾದ ಸಿ.ಸಿ. ರಸ್ತೆ, ಚರಂಡಿ ಹಾಗೂ ಹೈಮಾಸ್ಕ್ ಲೈಟ್ ನೀಡಲಾಗಿದೆ.
		ಚಿಕ್ಕಮಗಳೂರು ಜಿಲ್ಲೆ:- 1. ಅರಣ್ಯ ಹಕ್ಕು ಕಾಯ್ದೆಯಡಿ ಅರ್ಜಿ ಸಲ್ಲಿಸಿರುವ ಹಸಲರು ಮತ್ತು ಗೊಂಡ ಜನಾಂಗದವರಿಗೆ ನಿಯಮಾನುಸಾರ ಹಕ್ಕು ಪತ್ರ ಮಂಜೂರಾತಿ ನೀಡಲಾಗುತ್ತಿದೆ. 2. 3941 ಹಸಲರು ಕುಟುಂದವರಿಗೆ ಪೌಷ್ಠಿಕ ಆಹಾರ ಯೋಜನೆ ಪೌಷ್ಠಿಕ ಅಹಾರ ವಿತರಿಸಲಾಗುತ್ತಿದೆ. 3. ವಸತಿ ಶಾಲೆಗಳಲ್ಲಿ ಅರ್ಜಿ ಸಲ್ಲಿಸಿದ ಪರಿಶಿಷ್ಟ ವರ್ಗದ ಹಸಲರು ಜನಾಂಗದ ಎಲ್ಲಾ ವಿದ್ಯಾರ್ಥಿಗಳಿಗೆ ವಸತಿ ಶಾಲೆಗಳಲ್ಲಿ ಪ್ರವೇಶವನ್ನು ನೀಡಲಾಗಿದೆ. 4. ಪ್ರಗತಿ ಕಾಲೋನಿ ಯೋಜನೆಯಡಿ ಕಳೆದ 3 ವರ್ಷಗಳಲ್ಲಿ ರೂ.50.00 ಲಕ್ಷಗಳ ವೆಚ್ಚದಲ್ಲಿ ಪರಿಶಿಷ್ಟ ವರ್ಗದ ಕಾಲೋನಿಗಳಲ್ಲಿ ಸಿ.ಸಿ. ರಸ್ತೆ ಚರಂಡಿ, ಕುಡಿಯುವ ನೀರು, ಸೇತುವೆ ಮುಂತಾದ ಸೌಲಭ್ಯಗಳನ್ನು ನೀಡಲಾಗಿದೆ. 5. ಮೂಡಿಗೆರೆ ವಿಧಾನಸಭಾ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಧನಕ್ಕಿಹಾರ ವಿಶೇಷ ಪ್ಯಾಕೇಜ್ ಅನುದಾನ ರೂ.10.00 ಕೋಟಿಗಳ ವೆಚ್ಚದಲ್ಲಿ ಹಸಲರು ಕುಟುಂಬಗಳ ವಾಸಸ್ಥಳಗಳಲ್ಲಿ ಕುಡಿಯುವ ನೀರು, ಸಿ.ಸಿ. ರಸ್ತೆ ಚರಂಡಿ ಇತ್ಯಾದಿ ಮೂಲಭೂತ ಸೌಲಭ್ಯ ಒದಗಿಸಿದೆ. 6. ಚಿಕ್ಕಮಗಳೂರು ಜಿಲ್ಲೆ ಎನ್.ಆರ್. ಪುರ ತಾಲ್ಲೂಕು ಸರ್ವೆ ನಂ 54,67,96,89,95 ಗಳಲ್ಲಿ ಒಟ್ಟು 1410 ಎಕರೆ ಅರಣ್ಯ ಭೂಮಿಯಲ್ಲಿ ಹಸಲರು ಅರಣ್ಯ ವಾಸಿಗಳಿಗೆ ಅರಣ್ಯದಲ್ಲಿನ ಕಿರು ಉತ್ಪನ್ನ ಸಂಗ್ರಹಿಸಲು ಸಮುದಾಯ ಅರಣ್ಯ ಹಕ್ಕು ಪತ್ರ ನೀಡಲಾಗಿದೆ. 7. ಕಳೆದ 4 ವರ್ಷಗಳಲ್ಲಿ ಪರಿಶಿಷ್ಟ ಪಂಗಡದವರಿಗೆ ವಿಶೇಷ ಕೇಂದ್ರೀಯ ನೆರವಿನಲ್ಲಿ ಪಾಲಿಹೌಸ್, ವನಧನ ಯೋಜನೆ, ಹೈನುಗಾರಿಕೆ ಕಾರ್ಯಕ್ರಮಗಳನ್ನು ಪರಿಶಿಷ್ಟ ವರ್ಗದ ಜನರಿಗಾಗಿ ಅನುಷ್ಠಾನಗೊಳಿಸಲಾಗಿದೆ. ಹಾಗೂ ಹನಿ ನೀರಾವರಿ ಯೋಜನೆ ಮೂಲಕ 22 ಹಸಲರು ಕುಟುಂಬಗಳಿಗೆ ಮೂಲಭೂತ ಸೌಲಭ್ಯ ನೀಡಲಾಗಿದೆ.

(ಬಿ.ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	794
ಸದಸ್ಯರ ಹೆಸರು	ಶ್ರೀ ಹಾಲಪ್ಪ ಹರತಾಳ್ ಹೆಚ್ (ಸಾಗರ)
ಉತ್ತರಿಸಬೇಕಾದ ದಿನಾಂಕ	04.02.2021
ಉತ್ತರಿಸಬೇಕಾದ ಸಚಿವರು	ಮಾನ್ಯ ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ)

ಪ್ರಶ್ನೆ	ಉತ್ತರ
ಅ) ಸಾಗರ ಮತ್ತು ಹೊಸನಗರ ತಾಲ್ಲೂಕಿನ ಗ್ರಾಮೀಣ ಪ್ರದೇಶಗಳಲ್ಲಿ ಮೊಬೈಲ್ ನೆಟ್ ವರ್ಕ್ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;	ಶಿವಮೊಗ್ಗ ಜಿಲ್ಲೆಯ ಕೆಲವು ಗ್ರಾಮೀಣ ಪ್ರದೇಶಗಳಲ್ಲಿ ಮೊಬೈಲ್ ನೆಟ್ವರ್ಕ್ ಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ಸಂಬಂಧವಾಗಿ, ಸನ್ಮಾನ್ಯ ಮುಖ್ಯಮಂತ್ರಿಯವರು 17ನೇ ಸೆಪ್ಟೆಂಬರ್ 2020 ರಂದು ಕೇಂದ್ರ ಸರ್ಕಾರದ ಸಂವಹನ ಮಂತ್ರಾಲಯದ ಸನ್ಮಾನ್ಯ ಸಚಿವರಿಗೆ ಪತ್ರವನ್ನು ಬರೆದು, ಬಿಎಸ್ಎನ್ಎಲ್ ನೆಟ್ವರ್ಕ್ ನ್ನು ಹಾಗೂ ಖಾಸಗಿ ಮೊಬೈಲ್ ನೆಟ್ವರ್ಕ್ ಸಂಪರ್ಕ ವ್ಯಾಪ್ತಿಯನ್ನು ಬಲಪಡಿಸಿ ಉತ್ತಮಪಡಿಸಲು ಕೋರಿರುತ್ತಾರೆ. ಕೇಂದ್ರ ಸರ್ಕಾರದ ಮಾನ್ಯ ಸಂವಹನ, ಕಾನೂನು ಮತ್ತು ನ್ಯಾಯ, ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವರು 17ನೇ ಡಿಸೆಂಬರ್ 2020 ರ ಪತ್ರದಲ್ಲಿ ಪ್ರತಿಕ್ರಿಯಿಸಿ ಸದರಿ ವಿಷಯದ ಬಗ್ಗೆ ಪರಿಶೀಲನೆ ಕೈಗೊಳ್ಳುತ್ತಿರುವುದಾಗಿ ತಿಳಿಸಿರುತ್ತಾರೆ. ಸಾಗರ ಮತ್ತು ಹೊಸನಗರ ತಾಲ್ಲೂಕುಗಳಲ್ಲಿ 60 ದೂರ ಸಂಪರ್ಕ ಗೋಪುರಗಳು ಸುಸ್ಥಿತಿಯಲ್ಲಿವೆ ಮತ್ತು ಉಳಿದ 02 ದೂರ ಸಂಪರ್ಕ ಗೋಪುರಗಳನ್ನು ಸ್ಥಾಪಿಸಲು / ಕಾರ್ಯನಿರ್ವಹಿಸಲು ಬಾಕಿ ಉಳಿದಿರುತ್ತದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯವರಿಂದ ತಿಳಿದು ಬಂದಿದೆ. ರಾಜ್ಯ ಮೊಬೈಲ್/ಅಂತರ್ಜಾಲ ಸಂಪರ್ಕ ಮತ್ತು
ಆ) ಇದರಿಂದಾಗಿ ವಿದ್ಯಾರ್ಥಿಗಳು ಆನ್ ಲೈನ್ ಶಿಕ್ಷಣ ಪಡೆಯಲು ಹಾಗು ನ್ಯಾಯಬೆಲೆ ಅಂಗಡಿಗಳಲ್ಲಿ ಪಡಿತರ ಪಡೆಯಲು, ಸರ್ಕಾರಿ ಸೌಲಭ್ಯಗಳಿಗೆ ಜಿ.ಪಿ.ಎಸ್ ಮಾಡಲು ತೊಂದರೆ ಯಾಗುತ್ತಿರುವುದಲ್ಲದೆ, ಇತರೆ ಸರ್ಕಾರಿ ಕಾರ್ಯಗಳಿಗೆ ಅನಾನೂಕುಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	
ಇ) ಹಾಗಿದ್ದಲ್ಲಿ, ಸದರಿ ಪ್ರದೇಶಗಳಲ್ಲಿ ಮೊಬೈಲ್ ನೆಟ್ ವರ್ಕ್ ಸೌಲಭ್ಯಗಳನ್ನು ನೀಡಲು ಇರುವ ತೊಂದರೆಗಳೇನು;	
ಈ) ಸದರಿ ಪ್ರದೇಶಗಳಲ್ಲಿ ನೆಟ್ ವರ್ಕ್ ಸೌಲಭ್ಯ ಕಲ್ಪಿಸಿ ಸಾರ್ವಜನಿಕರಿಗೆ ಎಲ್ಲಾ ಸರ್ಕಾರಿ ಸೌಲಭ್ಯ ಒದಗಿಸಲು ಕೈಗೊಂಡ ಕ್ರಮಗಳೇನು? (ವಿವರ ಒದಗಿಸುವುದು)	

	ವ್ಯಾಪ್ತಿಯನ್ನು ಬಲಪಡಿಸಲು ಮತ್ತು ಉತ್ತಮಗೊಳಿಸುವುದನ್ನು ಖಚಿತಪಡಿಸಿಕೊಳ್ಳಲು ರಾಜ್ಯ ಮಟ್ಟದಲ್ಲಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ:- • ರಾಜ್ಯ ಮಟ್ಟದ ಬ್ರಾಡ್ ಬ್ಯಾಂಡ್ ಸಮಿತಿ, ರಚಿಸಲಾಗಿದೆ. • ರಾಜ್ಯ ಹಾಗೂ ಜಿಲ್ಲಾ ಮಟ್ಟದ ದೂರ ಸಂಪರ್ಕ ಸಮನ್ವಯ ಸಮಿತಿಗಳನ್ನು ರಚಿಸಲಾಗಿದೆ. • ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ದೂರ ಸಂಪರ್ಕ ಗೋಪುರಗಳನ್ನು ಅಳವಡಿಸಲು ಅನುಸರಿಸಬೇಕಾದ ಕೇಂದ್ರ ಸರ್ಕಾರದ ಮಾರ್ಗಸೂಚಿಗೆ ಅನುಗುಣವಾಗಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ನಗರಾಭಿವೃದ್ಧಿ ಇಲಾಖೆಗಳಿಂದ ನಿಯಮಗಳನ್ನು ಪರಿಷ್ಕರಿಸಲಾಗುತ್ತಿದೆ.

(ಐಟಿಬಿಟಿ 07 ಎಲ್ ಸಿಎಂ 2021)

(ಡಾ|| ಅಶ್ವಥ್ ನಾರಾಯಣ ಸಿ.ಎನ್)
ಉಪಮುಖ್ಯಮಂತ್ರಿಗಳು ಹಾಗೂ ವಿದ್ಯುನ್ಮಾನ,
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ
ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 805
ಮಾನ್ಯ ಸದಸ್ಯರ ಹೆಸರು : ಶ್ರೀ ಬಾಲಕೃಷ್ಣ ಸಿ.ಎನ್. (ಶ್ರವಣಬೆಳಗೊಳ)
ಉತ್ತರಿಸಬೇಕಾದ ದಿನಾಂಕ : 4-2-2021
ಉತ್ತರಿಸುವ ಸಚಿವರು : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
1	ಚನ್ನರಾಯಪಟ್ಟಣ ತಾಲ್ಲೂಕು ಆಸ್ಪತ್ರೆಯಲ್ಲಿ ಮೂಲಭೂತ ಸೌಲಭ್ಯಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ. ಚನ್ನರಾಯಪಟ್ಟಣ ತಾಲ್ಲೂಕು ಆಸ್ಪತ್ರೆಯಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲು 2017-18ನೇ ಸಾಲಿನ ಕರ್ನಾಟಕ ಸ್ಥಳೀಯ ಶಾಸಕರ ಪ್ರದೇಶಾಭಿವೃದ್ಧಿ ಅನುದಾನದಲ್ಲಿ ಆಸ್ಪತ್ರೆಯ ತುರ್ತು ದುರಸ್ತಿ ಕಾಮಗಾರಿಗಳಿಗೆ ರೂ.65.00 ಲಕ್ಷಗಳ ವೆಚ್ಚದಲ್ಲಿ ಕಾಮಗಾರಿಯನ್ನು ಕೈಗೊಂಡಿದ್ದು, ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ.
2	ಈ ತಾಲ್ಲೂಕಿಗೆ ಎಂ.ಸಿ.ಹೆಚ್. ಆಸ್ಪತ್ರೆ ತುಂಬಾ ಅವಶ್ಯಕವಾಗಿದ್ದು, ಎಂ.ಸಿ.ಹೆಚ್ ವಿಭಾಗವನ್ನು ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಚನ್ನರಾಯ ಪಟ್ಟಣದಲ್ಲಿ ಈಗಾಗಲೇ ಸಾರ್ವಜನಿಕ ಆಸ್ಪತ್ರೆಯು ಕಾರ್ಯನಿರ್ವಹಿಸುತ್ತಿದ್ದು, ಹಲವಾರು ಆರೋಗ್ಯ ಸೇವೆಗಳನ್ನು ಸಾರ್ವಜನಿಕರಿಗೆ ನೀಡುತ್ತಿದೆ. ಈ ಸೇವೆಗಳಲ್ಲಿ ತಾಯಿ ಮತ್ತು ಮಕ್ಕಳ ಆರೋಗ್ಯ ಸೇವೆಯೂ ಒಳಗೊಂಡಿರುತ್ತದೆ. ಚನ್ನರಾಯಪಟ್ಟಣ ಸಾರ್ವಜನಿಕ ಆಸ್ಪತ್ರೆಯಲ್ಲಿ ಮಾಹೆಯಾನ 43 ಹೆರಿಗೆಗಳು ಸಂಭವಿಸುತ್ತಿದ್ದು. ಪ್ರಸ್ತುತ 100 ಹಾಸಿಗೆಯ ಸಾರ್ವಜನಿಕ ಆಸ್ಪತ್ರೆಯಲ್ಲಿ 20 ಹಾಸಿಗೆಗಳನ್ನು ತಾಯಿ ಮತ್ತು ಮಕ್ಕಳ ವಿಭಾಗಕ್ಕೆ ಮೀಸಲಿಡಲಾಗುತ್ತಿದೆ. ಭಾರತ ಸರ್ಕಾರದ ಮಾನದಂಡಗಳ ತಾಯಿ ಮತ್ತು ಮಕ್ಕಳ ಆಸ್ಪತ್ರೆಯನ್ನು ತೆರೆಯಲು Bed Occupancy Rate ಶೇ. 70ಕ್ಕಿಂತ ಹೆಚ್ಚಿರಬೇಕು. ಆದರೆ, ಸದರಿ ಸಾರ್ವಜನಿಕ ಆಸ್ಪತ್ರೆಯಲ್ಲಿ Bed Occupancy Rate ಶೇ. 40 ರಷ್ಟಿರುತ್ತದೆ. ಆದ್ದರಿಂದ, ತಾಯಿ ಮತ್ತು ಮಕ್ಕಳ ಆಸ್ಪತ್ರೆಯನ್ನು ಸ್ಥಾಪಿಸಲು ಅವಕಾಶವಿರುವುದಿಲ್ಲ.

3	ಚನ್ನರಾಯಪಟ್ಟಣ ತಾಲ್ಲೂಕು ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯರುಗಳಿಗೆ ವಸತಿ ಸಮುಚ್ಚಯ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಚನ್ನರಾಯಪಟ್ಟಣ ತಾಲ್ಲೂಕು ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯರುಗಳಿಗೆ ಪ್ರಸ್ತುತ, ಒಟ್ಟು 2 ಸಂಖ್ಯೆ ವಸತಿಗೃಹಗಳು ಲಭ್ಯವಿರುತ್ತವೆ ಹಾಗೂ ಹೆಚ್ಚುವರಿಯಾಗಿ ಇನ್ನೂ 12 ವಸತಿ ಸಮುಚ್ಚಯಗಳ ಅವಶ್ಯಕತೆ ಇರುತ್ತದೆ. ಪ್ರಸ್ತಾವನೆ ಬಂದಲ್ಲಿ ಕ್ರಮಕೈಗೊಳ್ಳಲಾಗುವುದು.
4	ಹಾಗಿದ್ದಲ್ಲಿ, ಇವರುಗಳಿಗೆ ವಸತಿ ಸಮುಚ್ಚಯ ನಿರ್ಮಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;	
5	ತಾಲ್ಲೂಕು ಆಸ್ಪತ್ರೆಗೆ ರೇಡಿಯಾಲಾಜಿಸ್ಟ್ ವೈದ್ಯರ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಕೊರತೆಯಿರುವ ಹುದ್ದೆಯನ್ನು ತುಂಬಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?	ಸಾರ್ವಜನಿಕ ಆಸ್ಪತ್ರೆ ಚನ್ನರಾಯಪಟ್ಟಣದಲ್ಲಿ ರೇಡಿಯಾಲಜಿಸ್ಟ ಹುದ್ದೆ ಮಂಜೂರಾತಿ ಇರುವುದಿಲ್ಲ. ಆದ್ದರಿಂದ, ರೇಡಿಯಾಲಜಿಸ್ಟ ತಜ್ಞರನ್ನು ನೇಮಿಸಲು ಅವಕಾಶ ಇರುವುದಿಲ್ಲ.

ಆಕುಕ 23 ಎಸ್.ಎಂ.ಎಂ. 2021

(ಡಾ: ಕೆ.ಸುಧಾಕರ್)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ

ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	807
ಮಾನ್ಯ ಸದಸ್ಯರ ಹೆಸರು	:	ಶ್ರೀ. ಬಾಲಕೃಷ್ಣ ಸಿ.ಎನ್ (ಶ್ರವಣಬೆಳಗೊಳ)
ಉತ್ತರಿಸುವ ದಿನಾಂಕ	:	04.02.2021
ಉತ್ತರಿಸುವ ಸಚಿವರು	:	ಪ್ರವಾಸೋದ್ಯಮ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು.

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಪ್ರವಾಸೋದ್ಯಮ ಇಲಾಖೆಯಲ್ಲಿ ವಿವಿಧ ವೃಂದದ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; ಖಾಲಿ ಇರುವ ಹುದ್ದೆಗಳನ್ನು ಯಾವ ಕಾಲಮಿತಿಯೊಳಗೆ ಭರ್ತಿ ಮಾಡಲಾಗುವುದು; (ಸಂಪೂರ್ಣ ಮಾಹಿತಿ ನೀಡುವುದು)</td><td>ಪ್ರವಾಸೋದ್ಯಮ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ವಿವರ ಈ ಕೆಳಕಂಡಂತಿದೆ.
<table>
<tr><th>ವೃಂದ</th><th>ಖಾಲಿ ಹುದ್ದೆಗಳು</th><th>ಷರಾ</th></tr>
<tr><td>ಗ್ರೂಪ್–ಎ</td><td>15</td><td></td></tr>
<tr><td>ಗ್ರೂಪ್-ಬಿ</td><td>16</td><td></td></tr>
<tr><td>ಗ್ರೂಪ್-ಸಿ</td><td>176</td><td>77 ಹುದ್ದೆಗಳನ್ನು ಬಾಹ್ಯ ಮೂಲದ ಆಧಾರದ ಮೇಲೆ ತಾತ್ಕಾಲಿಕವಾಗಿ ತುಂಬಲಾಗಿರುತ್ತದೆ.</td></tr>
<tr><td>ಗ್ರೂಪ್-ಡಿ</td><td>44</td><td>23 ಹುದ್ದೆಗಳನ್ನು ಬಾಹ್ಯ ಮೂಲದ ಆಧಾರದ ಮೇಲೆ ತಾತ್ಕಾಲಿಕವಾಗಿ ತುಂಬಲಾಗಿರುತ್ತದೆ.</td></tr>
</table>
ಖಾಲಿ ಇರುವ ಕೆಲವು ಹುದ್ದೆಗಳನ್ನು ನಿಯೋಜನೆ ಹಾಗು ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲಾಗಿರುತ್ತದೆ. ಇನ್ನುಳಿದ ಖಾಲಿ ಹುದ್ದೆಗಳನ್ನು ಹಂತ ಹಂತವಾಗಿ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.</td></tr>
<tr><td>ಆ)</td><td>ಜಿಲ್ಲೆಯ ಪ್ರವಾಸೋದ್ಯಮ ಇಲಾಖೆಯಲ್ಲಿ ಖಾಲಿ ಇರುವ ಜಿಲ್ಲಾ ಮಟ್ಟದ ಅಧಿಕಾರಿಯ ಹುದ್ದೆಯನ್ನು ಯಾವಾಗ ಭರ್ತಿ ಮಾಡಲಾಗುವುದು ಹಾಗೂ ಜಿಲ್ಲೆಯ ಪ್ರವಾಸೋದ್ಯಮ ಇಲಾಖೆಯಲ್ಲಿ ಖಾಲಿ ಇರುವ ಇತರೆ ವಿವಿಧ ಶ್ರೇಣಿಯ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು;</td><td>ಹಾಸನ ಜಿಲ್ಲೆಯ ಪ್ರವಾಸೋದ್ಯಮ ಇಲಾಖೆ ಕಛೇರಿ ಹುದ್ದೆಗಳ ವಿವರ ಈ ಕೆಳಕಂಡಂತಿದೆ:
<table>
<tr><th>ಕ್ರ. ಸಂ.</th><th>ಮಂಜೂರಾಗಿರುವ ಹುದ್ದೆಗಳ ಹೆಸರು</th><th>ಮಂಜೂರಾದ ಒಟ್ಟು ಹುದ್ದೆಗಳ ಸಂಖ್ಯೆ</th><th>ಷರಾ</th></tr>
<tr><td>01</td><td>ಉಪ ನಿರ್ದೇಶಕರು</td><td>01</td><td>ಇಲಾಖೆಯಲ್ಲಿ ಹಾಲಿ ಉಪ ನಿರ್ದೇಶಕರ ಪದ ವೃಂದದ ಅಧಿಕಾರಿಗಳು ಇಲ್ಲದೇ ಇರುವುದರಿಂದ ತೋಟಗಾರಿಕೆ ಇಲಾಖೆಯಿಂದ ನಿಯೋಜನೆ ಮೇಲ ಭರ್ತಿ ಮಾಡಲಾಗಿರುತ್ತದೆ.</td></tr>
<tr><td>02</td><td>ಪ್ರವಾಸಿ ಅಧಿಕಾರಿಗಳು</td><td>01</td><td>ಪ್ರವಾಸೋದ್ಯಮ ಇಲಾಖೆಯ ಸಿಬ್ಬಂದಿ ಇರುತ್ತಾರೆ.</td></tr>
<tr><td>03</td><td>ಸ್ವಾಗತಕಾರರು</td><td>01</td><td>ಪ್ರವಾಸೋದ್ಯಮ ಇಲಾಖೆಯ ಸಿಬ್ಬಂದಿ ಇರುತ್ತಾರೆ.</td></tr>
<tr><td>04</td><td>ಪ್ರವಾಸಿ ಪ್ರವರ್ತಕರು</td><td>01</td><td>ಖಾಲಿ ಹುದ್ದೆ</td></tr>
<tr><td>05</td><td>ಡೇಟಾ ಎಂಟ್ರಿ ಆಪರೇಟರ್</td><td>01</td><td>ಖಾಲಿ ಹುದ್ದೆ – ತಾತ್ಕಾಲಿಕವಾಗಿ ಬಾಹ್ಯ ಮೂಲ ಆಧಾರದ ಮೇಲೆ ಭರ್ತಿ ಮಾಡಲಾಗಿದೆ.</td></tr>
</table></td></tr>
</table>

06	ವಾಹನ ಚಾಲಕರು	01	ಪ್ರವಾಸೋದ್ಯಮ ಇಲಾಖೆಯ ಸಿಬ್ಬಂದಿ ಇರುತ್ತಾರೆ.
07	ಗ್ರೂಪ್ –ಡಿ ನೌಕರರು	01	ಪ್ರವಾಸೋದ್ಯಮ ಇಲಾಖೆಯ ಸಿಬ್ಬಂದಿ ಇರುತ್ತಾರೆ.

ಮೇಲ್ಕಂಡ ಖಾಲಿ ಇರುವ 02 ಗ್ರೂಪ್- ಸಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು. ಗ್ರೂಪ್ –ಸಿ ವೃಂದದ ಡಾಟಾ ಎಂಟ್ರಿ ಆಪರೇಟರ್ ಹುದ್ದೆಯನ್ನು ಬಾಹ್ಯ ಮೂಲ ಆಧಾರದ ಮೇಲೆ ತಾತ್ಕಾಲಿಕವಾಗಿ ತುಂಬಲಾಗಿರುತ್ತದೆ.

ಇ)	ಹಾಸನ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಇಲಾಖೆಗೆ ಸ್ವಂತ ಕಛೇರಿ ಕಟ್ಟಡವಿಲ್ಲದಿರುವುದರಿಂದ ಸಾರ್ವಜನಿಕರ ಕೆಲಸ ಕಾರ್ಯಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಪ್ರವಾಸೋದ್ಯಮ ಇಲಾಖೆಗೆ ಸ್ವಂತ ಕಛೇರಿ ಕಟ್ಟಡ ನಿರ್ಮಾಣ ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು)	2001ನೇ ಸಾಲಿನಿಂದ ಪ್ರವಾಸೋದ್ಯಮ ಇಲಾಖೆಯ ಹಾಸನ ಜಿಲ್ಲಾ ಕಛೇರಿಯು ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ.

ಸಂಖ್ಯೆ: ಟಿಒಆರ್ 14 ಟಿಡಿವಿ 2021.

(ಸಿ.ಪಿ. ಯೋಗೇಶ್ವರ)
ಪ್ರವಾಸೋದ್ಯಮ, ಪರಿಸರ ಮತ್ತು
ಜೀವಿಶಾಸ್ತ್ರ, ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 830
ಸದಸ್ಯರ ಹೆಸರು : ಶ್ರೀ ಖಾದರ್ ಯು.ಟಿ. (ಮಂಗಳೂರು)
ಉತ್ತರಿಸಬೇಕಾದ ದಿನಾಂಕ : 04-02-2021
ಉತ್ತರಿಸುವ ಸಚಿವರು : ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
1	ಮಂಗಳೂರಿನ ಉಳ್ಳಾಲ ಪಟ್ಟಣದಲ್ಲಿ ರಾಣಿ ಅಬ್ಬಕ್ಕ ಭವನದ ನಿರ್ಮಾಣಕ್ಕಾಗಿ ಸರ್ಕಾರ ಮಂಜೂರು ಮಾಡಿರುವ ಅನುದಾನವೆಷ್ಟು; ಯಾವ ವರ್ಷದಲ್ಲಿ ಅನುದಾನ ಬಿಡುಗಡೆ ಮಾಡಲಾಗಿತ್ತು;	• ಒಟ್ಟಾರೆ ರೂ. 250.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. • 2012-13 ನೇ ಸಾಲಿನಲ್ಲಿ ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ 551 ಕಸಧ 2012, ದಿನಾಂಕ: 24.12.2012 ರಲ್ಲಿ ರೂ. 500.00 ಲಕ್ಷಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಿ, ಮೊದಲನೇ ಕಂತಿನಲ್ಲಿ ರೂ. 100.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರಿಗೆ ಬಿಡುಗಡೆ ಮಾಡಲು ಮಂಜೂರಾತಿ ನೀಡಲಾಗಿದೆ. ಸರ್ಕಾರದ ಆದೇಶದ ಪ್ರತಿ ಲಗತ್ತಿಸಿದೆ. ಸರ್ಕಾರದ ಆದೇಶದನ್ವಯ ರೂ. 100.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರಿಗೆ ಬಿಡುಗಡೆ ಮಾಡಲಾಗಿದೆ. • 2015-16 ನೇ ಸಾಲಿನಲ್ಲಿ ಸರ್ಕಾರದ ಆದೇಶ ಸಂಖ್ಯೆ: ಕಸಂವಾ 1044 ಕಸಧ 2014, ದಿನಾಂಕ: 01.10.2015ರ ಆದೇಶದಲ್ಲಿ ಸದರಿ ಉದ್ದೇಶಕ್ಕಾಗಿ ರೂ. 150.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರಿಗೆ ಬಿಡುಗಡೆ ಮಾಡಲು ಮಂಜೂರಾತಿ ನೀಡಲಾಗಿದೆ. ಸರ್ಕಾರದ ಆದೇಶದ ಪ್ರತಿ ಲಗತ್ತಿಸಿದೆ. ಸರ್ಕಾರದ ಆದೇಶದನ್ವಯ ರೂ. 150.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರಿಗೆ ಬಿಡುಗಡೆ ಮಾಡಲಾಗಿದೆ.
2	ಇದುವರೆವಿಗೂ ರಾಣಿ ಅಬ್ಬಕ್ಕ ಭವನದ ಕಾಮಗಾರಿಗಳು ಪ್ರಾರಂಭವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	• ಹೌದು
3	ಹಾಗಿದ್ದಲ್ಲಿ, ಈ ಕಾಮಗಾರಿಯನ್ನು ಯಾವ ಕಾಲಮಿತಿಯಲ್ಲಿ ಪ್ರಾರಂಭಿಸಿ ಪೂರ್ಣಗೊಳಿಸಲಾಗುವುದು (ವಿವರಗಳನ್ನು ಒದಗಿಸುವುದು)?	• 2017-18ನೇ ಸಾಲಿನಲ್ಲಿ ಸರ್ಕಾರದ ಆದೇಶ ಸಂಖ್ಯೆ: ಕಸಂವಾ 06 ಕಸಧ 2017, ದಿನಾಂಕ: 16.11.2017ರ ಆದೇಶದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನ ಉಲ್ಲಾಳದಲ್ಲಿ ರಾಣಿ ಅಬ್ಬಕ್ಕ ಭವನವನ್ನು ನಿರ್ಮಾಣ ಮಾಡಲು ರೂ. 800.00 ಲಕ್ಷಗಳ ಪರಿಷ್ಕೃತ ಅಂದಾಜು ವೆಚ್ಚಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಪ್ರತಿ ಲಗತ್ತಿಸಿದೆ.

		• ಈ ಹಿನ್ನೆಲೆಯಲ್ಲಿ ಈಗಾಗಲೇ ರೂ. 250.00 ಲಕ್ಷಗಳ ಅನುದಾನವನ್ನು ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರಿಗೆ ಬಿಡುಗಡೆ ಮಾಡಿರುವುದರಿಂದಲೂ ಅನುಷ್ಠಾನಾಧಿಕಾರಿಗಳು ಜಿಲ್ಲಾಧಿಕಾರಿಗಳೇ ಆಗಿರುವುದ ರಿಂದಲೂ ಜಿಲ್ಲಾಧಿಕಾರಿಗಳ ಹಂತದಲ್ಲೇ ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇವರೊಂದಿಗೆ ಒಡಂಬಡಿಕೆ ಮಾಡಿಕೊಂಡು ಕಾಮಗಾರಿ ಪ್ರಾರಂಭಿಸಲು ಕಾರ್ಯಾದೇಶ ನೀಡುವುದರೊಂದಿಗೆ ಮುಂದಿನ ಕ್ರಮ ಕೈಗೊಳ್ಳಲು ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರಿಗೆ ಕಡತ ಸಂಖ್ಯೆ: DKC-25026/3/2015, ದಿನಾಂಕ: 20.01.2021 ರಲ್ಲಿ ಪತ್ರ ಬರೆಯಲಾಗಿದೆ.

ಕಡತ ಸಂಖ್ಯೆ: ಕಸಂವಾ 11 ಕವಿಸ 2021

(ಅರವಿಂದ ಲಿಂಬಾವಳಿ)
ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 842

ಸದಸ್ಯರ ಹೆಸರು : ಶ್ರೀ.ಬಸವರಾಜ್ ದಡೇಸುಗೂರ್ (ಕನಕಗಿರಿ)

ಉತ್ತರಿಸುವ ದಿನಾಂಕ : 04.02.2021

ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
(ಅ)	ಕೊಪ್ಪಳ ಜಿಲ್ಲೆಯ ಕನಕಗಿರಿ ತಾಲ್ಲೂಕಿನ ಸುಳೇಕಲ್ ಗ್ರಾಮಕ್ಕೆ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು 2017 ರಲ್ಲಿಯೇ ಮಂಜೂರಾಗಿದ್ದು, ಇನ್ನೂ ಪ್ರಾರಂಭವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿರುತ್ತದೆ.
(ಆ)	ಹಾಗಿದ್ದಲ್ಲಿ, ಈಗಾಗಲೇ 7ಎಕರೆ ಜಮೀನು ಕೂಡಾ ಮಂಜೂರಾಗಿದ್ದು, ಇಲ್ಲಿಯವರೆಗೂ ಕಾಲೇಜ್ ಪ್ರಾರಂಭವಾಗದಿರಲು ಕಾರಣವೇನು;	ಕೊಪ್ಪಳ ಜಿಲ್ಲೆಯ ಜಿಲ್ಲಾಧಿಕಾರಿಗಳು, ದಿನಾಂಕ: 25/01/2020 ರಲ್ಲಿ ಕೊಪ್ಪಳ ಜಿಲ್ಲೆ, ಕನಕಗಿರಿ ತಾಲ್ಲೂಕಿನ ಸುಳೇಕಲ್ ಗ್ರಾಮದ ಗಾಯರಾಣಾ ಸ.ನಂ.147 ವಿಸ್ತೀರ್ಣ 25-04 ಎಕರೆ ಜಮೀನಿನ ಪೈಕಿ 07-00 ಎಕರೆ ಜಮೀನನ್ನು ಸರ್ಕಾರಿ ಪಾಲಿಟೆಕ್ನಿಕ್, ಕನಕಗಿರಿ ಸಂಸ್ಥೆಗೆ ಮಂಜೂರು ಮಾಡಿ ಆದೇಶಿಸಿರುತ್ತಾರೆ. ಸದರಿ ಜಮೀನಿನ ದಾಖಲೆಗಳ ನಮೂದು ಪ್ರಕ್ರಿಯೆ ಪೂರ್ಣಗೊಂಡು ದಿನಾಂಕ 29/10/2020ರಂದು ಸರ್ಕಾರಿ ಪಾಲಿಟೆಕ್ನಿಕ್, ಕನಕಗಿರಿ ಸಂಸ್ಥೆಯ ವಿಶೇಷಾಧಿಕಾರಿಗಳಿಂದ ಕಟ್ಟಡ ನಿರ್ಮಾಣದ ಮುಂದಿನ ಕ್ರಮಕ್ಕಾಗಿ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಆಯುಕ್ತರ ಕಚೇರಿಗೆ ಪ್ರಸ್ತಾವನೆ ಸಲ್ಲಿಕೆಯಾಗಿದ್ದು, ಸದರಿ ಸಂಸ್ಥೆಯ ಅಂದಾಜು ಮೊತ್ತ ರೂ.800 ಲಕ್ಷ ಮುಖ್ಯಕಟ್ಟಡ ನಿರ್ಮಾಣ ಕಾಮಗಾರಿಯ ಅಂದಾಜು ಪಟ್ಟಿ ಮತ್ತು ನಕ್ಷೆ ತಯಾರಿಕೆಯ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.
(ಇ)	ಸಂಬಂಧಪಟ್ಟ ಅಧಿಕಾರಿಗಳು ಮಾನ್ಯ ಆಯುಕ್ತರ ಕಛೇರಿ ಇವರಿಗೆ ದಿನಾಂಕ: 19/10/2020 ರಂದು ಮುಂದಿನ ಸೂಕ್ತ ಕ್ರಮಕ್ಕಾಗಿ ಪ್ರಸ್ತಾವನೆ ಸಲ್ಲಿಸಿರುವುದು ನಿಜವೇ;	ಹೌದು
(ಈ)	ಹಾಗಿದ್ದಲ್ಲಿ ಇಲ್ಲಿಯವರೆಗೆ ತೆಗೆದು ಕೊಂಡಿರುವ ಕ್ರಮಗಳೇನು; ವಿಳಂಬವಾಗಲು ಕಾರಣವೇನು; ಕ್ರಮಗಳೇನಾದರೂ ತೆಗೆದುಕೊಂಡಿದ್ದರೆ, ತೆಗೆದುಕೊಂಡ ಕ್ರಮದ ಬಗ್ಗೆ ಮಾಹಿತಿ ಒದಗಿಸುವುದು?	ಸರ್ಕಾರದ ಆದೇಶ ಸಂಖ್ಯೆ: ಇಡಿ 75 ಹೆಚ್‌ಪಿಯು 2017 ದಿನಾಂಕ 09/08/2017ರಲ್ಲಿ 2017-18ನೇ ಸಾಲಿನಲ್ಲಿ ಗ್ರಾಮೀಣ, ಹಿಂದುಳಿದ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ತಾಂತ್ರಿಕ ಶಿಕ್ಷಣ ಪಡೆಯುವುದಕ್ಕೆ 25 ಹೊಸ ಸರ್ಕಾರಿ ಪಾಲಿಟೆಕ್ನಿಕ್‌ಗಳನ್ನು ಪ್ರಾರಂಭಿಸಲು ಮಂಜೂರಾತಿ ನೀಡಿ ಆದೇಶಿಸಲಾಗಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ: ಇಡಿ

ಕ್ರ. ಸಂ	ಪ್ರಶ್ನೆ	ಉತ್ತರ
		75 ಹೆಚ್‌ಪಿಯು 2017, ದಿನಾಂಕ 26/12/2017ರಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಕನಕಗಿರಿ ಸಂಸ್ಥೆಯ ಮುಖ್ಯ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಅಂದಾಜು ಮೊತ್ತ ರೂ.800 ಲಕ್ಷ ವೆಚ್ಚದಲ್ಲಿ ಅನುಷ್ಠಾನಗೊಳಸಲು ಮೆ:ರೈಟ್ಸ್ ಸಂಸ್ಥೆಯನ್ನು ನಿರ್ಮಾಣ ಏಜೆನ್ಸಿಯಾಗಿ ನಿಗದಿಪಡಿಸಿ ಆದೇಶಿಸಲಾಗಿರುತ್ತದೆ. ಜಿಲ್ಲಾಧಿಕಾರಿಗಳು, ಕೊಪ್ಪಳ ಜಿಲ್ಲೆ, ಕೊಪ್ಪಳ ಇವರ ಕಚೇರಿ ಆದೇಶ ಸಂಖ್ಯೆ: ಕಂದಾಯ/ಭೂಮಿ/28/29/2018/ಕ.ಸಂ-19011/8166, ದಿನಾಂಕ 25/01/2020 ರಲ್ಲಿ ಕೊಪ್ಪಳ ಜಿಲ್ಲೆ, ಕನಕಗಿರಿ ತಾಲ್ಲೂಕಿನ ಸುಳೇಕಲ್ ಗ್ರಾಮದ ಗಾಯರಾಣಾ ಸ.ನಂ.147 ವಿಸ್ತೀರ್ಣ 25-04 ಎಕರೆ ಜಮೀನಿನ ಪೈಕಿ 07-00 ಎಕರೆ ಜಮೀನನ್ನು ಸರ್ಕಾರಿ ಪಾಲಿಟೆಕ್ನಿಕ್, ಕನಕಗಿರಿ ಸಂಸ್ಥೆಗೆ ಮಂಜೂರು ಮಾಡಿ ಆದೇಶಿಸಿರುತ್ತಾರೆ. ಸದರಿ ಜಮೀನಿನ ದಾಖಲೆಗಳ ನಮೂದು ಪ್ರಕ್ರಿಯೆ ಪೂರ್ಣಗೊಂಡು ಮುಖ್ಯ ಕಟ್ಟಡ ನಿರ್ಮಾಣ ಕಾಮಗಾರಿಯ ಅಂದಾಜು ಪಟ್ಟಿ ನಕ್ಷೆ ತಯಾರಿಕೆಯ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಕಡತ ಸಂಖ್ಯೆ: ಇಡಿ 15 ಹೆಚ್‌ಪಿಟಿ 2020

(ಡಾ: ಅಶ್ವಥ್ ನಾರಾಯಣ ಸಿ.ಎನ್)

ಉಪ ಮುಖ್ಯಮಂತ್ರಿಗಳು ಹಾಗೂ
ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ
ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 860
ಮಾನ್ಯ ಸದಸ್ಯರ ಹೆಸರು	: ಶ್ರೀಮತಿ ಸೌಮ್ಯ ರೆಡ್ಡಿ (ಜಯನಗರ)
ಉತ್ತರಿಸಬೇಕಾದ ದಿನಾಂಕ	: 04-02-2021
ಉತ್ತರಿಸುವ ಸಚಿವರು	: ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಕೋವಿಡ್-19 ರ ಹಿನ್ನಲೆಯಲ್ಲಿ ಸಾಮಾನ್ಯ ಜನರ ಜೀವನ ಅಸ್ಥವ್ಯಸ್ಥಗೊಂಡಿದ್ದರೂ ಸಹ ಖಾಸಗಿ ಆಸ್ಪತ್ರೆಗಳು ಹೆಚ್ಚು ಹಣವನ್ನು ಸಂಗ್ರಹಿಸುತ್ತಿರುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳಾವುವು?	ಸರ್ಕಾರದ ಅಧಿಸೂಚನೆ ಸಂಖ್ಯೆ:ಆಕುಕ 228 ಎಸಿಎಸ್ 2020, ದಿ:23-06-2020 ರಲ್ಲಿ ಕೋವಿಡ್-19 ರೋಗಿಗಳ ಚಿಕಿತ್ಸೆಗಾಗಿ ಪ್ಯಾಕೇಜ್ ದರಗಳನ್ನು ಅನ್ವಯವಾಗುವಂತೆ ಆದೇಶಿಸಿ, ಈ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸುತ್ತೋಲೆಯನ್ನು ಹೊರಡಿಸಲಾಗಿದೆ. ಈ ಆದೇಶವನ್ನು ಪಾಲಿಸದೇ ಇದ್ದಲ್ಲಿ ವಿಪತ್ತು ನಿರ್ವಹಣಾ ಕಾಯ್ದೆ 2005 ಮತ್ತು ಭಾರತೀಯ ದಂಡ ಸಂಹಿತೆಯ ಸಂಬಂಧಿತ ವಿಭಾಗಗಳ ಅಡಿಯಲ್ಲಿ ಶಿಕ್ಷಾರ್ಹವಾಗಿರುತ್ತದೆ. **ಕೋವಿಡ್-19 ಹಿನ್ನೆಲೆಯಲ್ಲಿ ಖಾಸಗಿ ಆಸ್ಪತ್ರೆಗಳಿಗೆ ಈ ಕೆಳಕಂಡಂತೆ ಸೂಚನೆಗಳನ್ನು ನೀಡಲಾಗಿದೆ.** 1) ಕೆಪಿಎಂಇ ಅಧಿನಿಯಮ 2007ರ ಸೆಕ್ಷನ್ 10 ರಲ್ಲಿ **"ವಿಧಿಸುವ ಚಾರ್ಜುಗಳ ಪಟ್ಟಿಯನ್ನು ಪ್ರಕಟಿಸಬೇಕು"** 2) ಪ್ರತಿಯೊಂದು ಖಾಸಗಿ ವೈದ್ಯಕೀಯ ಸಂಸ್ಥೆಯು ರೋಗಿಗಳ ಹಾಗೂ ಸಾಮಾನ್ಯ ಜನರ ತಿಳುವಳಿಕೆಗಾಗಿ ವಿವಿಧ ವೈದ್ಯಕೀಯ ಚಿಕಿತ್ಸೆಗಳಿಗೆ ಮತ್ತು ಇತರ ಸೇವೆಗಳಿಗೆ ಸಂದಾಯ ಮಾಡತಕ್ಕ ಚಾರ್ಜುಗಳ ಪಟ್ಟಿಯನ್ನು ಕಿರುಮಡಿಕೆಗಳು ಅಥವಾ ಕಿರಿಹೊತ್ತಿಗೆಗಳಲ್ಲಿ ಲಭ್ಯವಾಗುವಂತೆ ಮಾಡತಕ್ಕದ್ದು ಮತ್ತು ಅಂತಹ ಚಾರ್ಜು ಪಟ್ಟಿಯನ್ನು ಖಾಸಗಿ ವೈದ್ಯಕೀಯ ಸಂಸ್ಥೆಯ ಸೂಚನಾ ಫಲಕದಲ್ಲಿ ಪ್ರದರ್ಶಿಸತಕ್ಕದ್ದು. ಅಂತಹ ಕಿರುಮಡಿಕೆ ಅಥವಾ ಕಿರಿಹೊತ್ತಿಗೆಯ ಪ್ರತಿಯನ್ನು ನೋಂದಣಿ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು. 3) ಯಾವ ಖಾಸಗಿ ವೈದ್ಯಕೀಯ ಸಂಸ್ಥೆಯು ರೋಗಿಯಿಂದ ಅಥವಾ ಆತನ ಸಂಬಂಧಿಯಿಂದ ಅಥವಾ ಅವರನ್ನು ನೋಡಿಕೊಳ್ಳುವವರಿಂದ ಕಿರುಮಡಿಕೆ ಅಥವಾ ಕಿರಿಹೊತ್ತಿಗೆಯಲ್ಲಿ ಮುದ್ರಿಸಿದ ಚಾರ್ಜಿಗಿಂತ ಹೆಚ್ಚುವರಿಯಾಗಿ ಮತ್ತು ವಿಧಿಸಿದ ಹಾಗೂ ಪಡೆದುಕೊಂಡು ಮೊಬಲಗಿಗೆ ಸರಿಯಾದ ರಸೀದಿಯನ್ನು ನೀಡದೇ ಯಾವುದೇ ಮೊತ್ತವನ್ನು ಸಂಗ್ರಹಿಸತಕ್ಕದ್ದಲ್ಲ. ಈ ನಿಯಮವನ್ನು ಉಲ್ಲಂಘಿಸಿದ್ದಲ್ಲಿ ಕೆಪಿಎಂಇ ಕಾಯ್ದೆಯ ಪ್ರಕಾರ ಕ್ರಮ ಕೈಗೊಳ್ಳಲಾಗುವುದು. ಈ ಹಿನ್ನಲೆಯಲ್ಲಿ ಖಾಸಗೀ ಸಂಸ್ಥೆಗಳು ಕೋವಿಡ್-19 ರೋಗಿಗಳಿಂದ ಹೆಚ್ಚಿನ ದರವನ್ನು ಸಂಗ್ರಹಿಸಿದ್ದಲ್ಲಿ ದೂರನ್ನು ಇ-ಮೇಲ್:- astgrievance@gmail.com ಹಾಗೂ Toll free ದೂರವಾಣಿ ಸಂಖ್ಯೆಗೆ:-1800-425-8330 ಸಂಪರ್ಕಿಸಲು ಸುತ್ತೊಲೆಯನ್ನು ಹೊರಡಿಸಲಾಗಿದೆ. 4) ಹೆಚ್ಚು ಶುಲ್ಕವನ್ನು ಪಾವತಿಸಿಕೊಂಡಿರುವ ಖಾಸಗಿ ಆಸ್ಪತ್ರೆಗಳಿಗೆ ನೋಟಿಸ್ ನೀಡಲಾಗಿದೆ. 5) ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನಲ್ಲಿ ಕೆಲವು ಆಸ್ಪತ್ರೆಗಳು ರೋಗಿಗಳಿಂದ ದುಬಾರಿ ಶುಲ್ಕ ವಸೂಲಿ ಮಾಡಿರುವ ಬಗ್ಗೆ ದೂರುಗಳು ಬಂದಿರುತ್ತವೆ. ಈ ಬಗ್ಗೆ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ವತಿಯಿಂದ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.

		ಎ) ಎಸ್.ಎ.ಎಸ್.ಟಿ ಸಹಾಯವಾಣಿಯಿಂದ ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ ಫಲಾನುಭವಿಗಳಿಗೆ ಕರೆ ಮಾಡಿ ಚಿಕಿತ್ಸೆಯ ಬಗ್ಗೆ ಮಾಹಿತಿ ಪಡೆದು ರೋಗಿಗಳಿಂದ ದೂರು ಪಡೆದು ಅಂಥ ಆಸ್ಪತ್ರೆಗಳಿಗೆ ನೋಟಿಸ್ ಜಾರಿಗೊಳಿಸಲಾಗಿರುತ್ತದೆ. ಬಿ) ಆಸ್ಪತ್ರೆಗಳು ನೀಡುವ ಸಮಜಾಯಿಷಿಯನ್ನು ಪರಿಶೀಲಿಸಿ ಎಬಿ–ಎಆರ್‌ಕೆ/ಕೋವಿಡ್–19 ಮಾರ್ಗಸೂಚಿಗಳನ್ನು ಉಲ್ಲಂಘಿಸುವ ಆಸ್ಪತ್ರೆಗಳಿಗೆ ದಂಡ ವಿಧಿಸಲಾಗುವುದು. ಸಿ) ಹೆಚ್ಚಿನ ಶುಲ್ಕ ಪಡೆದ ಖಾಸಗಿ ಆಸ್ಪತ್ರೆಗಳ ವಿರುದ್ಧ ದೂರು ಬಂದಾಗ ಶುಲ್ಕದ ಪೂರ್ತಿ ಮೊತ್ತವನ್ನು ರೋಗಿಗಳಿಗೆ ಹಿಂದಿರುಗಿಸಲು ಸೂಚಿಸಲಾಗಿದೆ. ಡಿ) ದಿನಾಂಕ: 28/01/2021 ರಂದು ನಡೆದ 'ನೋಂದಾವಣೆ ಮತ್ತು ಶಿಸ್ತುಕ್ರಮ ಸಮಿತಿ' ಸಭೆಯಲ್ಲಿ ಹೆಚ್ಚಿನ ಶುಲ್ಕ ವಸೂಲಿ ಮಾಡುವ ಆಸ್ಪತ್ರೆಗಳ ವಿರುದ್ಧ ಕೆ.ಪಿ.ಎಂ.ಇ ಕಾಯ್ದೆಯಡಿ ಕ್ರಮ ಜರುಗಿಸಲು ಸಂಬಂಧಿಸಿದ ಪ್ರಾಧಿಕಾರಗಳಾದ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ "ಜಿಲ್ಲಾ ಕುಂದುಕೊರತೆ ಪರಿಹಾರ ಸಮಿತಿ" ಹಾಗೂ ಬೆಂಗಳೂರು ವ್ಯಾಪ್ತಿಯಲ್ಲಿ ಬಿ.ಬಿ.ಎಂ.ಪಿ ಆಯುಕ್ತರಿಗೆ ವರ್ಗಾಯಿಸಲು ತೀರ್ಮಾನಿಸಲಾಗಿರುತ್ತದೆ. ಇ) ನೋಟಿಸ್ ನೀಡಿದ ಕೆಲವು ಆಸ್ಪತ್ರೆಗಳು ರೋಗಿಗಳಿಂದ ಹಣ ಪಡೆದಿರುವ ಬಗ್ಗೆ ನಿರಾಕರಣೆ ಮಾಡಿರುತ್ತವೆ. ಈ ಪ್ರಕರಣಗಳನ್ನು ಮೇಲ್ಕಂಡ ಪ್ರಾಧಿಕಾರಗಳಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗುತ್ತಿದೆ. 6) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ, ಬೆಂಗಳೂರು ನಗರ ಜಿಲ್ಲೆಯಲ್ಲಿ ಕೋವಿಡ್–19 ಚಿಕಿತ್ಸೆ ಸಂಬಂಧ ಖಾಸಗಿ ಆಸ್ಪತ್ರೆಗಳು ಹೆಚ್ಚು ಹಣ ಸಂಗ್ರಹ ಮಾಡಿರುವ ಸಂಬಂಧ ಸ್ವೀಕೃತವಾಗಿರುವ ದೂರುಗಳ ತನಿಖೆ ನಡೆಸಲು ಜಿಲ್ಲಾ ಕಾರ್ಯಕ್ರಮಾಧಿಕಾರಿಗಳು ಹಾಗೂ ತಾಲ್ಲೂಕು ವೈದ್ಯಾಧಿಕಾರಿಗಳನ್ನು ನೇಮಿಸಲಾಗಿರುತ್ತದೆ.

ಆಕುಕ 22 ಎಸ್‌ಬಿವಿ 2021

(ಡಾ|| ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 867

ಸದಸ್ಯರ ಹೆಸರು : ಶ್ರೀ ಭೀಮಾ ನಾಯ್ಕ ಎಸ್. (ಹಗರಿಬೊಮ್ಮನಹಳ್ಳಿ)

ಉತ್ತರಿಸುವ ದಿನಾಂಕ : 04.02.2021

ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ
ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ
ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ತಂಬ್ರಹಳ್ಳಿ ಮತ್ತು ಕೊಟ್ಟೂರುಗಳಲ್ಲಿ ಸರ್ಕಾರಿ ಪದವಿ ಕಾಲೇಜು ಇಲ್ಲದೆ ವಿದ್ಯಾರ್ಥಿಗಳಿಗೆ ತೊಂದರೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಬಂದಿದೆ

ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ತಂಬ್ರಹಳ್ಳಿಯಲ್ಲಿ ಹೊಸದಾಗಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾರಂಭಿಸುವ ಬಗ್ಗೆ ಪ್ರಾದೇಶಿಕ ಜಂಟಿ ನಿರ್ದೇಶಕರಿಂದ ಸ್ಥಳ ಪರಿಶೀಲನಾ ವರದಿ ಕೋರಲಾಗಿದೆ.</td></tr>
<tr><td>ಆ)</td><td>ಹಾಗಿದ್ದಲ್ಲಿ, ಸದರಿ ಸ್ಥಳಗಳಲ್ಲಿ ಸರ್ಕಾರಿ ಪದವಿ ಕಾಲೇಜುಗಳನ್ನು ತೆರೆಯುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಪ್ರಸ್ತಾವನೆ ಯಾವ ಹಂತದಲ್ಲಿದೆ ಹಾಗೂ ಯಾವಾಗ ಪ್ರಾರಂಭಿಸಲಾಗುವುದು?(ವಿವರ ನೀಡುವುದು)</td><td>ಕೊಟ್ಟೂರಿನ ಸುತ್ತುಮುತ್ತ ಸರ್ಕಾರಿ ಮತ್ತು ಖಾಸಗಿ ಅನುದಾನಿತ ಕಾಲೇಜುಗಳ ಮತ್ತು ಸದರಿ ಕಾಲೇಜುಗಳಲ್ಲಿ ಲಭ್ಯವಿರುವ ಕೋರ್ಸುಗಳು ಮತ್ತು ವಿರ್ದಾರ್ಥಿಗಳ ಸಂಖ್ಯೆ ಈ ಕೆಳಕಂಡಂತಿದೆ
<table>
<tr><th>ಕಾಲೇಜಿನ ಹೆಸರು</th><th>ಸರ್ಕಾರಿ/ ಅನುದಾನಿತ</th><th>ಅಂತರ ಕಿ.ಮೀ</th><th>ಪ್ರವೇಶ ಪಡೆದಿರುವ ವಿದ್ಯಾರ್ಥಿಗಳ ಸಂಖ್ಯೆ</th><th>ಲಭ್ಯವಿರುವ ಕೋರ್ಸು ಗಳು</th></tr>
<tr><td>ಸ.ಪ್ರ.ದ.ಕಾಲೇಜು, ಕೂಡ್ಲಿಗಿ</td><td>ಸರ್ಕಾರಿ</td><td>21 ಕಿ.ಮೀ</td><td>1077</td><td>ಬಿ.ಎ., ಬಿ.ಎಸ್ಸಿ ಬಿ.ಕಾಂ</td></tr>
</table></td></tr>
</table>

ಕ್ರ. ಸಂ	ಪ್ರಶ್ನೆ	ಉತ್ತರ

ಸ.ಪ್ರ.ದ.ಕಾಲೇಜು ಹರಪ್ಪನಹಳ್ಳಿ	ಸರ್ಕಾರಿ	27 ಕಿ.ಮೀ	1554	ಬಿ.ಎ.,ಬಿ.ಎಸ್ಸಿ ಬಿ.ಕಾಂ, ಬಿಬಿಎಂ
ಸ.ಪ್ರ.ದ.ಕಾಲೇಜು ಹಗರಿಬೊಮ್ಮನಹಳ್ಳಿ	ಸರ್ಕಾರಿ	29 ಕಿ.ಮೀ	2484	ಬಿ.ಎ., .ಎಸ್ಸಿ ಬಿ.ಕಾಂ, ಬಿಬಿಎಂ
ಕೊಟ್ಟೂರೇಶ್ವರ ಪದವಿ ಮಹಾವಿದ್ಯಾಲಯ ಕೊಟ್ಟೂರು	ಅನುದಾನಿತ	-	1757	ಬಿ.ಎ., ಬಿ.ಎಸ್ಸಿ ಬಿ.ಕಾಂ,

ಮೇಲಿನ ಅಂಕಣದಲ್ಲಿ ತಿಳಿಸಿರುವಂತೆ ಕೊಟ್ಟೂರಿನ ಗ್ರಾಮದ ವಿದ್ಯಾರ್ಥಿಗಳು ಗ್ರಾಮದ ಸುತ್ತಮುತ್ತಲಿನ ಕಾಲೇಜುಗಳಲ್ಲಿ ಪ್ರವೇಶ ಪಡೆಯಬಹುದಾಗಿರುತ್ತದೆ.

ಪ್ರಸಕ್ತ ಸಾಲಿನಲ್ಲಿ ಕೋವಿಡ್-19 ಪ್ರಯುಕ್ತ ಆರ್ಥಿಕ ನಿರ್ಬಂಧ ಜಾರಿಯಲ್ಲಿರುವುದರಿಂದ ಹೊಸ ಕಾಲೇಜುಗಳನ್ನು ಪ್ರಾರಂಭಿಸಲಾಗುತ್ತಿಲ್ಲ.

ಕಡತ ಸಂಖ್ಯೆ: ಇಡಿ 15 ಹೆಚ್‌ಪಿಸಿ 2021

(ಡಾ: ಅಶ್ವಥ್ ನಾರಾಯಣ ಸಿ.ಎನ್)
ಉಪ ಮುಖ್ಯಮಂತ್ರಿಗಳು ಹಾಗೂ
ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ
ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 871
ಸದಸ್ಯರ ಹೆಸರು : ಶ್ರೀ ವೆಂಕಟ್‌ರಾವ್ ನಾಡಗೌಡ
ಉತ್ತರಿಸುವ ದಿನಾಂಕ : 04.02.2021.
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ ಮೂರು ವರ್ಷಗಳಿಂದ SC/ST ನಿಗಮಗಳಿಂದ ಭೂ ರೈತರಿಗೆ ಹಂಚಿಕೆ ಮಾಡಲು ಸಿಂಧನೂರು ತಾಲ್ಲೂಕಿನಲ್ಲಿ ಖರೀದಿ ಮಾಡಿದ ಜಮೀನು ಎಷ್ಟು;</td><td>ಕಳೆದ ಮೂರು ವರ್ಷಗಳಲ್ಲಿ ಪರಿಶಿಷ್ಟ ಜಾತಿಯ ಭೂ ರಹಿತ ರೈತರಿಗೆ ಹಂಚಿಕೆ ಮಾಡಲು ಸಿಂಧನೂರು ತಾಲ್ಲೂಕಿನಲ್ಲಿ ಖರೀದಿ ಮಾಡಿದ ಜಮೀನುಗಳ ವಿವರ ಕೆಳಕಂಡಂತಿದೆ.
ಡಾ: ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ
(ರೂ.ಲಕ್ಷಗಳಲ್ಲಿ)
<table>
<tr><th>ವರ್ಷ</th><th>ಫಲಾನುಭವಿಗಳ ಸಂಖ್ಯೆ</th><th>ಎಕರೆ</th><th>ಮೊತ್ತ</th></tr>
<tr><td>2017-18</td><td>-</td><td>-</td><td>-</td></tr>
<tr><td>2018-19</td><td>-</td><td>-</td><td>-</td></tr>
<tr><td>2019-20</td><td>60</td><td>60.01</td><td>895.13</td></tr>
<tr><td>ಒಟ್ಟು</td><td>60</td><td>60.01</td><td>895.13</td></tr>
</table>
ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ
(ರೂ.ಲಕ್ಷಗಳಲ್ಲಿ)
<table>
<tr><th>ವರ್ಷ</th><th>ಫಲಾನುಭವಿಗಳ ಸಂಖ್ಯೆ</th><th>ಎಕರೆ</th><th>ಮೊತ್ತ</th></tr>
<tr><td>2017-18</td><td>05</td><td>5-04</td><td>35.70</td></tr>
<tr><td>2018-19</td><td>70</td><td>87-26</td><td>994.03</td></tr>
<tr><td>2019-20</td><td>36</td><td>39-26</td><td>511.22</td></tr>
<tr><td>ಒಟ್ಟು</td><td>111</td><td>132-16</td><td>1540.95</td></tr>
</table>
</td></tr>
<tr><td>ಆ)</td><td>ಈ ಭೂ ಖರೀದಿಯಲ್ಲಿ ಹಾಗೂ ಫಲಾನುಭವಿಗಳ ಆಯ್ಕೆಯಲ್ಲಿ ನಡೆದಿರುವ ಅವ್ಯವಹಾರ ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ತೆಗೆದುಕೊಂಡಿರುವ ಕ್ರಮಗಳೇನು;</td><td>ಹೌದು.
ಭೂ ಒಡೆತನ ಅನುಷ್ಠಾನದಲ್ಲಿ ಭ್ರಷ್ಟಾಚಾರ ಆರೋಪ ಕುರಿತಂತೆ, ಭ್ರಷ್ಟಾಚಾರ ನಿಗ್ರಹ ದಳವು ದಿನಾಂಕ:27.08.2020 ರಂದು ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಕೇಂದ್ರ ಕಛೇರಿಯ ಮೇಲೆ ದಾಳಿ ನಡೆಸಿ ಭ್ರಷ್ಟಾಚಾರ ಪ್ರಕರಣದಲ್ಲಿ ಭಾಗಿಯಾಗಿದ್ದರೆಂದು ಹೇಳಲಾದ ಇಬ್ಬರು ಅಧಿಕಾರಿಗಳು ಮತ್ತು ಒಬ್ಬ ಸಿಬ್ಬಂದಿಯನ್ನು ದಸ್ತಗಿರಿ ಮಾಡಿ ತನಿಖೆ ಕೈಗೊಂಡಿರುತ್ತಾರೆ. ಸದರಿ ಎರಡು ಅಧಿಕಾರಿಗಳನ್ನು ಸರ್ಕಾರದ ಹಂತದಲ್ಲಿ ಇಲಾಖಾ ವಿಚಾರಣೆ / ಕ್ರಿಮಿನಲ್ ಮೊಕದಮೆ ಕಾಯ್ದಿರಿಸಿ ಸೇವೆಯಿಂದ ಅಮಾನತ್ತುಗೊಳಿಸಲಾಗಿರುತ್ತದೆ. ಮೊತ್ತೊಬ್ಬ ಆರೋಪಿತ ನೌಕರನನ್ನು ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಮುಖ್ಯಸ್ಥರು ಇಲಾಖಾ ವಿಚಾರಣೆ / ಕ್ರಿಮಿನಲ್ ಮೊಕದಮೆ ಕಾಯ್ದಿರಿಸಿ ಸೇವೆಯಿಂದ ಅಮಾನತ್ತುಗೊಳಿಸಿರುತ್ತಾರೆ.</td></tr>
</table>

ಇ)	ಭೂ ಖರೀದಿ ಮತ್ತು ಆಯ್ಕೆಗೆ ರಚಿಸಿರುವ ಸಮಿತಿ ಯಾವುದು; ಹಾಗೂ ಈ ಸಮಿತಿ ರಚನೆಯನ್ನು ಸ್ಥಳೀಯ ಶಾಸಕರ ಗಮನಕ್ಕೆ ತರಲಾಗುವುದೇ?	ಭೂ ಒಡೆತನ ಯೋಜನೆಯಡಿ ಭೂಮಿ ಖರೀದಿಗಾಗಲೀ ಮತ್ತು ಆಯ್ಕೆಗಾಗಲೀ ಯಾವುದೇ ಸಮಿತಿ ರಚಿಸಿಲ್ಲ. ಆದರೆ ಈ ಯೋಜನೆಯಡಿ ಖರೀದಿಸಲಾಗುವ ಜಮೀನಿಗೆ ಖರೀದಿ ದರವನ್ನು ನಿಗಧಿಪಡಿಸುವ ಸಲುವಾಗಿ ಪ್ರತಿ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಯೋಜನಾ ಅನುಷ್ಠಾನ ಸಮಿತಿಯನ್ನು ರಚಿಸಲಾಗಿರುತ್ತದೆ.

ಸಂಖ್ಯೆ: ಸಕಇ 22 ಆರ್&ಐ 2021

(ಬಿ.ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನಸಭೆ

(15ನೇ ವಿಧಾನಸಭೆ, 9ನೇ ಅಧಿವೇಶನ)

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	874
2) ಸದಸ್ಯರ ಹೆಸರು	:	ಶ್ರೀನಿರಂಜನ್‌ಕುಮಾರ್ ಸಿ.ಎಸ್. (ಗುಂಡ್ಲುಪೇಟೆ)
3) ಉತ್ತರಿಸುವ ದಿನಾಂಕ	:	04.02.2021.
4) ಉತ್ತರಿಸುವವರು	:	ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಗುಂಡ್ಲುಪೇಟೆ ಕ್ಷೇತ್ರದ ವ್ಯಾಪ್ತಿಯಲ್ಲಿ ಮಾನವ ಮತ್ತು ವನ್ಯಪ್ರಾಣಿ ಸಂಘರ್ಷ ತಡೆಗಟ್ಟಲು ಈಗಾಗಲೇ ಎಷ್ಟು ಕಿಲೋ ಮೀಟರ್ ರೈಲ್ವೆ ಬ್ಯಾರಿಕೇಡ್ ನಿರ್ಮಾಣ ಮಾಡಲಾಗಿದೆ; (ವಲಯವಾರು ಮಾಹಿತಿ ನೀಡುವುದು)</td><td>ಗುಂಡ್ಲುಪೇಟೆ ಕ್ಷೇತ್ರ ವ್ಯಾಪ್ತಿಯಲ್ಲಿ ಮಾನವ-ವನ್ಯಪ್ರಾಣಿ ಸಂಘರ್ಷ ತಡೆಗಟ್ಟುವುದಕ್ಕಾಗಿ ಇದುವರೆಗೆ ನಿರ್ಮಿಸಲಾದ ವಲಯವಾರು ರೈಲ್ವೆ ಬ್ಯಾರಿಕೇಡ್‌ನ ವಿವರಗಳು ಈ ಕೆಳಕಂಡಂತಿದೆ.
<table><tr><th>ಕ್ರ ಸಂ</th><th>ವಲಯ</th><th>ನಿರ್ಮಾಣ ಮಾಡಿರುವ ರೈಲ್ವೇ ಬ್ಯಾರಿಕೇಡ್‌ನ ಪರಿಮಾಣ (ಕಿ.ಮೀ.ಗಳಲ್ಲಿ)</th></tr><tr><td>1</td><td>ಓಂಕಾರ ವಲಯ</td><td>13.389</td></tr><tr><td>2</td><td>ಜಿ.ಎಸ್ ಬೆಟ್ಟ ವಲಯ</td><td>0.686</td></tr><tr><td>3</td><td>ಮದ್ದೂರು ವಲಯ</td><td>0.495</td></tr><tr><td colspan="2">ಒಟ್ಟು</td><td>14.57</td></tr></table></td></tr>
<tr><td>ಆ)</td><td>ಗುಂಡ್ಲುಪೇಟೆ ಕ್ಷೇತ್ರದ ವ್ಯಾಪ್ತಿಯಲ್ಲಿ ಮಾನವ ಮತ್ತು ವನ್ಯಪ್ರಾಣಿ ಸಂಘರ್ಷ ತಡೆಗಟ್ಟಲು ಹೊಸದಾಗಿ ರೈಲ್ವೆ ಬ್ಯಾರಿಕೇಡ್ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಬಂದಿದೆ.

ಮಾನವ ಮತ್ತು ವನ್ಯಪ್ರಾಣಿ ಸಂಘರ್ಷ ತಡೆಗಟ್ಟಲು ಹೊಸದಾಗಿ ಈ ಕೆಳಕಂಡ ವಲಯಗಳಲ್ಲಿ ರೈಲ್ವೆ ಬ್ಯಾರಿಕೇಡ್ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ.
<table><tr><th>ಕ್ರ ಸಂ</th><th>ವಲಯ</th><th>ಹೊಸದಾಗಿ ಉದ್ದೇಶಿಸಿರುವ ರೈಲ್ವೇ ಬ್ಯಾರಿಕೇಡ್‌ನ ವಿವರ (ಕಿ.ಮೀ., ಗಳಲ್ಲಿ)</th></tr><tr><td>1</td><td>ಕುಂದುಕೆರೆ ವಲಯ</td><td>6.058</td></tr><tr><td>2</td><td>ಜಿ.ಎಸ್ ಬೆಟ್ಟ ವಲಯ</td><td>1.700</td></tr><tr><td>3</td><td>ಮದ್ದೂರು ವಲಯ</td><td>1.950</td></tr></table></td></tr>
</table>

ಕ್ರಸಂ	ಪ್ರಶ್ನೆ	ಉತ್ತರ
ಇ)	ಬಂದಿದ್ದಲ್ಲಿ, ಯಾವಾಗ ರೈಲ್ವೆ ಬ್ಯಾರಿಕೇಡ್ ನಿರ್ಮಾಣ ಮಾಡಲಾಗುವುದು? (ಸಂಪೂರ್ಣ ಮಾಹಿತಿ ನೀಡುವುದು)	2019-20ನೇ ಸಾಲಿನ ಆಯವ್ಯಯ ಭಾಷಣದಲ್ಲಿ **"ಉಪಯೋಗಿಸಿದ ರೈಲು ಹಳಿ ತಡೆಗೋಡೆಯಿಂದ ಮಾನವ-ಆನೆ ಸಂಘರ್ಷ ನಿಯಂತ್ರಣ"** ಎಂಬ ಹೊಸ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದ್ದು, ಸದರಿ ಆದೇಶ ದಿನಾಂಕ: 16.10.2019ರಲ್ಲಿ 118 ಕಿ.ಮೀ. ರೈಲ್ವೆ ಬ್ಯಾರಿಕೇಡ್ ನಿರ್ಮಾಣಕ್ಕಾಗಿ ರೂ.100.00 ಕೋಟಿಗಳ ವೆಚ್ಚಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡಿದ್ದು, ಅದರನ್ವಯ ಸೂಕ್ಷ್ಮ ಪ್ರದೇಶಗಳಲ್ಲಿ ರೈಲ್ವೆ ಬ್ಯಾರಿಕೇಡ್ ನಿರ್ಮಾಣಕ್ಕಾಗಿ ಭೌತಿಕ/ಆರ್ಥಿಕ ಗುರಿಯನ್ನು ನಿಗದಿಪಡಿಸಲಾಗಿರುತ್ತದೆ. 2019-20ನೇ ಸಾಲಿಗೆ ರೂ.50.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದ್ದು, ಪ್ರಸಕ್ತ ಸಾಲಿಗೆ ರೂ.50.00 ಕೋಟಿಗಳ ಅನುದಾನ ನಿಗದಿಪಡಿಸಲಾಗಿರುತ್ತದೆ. ಇದು ಮುಂದುವರೆದ ಕಾಮಗಾರಿ ಆಗಿರುವುದರಿಂದ ಪೂರ್ಣಗೊಂಡ ಕಾಮಗಾರಿಗಳಿಗೆ ವೆಚ್ಚ ಭರಿಸಲು ಕ್ರಮಕೈಗೊಳ್ಳಲಾಗಿದೆ. 2020-21ನೇ ಸಾಲಿಗೆ ಯಾವುದೇ ಹೊಸ ಕಾಮಗಾರಿಗೆ ಅನುದಾನ ಬಿಡುಗಡೆಯಾಗದೇ ಇರುವುದರಿಂದ ಪ್ರಸ್ತುತ ಭೌತಿಕ ಗುರಿಯನ್ನು ನಿಗದಿಪಡಿಸಿರುವುದಿಲ್ಲ.

ಸಂಖ್ಯೆ: ಅಪಜೀ 24 ಎಫ್‌ಡಬ್ಲ್ಯೂಎಲ್ 2021

(ಅರವಿಂದ ಲಿಂಬಾವಳಿ)
ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	877
ಮಾನ್ಯ ಸದಸ್ಯರ ಹೆಸರು	:	ಶ್ರೀ ಹೂಲಗೇರಿ ಡಿ.ಎಸ್. (ಲಿಂಗಸುಗೂರು)
ಉತ್ತರಿಸಬೇಕಾದ ದಿನಾಂಕ	:	4-2-2021
ಉತ್ತರಿಸುವ ಸಚಿವರು	:	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
1	ರಾಯಚೂರು ಜಿಲ್ಲೆಯ ಲಿಂಗಸುಗೂರು ಪಟ್ಟಣದಲ್ಲಿ 60 ಹಾಸಿಗೆಗಳ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಪ್ರಾರಂಭಿಸಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು;	ರಾಯಚೂರು ಜಿಲ್ಲೆಯ ಲಿಂಗಸುಗೂರು ಪಟ್ಟಣದಲ್ಲಿ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಅವಶ್ಯಕತೆ ಹಾಗೂ ಅನುದಾನದ ಲಭ್ಯತೆಗೆ ಅನುಗುಣವಾಗಿ ಆದ್ಯತೆ ಮೇಲೆ ಮುಂಬರುವ ವರ್ಷಗಳಲ್ಲಿ ಕ್ರಮವಹಿಸಲಾಗುವುದು.
2	ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನಲ್ಲಿ ಬರುವ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು;	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ತಜ್ಞರು/ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ/ದಂತ ಆರೋಗ್ಯಾಧಿಕಾರಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಪ್ರಕ್ರಿಯೆ ಜಾರಿಯಲ್ಲಿದ್ದು, ವಿಶೇಷ ನೇಮಕಾತಿ ಸಮಿತಿಯಿಂದ ನೇರ ನೇಮಕಾತಿ ಮುಖಾಂತರ 824 ತಜ್ಞ ವೈದ್ಯರು (ಬ್ಯಾಕ್‌ಲಾಗ್ ಒಳಗೊಂಡಂತೆ) ಹಾಗೂ 1246 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲು ಅಧಿಸೂಚನೆ ಹೊರಡಿಸಿ, ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿರುತ್ತದೆ. ಈಗಾಗಲೇ ದಾಖಲೆಗಳ ಪರಿಶೀಲನೆ ಮುಗಿದಿದ್ದು, ತಾತ್ಕಾಲಿಕ ಪಟ್ಟಿಯನ್ನು ಪ್ರಚುರಪಡಿಸುವ ಹಂತದಲ್ಲಿದೆ.
3	ಲಿಂಗಸುಗೂರು ತಾಲ್ಲೂಕಿನ ಮಾವಿನಭಾವಿಯ ANM ಉಪಕೇಂದ್ರಗಳ ಕಟ್ಟಡ ಕಾಮಗಾರಿಯು ಯಾವ ಹಂತದಲ್ಲಿ ಇದೆ?	2017-18ನೇ ಸಾಲಿನ ಎನ್.ಹೆಚ್.ಎಂ. ಯೋಜನೆಯಡಿಯಲ್ಲಿ ಲಿಂಗಸುಗೂರು ತಾಲ್ಲೂಕಿನ ಮೆದಿಕಿನಾಳ್ ಗ್ರಾಮದಲ್ಲಿ ಎ.ಎನ್.ಎಂ. ಉಪಕೇಂದ್ರ ಕಟ್ಟಡ ಕಾಮಗಾರಿ ಕೈಗೊಳ್ಳಲು ಅನುಮೋದನೆಯಾಗಿರುತ್ತದೆ. ನಿಯಾಮಾನುಸಾರ ಟೆಂಡರ್ ಆಧಾರದ ಮೇಲೆ ಕಾಮಗಾರಿಯನ್ನು ಕೈಗೊಂಡು ಕಾರ್ಯದೇಶವನ್ನು ದಿ: 31-12-2018 ರಂದು ನೀಡಲಾಗಿರುತ್ತದೆ.

		ಆದರೆ, ಮೆದಿಕಿನಾಳ್ ಗ್ರಾಮದಲ್ಲಿ ನಿವೇಶನ ಲಭ್ಯವಿಲ್ಲದಿರುವುದರಿಂದ ಮೆದಿಕಿನಾಳ್ ಗ್ರಾಮದ ಬದಲಾಗಿ ಮಾವಿನಭಾವಿ ಗ್ರಾಮದಲ್ಲಿ ಎ.ಎನ್.ಎಂ ಕಟ್ಟಡ ನಿರ್ಮಿಸಲು ಅನುಮೋದನೆ ನೀಡಲಾಗಿದೆ.

ಆಕುಕ 19 ಎಸ್.ಎಂ.ಎಂ. 2021

(ಡಾ: ಕೆ.ಸುಧಾಕರ್)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ

ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	894
ಸದಸ್ಯರ ಹೆಸರು	:	ಶ್ರೀ ರಾಜೇಗೌಡ ಟಿ.ಡಿ (ಶೃಂಗೇರಿ)
ಉತ್ತರಿಸಬೇಕಾದ ದಿನಾಂಕ	:	04.02.2021
ಉತ್ತರಿಸುವ ಸಚಿವರು	:	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕ್ರಸ	ಪ್ರಶ್ನೆ	ಉತ್ತರ
ಅ)	2019–20ನೇ ಸಾಲಿನಲ್ಲಿ ಭೀಕರ ಅತಿವೃಷ್ಟಿಯಿಂದ ಹಲವಾರು ಶಾಲಾ ಕೊಠಡಿಗಳು ತೀವ್ರವಾಗಿ ಹಾನಿಗೊಳಗಾಗಿದ್ದು, ಈ ಹಿನ್ನೆಲೆಯಲ್ಲಿ 26 ಜಿಲ್ಲೆಗಳ 3386 ಸರ್ಕಾರಿ ಶಾಲೆಗಳ 6469 ಶಾಲಾ ಕೊಠಡಿಗಳ ಕಾಮಗಾರಿಗಳನ್ನು ನಬಾರ್ಡ್ ಸಹಯೋಗದೊಂದಿಗೆ 758 ಕೋಟಿ ರೂ. ವೆಚ್ಚದಲ್ಲಿ ಕೈಗೊಳ್ಳಲಾಗುವುದೆಂದು 2020–21ನೇ ಸಾಲಿನ ಆಯವ್ಯಯದಲ್ಲಿ ಪ್ರಸ್ತಾಪಿಸಲಾಗಿದ್ದು, ಪ್ರಸ್ತುತ ಎಷ್ಟು ಶಾಲಾ ಕೊಠಡಿಗಳ ಕಾಮಗಾರಿಗಳು ಪೂರ್ಣಗೊಂಡಿವೆ, ಇದಕ್ಕಾಗಿ ಖರ್ಚಾಗುತ್ತಿರುವ ವೆಚ್ಚವೆಷ್ಟು;	2019–20ನೇ ಸಾಲಿಗೆ, ರಾಜ್ಯದ ಅಧಿಕ ಮಳೆಯಿಂದ ಹಾನಿಗೊಳಗಾದ ದುರಸ್ಥಿ ಮಾಡಲು ಸಾಧ್ಯವಾಗದ ಪುನರ್ ನಿರ್ಮಾಣ ಮಾಡಬೇಕಾದ 3386 ಶಾಲೆಗಳ 6469 ಕೊಠಡಿಗಳನ್ನು ನಬಾರ್ಡ್ ಸಹಯೋಗದೊಂದಿಗೆ ಆರ್.ಐ.ಡಿ.ಎಫ್–25 ಯೋಜನೆಯಡಿ ಪುನರ್ ನಿರ್ಮಾಣಕ್ಕಾಗಿ ರೂ.75807.30 ಲಕ್ಷಗಳಿಗೆ, ಸರ್ಕಾರದ ಆದೇಶ ಸಂಖ್ಯೆ ಇಪಿ 120 ಯೋಸಕ 2019 ದಿನಾಂಕ:18.02.2020ರ ಮೂಲಕ ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಲಾಗಿರುತ್ತದೆ. ಈ ಪೈಕಿ 22 ಜಿಲ್ಲೆಗಳಿಂದ 197 ಶಾಲೆಗಳಲ್ಲಿ 326 ಕೊಠಡಿಗಳು ಬೇರೆ ಯೋಜನೆಯಡಿ ಮಂಜೂರಾಗಿದ್ದು, ಮರು ನಿರ್ಮಾಣದ ಅಗತ್ಯವಿಲ್ಲವೆಂದು ಸಂಬಂಧಪಟ್ಟ ಜಿಲ್ಲಾ ಉಪ ನಿರ್ದೇಶಕರುಗಳು ವರದಿ ಸಲ್ಲಿಸಿದ್ದರಿಂದ, ಸದರಿ ಕಾಮಗಾರಿಗಳ ಬದಲಾವಣೆಗೆ ಸಂಬಂಧಿಸಿದಂತೆ ನಬಾರ್ಡ್‌ಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. 3243 ಶಾಲೆಗಳ 6143 ಕೊಠಡಿಗಳಿಗೆ ರೂ.71865.00 ಲಕ್ಷಗಳ ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆ ಮೂಲಕ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ. ಕೊಠಡಿಗಳ ಮರು ನಿರ್ಮಾಣಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡಲಾದ **3243** ಶಾಲಾ ಕಟ್ಟಡ ಕಾಮಗಾರಿಗಳ ಪೈಕಿ 2901 ಶಾಲಾ ಕಟ್ಟಡ ಕಾಮಗಾರಿಗಳು

		ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿದ್ದು, 286 ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. ಉಳಿದ 42 ಶಾಲಾ ಕಟ್ಟಡ ಕಾಮಗಾರಿಗಳನ್ನು ಪ್ರಾರಂಭಿಸಬೇಕಾಗಿರುತ್ತದೆ. 2020-21ನೇ ಸಾಲಿಗೆ ಒದಗಿಸಲಾದ ರೂ.250.00 ಕೋಟಿ ಅನುದಾನವನ್ನು ಸಂಬಂಧಪಟ್ಟ ಜಿಲ್ಲಾ ಉಪನಿರ್ದೇಶಕರುಗಳಿಗೆ ಬಿಡುಗಡೆ ಮಾಡಲಾಗಿದ್ದು, ಈ ಪೈಕಿ ರೂ.237.05 ಕೋಟಿಗಳನ್ನು ಅನುಷ್ಠಾನ ಏಜೆನ್ಸಿಗೆ ಬಿಡುಗಡೆ ಮಾಡಲಾಗಿರುತ್ತದೆ.
ಆ)	ಕಾಮಗಾರಿಗಳನ್ನು ಇನ್ನೂ ಪ್ರಾರಂಭಿಸದೇ ಇದ್ದಲ್ಲಿ ವಿಳಂಬಕ್ಕೆ ಕಾರಣಗಳೇನು;	ನಿವೇಶನ ಸಮಸ್ಯೆ, ಟೆಂಡರ್ ಪ್ರಕ್ರಿಯೆಯ ತಾಂತ್ರಿಕ ಕಾರಣ, ಇತ್ಯಾದಿ ಕಾರಣಗಳಿಂದ 42 ಶಾಲಾ ಕಟ್ಟಡ ಕಾಮಗಾರಿಗಳು ವಿಳಂಬವಾಗಿರುತ್ತವೆ.
ಇ)	ಯಾವಾಗ ಈ ಕಾಮಗಾರಿಗಳು ಪೂರ್ಣಗೊಳ್ಳುವುವು? (ಸಂಪೂರ್ಣ ವರದಿ ನೀಡುವುದು	ಸದರಿ ಕಾಮಗಾರಿಗಳನ್ನು ಆರು ತಿಂಗಳಲ್ಲಿ ಪೂರ್ಣಗೊಳಿಸಲು ಕ್ರಮವಹಿಸಲಾಗಿದೆ.

ಇಪಿ 34 ಯೋಸಕ 2020

(ಎಸ್.ಸುರೇಶ್ ಕುಮಾರ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 901
ವಿಧಾನಸಭೆ ಸದಸ್ಯರ ಹೆಸರು : ಶ್ರೀ ಅಪ್ಪಚ್ಚು (ರಂಜನ್) ಎಂ.ಪಿ.
ಉತ್ತರಿಸುವ ದಿನಾಂಕ : 04-02-2021
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು.

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ ಮೂರು ವರ್ಷಗಳಿಂದ ಕೊಡಗು ಜಿಲ್ಲೆಗೆ ಪರಿಶಿಷ್ಟ ಜಾತಿ ಮತ್ತು ಪಂಗಡದ ಕಾಲೋನಿ ಅಭಿವೃದ್ಧಿಗೆ ಎಷ್ಟು ಅನುದಾನ ಮಂಜೂರು ಮಾಡಲಾಗಿದೆ; (ಕ್ಷೇತ್ರವಾರು ವಿವರ ನೀಡುವುದು)</td><td>ಸಮಾಜ ಕಲ್ಯಾಣ ಇಲಾಖೆ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಕಳೆದ ಮೂರು ವರ್ಷಗಳಲ್ಲಿ ಕೊಡಗು ಜಿಲ್ಲಾ ವ್ಯಾಪ್ತಿಯಲ್ಲಿನ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ವ್ಯಾಪ್ತಿಯಲ್ಲಿನ ಕಾಲೋನಿಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಮಂಜೂರು ಮಾಡಿರುವ ಅನುದಾನದ ಕ್ಷೇತ್ರವಾರು ವಿವರ ಈ ಕೆಳಕಂಡಂತಿದೆ.
(ರೂ. ಲಕ್ಷಗಳಲ್ಲಿ)
<table>
<tr><th>ವಿಧಾನಸಭಾ ಕ್ಷೇತ್ರ</th><th>ಮಂಜೂರಾತಿ ಮೊತ್ತ</th></tr>
<tr><td>ವಿರಾಜಪೇಟೆ</td><td>435.00</td></tr>
<tr><td>ಕೊಡಗು</td><td>10.00</td></tr>
<tr><td>ಮಡಿಕೇರಿ</td><td>1115.00</td></tr>
<tr><td>ಒಟ್ಟು</td><td>1560.00</td></tr>
</table></td></tr>
<tr><td>ಆ)</td><td>ಮಡಿಕೇರಿ ವಿಧಾನಸಭಾ ಕ್ಷೇತ್ರದಲ್ಲಿನ ಕೆಲವು ಕಾಲೋನಿಗಳು ಮೂಲಭೂತ ಸೌಲಭ್ಯದಿಂದ ವಂಚಿತವಾಗಿದ್ದು ಈ ಬಗ್ಗೆ ಸರ್ಕಾರಕ್ಕೆ ಹೆಚ್ಚುವರಿ ಅನುದಾನ ಕೋರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td rowspan="2">ಹೆಚ್ಚುವರಿ ಅನುದಾನ ಕೋರಿ ಪ್ರಸ್ತಾವನೆ ಸ್ವೀಕೃತಗೊಂಡಿರುವುದಿಲ್ಲ.</td></tr>
<tr><td>ಇ)</td><td>ಯಾವಾಗ ಅನುದಾನ ಮಂಜೂರು ಮಾಡಲಾಗುವುದು;</td></tr>
<tr><td>ಈ)</td><td>ಕೊಡಗು ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಿಂದ ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಯಾವ ಯಾವ ಗ್ರಾಮಕ್ಕೆ ಎಷ್ಟೆಷ್ಟು ಅನುದಾನ ಮಂಜೂರಾಗಿದೆ; (ಕ್ಷೇತ್ರವಾರು ವಿವರ ನೀಡುವುದು)</td><td>ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ 2017-18ನೇ ಸಾಲಿನಿಂದ 2019-20ನೇ ಸಾಲಿನವರೆಗೆ ಕೊಡಗು ಜಿಲ್ಲೆಗೆ ಮಂಜೂರಾದ ಡಾ॥ ಬಿ.ಆರ್ ಅಂಬೇಡ್ಕರ್ ಭವನಗಳ ವಿವರ ಈ ಕೆಳಕಂಡಂತಿದೆ.
(ರೂ.ಲಕ್ಷಗಳಲ್ಲಿ)
<table>
<tr><th>ಕ್ರ. ಸಂ</th><th>ವಿಧಾನಸಭಾ ಕ್ಷೇತ್ರ</th><th>ಗ್ರಾಮ / ಹೋಬಳಿ ವಿವರ</th><th>ಮಂಜೂರಾತಿ ಮೊತ್ತ</th></tr>
<tr><td>1</td><td rowspan="3">ಮಡಿಕೇರಿ</td><td>ಹುಲುಸೆ</td><td>12.00</td></tr>
<tr><td>2</td><td>ಕೊಡ್ಲಿಪೇಟೆ ಹೋಬಳಿ ಕೇಂದ್ರ</td><td>50.00</td></tr>
<tr><td>3</td><td>ಹೆಬ್ಬಾಲೆ</td><td>25.00</td></tr>
<tr><td colspan="3">ಒಟ್ಟು</td><td>87.00</td></tr>
</table></td></tr>
</table>

ಉ)	ಸೋಮವಾರಪೇಟೆ ತಾಲ್ಲೂಕಿನ ಬಾಣವಾರ ಗ್ರಾಮದಲ್ಲಿ ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಜಾಗ ಮೀಸಲಿಟ್ಟಿದ್ದು. ಇದಕ್ಕಾಗಿ ಸರ್ಕಾರ ಎಷ್ಟು ಅನುದಾನ ಮಂಜೂರು ಮಾಡಿದೆ: (ಪೂರ್ಣ ವಿವರ ನೀಡುವುದು)	ರಾಜ್ಯದಲ್ಲಿ ಕೋವಿಡ್-19 ಹರಡಿದ ಹಿನ್ನೆಲೆಯಲ್ಲಿ ಲಾಕ್‌ಡೌನ್ ಘೋಷಣೆಯಾದ ನಂತರ ಆರ್ಥಿಕ ಪರಿಸ್ಥಿತಿ ಕುಂಠಿತಗೊಂಡಿದ್ದು. ಯಾವುದೇ ಹೊಸ ಭವನಗಳಿಗೆ ಅನುದಾನ ಬಿಡುಗಡೆ ಮಾಡಲು ಅನುದಾನದ ಕೊರತೆಯಾಗಿರುತ್ತದೆ. ಮುಂದಿನ ದಿನಗಳಲ್ಲಿ ಆರ್ಥಿಕ ಪುನರ್‌ಶ್ಚೇತನದ ನಂತರ ಈ ಉದ್ದೇಶಕ್ಕಾಗಿ ಇಲಾಖೆಗೆ ಬಿಡುಗಡೆಯಾಗುವ ಅನುದಾನದ ಲಭ್ಯತೆಯನ್ನು ಆಧರಿಸಿ ಸೋಮವಾರಪೇಟೆ ತಾಲ್ಲೂಕಿನ ಬಾಣವಾರ ಗ್ರಾಮದಲ್ಲಿ ಡಾ: ಬಿ.ಆರ್. ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡಲು ಪರಿಶೀಲಿಸಲಾಗುವುದು.
ಊ)	ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಇರುವ ಮಾನದಂಡಗಳೇನು?	ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಪರಿಶಿಷ್ಟ ಜಾತಿ ಜನಾಂಗದವರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುವ ಗ್ರಾಮ. ಹೋಬಳಿ. ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರ ಸ್ಥಾನಗಳಲ್ಲಿ ಸಭೆ. ಸಮಾರಂಭ. ಮದುವೆ ಮತ್ತು ಇತರೆ ಕಾರ್ಯಕ್ರಮಗಳನ್ನು ನಡೆಸಲು ಅನುಕೂಲವಾಗುವ ಹಿತದೃಷ್ಟಿಯಿಂದ ಡಾ॥ ಬಿ.ಆರ್. ಅಂಬೇಡ್ಕರ್ / ಡಾ॥ ಬಾಬು ಜಗಜೀವನರಾಮ್ ಸಮುದಾಯ ಭವನಗಳನ್ನು ನಿರ್ಮಿಸಲು ಅವಕಾಶ ಕಲ್ಪಿಸಲಾಗಿದೆ. ಸರ್ಕಾರದ ಆದೇಶ ಸಂಖ್ಯೆ: ಸಕಇ 338 ಪಕವಿ 2018. ದಿನಾಂಕ:25-03-2019 ರಲ್ಲಿ ಡಾ॥ಬಿ.ಆರ್ ಅಂಬೇಡ್ಕರ್/ ಡಾ॥ ಬಾಬು ಜಗಜೀವನರಾಮ್ ಸಮುದಾಯ ಭವನಗಳನ್ನು ಈ ಕೆಳಗೆ ವಿವರಿಸಿರುವ ಘಟಕ ವೆಚ್ಚದಲ್ಲಿ ನಿರ್ಮಾಣ ಮಾಡಲು ಪರಿಷ್ಕೃತ ಮಾರ್ಗಸೂಚಿಗಳನ್ನು ರಚಿಸಲಾಗಿರುತ್ತದೆ. (ರೂ ಲಕ್ಷಗಳಲ್ಲಿ) ಕ್ರ. ಸಂ. / ಭವನದ ವಿವರ / ಮಂಜೂರಾತಿ ಮೊತ್ತ 1 / ಗ್ರಾಮ ಮಟ್ಟದ ಭವನ / ರೂ 20.00 2 / ಹೋಬಳಿ ಮಟ್ಟದ ಭವನ / ರೂ 75.00 3 / ತಾಲ್ಲೂಕು ಮಟ್ಟದ ಭವನ / ರೂ 200.00 4 / ಜಿಲ್ಲಾ ಮಟ್ಟದ ಭವನ / ರೂ 400.00

ಸಕಇ 41 ಪಕವಿ 2021

(ಬಿ. ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	910
ಸದಸ್ಯರ ಹೆಸರು	:	ಶ್ರೀ ಮುನಿಯಪ್ಪ ವಿ.
ಉತ್ತರಿಸುವ ದಿನಾಂಕ	:	04.02.2021.
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಸಚಿವರು.

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಶಿಡ್ಲಘಟ್ಟ ವಿಧಾನಸಭಾ ಕ್ಷೇತ್ರಕ್ಕೆ ಕಳೆದ 2 ವರ್ಷಗಳಿಂದ ವಿವಿಧ ಯೋಜನೆಯಡಿಯಲ್ಲಿ ಅನುದಾನ ಬಿಡುಗಡೆಗೊಳಿಸದೇ ಅಭಿವೃದ್ಧಿ ಕಾಮಗಾರಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಇಲ್ಲ.</td></tr>
<tr><td>(ಆ)</td><td>ಹಾಗಿದ್ದಲ್ಲಿ ಸಮಾಜ ಕಲ್ಯಾಣ ಇಲಾಖೆಯ ವಿವಿಧ ಯೋಜನೆಯ ಅನುದಾನವನ್ನು ಬಿಡುಗಡೆ ಗೊಳಿಸದಿರಲು ಕಾರಣವೇನು;</td><td>ಶಿಡ್ಲಘಟ್ಟ ವಿಧಾನಸಭಾ ಕ್ಷೇತ್ರಕ್ಕೆ ಕಳೆದ 2 ವರ್ಷಗಳಲ್ಲಿ ಈ ಕೆಳಕಂಡ ಯೋಜನೆಗಳಿಗಾಗಿ ಅನುದಾನ ಬಿಡುಗಡೆ ಮಾಡಲಾಗಿದೆ.
<u>ಸಮಾಜ ಕಲ್ಯಾಣ ಇಲಾಖೆ :-</u></td></tr>
<tr><td>(ಇ)</td><td>ಈ ಇಲಾಖೆ ವತಿಯಿಂದ ಅನುದಾನವನ್ನು ಯಾವಾಗ ಬಿಡುಗಡೆ ಮಾಡಲಾಗುತ್ತದೆ;</td><td>(ರೂ.ಲಕ್ಷಗಳಲ್ಲಿ)
<table>
<tr><th>ಯೋಜನೆ</th><th>ಮಂಜೂರಾತಿ ಮೊತ್ತ</th><th>ಮೊದಲ ಕಂತಾಗಿ ಬಿಡುಗಡೆ ಮಾಡಿದ ಮೊತ್ತ</th></tr>
<tr><td>ಪ್ರಗತಿ ಕಾಲೋನಿ ಯೋಜನೆಯಡಿ ಪರಿಶಿಷ್ಟ ಜಾತಿ ಕಾಲೋನಿಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು</td><td>135.00</td><td>121.50</td></tr>
<tr><td>ಡಾ.ಬಿ.ಆರ್.ಅಂಬೇಡ್ಕರ್/ ಡಾ.ಬಾಬು ಜಗಜೀವನ ರಾಮ್ ಸಮುದಾಯ ಭವನಗಳ ನಿರ್ಮಾಣ.</td><td>72.00</td><td>18.00</td></tr>
<tr><td>ಒಟ್ಟು</td><td>207.00</td><td>139.50</td></tr>
</table>
<u>ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ :-</u>
(ರೂ.ಲಕ್ಷಗಳಲ್ಲಿ)
<table>
<tr><th>ಕ್ರ.ಸಂ</th><th>ವರ್ಷ</th><th>ಯೋಜನೆ</th><th>ಬಿಡುಗಡೆ ಮಾಡಿದ ಮೊತ್ತ</th></tr>
<tr><td rowspan="2">1.</td><td rowspan="2">2018-19</td><td>ಪ್ರಗತಿ ಕಾಲೋನಿ</td><td>65.00</td></tr>
<tr><td>ನವಗ್ರಾಮ</td><td>47.73</td></tr>
<tr><td rowspan="2">2.</td><td rowspan="2">2019-20</td><td>ಪ್ರಗತಿ ಕಾಲೋನಿ</td><td>0.00</td></tr>
<tr><td>ನವಗ್ರಾಮ</td><td>0.00</td></tr>
<tr><td></td><td colspan="2">ಒಟ್ಟು</td><td>112.73</td></tr>
</table>
ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಗಂಗಾ ಕಲ್ಯಾಣ ಯೋಜನೆಯಡಿ 2018-19ನೇ ಸಾಲಿನಲ್ಲಿ ನಿಗದಿಪಡಿಸಿರುವ ಅನುದಾನದಲ್ಲಿ ರೂ.37.40ಲಕ್ಷಗಳನ್ನು ವೆಚ್ಚ ಮಾಡಿ 17 ಕೊಳವೆ ಬಾವಿಗಳನ್ನು ಕೊರೆಯಿಸಲಾಗಿದೆ.</td></tr>
</table>

<table>
<tr>
<td></td>
<td></td>
<td>

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ :-

(ರೂ.ಲಕ್ಷಗಳಲ್ಲಿ)

<table>
<tr><th>ಕ್ರ.ಸಂ</th><th>ಯೋಜನೆ</th><th>2019-20</th><th>2020-21</th></tr>
<tr><td>1</td><td>ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆ</td><td>10.50</td><td>5.00</td></tr>
<tr><td>2</td><td>ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆ</td><td>10.00</td><td>11.00</td></tr>
<tr><td>3</td><td>ಮೈಕ್ರೋ ಕ್ರೇಡಿಟ್ ಯೋಜನೆ</td><td>4.75</td><td>10.00</td></tr>
<tr><td>4</td><td>ಗಂಗಾ ಕಲ್ಯಾಣ ಯೋಜನೆ</td><td>38.50</td><td>35.00</td></tr>
</table>

</td>
</tr>
<tr>
<td>(ಈ)</td>
<td>ಸಮಾಜ ಕಲ್ಯಾಣ ಇಲಾಖೆ ವತಿಯಿಂದ ವಿವಿಧ ಅಭಿವೃದ್ಧಿ ನಿಗಮಗಳಲ್ಲಿ ಗಂಗಾ ಕಲ್ಯಾಣ ಮತ್ತು ಸ್ವಯಂ ಉದ್ಯೋಗ ಯೋಜನೆಯಡಿಯಲ್ಲಿ ಫಲಾನುಭವಿಗಳು ಸಾಲ ಮಂಜೂರಾತಿಗೆ ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿ ಸಲ್ಲಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td>
<td rowspan="2">ಪ್ರತಿ ವರ್ಷ ಆಯವ್ಯಯದಲ್ಲಿ ಘೋಷಣೆಯಾದ ಅನುದಾನವನ್ನು ವಿಧಾನ ಸಭಾ ಕ್ಷೇತ್ರವಾರು ಜನಸಂಖ್ಯೆಗೆ ಅನುಗುಣವಾಗಿ ಅನುದಾನವನ್ನು ಹಂಚಿಕೆಮಾಡಿ ಗುರಿ ನಿಗಧಿಪಡಿಸಲಾಗುತ್ತದೆ.</td>
</tr>
<tr>
<td>(ಉ)</td>
<td>ಹಾಗಿದ್ದಲ್ಲಿ ಫಲಾನುಭವಿಗಳ ಗುರಿಯನ್ನು ಹೆಚ್ಚಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು;</td>
</tr>
<tr>
<td>(ಊ)</td>
<td>ಶಿಡ್ಲಘಟ್ಟ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಸುಮಾರು 1400-1500 ಅಡಿಗಳ ಕೊಳವೆ ಬಾವಿ ಕೊರೆಯಬೇಕಾಗಿರುವುದರಿಂದ ಹಾಲಿ ನೀಡುತ್ತಿರುವ ಸಹಾಯಧನ ಸಾಲದೇ ಫಲಾನುಭವಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td>
<td>ಗಂಗಾ ಕಲ್ಯಾಣ ಯೋಜನೆಯಡಿ ಶಿಡ್ಲಘಟ್ಟ ವಿಧಾನ ಸಭಾ ಕ್ಷೇತ್ರವು ಒಳಗೊಂಡಂತೆ ಅಂತರ್ಜಲಮಟ್ಟ ಕುಸಿದಿರುವ ಜಿಲ್ಲೆಗಳಾದ ರಾಮನಗರ, ಬೆಂಗಳೂರು (ನಗರ ಮತ್ತು ಗ್ರಾಮಾಂತರ), ಕೋಲಾರ ಮತ್ತು ತುಮಕೂರು ಜಿಲ್ಲೆಗಳಿಗೆ ಸೀಮಿತಗೊಂಡಂತೆ ಘಟಕ ವೆಚ್ಚವನ್ನು ರೂ.4.50ಲಕ್ಷಗಳಂತೆ ನಿಗದಿಪಡಿಸಿರುತ್ತದೆ. ಚಾಲ್ತಿಯಲ್ಲಿರುವ ನಿಯಮಗಳಂತೆ ಕೊಳವೆ ಬಾವಿ ನಿರ್ಮಾಣದಲ್ಲಿ ಘಟಕ ವೆಚ್ಚ ಮೀರಿದ ಪ್ರಕರಣಗಳಲ್ಲಿ ಹೆಚ್ಚುವರಿ ವೆಚ್ಚವನ್ನು ಫಲಾನುಭವಿಗಳೆ ಭರಿಸಬೇಕಾಗುತ್ತದೆ.</td>
</tr>
</table>

ಸಂಖ್ಯೆ: ಸಕಇ 38 ಎಸ್‌ಡಿಸಿ 2021

(ಬಿ.ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 912

ಸದಸ್ಯರ ಹೆಸರು : ಶ್ರೀ ಉಮಾನಾಥ ಎ. ಕೋಟ್ಯಾನ್ (ಮೂಡಬಿದ್ರೆ)

ಉತ್ತರಿಸುವವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು

ಉತ್ತರಿಸುವ ದಿನಾಂಕ : 04.02.2021

ಕ್ರಸಂ.	ಪ್ರಶ್ನೆ	ಉತ್ತರ
ಅ	ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ವಿಶೇಷತ ಮೂಡಬಿದರೆ ಕ್ಷೇತ್ರ ವ್ಯಾಪ್ತಿಯಲ್ಲಿ ಸ್ಥಾಪಿತಗೊಂಡ ಉದ್ಯಮಗಳಲ್ಲಿನ ವಿವಿಧ ವರ್ಗದ ಹುದ್ದೆಗಳ ನೇಮಕಾತಿಯಲ್ಲಿ ಸರ್ಕಾರದ ಮಾರ್ಗಸೂಚಿಯನ್ವಯ ಸ್ಥಳೀಯರಿಗೆ ಉದ್ಯೋಗಾವಕಾಶವನ್ನು ಒದಗಿಸಿಕೊಡಲಾಗಿದೆಯೇ; ಹಾಗಿದ್ದಲ್ಲಿ ಆ ಕುರಿತ ವಿವರ ನೀಡುವುದು;	ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದರೆ ಕ್ಷೇತ್ರ ವ್ಯಾಪ್ತಿಯಲ್ಲಿ ಡಾ: ಸರೋಜಿನಿ ಮಹಿಷಿ ಸಮಿತಿ ವರದಿಯನ್ವಯ 50 ಕ್ಕಿಂತ ಹೆಚ್ಚು ಕಾರ್ಮಿಕರುಳ್ಳ ಒಂದು ಕೈಗಾರಿಕೆ "ಮೆ. ಧನಲಕ್ಷ್ಮಿ ಕ್ಯಾಶ್ಯೂ ಎಕ್ಸ್‌ಪೋರ್ಟ್ಸ್" ಚಾಲ್ತಿಯಲ್ಲಿದ್ದು, ಸದರಿ ಕೈಗಾರಿಕೆಯಲ್ಲಿ ಡಿಸೆಂಬರ್ 2020ರ ಅಂತ್ಯಕ್ಕೆ ಒಟ್ಟು 114 ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದು ಇವರೆಲ್ಲರೂ ಸ್ಥಳೀಯರು/ಕನ್ನಡಿಗರಾಗಿರುತ್ತಾರೆ.
ಆ	ಕೈಗಾರಿಕಾ ಅಭಿವೃದ್ಧಿಗಾಗಿ ನೆಲ ಜಲ ಮನೆಗಳನ್ನು ಬಿಟ್ಟುಕೊಟ್ಟು ಅತಂತ್ರ ಸ್ಥಿತಿಯಲ್ಲಿರುವ ಸಂತ್ರಸ್ತರಿಗೆ/ ಕನ್ನಡಿಗರಿಗೆ ಉದ್ಯೋಗಾವಕಾಶವನ್ನು ಒದಗಿಸಿಕೊಡುವ ಬದ್ದತೆಯನ್ನು ಉದ್ದಿಮೆಗಳು ಕಾರ್ಯಗತಗೊಳಿಸಿವೆಯೆ; ಇಲ್ಲವಾದಲ್ಲಿ ಮಾರ್ಗಸೂಚಿಯ ಪಾಲನೆ ಮಾಡದ ಉದ್ದಿಮೆಗಳ ಮೇಲೆ ಸರ್ಕಾರವು ಕೈಗೊಂಡ ಕ್ರಮಗಳೇನು;	ಡಾ: ಸರೋಜಿನಿ ಮಹಿಷಿ ಸಮಿತಿ ವರದಿಯನ್ವಯ 50 ಕ್ಕಿಂತ ಹೆಚ್ಚು ಕಾರ್ಮಿಕರುಳ್ಳ ಬೃಹತ್, ಮಧ್ಯಮ ಮತ್ತು ಸಣ್ಣ ಕೈಗಾರಿಕಾ ಘಟಕಗಳಲ್ಲಿ "ಎ" ಮತ್ತು "ಬಿ" ವರ್ಗಗಳಲ್ಲಿ ಕ್ರಮವಾಗಿ ಶೇಕಡ 65 ಮತ್ತು ಶೇಕಡ 80 ಹಾಗೂ "ಸಿ" ಮತ್ತು "ಡಿ" ವರ್ಗಗಳಲ್ಲಿ ಶೇಕಡ 100 ರಷ್ಟು ಉದ್ಯೋಗಗಳನ್ನು ಕನ್ನಡಿಗರಿಗೆ/ಸ್ಥಳೀಯರಿಗೆ ನಿಗಧಿಪಡಿಸುವಂತೆ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಗಳು ಹಾಗೂ ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಗಳಲ್ಲಿ ಹೊಸ ಕೈಗಾರಿಕಾ ಘಟಕಗಳನ್ನು ಸ್ಥಾಪಿಸಲು ಒಪ್ಪಿಗೆಯನ್ನು ನೀಡುವ ಸಂದರ್ಭದಲ್ಲಿ ಷರತ್ತನ್ನು ವಿಧಿಸಲಾಗುತ್ತಿದೆ. ಚಾಲ್ತಿಯಲ್ಲಿರುವ 50 ಕ್ಕಿಂತ ಹೆಚ್ಚು ಕಾರ್ಮಿಕರುಳ್ಳ ಕೈಗಾರಿಕೆಗಳಲ್ಲಿ ಸದರಿ ವರದಿಯನ್ವಯ ಕನ್ನಡಿಗರಿಗೆ/ಸ್ಥಳೀಯರಿಗೆ ಉದ್ಯೋಗ ನೀಡಿರುವ ಬಗ್ಗೆ ಜಿಲ್ಲಾ ಮಟ್ಟದಲ್ಲಿ ನಿಗದಿತ ನಮೂನೆಯಲ್ಲಿ ಮಾಹಿತಿಯನ್ನು ಕ್ರೋಢೀಕರಿಸಿ ಪರಿಶೀಲಿಸಿ ನಿರ್ದೇಶನಾಲಯಕ್ಕೆ ಸಲ್ಲಿಸಲಾಗುತ್ತಿದೆ. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯುವ ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಗಳಲ್ಲಿ ಸದರಿ ಮಾಹಿತಿಯನ್ನು ಪರಿಶೀಲಿಸಲಾಗುತ್ತದೆ. ನ್ಯೂನ್ಯತೆಗಳು ಕಂಡುಬಂದ ಕೈಗಾರಿಕೆಗಳಿಗೆ ಕೂಡಲೇ ಸರಿಪಡಿಸಲು ಸೂಚನೆಗಳನ್ನು ನೀಡಲಾಗುತ್ತದೆ.
ಇ	ಉದ್ದಿಮೆಗಳಿಗೆ ಸರ್ಕಾರಿ ಜಮೀನು ಮತ್ತಿತರ ಸೌಕರ್ಯಗಳನ್ನು ಒದಗಿಸಿಕೊಟ್ಟು ಕಾನೂನು ನಿಯಮಗಳಡಿಯಲ್ಲಿಯೇ ಸ್ಥಳೀಯರಿಗೆ ಉದ್ಯೋಗಾವಕಾಶ ಹಾಗೂ ಕರಾರಿನನ್ವಯ ಇತರ ಸೌಲಭ್ಯಗಳನ್ನು ನೀಡದಿರುವುದರ ಬಗ್ಗೆ ಸರ್ಕಾರವು ಕೈಗೊಂಡ	

	ಕ್ರಮಗಳೇನು?	ಅಲ್ಲದೆ, ಕೈಗಾರಿಕಾ ನೀತಿಯನ್ವಯ ಸರ್ಕಾರದಿಂದ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ಪಡೆಯುವ ಕೈಗಾರಿಕಾ ಘಟಕಗಳು "ಡಿ" ವರ್ಗದ ಉದ್ಯೋಗಗಳಲ್ಲಿ ಶೇಕಡ 100 ರಷ್ಟು ಹಾಗೂ ಘಟಕದ ಒಟ್ಟಾರೆ ಉದ್ಯೋಗಗಳಲ್ಲಿ ಶೇಕಡ 70 ರಷ್ಟುನ್ನು ಕನ್ನಡಿಗರಿಗೆ/ಸ್ಥಳೀಯರಿಗೆ ನೀಡುವ ನಿಬಂಧನೆಯಿದ್ದು ಅದರಂತೆ ಉದ್ಯೋಗಗಳನ್ನು ನೀಡಿದ ಘಟಕಗಳಿಗೆ ಮಾತ್ರ ಅರ್ಹ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ಮಂಜೂರು ಮಾಡಲಾಗುತ್ತಿದೆ.

ಸಿಐ 65 ಎಸ್‌ಪಿಐ 2021

(ಜಗದೀಶ್ ಶೆಟ್ಟರ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಸಾರ್ವಜನಿಕ ಉದ್ದಿಮೆಗಳ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	916
ಸದಸ್ಯರ ಹೆಸರು	:	ಶ್ರೀ ರಘುಪತಿ ಭಟ್ ಕೆ. (ಉಡುಪಿ)
ಉತ್ತರಿಸುವ ದಿನಾಂಕ	:	04-02-2021
ಉತ್ತರಿಸುವ ಸಚಿವರು	:	ಮಾನ್ಯ ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಉಡುಪಿ ಜಿಲ್ಲೆಯ ಕೆಲವೊಂದು ಗ್ರಾಮಗಳಲ್ಲಿ ಹಲವಾರು ವರ್ಷಗಳಿಂದ ವಾಸವಾಗಿರುವ ಕುಟುಂಬಗಳಿಗೆ ಅಕ್ರಮ-ಸಕ್ರಮ ಕಾನೂನಿನಡಿಯಲ್ಲಿ ಜಾಗ ಮಂಜೂರಾತಿ ಮಾಡಲು ಅರಣ್ಯ ಇಲಾಖೆಯ ಆಕ್ಷೇಪಣೆ ಇದ್ದು, ಈ ಪ್ರಕರಣಗಳ ಮಂಜೂರಾತಿಗೆ ಇಲಾಖೆ ಹಾಕಿಕೊಂಡ ಮಾನದಂಡಗಳೇನು;	ಅಕ್ರಮ-ಸಕ್ರಮದಡಿ ಕೋರುವ ಜಮೀನಿಗೆ ಸಂಬಂಧಿಸಿದಂತೆ, ಈ ಕೆಳಕಂಡಂತೆ ಮಾನದಂಡಗಳನ್ವಯ ಇಲಾಖಾ ಅಭಿಪ್ರಾಯಗಳನ್ನು ನೀಡಲಾಗುತ್ತದೆ. 1) ಸದರಿ ಪ್ರದೇಶವು ಅರಣ್ಯ ಸ್ವರೂಪ ಹೊಂದಿರಬಾರದು. 2) ಸದರಿ ಪ್ರದೇಶವು ಕೇಂದ್ರ ಪರಿಣಿತ ಸಮಿತಿಗೆ ಸಲ್ಲಿಸಿದ ಡೀಮ್ಡ್ ಫಾರೆಸ್ಟ್ ಪಟ್ಟಿಯಲ್ಲಿ ಸೇರ್ಪಡೆಗೊಂಡಿರಬಾರದು. 3) ಮಾನ್ಯ ಸರ್ವೋಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 202/1995ರ ಆದೇಶದಲ್ಲಿನ ಮಾನದಂಡಗಳ ಪ್ರಕಾರ ಡೀಮ್ಡ್ ಫಾರೆಸ್ಟ್ ಆಗಿರಬಾರದು. 4) ಸದರಿ ಪ್ರದೇಶವು ಅಧಿಸೂಚಿತ ಅರಣ್ಯ ಪ್ರದೇಶದ ಒಳಗೆ ಇರಬಾರದು.
ಆ)	ಉಡುಪಿ ಜಿಲ್ಲೆಯಲ್ಲಿ ಇಂತಹ ಎಷ್ಟು ಪ್ರಕರಣಗಳಿವೆ; (ಸಂಪೂರ್ಣ ವಿವರಗಳನ್ನು ಒದಗಿಸುವುದು)	ಉಡುಪಿ ಜಿಲ್ಲೆಯಲ್ಲಿ ಈ ಕೆಳಕಂಡಂತೆ ಡೀಮ್ಡ್ ಫಾರೆಸ್ಟ್ ಪ್ರಕರಣಗಳಲ್ಲಿ ಅಭಿಪ್ರಾಯ ನೀಡಲಾಗಿದೆ:

ತಾಲ್ಲೂಕು	ವರ್ಷ	ಪ್ರಕರಣಗಳ ಸಂಖ್ಯೆ
ಬೈಂದೂರು	2017-18	341
	2018-19	63
	2019-20	50
ಕುಂದಾಪುರ	2017-18	74
	2018-19	69
	2019-20	14
ಉಡುಪಿ	2017-18	06
	2018-19	37
	2019-20	11
ಕಾಪು	2017-18	05
	2018-19	05
	2019-20	00
ಬ್ರಹ್ಮಾವರ	2017-18	36
	2018-19	17
	2019-20	53
ಹೆಬ್ರಿ	2017-18	34

	2018–19	06
	2019–20	02
ಕಾರ್ಕಳ	2017–18	12
	2018–19	07
	2019–20	14
ಒಟ್ಟು ಪ್ರಕರಣಗಳು		**856**

ಇ)	ಮಂಜೂರಾತಿಗೆ ಸಂಬಂಧಸಿದಂತೆ ಬಂದ ಅರ್ಜಿಗಳನ್ನು ತಿರಸ್ಕೃತಗೊಳಿಸಿ ಫಲಾನಿಭವಿಗಳಿಗೆ ಹಿಂಬರಹ ನೀಡದ ಪ್ರಕರಣಗಳಿವೆಯೇ; (ತಾಲ್ಲೂಕುವಾರು ಸಂಪೂರ್ಣ ವಿವರಗಳನ್ನು ಒದಗಿಸುವುದು)	ಮಂಜೂರಾತಿಗೆ ಸಂಬಂಧಿಸಿದಂತೆ ಕಂದಾಯ ಇಲಾಖೆಯು ಅರಣ್ಯ ಇಲಾಖೆಯ ಅಭಿಪ್ರಾಯ ಪಡೆದು ಸೂಕ್ತ ಕ್ರಮಕೈಗೊಳ್ಳುತ್ತದೆ. ಕಂದಾಯ ಇಲಾಖೆಯೇ ಫಲಾನುಭವಿಗಳಿಗೆ ನೇರವಾಗಿ ಹಿಂಬರಹ ನೀಡುವುದರಿಂದ ಇಂತಹ ಪ್ರಕರಣಗಳು ಅರಣ್ಯ ಇಲಾಖೆಯಲ್ಲಿ ಯಾವುದು ಇರುವುದಿಲ್ಲ.
ಈ)	ತಿರಸ್ಕೃತಗೊಂಡವರಿಗೆ ಇಲಾಖೆ ತೆಗೆದುಕೊಂಡಿರುವ ಪರ್ಯಾಯ ಕ್ರಮವೇನು?	ಉದ್ಭವಿಸುವುದಿಲ್ಲ.

ಸಂಖ್ಯೆ: ಅಪಜೀ 09 ಎಫ್‌ಜಿಎಲ್ 2021

(ಅರವಿಂದ ಲಿಂಬಾವಳಿ)
ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 924

ಸದಸ್ಯರ ಹೆಸರು : ಶ್ರೀ ಬಂಡೆಪ್ಪ ಖಾಶೆಂಪುರ್ (ಬೀದರ್ ದಕ್ಷಿಣ)

ಉತ್ತರಿಸುವ ದಿನಾಂಕ : 04.02.2021

ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿರುವ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಸಂಖ್ಯೆ ಎಷ್ಟು; ಸದರಿ ಕಾಲೇಜುಗಳಲ್ಲಿ 2019-20ನೇ ಸಾಲಿನಲ್ಲಿ ಪ್ರವೇಶಾತಿ ಹೊಂದಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; (ಕಾಲೇಜುಗಳ ವಿಳಾಸವಾರು, ವಿಭಾಗಗಳವಾರು ಸಂಪೂರ್ಣ ಮಾಹಿತಿ ನೀಡುವುದು)	ರಾಜ್ಯದಲ್ಲಿ ಒಟ್ಟು 14 (01 ಸರ್ಕಾರಿ ಎಸ್‌ಕೆಎಸ್‌ಜೆಟಿ ಸಂಜೆ ಇಂಜಿನಿಯರಿಂಗ್ ಕಾಲೇಜ್ ಸೇರಿ) ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು ಅಸ್ತಿತ್ವದಲ್ಲಿರುತ್ತವೆ. ಸದರಿ ಕಾಲೇಜುಗಳಲ್ಲಿ 2019-20ನೇ ಸಾಲಿನಲ್ಲಿ ಎಲ್ಲಾ ಸೆಮಿಸ್ಟರ್‌ಗಳಲ್ಲಿ **ಒಟ್ಟು 8325** ವಿದ್ಯಾರ್ಥಿಗಳು ಪ್ರವೇಶಾತಿ ಹೊಂದಿರುತ್ತಾರೆ. ಕಾಲೇಜುಗಳ ವಿಳಾಸ, ವಿಭಾಗವಾರು ಮಾಹಿತಿಯನ್ನು ಅನುಬಂಧ ದಲ್ಲಿ ಒದಗಿಸಿದೆ.
ಆ)	ರಾಜ್ಯದಲ್ಲಿರುವ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಿಗೆ ಎ.ಐ.ಸಿ.ಟಿ.ಇ ನಿಯಮಾನುಸಾರ ಅಗತ್ಯವಾಗಿರುವ ಮೂಲಭೂತ ಸೌಕರ್ಯಗಳಾದ ಕಂಪ್ಯೂಟರ್ ಲ್ಯಾಬ್, ಕಂಪ್ಯೂಟರ್, ಪ್ರಿಂಟರ್, ಕಂಪ್ಯೂಟರ್ ಟೇಬಲ್‌ಗಳು ಹಾಗೂ ಇನ್ನಿತರೆ ಸಾಮಾಗ್ರಿಗಳು ವಿದ್ಯಾರ್ಥಿಗಳಿಗೆ ಕುಳಿತುಕೊಳ್ಳಲು ಬೇಕಾಗುವ ಡೆಸ್ಕ್‌ಗಳು, ಗ್ರಂಥಾಲಯದಲ್ಲಿ ಅಗತ್ಯವಿರುವ ಪುಸ್ತಕಗಳು ಹಾಗೂ ಇನ್ನಿತರೆ ಮೂಲಭೂತ ಸೌಕರ್ಯಗಳು ಲಭ್ಯವಿಲ್ಲದೆ, ಗ್ರಾಮೀಣ ಪ್ರದೇಶದಿಂದ ಬಂದಂತಹ ವಿದ್ಯಾರ್ಥಿಗಳ ತಾಂತ್ರಿಕ ವ್ಯಾಸಂಗಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಇ)</td><td>ಹಾಗಿದ್ದಲ್ಲಿ, ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಿಗೆ ಅತ್ಯಗತ್ಯವಾಗಿ ಬೇಕಾಗಿರುವ ಡೆಸ್ಕ್‌ಗಳು, ಕಂಪ್ಯೂಟರ್ ಹಾಗೂ ಇತರೆ ಸಾಮಾಗ್ರಿಗಳು ಗ್ರಂಥಾಲಯಕ್ಕೆ ಪುಸ್ತಕಗಳು ಹಾಗೂ ಇತರೆ ಅವಶ್ಯಕ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರ್ಕಾರ ಅವಶ್ಯಕ ಅನುದಾನವನ್ನು ಬಿಡುಗಡೆ ಮಾಡಲು ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು)</td><td>14 ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಿಗೆ ಅಗತ್ಯವಿರುವ ಡೆಸ್ಕ್‌ಗಳು, ಕಂಪ್ಯೂಟರ್ ಹಾಗೂ ಇತರೆ ಸಾಮಾಗ್ರಿಗಳನ್ನು ಹಾಗೂ ಗ್ರಂಥಾಲಯಕ್ಕೆ ಪುಸ್ತಕಗಳನ್ನು ಒದಗಿಸುವ ಸಂಬಂದ ಕಳೆದ 3 ವರ್ಷಗಳಲ್ಲಿ ಈ ಕೆಳಕಂಡಂತೆ ಅನುದಾನವನ್ನು ಒದಗಿಸಲಾಗಿದೆ.
<table>
<tr><th>ವರ್ಷ</th><th>ಯಂತ್ರೋಪಕರಣ, ಪುಸ್ತಕ ಹಾಗೂ ಪೀಠ ಒದಗಿಸಲು ಬಿಡುಗಡೆ ಮಾಡಲಾದ ಅನುದ (ರೂ. ಲಕ್ಷಗಳಲ್ಲಿ)</th></tr>
<tr><td>2019–20</td><td>622.39</td></tr>
<tr><td>2018–19</td><td>95.36</td></tr>
<tr><td>2017–18</td><td>59.74</td></tr>
<tr><td>ಒಟ್ಟು</td><td>777.49</td></tr>
</table></td></tr>
</table>

ಕಡತ ಸಂಖ್ಯೆ: ಇಡಿ 13 ಹೆಚ್‌ಪಿಟಿ 2021

(ಡಾ: ಅಶ್ವಥ್ ನಾರಾಯಣ ಸಿ.ಎನ್)
ಉಪ ಮುಖ್ಯಮಂತ್ರಿಗಳು ಹಾಗೂ
ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ
ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

ಕರ್ನಾಟಕ ವಿಧಾನ ಸಭೆ

1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	925
2)	ಮಾನ್ಯ ಸದಸ್ಯರ ಹೆಸರು:	ಶ್ರೀ ರವೀಂದ್ರ ಶ್ರೀಕಂಠಯ್ಯ (ಶ್ರೀರಂಗಪಟ್ಟಣ)
3)	ಉತ್ತರಿಸಬೇಕಾದ ದಿನಾಂಕ:	**04.02.2021**
4)	ಉತ್ತರಿಸುವವರು:	**ಮಾನ್ಯ ಉಪ ಮುಖ್ಯಮಂತ್ರಿಗಳು ಮತ್ತು ಉನ್ನತ ಶಿಕ್ಷಣ, ಐಟಿ/ಬಿಟಿ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು.**

ಕ್ರ.ಸಂ.	ಪ್ರಶ್ನೆ	ಉತ್ತರ
(ಅ)	ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆಯಿಂದ ಮಹಿಳೆಯರಿಗೆ ವಿಧವೆಯರಿಗೆ ಮತ್ತು ಅಂಗವಿಕಲರಿಗೆ ಯಾವ ಯಾವ ಸೌಲಭ್ಯಗಳನ್ನು ಒದಗಿಸಲು ಸರ್ಕಾರವು ಕ್ರಮ ಕೈಗೊಂಡಿದೆ;	**<u>ಕೌಶಲ್ಯ ಮಿಷನ್:</u>** ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮದ ವತಿಯಿಂದ ರಾಜ್ಯದಾದ್ಯಂತ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ ಹಾಗೂ ಪ್ರಧಾನಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆಯನ್ನು ಜಾರಿಗೊಳಿಸಲಾಗಿದ್ದು, ಈ ಸಂಬಂಧ ಮಂಡ್ಯ ಜಿಲ್ಲೆಯಲ್ಲಿ ಒಟ್ಟು 05 ತರಬೇತಿ ಕೇಂದ್ರಗಳ ಮುಖಾಂತರ ಉಚಿತ ಅಲ್ಪಾವಧಿ ಕೌಶಲ್ಯಾಧಾರಿತ ತರಬೇತಿ ನೀಡಲಾಗುತ್ತಿದ್ದು, ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಇಲ್ಲಿಯ ತನಕ ಯಾವುದೇ ಖಾಸಗಿ ತರಬೇತುದಾರರು ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಲು ಪ್ರಸ್ತಾವನೆ ಸಲ್ಲಿಸಿರುವುದಿಲ್ಲ, ಪ್ರಸ್ತಾವನೆಗಳನ್ನು ಸ್ವೀಕರಿಸಿದ ಕೂಡಲೇ ತರಬೇತಿ ಸಂಸ್ಥೆಗಳನ್ನು ಪ್ರಾರಂಭಿಸಲು ನಿಯಮಾನುಸಾರ ಪರಿಶೀಲಿಸಿ ಮಾನ್ಯತೆ ನೀಡಿ ತರಬೇತಿ ನೀಡಲು ಕ್ರಮವಹಿಸಲಾಗುವುದು. ಮಹಿಳೆಯರಿಗೆ ಶೇ 33 ರಷ್ಟು ಮಿಸಲಾತಿಯನ್ನು ಕಲ್ಪಿಸಲಾಗಿರುತ್ತದೆ. ಅದರಂತೆ ಅಂಗವಿಕಲ ಅಭ್ಯರ್ಥಿಗಳಿಗೂ ಸಹ ಮಿಸಲಾತಿ ಇದ್ದು, ವಿಧವೆಯರಿಗೆ ಪ್ರತ್ಯೇಕ ಮಿಸಲಾತಿಯನ್ನು ಕಲ್ಪಿಸಲಾಗಿರುವುದಿಲ್ಲ. ಅದಾಗ್ಯೂ ಮಹಿಳೆಯರಿಗೆ ಮಿಸಲಿರಿಸಲಾದ ಶೇ 33 ರಷ್ಟ ರಲ್ಲಿ ಆಸಕ್ತಿಯುಳ್ಳವರಿಗೆ ನೀಡಲು ಕ್ರಮವಹಿಸಲಾಗಿದೆ. **<u>ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (NRLM):</u>** 1. ಮಂಡ್ಯ ಜಿಲ್ಲೆಯಲ್ಲಿ ಕೌ.ಉ.ಜೀ. ಇಲಾಖೆಯಡಿಯಲ್ಲಿ:– • ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ (ಡಿಡಿಯು–ಜಿಕೆವೈ) ಕಾರ್ಯಕ್ರಮದಡಿಯಲ್ಲಿ ಉಚಿತ ವಸತಿ ಪ್ರಯಾಣ ಭತ್ಯೆ, ಉಚಿತ ಊಟ–ತಿಂಡಿ, ಉಚಿತ ತರಬೇತಿ, ಪ್ರೋತ್ಸಾಹ ಧನ ಮತ್ತು ಉದ್ಯೋಗ ಒದಗಿಸಲಾಗುತ್ತಿದೆ. • ಆರ್‌ಸೆಟಿ ಕಾರ್ಯಕ್ರಮದಡಿಯಲ್ಲಿ ಶ್ರೀರಂಗಪಟ್ಟಣಗೊಳಪಟ್ಟಂತೆ ಮಂಡ್ಯ ಕೇಂದ್ರಸ್ಥಾನದಲ್ಲಿ ಸ್ವ–ಉದ್ಯೋಗ ತರಬೇತಿ ನೀಡಲಾಗುತ್ತಿದೆ. **<u>ಡೇ–ನಲ್ಮ್:</u>** ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜಿವನೋಪಾಯ ಇಲಾಖೆಯ, ಡೇ–ನಲ್ಮ್ ಅಭಿಯಾನದಡಿ ಮಹಿಳೆಯಿರಿಗೆ, ವಿಧವೆಯರಿಗೆ ಮತ್ತು ಅಂಗವಿಕಲರಿಗೆ ಈ ಕೆಳಕಂಡಂತೆ ಸೌಲಭ್ಯವನ್ನು ಕಲ್ಪಿಸಲಾಗುವುದು. • **ಸಾಮಾಜಿಕ ಕ್ರೋಢೀಕರಣ ಮತ್ತು ಸಾಂಸ್ಥಿಕ ಅಭಿವೃದ್ಧಿ:** ಮಹಿಳಾ ಸ್ವ–ಸಹಾಯ ಸಂಘ ಮತ್ತು ಪ್ರದೇಶ ಮಟ್ಟದ ಒಕ್ಕೂಟಗಳ ರಚನೆ ಹಾಗೂ ಪ್ರತಿ ಸ್ವ–ಸಹಾಯ ಗುಂಪಿಗೆ ರೂ.10,000/– ಹಾಗೂ ಪ್ರತಿ ಒಕ್ಕೂಟಕ್ಕೆ ರೂ.50,000/–ವರೆಗೆ ಅವರ್ತಕ ನಿಧಿಯನ್ನು ನೀಡಲಾಗುವುದು ಹಾಗೂ ಸಂಘಗಳ ಉಚಿತ ದಾಖಲಾತಿ ವಿತರಣೆ, ಕ್ಷೇತ್ರ ಭೇಟಿ ಹಾಗೂ ವಿವಿಧ ಸಾಮರ್ಥ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ನೀಡಲಾಗುತ್ತಿದೆ.

		• **ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳ ನಿಯುಕ್ತಿ:** ಸದರಿ ಉಪಘಟಕದಡಿ ನಗರದ ನಿರುದ್ಯೋಗ ಮಹಿಳೆಯರಿಗೆ, ವಿಧವೆಯರಿಗೆ ಮತ್ತು ಅಂಗವಿಕಲರಿಗೆ ವಿವಿಧ ಉದ್ಯೋಗಾಧಾರಿತ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ನೀಡಲಾಗುವುದು. • **ಸ್ವಯಂ ಉದ್ಯೋಗ ಕಾರ್ಯಕ್ರಮ:** ಸದರಿ ಉಪಘಟಕದಡಿ ವೈಯಕ್ತಿಕ ಕಿರು ಉದ್ದಿಮೆಯನ್ನು ಸ್ಥಾಪಿಸಲು ರೂ.2.00ಲಕ್ಷದವರೆಗೆ ಹಾಗೂ ಗುಂಪು ಕಿರು ಉದ್ದಿಮೆಯನ್ನು ಸ್ಥಾಪಿಸಲು ರೂ.10.00ಲಕ್ಷದ ವರೆಗೆ ಬ್ಯಾಂಕಿನಿಂದ ಸಾಲ ಸೌಲಭ್ಯವನ್ನು ಕಲ್ಪಿಸಲಾಗುವುದು. • **ನಗರದ ವಸತಿ ರಹಿತರಿಗೆ ಆಶ್ರಯ:** ವಸತಿ ರಹಿತರನ್ನು ರ‍್ಯಾಪಿಡ್ ಸಮೀಕ್ಷೆಯ ಮೂಲಕ ಗುರುತಿಸಿ, ಆಶ್ರಯವನ್ನು ಕಲ್ಪಿಸಲಾಗುವುದು. • **ನಗರದ ಬೀದಿ ವ್ಯಾಪಾರಸ್ಥರಿಗೆ ಬೆಂಬಲ:** ನಗರದ ಬೀದಿ ವ್ಯಾಪಾರಸ್ಥರನ್ನು ಗುರುತಿಸಿ, ಗುರುತೀನ ಚೀಟಿ ಮತ್ತು ಮಾರಾಟ ಪ್ರಮಾಣ ಪತ್ರವನ್ನು ವಿತರಿಸಲಾಗುವುದು.
(ಆ)	**ಹಾಗಿದ್ದಲ್ಲಿ, ಮಹಿಳೆಯರಿಗೆ ಕೌಶಲ್ಯ ತರಬೇತಿ ನೀಡುವುದಕ್ಕಾಗಿ ಕೇಂದ್ರಗಳನ್ನು ಪ್ರಾರಂಭಿಸಲು ಸರ್ಕಾರ ಯಾವ ಕ್ರಮಕೈಗೊಂಡಿದೆ? (ಸಂಪೂರ್ಣ ವಿವರ ನೀಡುವುದು)**	**ಕೌಶಲ್ಯ ಮಿಷನ್:** ಸರ್ಕಾರವು ಖಾಸಗಿ ತರಬೇತುದಾರ ಸಂಸ್ಥೆಗಳ ಮುಖಾಂತರ ಉಚಿತ ಕೌಶಲ್ಯಾಧಾರಿತ ತರಬೇತಿ ನೀಡುತ್ತಿದ್ದು, ಪ್ರತ್ಯೇಕವಾಗಿ ಸರ್ಕಾರವು ಯಾವುದೇ ಸರ್ಕಾರಿ ತರಬೇತಿ ಕೇಂದ್ರವನ್ನು ಸ್ಥಾಪಿಸಿರುವುದಿಲ್ಲ. ಇದಲ್ಲದೇ ಮಹಿಳೆಯರು ತರಬೇತಿ ಸಂಸ್ಥೆಗಳನ್ನು ಪ್ರಾರಂಭಿಸಿದಲ್ಲಿ ಶೇ 50ರಷ್ಟು ನೋಂದಣಿ ಶುಲ್ಕದಲ್ಲಿ ವಿನಾಯಿತಿಯನ್ನು ನೀಡಲಾಗಿದೆ. **ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (NRLM):** ಈ ಯೋಜನೆಯಡಿಯಲ್ಲಿ ಮಹಿಳೆಯರಿಗೆ ಪ್ರತ್ಯೇಕ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸಿರುವುದಿಲ್ಲ. **ಡೇ-ನಲ್ಮ್:** ಡೇ-ನಲ್ಮ್ ಅಭಿಯಾನದಡಿ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸಲು ಅವಕಾಶವನ್ನು ಕಲ್ಪಿಸಲಾಗಿರುವುದಿಲ್ಲ. ಆದಾಗ್ಯೂ ಖಾಸಗಿ ಮತ್ತು ಸರ್ಕಾರಿ ಸ್ವಾಮ್ಯದ ತರಬೇತಿ ಸಂಸ್ಥೆಗಳನ್ನು ತೊಡಗಿಸಿಕೊಂಡು ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.

ಸಂಖ್ಯೆ: ಕೌಉಜೀಇ 2 ಉಜೀಪ್ರ 2021

(ಡಾ॥ ಸಿ.ಎನ್. ಅಶ್ವಥ್‌ನಾರಾಯಣ)

ಉಪ ಮುಖ್ಯಮಂತ್ರಿಗಳು ಮತ್ತು ಉನ್ನತ ಶಿಕ್ಷಣ, ಐಟಿ/ಬಿಟಿ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	929
ಸದಸ್ಯರ ಹೆಸರು	**ಶ್ರೀ ಹ್ಯಾರಿಸ್ ಎನ್.ಎ (ಶಾಂತಿನಗರ)**
ಉತ್ತರಿಸಬೇಕಾದ ದಿನಾಂಕ	04.02.2021
ಉತ್ತರಿಸಬೇಕಾದ ಸಚಿವರು	ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ)

	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿರುವ ಸರ್ಕಾರಿ ಪದವಿ ಕಾಲೇಜು ಶಿಕ್ಷಣ ವ್ಯವಸ್ಥೆಯಲ್ಲಿ ಆಧುನಿಕರಣ ಹಾಗೂ ನೂತನ ಶೈಕ್ಷಣಿಕ ವಿಷಯ ವಿಚಾರಗಳನ್ನು ಅಳವಡಿಸುವುದು ಹಾಗೂ ತಂತ್ರಜ್ಞಾನದ ಬಳಕೆ ಮತ್ತು ಸಂಶೋಧನೆ ಕುರಿತು ಹೆಚ್ಚಿನ ಶಿಕ್ಷಣ ಜ್ಞಾನವನ್ನು ನೀಡುವಲ್ಲಿ ಕೈಗೊಂಡ ಕ್ರಮಗಳೇನು;	ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಬರುವ 430 ಸರ್ಕಾರಿ ಪ್ರಥಮ ದರ್ಜೆ ಕಾಲೇಜು, 87 ಸರ್ಕಾರಿ ಪಾಲಿಟೆಕ್ನಿಕ್ ಮತ್ತು 14 ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಡಿಜಿಟಲ್ ಕಲಿಕೆಯನ್ನು 2020-21ನೇ ಸಾಲಿನಿಂದ ಅಂದಾಜು ರೂ.35 ಕೋಟಿ ವೆಚ್ಚದಲ್ಲಿ ಅನುಷ್ಠಾನಗೊಳಿಸಲು ಕ್ರಮಕೈಗೊಳ್ಳಲಾಗುತ್ತಿದೆ. ಸದರಿ ಯೋಜನೆಯಡಿಯಲ್ಲಿ ಐ.ಸಿ.ಟಿ. ಸೌಲಭ್ಯಯುಕ್ತ ತರಗತಿಗಳನ್ನು ಅನುಸ್ಥಾಪಿಸಲಾಗುತ್ತಿದ್ದು, ಕಲಿಕಾ ನಿರ್ವಹಣಾ ವ್ಯವಸ್ಥೆ (ಎಲ್‌ಎಂಎಸ್) ತಂತ್ರಾಂಶವನ್ನು ಉಪಯೋಗಿಸಿ ಶಿಕ್ಷಣ ವ್ಯವಸ್ಥೆಯನ್ನು ಡಿಜಿಟಲಿಕರಣಗೊಳಿಸಲಾಗುತ್ತಿದೆ. ಅದರನ್ವಯ ಪ್ರಥಮ ಹಂತದಲ್ಲಿ 420 ಕಾಲೇಜುಗಳಲ್ಲಿ 2500 ಐ.ಸಿ.ಟಿ. ಸೌಲಭ್ಯಯುಕ್ತ ತರಗತಿ ಕೊಠಡಿಗಳನ್ನು ಅನುಸ್ಥಾಪಿಸಲಾಗುತ್ತಿದ್ದು, ಇಂತಹ ಪ್ರತಿ ತರಗತಿಯಲ್ಲಿ ತಲಾ ಒಂದರಂತೆ ಪ್ರೊಜೆಕ್ಟರ್, ವೈಟ್ ಬೋರ್ಡ್, ಆಂಡ್ರಾಯ್ಡ್ ಬಾಕ್ಸ್ ಮತ್ತು ವೈ-ಫೈ ಸೌಲಭ್ಯ ಹಾಗೂ ನಿರಂತರ ವಿದ್ಯುತ್ ಸೌಲಭ್ಯಕ್ಕೆ ಯು.ಪಿ.ಎಸ್. ಒದಗಿಸಲಾಗುತ್ತಿದೆ. ಕಲಿಕಾ ನಿರ್ವಹಣಾ ವ್ಯವಸ್ಥೆ (ಎಲ್‌ಎಂಎಸ್) ಯಲ್ಲಿ ಶಿಕ್ಷಣದ ವಿವಿಧ ಅಂಶಗಳ ವೈಜ್ಞಾನಿಕ ಮಾಪನಕ್ಕೆ ಪೂರಕವಾಗಿ ವಿಶ್ಲೇಷಕ (ಅನಾಲಿಟಿಕ್ಸ್) ಗಳಿದ್ದು, ವಿದ್ಯಾರ್ಥಿಗಳ, ಅಧ್ಯಾಪಕರ ಮತ್ತು ಕಾಲೇಜುಗಳ ರ್‍ಯಾಂಕಿಂಗ್ ಹಾಗೂ ಕ್ಯುಮ್ಯುಲೆಟಿವ್ ಫರ್ಫಾರ್ಮೆನ್ಸ್ ವರದಿ, ವಿದ್ಯಾರ್ಥಿಗಳ ಹಿಮ್ಮಾಹಿತಿ, ಕಂಟೆಂಟ್ ರೇಟಿಂಗ್ ವಿದ್ಯಾರ್ಥಿಗಳಿಂದ ಮತ್ತು ತರಗತಿಗಳಲ್ಲಿ ಅಧ್ಯಾಪಕರಿಂದ ಇ-ಕಂಟೆಂಟ್ ಬಳಕೆಯ ಟ್ರ್ಯಾಕಿಂಗ್, ವಿವರ ಪೂರ್ಣ ವಿಶ್ಲೇಷಣಾತ್ಮಕ ವರದಿ ತಯಾರಿಕೆ ಇವುಗಳಿಗೆ ಅವಕಾಶ ಕಲ್ಪಿಸಲಾಗುತ್ತದೆ. ಡಿಜಿಟಲ್ ಕಲಿಕೆಯ ಯೋಜನೆಯ ಅಂಗವಾಗಿ 2020-21ನೇ ಸಾಲಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಸರ್ಕಾರಿ ಪಾಲಿಟೆಕ್ನಿಕ್‌ಗಳ ಪ್ರಥಮ, ದ್ವಿತೀಯ ವರ್ಷ ವಿದ್ಯಾರ್ಥಿಗಳಿಗೆ ಹಾಗೂ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಪ್ರಥಮ, ದ್ವಿತೀಯ ಮತ್ತು ತೃತೀಯ ವರ್ಷದ ಒಟ್ಟು 1.55 ಲಕ್ಷ ವಿದ್ಯಾರ್ಥಿಗಳಿಗೆ ಟಾಬ್ಲೆಟ್ ಪಿ.ಸಿ.ಗಳನ್ನು ವಿತರಿಸಲು ಅನುಮೋದನೆ ನೀಡಲಾಗಿರುತ್ತದೆ. 2019-20ನೇ ಸಾಲಿನಲ್ಲಿ ಪ್ರಥಮ ಪದವಿ ತರಗತಿಗಳಿಗೆ ಪ್ರವೇಶ ಪಡೆದು ಕೌಟುಂಬಿಕ ವಾರ್ಷಿಕ ಆದಾಯ ರೂ. 2.5 ಲಕ್ಷಗಳಿಗಿಂತ ಕಡಿಮೆ ಇದ್ದ, ಎಲ್ಲಾ ವರ್ಗದ ಒಟ್ಟು 1,09,916 ವಿದ್ಯಾರ್ಥಿಗಳಿಗೆ ಉಚಿತವಾಗಿ ಲ್ಯಾಪ್‌ಟಾಪ್‌ಗಳನ್ನು ವಿತರಿಸಲಾಗಿರುತ್ತದೆ.
ಆ)	ಸರ್ಕಾರಿ ಪದವಿ ಕಾಲೇಜುಗಳಲ್ಲಿ ಮೂಲಭೂತ ಸೌಕರ್ಯಗಳು ಹಾಗೂ ವಿವಿಧ ಸಿಬ್ಬಂದಿ ವರ್ಗವನ್ನು ಕಲ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; ಇಲಾಖೆಯಲ್ಲಿ ಮಂಜೂರಾದ ಮತ್ತು ಖಾಲಿ ಇರುವ ವಿವಿಧ ಸಿಬ್ಬಂದಿ ವರ್ಗಗಳವರ ಸಂಖ್ಯೆ ಎಷ್ಟು;	ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯಲ್ಲಿ ಒಟ್ಟಾರೆ 426 ಪದವಿ ಕಾಲೇಜುಗಳಿದ್ದು, ಸದರಿ ಪದವಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯೆಗನುಗುಣವಾಗಿ ಕೊರತೆಯಿರುವ ಮೂಲಭೂತ ಸೌಕರ್ಯಗಳಾದ ತರಗತಿ ಕೊಠಡಿ, ಗ್ರಂಥಾಲಯ, ಪ್ರಯೋಗಾಲಯ, ಮಹಿಳಾ ವಿಶ್ರಾಂತಿ ಗೃಹ, ಶೌಚಾಲಯಗಳು, ಸಭಾಂಗಣ ಒಳಗೊಂಡಂತೆ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಲು ಕ್ರಮವಹಿಸಲಾಗುತ್ತಿದೆ. ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯಲ್ಲಿ ಪದವಿ ಕಾಲೇಜುಗಳಿಗೆ ಮಂಜೂರಾಗಿರುವ ಬೋಧಕ/ಬೋಧಕೇತರ ಸಿಬ್ಬಂದಿಯ ಸಂಖ್ಯೆಗಳ ವಿವರಗಳು ಈ ಕೆಳಕಂಡಂತಿವೆ:

ಬೋಧಕರು

ಕ್ರ ಸಂ	ವೃಂದ	ಮಂಜೂರಾದ ಹುದ್ದೆಗಳ ಸಂಖ್ಯೆ	ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ	ಖಾಲಿ ಇರುವ ಹುದ್ದೆಗಳ ಸಂಖ್ಯೆ
1	ಪ್ರಾಂಶುಪಾಲರು ಗ್ರೇ-2	38	0	38
2	ಪ್ರಾಂಶುಪಾಲರು ಗ್ರೇ-1	374	3	371
3	ಉಪನ್ಯಾಸಕರು	7604	6121	1483
4	ಗ್ರಂಥಪಾಲಕರು	390	274	116
5	ದೈಹಿಕ ಶಿಕ್ಷಣ ಬೋಧಕರು	349	236	113
	ಒಟ್ಟು	8755	6634	2121

ಬೋಧಕೇತರರು

ಕ್ರ ಸಂ	ವೃಂದ	ಮಂಜೂರಾದ ಹುದ್ದೆಗಳ ಸಂಖ್ಯೆ	ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ	ಖಾಲಿ ಇರುವ ಹುದ್ದೆಗಳ ಸಂಖ್ಯೆ
1	ವ್ಯವಸ್ಥಾಪಕರು	128	110	18
2	ಅಧೀಕ್ಷಕರು	357	321	36
3	ಪ್ರ.ದ.ಸಹಾಯಕರು	459	142	317
4	ದ್ವಿ.ಸ.ಸಹಾಯಕರು	467	298	169
5	ಹಿ.ಬೆರಳಚ್ಚುಗಾರರು	68	33	35
6	ಬೆರಳಚ್ಚುಗಾರರು	352	161	191
7	ಡಾಟಾ ಎಂಟ್ರಿ ಆಪರೇಟರ್	1	0	1
8	ಗ್ರಂಥಾಲಯ ಸಹಾಯಕರು	285	2	283
9	ಅಟೆಂಡರ್‌ಗಳು	1259	375	884
10	ಪರಿಚಾರಕರು	1482	103	1379
	ಒಟ್ಟು	4858	1545	3313

ಇ)	ಬೋಧನಾ ವರ್ಗದ ಸಿಬ್ಬಂದಿಯನ್ನು, ಕೊರತೆಯುಂಟಾಗದಂತೆ ಭರ್ತಿಗೊಳಿಸಲಾಗಿದೆಯೆ; ಇಲ್ಲವಾದಲ್ಲಿ ಅ ಕುರಿತು ಸಕಾಲಿಕ ಕ್ರಮಗಳು ಯಾವುವು?	ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿನ 310 ಪ್ರಾಂಶುಪಾಲರ ಹುದ್ದೆಗಳನ್ನು ಹಾಗೂ 1242 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ವಿಶೇಷ ನೇಮಕಾತಿ ನಿಯಮಗಳನ್ನು ರೂಪಿಸಲಾಗಿದೆ. ಆದರೆ, ಪ್ರಸ್ತುತ ಕೋವಿಡ್-19 ಹಿನ್ನೆಲೆಯಲ್ಲಿ 2020-21ನೇ ಸಾಲಿನಲ್ಲಿ ಯಾವುದೇ ನೇಮಕಾತಿಯನ್ನು ಮಾಡುವಂತಿಲ್ಲ ಎಂಬುದಾಗಿ ಆರ್ಥಿಕ ಇಲಾಖೆಯು ನಿರ್ಬಂಧ ವಿಧಿಸಿರುವುದರಿಂದ ನಿರ್ಬಂಧವನ್ನು ತೆರವುಗೊಳಿಸಿ ಪ್ರಾಂಶುಪಾಲರು ಹಾಗೂ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಆರ್ಥಿಕ ಇಲಾಖೆಯ ಅನುಮೋದನೆ ಕೋರಿದೆ. ಆದಾಗ್ಯೂ, ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ಎದುರಾಗಿ ಲಭ್ಯವಾಗುವ ಬೋಧನಾ ಕಾರ್ಯಭಾರವನ್ನು ನಿರ್ವಹಿಸಲು ಅರ್ಹ ಅತಿಥಿ ಉಪನ್ಯಾಸಕರ ಸೇವೆಯನ್ನು ಬಳಸಿಕೊಂಡು, ಆ ಮೂಲಕ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ತೊಂದರೆಯಾಗದಂತೆ, ಪಾಠ-ಪ್ರವಚನಗಳನ್ನು ನಡೆಸಲು ಕ್ರಮವಹಿಸಲಾಗಿದೆ.

ಇಡಿ 36 ಡಿಸಿಇ 2021

(ಡಾ. ಅಶ್ವಥ್ ನಾರಾಯಣ ಸಿ.ಎನ್.)
ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ)

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	932
ಸದಸ್ಯರ ಹೆಸರು	:	ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ್ (ಬೈಲಹೊಂಗಲ)
ಉತ್ತರಿಸುವ ದಿನಾಂಕ	:	04.02.2021
ಉತ್ತರಿಸುವ ಸಚಿವರು	:	ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬೆಳಗಾವಿ ಜಿಲ್ಲೆ ಬೈಲಹೊಂಗಲ ಮತಕ್ಷೇತ್ರದಲ್ಲಿ ಬರುವ ಸವದತ್ತಿ ತಾಲ್ಲೂಕಿನ ಮುರಗೋಡ ಗ್ರಾಮದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅವಶ್ಯಕತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಬಂದಿದೆ
ಮುರಗೋಡ ಗ್ರಾಮದಿಂದ 10 ರಿಂದ 20 ಕಿ.ಮೀ ಅಂತರದಲ್ಲಿ ಈಗಾಗಲೇ 3 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಮತ್ತು 01 ಖಾಸಗಿ ಅನುದಾನಿತ ಕಾಲೇಜು ಅಸ್ತಿತ್ವದಲ್ಲಿರುತ್ತವೆ. ಸದರಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕೋರ್ಸುಗಳು ಕೆಳಕಂಡಂತಿವೆ;
<table>
<tr><th>ಕಾಲೇಜಿನಹೆಸರು</th><th>ಅಂತರ ಕಿ.ಮೀ</th><th>ಪ್ರವೇಶಪಡೆದಿರುವವಿದ್ಯಾರ್ಥಿಗಳ ಸಂಖ್ಯೆ</th><th>ಲಭ್ಯವಿರುವ ಕೋರ್ಸುಗಳು</th></tr>
<tr><td>ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಬೈಲಹೊಂಗಲ</td><td>12 ಕಿ.ಮೀ</td><td>493</td><td>ಬಿ.ಎ, ಬಿ.ಕಾಂ, ಬಿಬಿಎಂ</td></tr>
<tr><td>ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಯರಗಟ್ಟಿ</td><td>18 ಕಿ.ಮೀ</td><td>125</td><td>ಬಿ.ಎ, ಬಿ.ಕಾಂ</td></tr>
<tr><td>ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನೇಸರಗಿ</td><td>20 ಕಿ.ಮೀ</td><td>315</td><td>ಬಿ.ಎ, ಬಿ.ಕಾಂ, ಬಿಬಿಎಂ</td></tr>
<tr><td>ಕೆ.ಆರ್.ಸಿ.ಇ ಕಾಲೇಜು,ಬೈಲಹೊಂಗಲ (ಖಾಸಗಿಅನುದಾನಿತ)</td><td>12 ಕಿ.ಮೀ</td><td>843</td><td>ಬಿ.ಎ, ಬಿ.ಕಾಂ, ಬಿಎಸ್ಸಿ</td></tr>
</table>
ಸವದತ್ತಿ ತಾಲ್ಲೂಕಿನ ಮುರಗೋಡು ಗ್ರಾಮದ ವಿದ್ಯಾರ್ಥಿಗಳು ಮೇಲಿನ ಅಂಕಣದಲ್ಲಿ ತಿಳಿಸಿರುವ ಕಾಲೇಜುಗಳಲ್ಲಿ ಪ್ರವೇಶ ಪಡೆಯಬಹುದಾಗಿರುತ್ತದೆ.</td></tr>
<tr><td>ಆ)</td><td>ಈ ಗ್ರಾಮದಲ್ಲಿ ಪ್ರಥಮ ದರ್ಜೆ ಕಾಲೇಜು ಪ್ರಾರಂಭಿಸಬೇಕೆಂದು ಅಲ್ಲಿನ ಸಾರ್ವಜನಿಕರು ಹಾಗೂ ಜನಪ್ರತಿನಿಧಿಗಳು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದು ನಿಜವೇ;</td><td>ಹೌದು
ಮುರಗೋಡ ಗ್ರಾಮದಿಂದ 10 ರಿಂದ 20 ಕಿ.ಮೀ ಅಂತರದಲ್ಲಿ ಈಗಾಗಲೇ 3 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಮತ್ತು 01 ಖಾಸಗಿ ಅನುದಾನಿತ ಕಾಲೇಜು ಅಸ್ತಿತ್ವದಲ್ಲಿರುತ್ತವೆ.</td></tr>
</table>

ಕ್ರ. ಸಂ	ಪ್ರಶ್ನೆ	ಉತ್ತರ
ಇ)	ಹೌದದಲ್ಲಿ, ಮುರಗೋಡ ಗ್ರಾಮದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾರಂಭಿಸುವ ಮೂಲಕ ಈ ಭಾಗದ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಲಾಗುವುದೇ?	ಪ್ರಸ್ತುತ ಇರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಆದ್ಯತೆ ನೀಡುತ್ತಿರುವುದರಿಂದ ಹಾಗೂ ಪ್ರಸಕ್ತ ಸಾಲಿನಲ್ಲಿ ಕೋವಿಡ್-19 ಪ್ರಯುಕ್ತ ಆರ್ಥಿಕ ನಿರ್ಬಂಧ ಜಾರಿಯಲ್ಲಿರುವುದರಿಂದ ಹೊಸ ಕಾಲೇಜು ಪ್ರಾರಂಭಿಸುವ ಪ್ರಸ್ತಾವನೆ ಇರುವುದಿಲ್ಲ.

ಕಡತ ಸಂಖ್ಯೆ: ಇಡಿ 09 ಹೆಚ್‌ಪಿಸಿ 2021

(ಡಾ: ಅಶ್ವತ್ಥ್ ನಾರಾಯಣ ಸಿ.ಎನ್)
ಉಪ ಮುಖ್ಯಮಂತ್ರಿಗಳು ಹಾಗೂ
ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ
ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	941
ಮಾನ್ಯ ಸದಸ್ಯರ ಹೆಸರು	ಶ್ರೀ ರೇವಣ್ಣ ಹೆಚ್.ಡಿ. (ಹೊಳೇನರಸೀಪುರ)
ಉತ್ತರಿಸುವ ಸಚಿವರು	ಮಾನ್ಯ ಉಪಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ)
ಉತ್ತರಿಸಬೇಕಾದ ದಿನಾಂಕ	04.02.2021

	ಪ್ರಶ್ನೆ	ಉತ್ತರ
(ಅ)	ಹೊಳೆನರಸೀಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹೊಳೆನರಸೀಪುರ ಟೌನ್ ಸರ್ಕಾರಿ ಮಹಿಳಾ ಗೃಹವಿಜ್ಞಾನ ಕಾಲೇಜು 2006ರಲ್ಲಿ ಪ್ರಾರಂಭವಾಗಿ ಇಂದು ಸುಸಜ್ಜಿತ ಕಟ್ಟಡದೊಂದಿಗೆ ಗೃಹವಿಜ್ಞಾನ, ಬಿಕಾಂ ಮತ್ತು ಎಂಕಾಂ ಕೋರ್ಸ್‌ಗಳನ್ನು ಹೊಂದಿದ್ದು, ಗ್ರಾಮೀಣ ಪ್ರದೇಶದ ಸುಮಾರು 300 ಕ್ಕೂ ಅಧಿಕ ಗ್ರಾಮೀಣ ಪ್ರದೇಶ ವಿದ್ಯಾರ್ಥಿನಿಯರು ಅಧ್ಯಯನ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ. ಹೊಳೆನರಸೀಪುರ ಟೌನ್ ಸರ್ಕಾರಿ ಮಹಿಳಾ ಗೃಹವಿಜ್ಞಾನ ಕಾಲೇಜಿನಲ್ಲಿ 2020-21ನೇ ಸಾಲಿನಲ್ಲಿ ಬಿ.ಎ., ಬಿ.ಕಾಂ., ಬಿ.ಎಸ್ಸಿ ಪದವಿ ಮತ್ತು ಎಂ.ಕಾಂ., ಸ್ನಾತಕೋತ್ತರ ಪದವಿ ತರಗತಿಗಳಿಗೆ ಒಟ್ಟು 192 ವಿದ್ಯಾರ್ಥಿನಿಯರು ಪ್ರವೇಶಾತಿ ಪಡೆದಿರುತ್ತಾರೆ.
(ಆ)	ಹೊಳೆನರಸೀಪುರ ಟೌನ್ ಸರ್ಕಾರಿ ಮಹಿಳಾ ಗೃಹವಿಜ್ಞಾನ ಕಾಲೇಜು ಈಗಾಗಲೇ ನ್ಯಾಕ್ ಪ್ರಕ್ರಿಯೆಯ ಮೊದಲ ಮೌಲ್ಯಮಾಪನಕ್ಕೆ ಒಳಗಾಗಿದ್ದು, ಸಿ ಗ್ರೇಡ್ ಗಳಿಸಿ ಕಾಲೇಜು ಶಿಕ್ಷಣ ಇಲಾಖೆಗೆ ಹೆಚ್ಚಿನ ಗೌರವ ತಂದಿದ್ದು ಈಗಾಗಲೇ ಕಾಲೇಜಿನ ವಿವಿಧ ವಿಭಾಗಗಳು ರಾಷ್ಟ್ರ, ರಾಜ್ಯ ವಿಶ್ವವಿದ್ಯಾನಿಲಯ ಮಟ್ಟದ ವಿಚಾರ ಸಂಕಿರಣಗಳನ್ನು ಆಯೋಜನೆ ಮಾಡುವ ಮೂಲಕ ಹಾಗೂ ಸ್ಪರ್ಧೆಗಳಲ್ಲಿ ಭಾಗವಹಿಸುವ ಮೂಲಕ ಉತ್ತಮ ಹೆಸರನ್ನು ಗಳಿಸಿ ಕಾಲೇಜು ಶಿಕ್ಷಣ ಇಲಾಖೆಗೆ ಗೌರವ ತಂದಿದ್ದು, ಪ್ರಸ್ತುತ ಎಂ.ಎಸ್ಸಿ. (ಫುಡ್ ಸೈನ್ಸ್ ಅಂಡ್ ನ್ಯೂಟ್ರಿಷನ್ಸ್) ಎಂ.ಎಸ್ಸಿ. (ಮನಃಶಾಸ್ತ್ರ) ವಿಭಾಗಗಳಲ್ಲಿ ವ್ಯಾಸಂಗ ಮಾಡಲು ವಿದ್ಯಾರ್ಥಿನಿಯರು ಹೆಚ್ಚಿನ ಆಸಕ್ತಿ ಹೊಂದಿ ಪ್ರವೇಶಾತಿ ಹೊಂದಲು ಬಯಸುತ್ತಿರುವುದರಿಂದ ಸದರಿ ಕಾಲೇಜಿನಲ್ಲಿ ಎಂ.ಎಸ್ಸಿ. (ಫುಡ್ ಸೈನ್ಸ್ ಅಂಡ್ ನ್ಯೂಟ್ರಿಷನ್ಸ್) ಎಂ.ಎಸ್ಸಿ. (ಮನಃಶಾಸ್ತ್ರ) ವಿಭಾಗಗಳನ್ನು 2020-21 ಸಾಲಿನಿಂದ ಹೊಸದಾಗಿ ಪ್ರಾರಂಭಿಸಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುವುದು ನಿಜವೇ; (ಸಂಪೂರ್ಣ ಮಾಹಿತಿ ನೀಡುವುದು)	2020-21ನೇ ಸಾಲಿಗೆ ಹೊಳೆನರಸೀಪುರ ಟೌನ್ ಸರ್ಕಾರಿ ಮಹಿಳಾ ಗೃಹವಿಜ್ಞಾನ ಕಾಲೇಜು, ಇಲ್ಲಿ ಎಂ.ಎಸ್ಸಿ. (ಫುಡ್ ಸೈನ್ಸ್ ಅಂಡ್ ನ್ಯೂಟ್ರಿಷನ್ಸ್) ಮತ್ತು ಎಂ.ಎಸ್ಸಿ. (ಮನಃಶಾಸ್ತ್ರ) ವಿಭಾಗಗಳನ್ನು ಹೊಸದಾಗಿ ಪ್ರಾರಂಭಿಸಲು ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ. ಪ್ರಸ್ತಾವನೆ ಸ್ವೀಕೃತವಾದಲ್ಲಿ ಪರಿಶೀಲಿಸಲಾಗುವುದು.
(ಇ)	ಹಾಗಿದ್ದಲ್ಲಿ, ಗ್ರಾಮೀಣ ಪ್ರದೇಶದ ಬಡಕುಟುಂಬದ ವಿದ್ಯಾರ್ಥಿನಿಯರ ಹಿತದೃಷ್ಟಿಯಿಂದ ಹಾಸನ ಜಿಲ್ಲೆ ಹೊಳೆನರಸೀಪುರ ಸರ್ಕಾರಿ ಮಹಿಳಾ ಗೃಹ ವಿಜ್ಞಾನ	ಅನ್ವಯಿಸುವುದಿಲ್ಲ.

	ಕಾಲೇಜಿಗೆ ಹೊಸದಾಗಿ ಎಂ.ಎಸ್ಸಿ. (ಫುಡ್ ಸೈನ್ಸ್ ಅಂಡ್ ನ್ಯೂಟ್ರಿಷನ್ಸ್) ಎಂ.ಎಸ್ಸಿ (ಮನಃಶಾಸ್ತ್ರ) ವಿಭಾಗಗಳನ್ನು 2020-21ನೇ ಸಾಲಿನಿಂದ ಪ್ರಾರಂಭಿಸಲು ಅನುಮತಿ ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು (ಸಂಪೂರ್ಣ ಮಾಹಿತಿ ನೀಡುವುದು).	

ಸಂಖ್ಯೆ: ಇಡಿ 15 ಯುಎಂವಿ 2021

(ಡಾ: ಅಶ್ವಥ್ ನಾರಾಯಣ ಸಿ.ಎನ್.)
ಉಪ ಮುಖ್ಯಮಂತ್ರಿಗಳು
(ಉನ್ನತ ಶಿಕ್ಷಣ, ಐಟಿ ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ)

ಕರ್ನಾಟಕ ವಿಧಾನ ಸಭೆ

1.	ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ	:	943
2.	ಸದಸ್ಯರ ಹೆಸರು	:	ಶ್ರೀ ಹೆಚ್.ಡಿ ರೇವಣ್ಣ (ಹೊಳೇನರಸೀಪುರ)
3.	ಉತ್ತರಿಸಬೇಕಾದ ದಿನಾಂಕ	:	04.02.2021
4.	ಉತ್ತರಿಸಬೇಕಾದ ಸಚಿವರು	:	ವೈದ್ಯಕೀಯ ಶಿಕ್ಷಣ ಸಚಿವರು

ಕ್ರ. ಸಂ	ಪ್ರಶ್ನೆಗಳು	ಉತ್ತರಗಳು
ಅ)	ಹಾಸನ ನಗರದಲ್ಲಿ 2005-06ನೇ ಸಾಲಿನಲ್ಲಿ ಹಾಸನ ವೈದ್ಯಕೀಯ ವಿದ್ಯಾ ಸಂಸ್ಥೆ ಸ್ಥಾಪನೆ ಆಗಿರುವುದು ನಿಜವೇ;	ಹೌದು
ಆ)	ಹಾಸನ ನಗರದ ಹಾಸನ ವೈದ್ಯಕೀಯ ವಿದ್ಯಾ ಸಂಸ್ಥೆ ಎಂ.ಸಿ.ಐ. ನರ್ಮ್‌ಗಳ ಪ್ರಕಾರ ಕಟ್ಟಡಗಳು ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆಯೇ;	ಹೌದು
ಇ)	ಹಾಸನ ನಗರದ ಹಾಸನ ವೈದ್ಯಕೀಯ ವಿದ್ಯಾ ಸಂಸ್ಥೆ ಎಂ.ಸಿ.ಐ.ನ ಆದೇಶ ಸಂಖ್ಯೆ:ಎಂ.ಸಿ.ಐ-18(1)/2018-ಎಂ.ಇ.ಡಿ./100818/ದಿ:05.04.2018 ರಂತೆ 2021-22 ಒಳಗೆ ಕಟ್ಟಡ ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸದಿದ್ದಲ್ಲಿ ಕಾಲೇಜಿನ ಮಾನ್ಯತೆಯನ್ನು ರದ್ದುಪಡಿಸಲಾಗುವುದು ಎಂದು ತಿಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಭಾರತೀಯ ವೈದ್ಯಕೀಯ ಪರಿಷತ್ತು, ನವದೆಹಲಿ ಇವರ ಗೆಜೆಟೆಡ್ ಅಧಿಸೂಚನೆ ಸಂಖ್ಯೆ:MCI-18(1)/2018-MED/100818, ದಿನಾಂಕ:05.04.2018 ರ ಅನ್ವಯ ಯಾವುದೇ ಸಂಸ್ಥೆಯು ಭಾರತೀಯ ವೈದ್ಯಕೀಯ ಪರಿಷತ್ತಿನಿಂದ ಮಾನ್ಯತೆಯನ್ನು ಪಡೆದ 03 ವರ್ಷಗಳಾಗಿ ಪಿ.ಜಿ ಕೋರ್ಸ್‌ಗಳನ್ನು ಪ್ರಾರಂಭಿಸಲು ಅರ್ಜಿಯನ್ನು ಸಲ್ಲಿಸದಿದ್ದಲ್ಲಿ ಸಂಸ್ಥೆಯಲ್ಲಿ ಮಾನ್ಯತೆಯನ್ನು ರದ್ದು ಪಡಿಸಲಾಗುವುದೆಂದು ಉಲ್ಲೇಖಿಸಲ್ಪಟ್ಟಿರುತ್ತದೆ, ಸಂಸ್ಥೆಯಲ್ಲಿ ಈಗಾಗಲೇ 14 ವಿಭಾಗಗಳಲ್ಲಿ ವೈದ್ಯಕೀಯ ಪಿ.ಜಿ.ಕೋರ್ಸ್‌ಗಳನ್ನು ಪ್ರಾರಂಭಿಸಲು ರಾಷ್ಟ್ರೀಯ ವೈದ್ಯಕೀಯ ಆಯೋಗಕ್ಕೆ (National Medical Commission) ಅರ್ಜಿ ಸಲ್ಲಿಸಲಾಗಿದೆ.
ಈ)	ಹಿಂದಿನ ಜೆ.ಡಿ.ಎಸ್-ಕಾಂಗ್ರೆಸ್ ಮೈತ್ರಿ ಸರ್ಕಾರದ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ದಿನಾಂಕ:08.05.2006, 02.06.2018 ಹಾಗೂ ದಿನಾಂಕ:28.06.2019 ರಂದು ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಮಾನುಸಾರ ಅವಶ್ಯವಿರುವ ಕಟ್ಟಡ ಹಾಗೂ ವಿವಿಧ ಮೂಲಭೂತ ಸೌಕರ್ಯಗಳ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದ ಆರ್ಥಿಕ	ಹೌದು ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಾಮಾನುಸಾರ ಎಂ.ಬಿ.ಬಿ.ಎಸ್ ವಿದ್ಯಾರ್ಥಿಗಳಿಗೆ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಮೂಲಭೂತ ಸೌಲಭ್ಯ ಕಲ್ಪಿಸುವ ಸಲುವಾಗಿ

	ಇಲಾಖೆಯ ಹಾಗೂ ವೈದ್ಯಕೀಯ ಹಿರಿಯ ಅಧಿಕಾರಿಗಳು ಹಾಗೂ ಹಿರಿಯ ಅಧಿಕಾರಿಗಳ ಸಮ್ಮುಖದಲ್ಲಿ ಸಭೆ ನಡೆಸಿ ಈಗಾಗಲೇ ಸಭೆಯ ನಡವಳಿಗಳನ್ನು ಸಂಖ್ಯೆ:ಮುಮಂ/ಆಕಾ/208/2019 ದಿನಾಂಕ: 05.05.2006 ರಂದು ನಡೆದ ಸಭೆಯ ನಡವಳಿ ಹಾಗೂ 02.06.2018 ನಡವಳಿ ಹಾಗೂ ಜಿಎಂ.33439/ಆರ್-ಜಿ/28.06.2019 ರಂದು ನಡೆದಿರುವ 03 ಸಭೆಯಲ್ಲಿ ಪಿಜಿ ಹಾಸ್ಟೆಲ್ ಕಟ್ಟಡ ನಿರ್ಮಾಣ ಎ-ಬ್ಲಾಕ್ ರೂ.9.50 ಕೋಟಿ , ಪಿಜಿ ಹಾಸ್ಟೆಲ್ ಕಟ್ಟಡ ನಿರ್ಮಾಣ ಬಿ-ಬ್ಲಾಕ್ ರೂ.9.50 ಕೋಟಿ, ಎ ಮತ್ತು ಬಿ ಬ್ಲಾಕ್ ಹಾಸ್ಟೆಲ್‌ಗಳನ್ನು 4ನೇ ಮಹಡಿಯಿಂದ 6ನೇ ಮಹಡಿಗೆ ಮೇಲ್ದರ್ಜೆಗೆ ಏರಿಸುವುದು ರೂ.9.00 ಕೋಟಿ ಸಿ ಮತ್ತು ಡಿ ಬ್ಲಾಕ್‌ಗಳನ್ನು 4ನೇ ಮಹಡಿಯಿಂದ 6ನೇ ಮಹಡಿಗೆ ಮೇಲ್ದರ್ಜೆಗೇರಿಸುವುದು ರೂ.9.00 ಕೋಟಿ, ಫುಡ್‌ಕೋರ್ಟ್ ಹಾಗೂ ಅಥಿತಿ ಗೃಹಗಳ ಸಂಯೋಜಿತ ಕಟ್ಟಡ ನಿರ್ಮಾಣ ರೂ.5.25 ಕೋಟಿ, ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರ ಕಟ್ಟಡ ನಿರ್ಮಾಣ ಕಾಮಗಾರಿ ರೂ.9.75 ಕೋಟಿ ಶಂಕರಮಠ ರಸ್ತೆ ಕ್ರಾಸ್‌ನಿಂದ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಹೊಸ ಬೋಧಕ ಆಸ್ಪತ್ರೆಯವರೆಗೆ ರಸ್ತೆ ನಿರ್ಮಾಣ ಹಾಗೂ ಪಾರ್ಕಿಂಗ್ ಶೆಡ್‌ಗಳ ಕಾಮಗಾರಿ ರೂ.3.00 ಕೋಟಿ, ಪಾರ್ಕಿಂಗ್ ಶೆಡ್‌ಗಳು , ಎಸ್.ಟಿ.ಪಿ. ಯ ಹತ್ತಿರ ಕಾಂಪೌಡ್ ಗೋಡೆ, ಕಾಲುದಾರಿ, ಹೈಮಾಸ್ಟ್, ಲೈಟ್ ಅಳವಡಿಕೆ ಮತ್ತು ಸಂಬಂಧಿತ ಇತರೆ ಕಾಮಗಾರಿಗಳು ರೂ.3.00 ಕೋಟಿ ಒಟ್ಟು ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಮಾನುಸಾರ ಹೆಚ್ಚುವರಿಯಾಗಿ ಕೈಗೊಳ್ಳಬೇಕಾಗಿರುವ ಕಾಮಗಾರಿಯ ಒಟ್ಟು ಮೊತ್ತ 58.00 ಕೋಟಿಗಳ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುವುದು ನಿಜವೇ;	ಸ್ವೀಕೃತಗೊಂಡಿರುವ ಪ್ರಸ್ತಾವನೆಯ ಕುರಿತು ಅಗತ್ಯ ಅನುದಾನ ಬಿಡುಗಡೆ ಕೋರಿ ಆರ್ಥಿಕ ಇಲಾಖೆಯ ಸಹಮತಿ ಕೋರಲಾಗಿದೆ.
ಉ)	ಹಾಗಿದ್ದಲ್ಲಿ, ಮೇಲ್ಕಂಡ ಕಾಮಗಾರಿಗಳಿಗಾಗಿ ರೂ.58.00 ಕೋಟಿಗಳ ಬಿಡುಗಡೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು)	

ಸಂಖ್ಯೆ: ಎಂಇಡಿ 38 ಕೆಯುಎಂ 2021

(ಡಾ: ಕೆ. ಸುಧಾಕರ್)
ವೈದ್ಯಕೀಯ ಶಿಕ್ಷಣ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	987
ಸದಸ್ಯರ ಹೆಸರು	:	ಶ್ರೀ ಸುಬ್ಬಾರೆಡ್ಡಿ ಎಸ್.ಎನ್ (ಬಾಗೇಪಲ್ಲಿ)
ಉತ್ತರಿಸುವ ದಿನಾಂಕ	:	04-02-2021
ಉತ್ತರಿಸುವ ಸಚಿವರು	:	ಮಾನ್ಯ ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಅರಣ್ಯ ಇಲಾಖೆಯ ವಶದಲ್ಲಿರುವ ಜಮೀನಿನಲ್ಲಿ ರಸ್ತೆ ನಿರ್ಮಾಣ ಮಾಡಲು ಅವಕಾಶ ಇದೆಯೇ; ಇದ್ದಲ್ಲಿ ಅದರ ಮಾನದಂಡಗಳೇನು;	ಅರಣ್ಯ ಇಲಾಖೆಯ ವಶದಲ್ಲಿರುವ ಜಮೀನಿನಲ್ಲಿ ರಸ್ತೆ ನಿರ್ಮಾಣ ಮಾಡಲು ಅವಕಾಶ ಇದೆ. ಅರಣ್ಯ (ಸಂರಕ್ಷಣೆ) ಕಾಯ್ದೆ 1980ರ ಸೆಕ್ಷನ್ 2ರನ್ವಯ ಅರಣ್ಯ ಪ್ರದೇಶವನ್ನು ಅರಣ್ಯೇತರ ಉದ್ದೇಶಕ್ಕಾಗಿ (ರಸ್ತೆ ನಿರ್ಮಾಣ ಅಥವಾ ಇತರೆ ಬಳಕೆಗೆ) ಕೇಂದ್ರ ಸರ್ಕಾರದ ಪೂರ್ವಾನುಮೋದನೆ ಪಡೆಯುವುದು ಕಡ್ಡಾಯವಾಗಿರುತ್ತದೆ. ಅದಕ್ಕಾಗಿ ಇರುವ ಮಾನದಂಡಗಳೇನೆಂದರೆ; • ಪ್ರಸ್ತಾಪಿತ ರಸ್ತೆಯು ಅವಶ್ಯಕವಾಗಿರಬೇಕು ಹಾಗೂ ಪ್ರಸ್ತಾಪಿತ ಅರಣ್ಯ ಪ್ರದೇಶವನ್ನು ಹೊರತು ಪಡಿಸಿ ಬೇರೆ ಯಾವುದೇ ಪರ್ಯಾಯ ಮಾರ್ಗ ಇರಕೂಡದು. • ಸದರಿ ಪ್ರಸ್ತಾಪಿತ ರಸ್ತೆ ಕಾಮಗಾರಿಯು ಕನಿಷ್ಠ ಅರಣ್ಯ ಭೂಮಿಗೊಳಪಟ್ಟಿರಬೇಕು.
ಆ)	ಗುಡಿಬಂಡೆ ತಾಲ್ಲೂಕು ಚೆಂಡೂರು ಗ್ರಾಮದ ಅರಣ್ಯ ಇಲಾಖೆಯ ಜಮೀನಿನಲ್ಲಿ ಖಾಸಗಿ ವಿದ್ಯಾಸಂಸ್ಥೆಗೆ ತೆರಳಲು ರಸ್ತೆ ನಿರ್ಮಾಣ ಮಾಡಿದ್ದು, ಅದಕ್ಕೆ ಸರ್ಕಾರದಿಂದ ಅನುಮತಿಯನ್ನು ನೀಡಲಾಗಿದೆಯೇ;	ಪ್ರಸ್ತಾಪಿತ ಗುಡಿಬಂಡೆ ತಾಲ್ಲೂಕು ಚೆಂಡೂರು ಗ್ರಾಮದ ಖಾಸಗಿ ವಿದ್ಯಾಸಂಸ್ಥೆಗೆ ತೆರಳುವ ರಸ್ತೆಯು ಅರಣ್ಯೇತರ ಪ್ರದೇಶವಾಗಿರುತ್ತದೆ.
ಇ)	ಜಿಲ್ಲಾ ರಸ್ತೆ ಸಂಪರ್ಕದ ನಕಾಶೆಯಲ್ಲಿ ಮತ್ತು ಅರಣ್ಯ ಇಲಾಖೆಯ ನಕಾಶೆಯಲ್ಲಿ ಬಂಡಿ ದಾರಿ ಎಂದು ನಮೂದಾಗಿದ್ದು, ಸದರಿ ರಸ್ತೆಯನ್ನು ದುರಸ್ತಿ ಮಾಡುವಲ್ಲಿ ಸರ್ಕಾರದ ನಿಲುವೇನು? (ವಿವರ ನೀಡುವುದು)	ಕೇಂದ್ರ ಸರ್ಕಾರದ ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ ಪತ್ರ ಸಂಖ್ಯೆ: FC-11/117/2019-FC ದಿನಾಂಕ 09-11-2020ರಲ್ಲಿ ಹೊರಡಿಸಿದ ಮಾರ್ಗಸೂಚಿಗಳ ಅನ್ವಯ ಈಗಾಗಲೇ 25-10-1980ರ ಪೂರ್ವದಲ್ಲಿ (ಅರಣ್ಯ ಸಂರಕ್ಷಣಾ ಕಾಯ್ದೆ, 1980 ಜಾರಿಗೆ ಬರುವ ಪೂರ್ವದಲ್ಲಿ) ನಿರ್ಮಾಣ ಆಗಿರುವ ರಸ್ತೆಗಳ ದುರಸ್ತಿ ಹಾಗೂ ನಿರ್ವಹಣೆಗೆ ಸಂಬಂಧಪಟ್ಟಂತೆ ವಿಧಿಸಿರುವ ಷರತ್ತುಗಳು ಈ ಕೆಳಕಂಡಂತಿರುತ್ತದೆ. 1. ಅರಣ್ಯ ಪ್ರದೇಶವನ್ನು ಅಗೆಯುವಂತಿಲ್ಲ ಮತ್ತು ಅಲ್ಲಿರುವ ಮರಗಳನ್ನು ಕಡಿತಲೆ ಮಾಡುವಂತಿಲ್ಲ.

		2. ರಸ್ತೆಯ ದುರಸ್ಥಿ/ಸುಧಾರಣೆ/ಡಾಂಬರೀಕರಣ ಮಾಡುವ ಸಂದರ್ಭದಲ್ಲಿ ಅರಣ್ಯ ಪ್ರದೇಶದಲ್ಲಿನ ಸಸ್ಯ ಮತ್ತು ಪ್ರಾಣಿ ಸಂಕುಲಕ್ಕೆ ಹಾನಿ ಉಂಟು ಮಾಡದಂತೆ ಸಾಕಷ್ಟು ಮುಂಜಾಗ್ರತಾ ಕ್ರಮಗಳನ್ನು ಉಪಯೋಗಿ ಸಂಸ್ಥೆಯು ವಹಿಸತಕ್ಕದ್ದು. 3. ಅರಣ್ಯದಲ್ಲಿ ಕಲ್ಲುಗಳನ್ನು ಒಡೆಯುವಂತಿಲ್ಲ ಹಾಗೂ ಪುಡಿ ಮಾಡುವಂತಿಲ್ಲ. 4. ಹಾಲಿ ಇರುವ ರಸ್ತೆಯನ್ನು ಅಗಲೀಕರಣ ಮಾಡುವಂತಿಲ್ಲ. ಸಂಬಂಧಿತ ಉಪ ಅರಣ್ಯ ಸಂರಕ್ಷಣಾಧಿಕಾರಿಯವರೊಂದಿಗೆ ಸಮಾಲೋಚಿಸಿ ಅಭಿವೃದ್ಧಿ ಪಡಿಸಿದ ಎರಡೂ ರಸ್ತೆಯ ಬದಿಯಲ್ಲಿ ಮಣ್ಣಿನ ಸವಕಳಿಯನ್ನು ತಡೆಗಟ್ಟಲು ಅವಶ್ಯವಿರುವ ಕ್ರಮಗಳನ್ನು ಯೋಜನಾ ವೆಚ್ಚದಲ್ಲಿಯೇ ಕೈಗೊಳ್ಳತಕ್ಕದು. 5. ಅರಣ್ಯ ರಕ್ಷಣೆ ಮತ್ತು ಸಂರಕ್ಷಣೆ ಹಿತದೃಷ್ಟಿಯಿಂದ ಸಂಬಂಧಿತ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಕಾಲಕಾಲಕ್ಕೆ ವಿಧಿಸುವ ಷರತ್ತುಗಳಿಗೆ ಬದ್ಧರಾಗಿರಬೇಕು.

ಸಂಖ್ಯೆ: ಅಪಜೀ 12 ಎಫ್‌ಎಲ್‌ಎಲ್ 2021

(ಅರವಿಂದ ಲಿಂಬಾವಳಿ)
ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕರ್ನಾಟಕ ವಿಧಾನಸಭೆಯ

ಚುಕ್ಕೆ ಗುರುತಿಲ್ಲದ ಪ್ರಶ್ನೆ

ಚುಕ್ಕೆ ಗುರುತಿಲ್ಲದ ಪಶ್ನೆ ಸಂಖ್ಯೆ	:	999
ವಿಧಾನ ಸಭೆಯ ಸದಸ್ಯರ ಹೆಸರು	:	ಶ್ರೀ ರಾಮದಾಸ್. ಎಸ್. ಎ (ಕೃಷ್ಣರಾಜ)
ಉತ್ತರಿಸಬೇಕಾದ ದಿನಾಂಕ	:	04-02-2021
ಉತ್ತರಿಸಬೇಕಾದವರು	:	ಮಾನ್ಯ ಪ್ರವಾಸೋದ್ಯಮ ಹಾಗೂ ಪರಿಸರ ಮತ್ತು ಜೀವಿಪರಿಸ್ಥಿತಿ ಸಚಿವರು

****

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ನಿಷೇಧ ಮಾಡಲು ಆದೇಶ ಹೊರಡಿಸಿದ್ದರೂ ಪ್ಲಾಸ್ಟಿಕ್ ಬಳಕೆ ಮುಂದುವರೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಗಮನಕ್ಕೆ ಬಂದಿರುತ್ತದೆ. ಉಲ್ಲಂಘನೆಯನ್ನು ನಿಯಂತ್ರಿಸಲು, ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಪ್ಲಾಸ್ಟಿಕ್ ಕ್ಯಾರಿಬ್ಯಾಗ್‌ಗಳನ್ನು ಉತ್ಪಾದಿಸುವುದನ್ನು ಹಾಗು ಮಾರಾಟ ಮಾಡುವುದನ್ನು ನಿಯಂತ್ರಿಸಲು ತಹಸೀಲ್ದಾರ್ / ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಟಾಸ್ಕ್‌ಫೋರ್ಸ್ ರಚಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗಿರುತ್ತದೆ. ಪ್ಲಾಸ್ಟಿಕ್ ಕ್ಯಾರಿ ಬ್ಯಾಗ್‌ಗಳ ಮಾರಾಟ ಮತ್ತು ಬಳಕೆಯನ್ನು ನಿಲ್ಲಿಸುವ ಸಲುವಾಗಿ ನಗರ ಸ್ಥಳೀಯ ಸಂಸ್ಥೆಗಳು ಅಕ್ರಮವಾಗಿ ಪ್ಲಾಸ್ಟಿಕ್ ಕ್ಯಾರಿ ಬ್ಯಾಗ್‌ಗಳ ದಾಸ್ತಾನು ಹೊಂದಿರುವ ಬಗ್ಗೆ ಮಾಹಿತಿ ದೊರೆತ ಕೂಡಲೇ ಸದರಿ ದಾಸ್ತಾನುಗಳ ಮೇಲೆ ದಾಳಿ ನಡೆಸಿ, ಅಕ್ರಮ ಕ್ಯಾರಿ ಬ್ಯಾಗ್‌ಗಳನ್ನು ವಶಪಡಿಸಿಕೊಂಡು, ಜುಲ್ಮಾನೆಯನ್ನು ಸಂಗ್ರಹಿಸಲಾಗಿರುತ್ತದೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ 58 ಪ್ಲಾಸ್ಟಿಕ್ ಘಟಕಗಳಿಗೆ ಮುಚ್ಚುವ ಆದೇಶವನ್ನು ನೀಡಲಾಗಿರುತ್ತದೆ. 9 ಪ್ಲಾಸ್ಟಿಕ್ ಘಟಕಗಳ ವಿರುದ್ಧ ನ್ಯಾಯಾಲಯದಲ್ಲಿ ಕ್ರಿಮಿನಲ್ ಮೊಕದ್ದಮೆಯನ್ನು ಮಂಡಳಿಯಿಂದ ಹೂಡಲಾಗಿರುತ್ತದೆ.
ಆ)	ರಾಜ್ಯದಲ್ಲಿ ಪೂರ್ಣ ಪ್ರಮಾಣದಲ್ಲಿ ಮತ್ತು ಪರಿಣಾಮಕಾರಿಯಾಗಿ ಪ್ಲಾಸ್ಟಿಕ್ ಬಳಕೆಯನ್ನು ನಿಷೇಧ ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?	ಸರ್ಕಾರದ ಅಧಿಸೂಚನೆ ಸಂಖ್ಯೆ: ಅಪಜೀ 17 ಇಪಿಸಿ 2012 ರನ್ವಯ ರಾಜ್ಯದಲ್ಲಿ ದಿನಾಂಕ 11-03-2016 ರಿಂದ ಪ್ಲಾಸ್ಟಿಕ್ ನಿಷೇಧ ಅಧಿಸೂಚನೆ ಜಾರಿಗೆ ಬಂದಿದ್ದು, ಇದರಡಿಯಲ್ಲಿ ಪ್ಲಾಸ್ಟಿಕ್ ಕ್ಯಾರಿಬ್ಯಾಗ್, ಪ್ಲಾಸ್ಟಿಕ್ ಭಿತ್ತಿಪತ್ರ, ಪ್ಲಾಸ್ಟಿಕ್

		ತೋರಣ, ಫ್ಲೆಕ್ಸ್, ಪ್ಲಾಸ್ಟಿಕ್ ಬಾವುಟ, ಪ್ಲಾಸ್ಟಿಕ್ ತಟ್ಟೆ, ಪ್ಲಾಸ್ಟಿಕ್ ಲೋಟ, ಪ್ಲಾಸ್ಟಿಕ್ ಚಮಚ, ಕ್ಲಿಂಗ್ ಫಿಲ್ಮ್ಸ್ ಮತ್ತು ಊಟದ ಮೇಜಿನ ಮೇಲೆ ಹರಡುವ ಪ್ಲಾಸ್ಟಿಕ್ ಹಾಳೆ ಹಾಗೂ ಥರ್ಮೋಕೋಲ್ ಮತ್ತು ಪ್ಲಾಸ್ಟಿಕ್ ಮೈಕ್ರೋ ಬೇಡ್ಸ್‌ನಿಂದ ತಯಾರಾದಂತಹ ಮೇಲ್ಕಂಡ ವಸ್ತುಗಳ ಬಳಕೆಯನ್ನು ರಾಜ್ಯದಾದ್ಯಂತ ನಿಷೇಧಿಸಲಾಗಿದೆ. ಮುಂದುವರೆದು, ಯಾವುದೇ ಕೈಗಾರಿಕೆ ಅಥವಾ ವ್ಯಕ್ತಿ ಯಾವುದೇ ದಪ್ಪದ ಯಾವುದೇ ರೀತಿಯ ಪ್ಲಾಸ್ಟಿಕ್ ಕ್ಯಾರಿಬ್ಯಾಗ್, ಪ್ಲಾಸ್ಟಿಕ್ ಭಿತ್ತಿಪತ್ರ, ಪ್ಲಾಸ್ಟಿಕ್ ತೋರಣ, ಫ್ಲೆಕ್ಸ್, ಪ್ಲಾಸ್ಟಿಕ್ ಬಾವುಟ, ಪ್ಲಾಸ್ಟಿಕ್ ತಟ್ಟೆ, ಪ್ಲಾಸ್ಟಿಕ್ ಲೋಟ, ಪ್ಲಾಸ್ಟಿಕ್ ಚಮಚ, ಕ್ಲಿಂಗ್ ಫಿಲ್ಮ್ಸ್ ಮತ್ತು ಊಟದ ಮೇಜಿನ ಮೇಲೆ ಹರಡುವ ಪ್ಲಾಸ್ಟಿಕ್ ಹಾಳೆ ಹಾಗೂ ಥರ್ಮೋಕೋಲ್ ಮತ್ತು ಪ್ಲಾಸ್ಟಿಕ್ ಮೈಕ್ರೋ ಬೇಡ್ಸ್‌ನಿಂದ ತಯಾರಾದಂತಹ ಮೇಲ್ಕಂಡ ವಸ್ತುಗಳ ತಯಾರಿಕೆ, ಸರಬರಾಜು, ಸಂಗ್ರಹಣೆ, ಸಾಗಾಣಿಕೆ, ಮಾರಾಟ ಮತ್ತು ವಿತರಣೆ ಮಾಡುವುದನ್ನು ರಾಜ್ಯಾದ್ಯಂತ ನಿಷೇಧಿಸಿದೆ. ಸರ್ಕಾರದ ವತಿಯಿಂದ ಪರಿಸರಾತ್ಮಕವಾಗಿ ಸೂಕ್ಷ್ಮವಾದ ಮತ್ತು ಬಹಳಷ್ಟು ಸಾರ್ವಜನಿಕರನ್ನು ಆಕರ್ಷಿಸುವ ಸ್ಥಳಗಳು ಹಾಗೂ ಧಾರ್ಮಿಕ ಸ್ಥಳಗಳಲ್ಲಿ ಹಾಗೂ ಅದರ ಸುತ್ತಮುತ್ತ ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಸುವಂತೆ ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಕಾಲಕಾಲಕ್ಕೆ ಪರಿಸರ (ಸಂರಕ್ಷಣಾ) ಕಾಯ್ದೆ, 1986ರ ಸೆಕ್ಷನ್ 5ರ ಅಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಬಳಸಿ ನಿರ್ದೇಶನ ನೀಡಲಾಗಿದೆ.

ಅಪಜೀ 02 ಇಎನ್‌ಜಿ 2021

(ಸಿ.ಪಿ.ಯೋಗೇಶ್ವರ)

ಪ್ರವಾಸೋದ್ಯಮ ಹಾಗೂ ಪರಿಸರ ಮತ್ತು ಜೀವಿಪರಿಸ್ಥಿತಿ

ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1003
ಸದಸ್ಯರ ಹೆಸರು	:	ಶ್ರೀ ವೆಂಕಟರೆಡ್ಡಿ ಮುದ್ನಾಳ್ (ಯಾದಗಿರಿ)
ಉತ್ತರಿಸುವ ಸಚಿವರು	:	ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು
ಉತ್ತರಿಸಬೇಕಾದ ದಿನಾಂಕ	:	04.02.2021

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಯಾದಗಿರಿ ಜಿಲ್ಲೆಯನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರವು ಅತೀ ಹಿಂದುಳಿದ ಜಿಲ್ಲೆಯೆಂದು ಘೋಷಿಸಿದ್ದು, ಸದರಿ ಜಿಲ್ಲೆಗೆ ಅಭಿವೃದ್ಧಿಯನ್ನು ಮಾಡುವ ನಿಟ್ಟಿನಲ್ಲಿ ವಿಶೇಷ ಯೋಜನೆಗಳನ್ನು ರೂಪಿಸುವ ಉದ್ದೇಶವೇನಾದರೂ ಸರ್ಕಾರಕ್ಕೆ ಇದೆಯೇ;	ಯಾದಗಿರಿ ಜಿಲ್ಲೆಯನ್ನು ಕೇಂದ್ರ ಸರ್ಕಾರವು ಅತೀ ಹಿಂದುಳಿದ ಜಿಲ್ಲೆಯೆಂದು ಘೋಷಿಸಿ ನೀತಿ ಆಯೋಗಕ್ಕೆ ಶಿಫಾರಸ್ಸು ಮಾಡಿ ಮಹತ್ವಾಕಾಂಕ್ಷಿ ಜಿಲ್ಲೆಯಂದು ಪರಿಗಣಿಸಿ ವಿಶೇಷ ಯೋಜನೆಗಳನ್ನು ರೂಪಿಸಲಾಗಿದೆ. ರಾಜ್ಯ ಸರ್ಕಾರದಿಂದ ಯಾದಗಿರಿ ಜಿಲ್ಲೆಗೆ ವಿಶೇಷ ಅಭಿವೃದ್ಧಿ ಯೋಜನೆಯಡಿ ಹಾಗೂ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಯೋಜನೆಯಡಿ ಸಹ ಯೋಜನೆಗಳನ್ನು ರೂಪಿಸಲಾಗಿದೆ. • ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಯೋಜನೆಯಡಿ ಯಾದಗಿರಿ ಜಿಲ್ಲೆಗೆ 2013-14ನೇ ಸಾಲಿನಿಂದ 2020-21ನೇ ಸಾಲಿನವರೆಗೆ ರೂ.59500.36 ಲಕ್ಷಗಳು ಬಿಡುಗಡೆಗೊಳಿಸಿ ರೂ.49780.81 ವೆಚ್ಚವಾಗಿರುತ್ತದೆ. • ವಿಶೇಷ ಅಭಿವೃದ್ಧಿ ಯೋಜನೆಯಡಿ ಯಾದಗಿರಿ ಜಿಲ್ಲೆಗೆ 2020-21ನೇ ಸಾಲಿನಲ್ಲಿ ರೂ.17557.62 ಲಕ್ಷಗಳನ್ನು ನಿಗದಿಪಡಿಸಲಾಗಿದೆ.
ಆ)	ಹಾಗಿದ್ದಲ್ಲಿ, ಈ ಜಿಲ್ಲೆಗೆ ಯಾವ ಯೋಜನೆಗಳ ಮುಖಾಂತರ ಅಭಿವೃದ್ಧಿಪಡಿಸಲು ಸರ್ಕಾರ ಉದ್ದೇಶಿಸಿದೆ?	ಕೇಂದ್ರ ಸರ್ಕಾರದಿಂದ ಮಹತ್ವಾಕಾಂಕ್ಷಿ ಜಿಲ್ಲೆಯಾದ ಯಾದಗಿರಿಗೆ ಈ ಕೆಳಗಿನ ಯೋಜನೆಗಳನ್ನು ಅಭಿವೃದ್ದಿ ಯೋಜನೆಯನ್ನು ಹಮ್ಮಿಕೊಂಡಿದೆ. 1. ಆರೋಗ್ಯ/ಪೌಷ್ಟಿಕತೆ 2. ಶಿಕ್ಷಣ ವಲಯ 3. ಕೃಷಿ ಮತ್ತು ಜಲಸಂಪನ್ಮೂಲ ವಲಯ 4. Financial Inclusion 5. ಕೌಶಲ್ಯಾಭಿವೃದ್ಧಿ ಯೋಜನೆ 6. ಮೂಲಸೌಲಭ್ಯಗಳ ಅಭಿವೃದ್ಧಿ ರಾಜ್ಯ ಸರ್ಕಾರದಿಂದ ಯಾದಗಿರಿ ಜಿಲ್ಲೆಗೆ ಮೂಲ ಸೌಲಭ್ಯಗಳನ್ನು ಒದಗಿಸುವ ಕಾರ್ಯಕ್ರಮಗಳಿಗೆ ವಿಶೇಷ ಅಭಿವೃದ್ಧಿ ಯೋಜನೆಯಡಿ ಹಾಗೂ ಕಲ್ಯಾಣ

ಕ್ರ ಸಂ.	ಪ್ರಶ್ನೆ	ಉತ್ತರ
		ಕರ್ನಾಟಕ ಪ್ರದೇಶಾಭಿವೃದ್ಧಿ ಯೋಜನೆಯಡಿ ತಾಲ್ಲೂಕು ದುಸ್ಥಿತಿ ಸೂಚ್ಯಾಂಕಕ್ಕೆ ಅನುಗುಣವಾಗಿ ಹಣಕಾಸು ಸೌಲಭ್ಯವನ್ನು ನೀಡಲಾಗುತ್ತದೆ.

ಪಿಡಿಎಸ್ 02 ಎಸ್‌ಡಿಪಿ 2021

(ಡಾ॥ ಕೆ.ಸಿ.ನಾರಾಯಣಗೌಡ)
ಸಚಿವರು,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :1006

ಮಾನ್ಯ ವಿಧಾನ ಸಭಾ ಸದಸ್ಯರ ಹೆಸರು :ಶ್ರೀ ಪ್ರಿಯಾಂಕ ಎಂ ಖರ್ಗೆ (ಚಿತ್ತಾಪುರ)

ಉತ್ತರಿಸಬೇಕಾದ ದಿನಾಂಕ :04-02-2021

ಉತ್ತರಿಸುವ ಸಚಿವರು :ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ	ಕೋವಿಡ್-19 ಸೋಂಕಿಗೆ ಸಂಬಂಧಪಟ್ಟಂತೆ ಕರ್ನಾಟಕದ ಸರ್ಕಾರಿ ಉದ್ಯೋಗಿಗಳಿಗೆ ಯಾವ ಮಾನದಂಡದ ಮೇಲೆ ಲಸಿಕೆ ನೀಡಲಾಗುತ್ತಿದೆ; ಲಸಿಕೆಯನ್ನು ಯಾವ ಶ್ರೇಣಿಯ ಉದ್ಯೋಗಿಗಳಿಗೆ ನೀಡಲಾಗುತ್ತಿದೆ;	ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯವು ದಿನಾಂಕ:28/12/2020 ರಂದು ಕೋವಿಡ್-19 ಲಸಿಕಾಕರಣದ ಕುರಿತು ನಿರ್ವಹಣಾ ಮಾರ್ಗಸೂಚಿಗಳನ್ನು ಹೊರಡಿಸಿದ್ದು, (ಅಂತರ್ಜಾಲ ತಾಣ www.mohfw.gov.in/www.cowin.in ಲಭ್ಯವಿದೆ) ರಾಜ್ಯದಲ್ಲಿಯೂ ಸದರಿ ಮಾರ್ಗಸೂಚಿಗಳನ್ನು ಪಾಲಿಸಲಾಗುತ್ತಿದೆ. ಕರ್ನಾಟಕ ರಾಜ್ಯದಲ್ಲಿ ಲಸಿಕೆಯನ್ನು ಯಾವುದೇ ಶ್ರೇಣಿಯ ಆಧಾರದ ಮೇರೆಗೆ ನೀಡಲಾಗುತ್ತಿಲ್ಲ, ಬದಲಾಗಿ ಮಾರ್ಗಸೂಚಿಯಲ್ಲಿ ನಮೂದಿಸಿರುವ, ಕೋವಿಡ್-19 ಹಿಮ್ಮೆಟ್ಟಿಸುವಲ್ಲಿ ಕಾರ್ಯೋನ್ಮುಖರಾದ ಮೂಂಚೂಣಿಯ ಎಲ್ಲಾ ಶ್ರೇಣಿಯ ಕೆಳಕಂಡ ನೌಕರರಿಗೆ/ ಅಧಿಕಾರಿಗಳಿಗೆ ನೀಡಲಾಗುತ್ತಿದೆ. 1. ಆರೋಗ್ಯ ಕಾರ್ಯಕರ್ತರು ಮತ್ತು ಐಸಿಡಿಎಸ್ ಕಾರ್ಯಕರ್ತರು, 2. ಶುಶ್ರೂಷಕರು ಮತ್ತು ಮೇಲ್ವಿಚಾರಕರು, 3. ವೈದ್ಯರುಗಳು / ವೈದ್ಯಾಧಿಕಾರಿಗಳು, 4. ಪ್ಯಾರಾಮೆಡಿಕಲ್ ಸಿಬ್ಬಂದಿ, 5. ಎಲ್ಲಾ ಬೆಂಬಲ ಸಿಬ್ಬಂದಿಗಳು, 6 ಎಲ್ಲಾ ವೈದ್ಯಕೀಯ ವಿದ್ಯಾರ್ಥಿಗಳು, 7. ವಿಜ್ಞಾನ ಮತ್ತು ಸಂಶೋಧನ ವಿಭಾಗದ ಎಲ್ಲಾ ಸಿಬ್ಬಂದಿಗಳು, 8. ಕಂದಾಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಪೊಲೀಸ್ ಇಲಾಖೆ, ಪುರ ಸಭೆ ಸಿಬ್ಬಂದಿಗಳು.

ಆ	ಕೋವಿಡ್-19 ಸೋಂಕಿಗೆ ಲಸಿಕೆಯನ್ನು ಕರ್ನಾಟಕ ಸರ್ಕಾರದ ಸಚಿವರು, ಶಾಸಕರುಗಳಿಗೆ ನೀಡಲಾಗುತ್ತಿದೆಯೇ; ಹಾಗಿದ್ದಲ್ಲಿ, ಯಾವ ಮಾನದಂಡದ ಮೇಲೆ ಲಸಿಕೆ ನೀಡಲಾಗುತ್ತಿದೆ?	ಕೋವಿಡ್-19 ಲಸಿಕಾಕರಣದಲ್ಲಿ ಭಾರತ ಸರ್ಕಾರದ ಮಾರ್ಗಸೂಚಿಯನ್ನು ಪಾಲಿಸುತ್ತಿದ್ದು, ಮೊದಲ ಹಂತದಲ್ಲಿ ಈ ಲಸಿಕೆಯನ್ನು ರಾಜ್ಯದ ಯಾವುದೇ ಸಚಿವರು, ಶಾಸಕರುಗಳಿಗೆ ನೀಡಲಾಗುತ್ತಿಲ್ಲ.

ಆಕುಕ 11 ಎಸ್ ಎಂ ಎಂ 2021

(ಡಾ|| ಕೆ. ಸುಧಾಕರ್)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 1017

ಮಾನ್ಯ ಸದಸ್ಯರ ಹೆಸರು : ಶ್ರೀ ರಾಜೇಶ್ ನಾಯಕ್ ಯು. (ಬಂಟ್ವಾಳ)

ಉತ್ತರಿಸಬೇಕಾದ ದಿನಾಂಕ : 04-02-2021

ಉತ್ತರಿಸುವ ಸಚಿವರು : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ.ಸಂ	ಪ್ರಶ್ನೆ	ಉತ್ತರ
ಅ	ಇತ್ತೀಚಿನ ದಿನಗಳ ಯುವ ಜನತೆ ಮಾರಣಾಂತಿಕ ಕಾಯಿಲೆಗಳಾದ, ಹೃದಯ ಸಂಬಂಧಿ ಕಾಯಿಲೆ, ಕಿಡ್ನಿ ವೈಫಲ್ಯ, ಲಿವರ್ ಸಂಬಂಧಿ ಕಾಯಿಲೆ, ವಿವಿಧ ರೀತಿಯ ಕ್ಯಾನ್ಸರ್ ಕಾಯಿಲೆಗಳಿಗೆ ಬಲಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ	ಈ ರೀತಿಯ ಕಾಯಿಲೆಗಳಿಗೆ ಬಲಿಯಾಗುತ್ತಿರುವುದಕ್ಕೆ ಕಾರಣಗಳನ್ನು ತಿಳಿದುಕೊಳ್ಳುವುದಕ್ಕೆ ತಜ್ಞರ ಸಮಿತಿಗಳನ್ನು ಸರ್ಕಾರವು ರಚಿಸಿದೆಯೇ;	ಮಾಡಲಾಗಿದೆ.
ಇ	ಈ ರೀತಿಯ ಕಾಯಿಲೆಗಳಿಗೆ ಸಂಬಂಧಿಸಿ ಕಳೆದ 3 ವರ್ಷಗಳಲ್ಲಿ ಎಷ್ಟು ಜನ ಸರ್ಕಾರದಿಂದ ಸಹಾಯಧನ ಕೋರಿ ಅರ್ಜಿ ಸಲ್ಲಿಸಿರುತ್ತಾರೆ;ಎಷ್ಟು ಪರಿಹಾರಧನವನ್ನು ಸರ್ಕಾರದಿಂದ ನೀಡಲಾಗಿದೆ;ನೀಡಲು ಬಾಕಿ ಇರುವ ಪರಿಹಾರ ಮೊತ್ತ ಎಷ್ಟು;	ಅಸಾಂಕ್ರಾಮಿಕ ಕಾಯಿಲೆಗಳಿಗೆ ಸಂಬಂಧಿಸಿದಂತೆ ಸಹಾಯಧನ/ಪರಿಹಾರಧನವನ್ನು ಪಾವತಿಸುವ ಅವಕಾಶವಿರುವುದಿಲ್ಲ. ಆದರೇ ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಯೋಜನೆಯಡಿ ಈ ಕೆಳಕಂಡ ಸೌಲಭ್ಯಗಳನ್ನು ಪಡೆಯಲು ಅವಕಾಶವಿರುತ್ತದೆ. ಹೃದಯಘಾತ, ಪಾರ್ಶ್ವವಾಯು ಹಾಗೂ ಸಿವಿಡಿ ಚಿಕಿತ್ಸೆಗೆ ಅರ್ಹ ರೋಗಿಗಳಿಗೆ (ಬಿಪಿಎಲ್) ಚಿಕಿತ್ಸಾ ಸೌಲಭ್ಯಕ್ಕಾಗಿ ಪ್ಯಾಕೇಜ್‌ಗಳು ಲಭ್ಯವಿದ್ದು, ಶಸ್ತ್ರ ಚಿಕಿತ್ಸೆ, ರೇಡಿಯೋಥೆರಪಿ ಹಾಗೂ ಕೀಮೋಥೆರಪಿಗಾಗಿ ಸರ್ಕಾರಿ ಸ್ವಾಮ್ಯದ ಆಸ್ಪತ್ರೆಗಳಲ್ಲಿ ಅಥವಾ ಖಾಸಗಿ ನೋಂದಾಯಿತ ಆಸ್ಪತ್ರೆಗಳಲ್ಲಿ ರೂ.5.00 ಲಕ್ಷದವರೆಗೆ ಚಿಕಿತ್ಸಾ ಪ್ಯಾಕೇಜ್‌ಗಳು ಲಭ್ಯವಿದೆ. ಸಾಮಾನ್ಯ ವರ್ಗದ ರೋಗಿಗಳಿಗೆ ಶೇಕಡಾ 30 ರಷ್ಟು ದರದಲ್ಲಿ ರೂ. 1.50 ಲಕ್ಷದವರೆಗೆ ಹೃದಯಘಾತ, ಪಾರ್ಶ್ವವಾಯು ಹಾಗೂ ಸಿವಿಡಿ ಚಿಕಿತ್ಸಾ ಪ್ಯಾಕೇಜ್‌ಗಳು ಲಭ್ಯವಿದೆ.

ಈ	ದೇಶದ ಆರ್ಥಿಕ ಅಭಿವೃಧ್ಧಿಯಲ್ಲಿ ಆರೋಗ್ಯವಂತ ಪ್ರಜೆಗಳ ಪಾತ್ರ ಪ್ರಮುಖವಾಗಿರುವುದರಿಂದ ಇಂತಹ ಗಂಭೀರ ಸ್ವರೂಪದ ಖಾಯಿಲೆಗಳನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು;	ಶೇಕಡಾ 63ರಷ್ಟು ಸಾವುಗಳು ಅಸಾಂಕ್ರಾಮಿಕ ರೋಗಗಳಿಂದ ಸಂಭವಿಸುತ್ತಿದೆ. ಸಾಂಕ್ರಾಮಿಕ ರೋಗಗಳು ಕಡಿಮೆಯಾಗುತ್ತಿರುವ ಈ ಸಂದರ್ಭದಲ್ಲಿ ಅಸಾಂಕ್ರಾಮಿಕ ರೋಗಗಳ ಕಡೆ ಗಮನ ಹರಿಸುವುದು ಸದ್ಯದ ಅವಶ್ಯಕತೆಯಾಗಿರುತ್ತದೆ. ಈ ಕಾರಣಕ್ಕಾಗಿ 2010-2011ನೇ ಸಾಲಿನಿಂದ ಮೊದಲುಗೊಂಡು ಕರ್ನಾಟಕ ರಾಜ್ಯದಲ್ಲಿ NPCDCS (National Programme for Prevention and Control of Cancer, Diabetes, CVDs and Stroke) ಕಾರ್ಯಕ್ರಮವನ್ನು ಜಾರಿಗೊಳಿಸಲಾಗಿದೆ. ಪ್ರಸ್ತುತ ರಾಜ್ಯದ 30 ಜಿಲ್ಲೆಗಳಲ್ಲಿ ಜಿಲ್ಲಾ ಆಸ್ಪತ್ರೆ ಮಟ್ಟದಲ್ಲಿ ಜಿಲ್ಲಾ NCD Clinic ಗಳು ಕಾರ್ಯನಿರ್ವಹಿಸುತ್ತಿವೆ. 20 ಜಿಲ್ಲೆಗಳಲ್ಲಿ ತಾಲ್ಲೂಕು ಮತ್ತು ಸಮುದಾಯ ಆರೋಗ್ಯ ಕೇಂದ್ರದ ಮಟ್ಟದಲ್ಲಿ 243 NCD ಕ್ಲಿನಿಕ್‌ಗಳು ಕಾರ್ಯನಿರ್ವಹಿಸುತ್ತಿವೆ.
ಉ	ಈ ರೀತಿಯ ಖಾಯಿಲೆ ಬರಲು ಕಾರಣವಾಗುವ ಅಂಶಗಳ ಬಗ್ಗೆ ಸಂಶೋಧನ ನಡೆಸಲು ಸಂಶೋಧನ ಕೇಂದ್ರಗಳನ್ನು ಸರ್ಕಾರ ಸ್ಥಾಪಿಸಲು ಉದ್ದೇಶಿಸಿದೆಯೇ;	ರಾಜ್ಯ ಸರ್ಕಾರದ ವತಿಯಿಂದ ಯಾವುದೇ ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸಿರುವುದಿಲ್ಲ.

ಆಕುಕ 10 ಎಸ್‌ಎಂಎಂ 2021

(ಡಾ|| ಕೆ.ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	591
ಸದಸ್ಯರ ಹೆಸರು	:	ಶ್ರೀ ಮಸಾಲ ಜಯರಾಮ್ (ತುರುವೇಕೆರೆ)
ಉತ್ತರಿಸುವ ದಿನಾಂಕ	:	04.02.2021
ಉತ್ತರಿಸುವ ಸಚಿವರು	:	ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ತುರುವೇಕೆರೆ ತಾಲ್ಲೂಕು, ತುರುವೇಕೆರೆ ಪಟ್ಟಣದಲ್ಲಿರುವ ತಾಂತ್ರಿಕ ಶಿಕ್ಷಣ ಇಲಾಖೆಗೆ ಒಳಪಡುವ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ನಿರ್ಮಾಣ ಗೊಂಡಿರುವ ವಿದ್ಯಾರ್ಥಿನಿಯರ ವಿದ್ಯಾರ್ಥಿನಿಲಯ ಕಟ್ಟಡ ಹಾಗೂ ಆಡಿಟೋರಿಯಂ ನಿರ್ಮಾಣ ಕಾಮಗಾರಿಯು ಕಳಪೆ ಮಟ್ಟದಿಂದ ಕೂಡಿದ್ದು, ನಿರ್ಮಾಣ ಪ್ರಾರಂಭವಾಗಿ ಸುಮಾರು 9 ವರ್ಷಗಳಾದರೂ ಇದುವರೆಗೂ ವಿದ್ಯಾರ್ಥಿಗಳ ಅನುಕೂಲಕ್ಕೆ ಹಸ್ತಾಂತರಗೊಳ್ಳದೇ ವಿಳಂಬ ವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಸಂಪೂರ್ಣ ಮಾಹಿತಿ ನೀಡುವುದು)	**ವಿದ್ಯಾರ್ಥಿನಿಯರ ವಿದ್ಯಾರ್ಥಿ ನಿಲಯ:** ಕೇಂದ್ರ ಸರ್ಕಾರದ ಆದೇಶ ಸಂಖ್ಯೆ: F.No 15/2/2010 TS.IV ದಿನಾಂಕ 20/12/2010ರಲ್ಲಿ ಸರ್ಕಾರಿ ಪಾಲಿಟೆಕ್ನಿಕ್, ತುರುವೇಕೆರೆ ಸಂಸ್ಥೆಯಲ್ಲಿ ಕೇಂದ್ರ ಸರ್ಕಾರದ ಧನ ಸಹಾಯ ಯೋಜನೆಯಡಿ [ಎಂಹೆಚ್‌ಆರ್‌ಡಿ] ವಿದ್ಯಾರ್ಥಿನಿಯರ ವಿದ್ಯಾರ್ಥಿ ನಿಲಯವನ್ನು ರೂ.100 ಲಕ್ಷ ಅಂದಾಜು ಮೊತ್ತದಲ್ಲಿ ನಿರ್ಮಿಸಲು ಅನುಮತಿ ನೀಡಿ, 2011-12ನೇ ಸಾಲಿಗೆ ಮೊದಲನೇ ಕಂತಿನಲ್ಲಿ ರೂ.50 ಲಕ್ಷಗಳನ್ನು ನೇರವಾಗಿ ಪ್ರಾಚಾರ್ಯರ ಖಾತೆಗೆ ಜಮೆ ಮಾಡಲಾಗಿರುತ್ತದೆ. ಅದರಂತೆ ಪ್ರಿನ್ಸಿಪಾಲರು ಸಲ್ಲಿಸಲಾದ ರೂ.99,88,660/- ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆಯನ್ನು ದಿನಾಂಕ 15/02/2012ರಲ್ಲಿ ನೀಡಲಾಯಿತು. ಕೇಂದ್ರ ಸರ್ಕಾರದಿಂದ ಎರಡನೇ ಕಂತಿನ ಮೊತ್ತ ರೂ.40 ಲಕ್ಷ ದಿನಾಂಕ 14/12/2012ರಲ್ಲಿ ಬಿಡುಗಡೆ ಮಾಡಲಾಯಿತು. ಬಾಕಿ ರೂ.10 ಲಕ್ಷಗಳನ್ನು ಕೇಂದ್ರ ಸರ್ಕಾರ ಈವರೆವಿಗೂ ಬಿಡುಗಡೆ ಮಾಡಿರುವುದಿಲ್ಲ. **ಆಡಿಟೋರಿಯಂ ನಿರ್ಮಾಣ:** ರಾಜ್ಯ ಸರ್ಕಾರವು ಸರ್ಕಾರದ ಆದೇಶ ಸಂಖ್ಯೆ: ಇಡಿ 47 ಹೆಚ್‌ಪಿಟಿ 2016(ಭಾ) ದಿ 01-10-2016ರಲ್ಲಿ ರೂ.200 ಲಕ್ಷ ಅಂದಾಜು ಮೊತ್ತದಲ್ಲಿ ಆಡಿಟೋರಿಯಂ ಕಟ್ಟಡವನ್ನು ನಿರ್ಮಿಸಲು ಅನುಮತಿ ನೀಡಿದ್ದು, ದಿನಾಂಕ 14/12/2016ರಲ್ಲಿ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ. ದಿನಾಂಕ 31/03/2018ರಲ್ಲಿ ಮೆ.ರೈಟ್ಸ್ ಸಂಸ್ಥೆಯವರು ಆಡಿಟೋರಿಯಂ ನಿರ್ಮಾಣಕ್ಕೆ ಸಂಬಂಧಿಸಿದಂತೆ ಸ್ಥಳದ ಅಭಾವದಿಂದ ಮೂಲ ಅಂದಾಜು ಪಟ್ಟಿ ಮತ್ತು ನಕ್ಷೆಯಲ್ಲಿ ನಮೂದಿಸಿದ ಎಲ್ಲಾ ಸೌಕರ್ಯಗಳ Built up area ಅನ್ನು 19.60ಮೀ.*33.60ಮೀ.ಗಳಿಗೆ ಉಳಿಸಿಕೊಂಡು ತಯಾರಿಸಿದ ಪರಿಷ್ಕೃತ ನಕ್ಷೆಗೆ ಅನುಮೋದನೆಯನ್ನು ನೀಡಲಾಗಿರುತ್ತದೆ.

ಕ್ರ.ಸಂ	ಪ್ರಶ್ನೆ	ಉತ್ತರ
ಆ)	ವಿಳಂಬಕ್ಕೆ ಕಾರಣವೇನು:	**ವಿದ್ಯಾರ್ಥಿನಿಯರ ವಿದ್ಯಾರ್ಥಿ ನಿಲಯ:** ಕೇಂದ್ರ ಸರ್ಕಾರದಿಂದ ಮಹಿಳಾ ಹಾಸ್ಟೆಲ್ ನಿರ್ಮಾಣ ಕಾಮಗಾರಿಯ ರೂ.100 ಲಕ್ಷ ಅಂದಾಜು ಮೊತ್ತಕ್ಕೆ ಅನುಮೋದನೆ ನೀಡಿ, ಸದರಿ ಕಾಮಗಾರಿಗೆ 2011-12ನೇ ಸಾಲಿಗೆ ಮೊದಲನೇ ಕಂತಿನಲ್ಲಿ ರೂ.50 ಲಕ್ಷ ಮತ್ತು 2012-13ನೇ ಸಾಲಿಗೆ ರೂ.40 ಲಕ್ಷ ಹೀಗೆ ಒಟ್ಟು ರೂ.90 ಲಕ್ಷ ಮಾತ್ರ ಬಿಡುಗಡೆ ಮಾಡಿದ್ದು, ಈವರೆಗೂ ಕೇಂದ್ರ ಸರ್ಕಾರದಿಂದ ಬಾಕಿ ರೂ.10 ಲಕ್ಷ ಅನುದಾನ ಬಿಡುಗಡೆಯಾಗಬೇಕಾಗಿದ್ದು, ಕಾಮಗಾರಿ ಪೂರ್ಣಗೊಂಡಿದ್ದು, ಪರಿಶೀಲಿಸಿ ಕಟ್ಟಡವನ್ನು ಹಸ್ತಾಂತರ ಮಾಡಿಕೊಳ್ಳಲಾಗುತ್ತಿದೆ. **ಆಡಿಟೋರಿಯಂ ನಿರ್ಮಾಣ:** ಸಂಸ್ಥೆಯಲ್ಲಿ ಆಡಿಟೋರಿಯಂ ನಿರ್ಮಾಣಕ್ಕೆ ಗುರುತಿಸಿದ್ದ ಜಾಗವು ಬದಲಾದ ಕಾರಣ ನಿರ್ಮಾಣ ಏಜೆನ್ಸಿಯಿಂದ ಸ್ವೀಕೃತವಾದ ಪರಿಷ್ಕೃತ ನಕ್ಷೆಗೆ ದಿ 31/03/2018 ರಲ್ಲಿ ಇಲಾಖಾ ಅನುಮೋದನೆಯನ್ನು ನೀಡಲಾಗಿದ್ದು ಪ್ರಸ್ತುತ ಕಾಮಗಾರಿ ಪೂರ್ಣಗೊಂಡಿದ್ದು, ಪರಿಶೀಲಿಸಿ ಕಟ್ಟಡವನ್ನು ಹಸ್ತಾಂತರ ಮಾಡಿಕೊಳ್ಳಲಾಗುತ್ತಿದೆ.
ಇ)	ಸದರಿ ವಿದ್ಯಾರ್ಥಿನಿಯರ ವಿದ್ಯಾರ್ಥಿನಿಲಯ ಕಟ್ಟಡ ಹಾಗೂ ಆಡಿಟೋರಿಯಂ ನಿರ್ಮಾಣ ಕಾಮಗಾರಿಗೆ ಸರ್ಕಾರದಿಂದ ಬಿಡುಗಡೆಯಾದ ಅನುದಾನವೆಷ್ಟು ಮತ್ತು ಯಾವ ವರ್ಷದಲ್ಲಿ ಅನುಮೋದನೆಯಾಗಿದೆ;	
ಈ)	ಸದರಿ ಗುತ್ತಿಗೆ/ಕಾಮಗಾರಿಗಳನ್ನು ಯಾವ ಸಂಸ್ಥೆ ಮತ್ತು ಗುತ್ತಿಗೆದಾರರಿಗೆ ವಹಿಸಲಾಗಿದೆ. (ಸಂಪೂರ್ಣ ಮಾಹಿತಿ ನೀಡುವುದು)	ಸದರಿ ಕಾಮಗಾರಿಗಳನ್ನು ಮೆ:ರೈಟ್ಸ್ ನಿರ್ಮಾಣ ಸಂಸ್ಥೆ ಮುಖಾಂತರ ವಹಿಸಲಾಗಿದೆ. ಗುತ್ತಿಗೆದಾರರು: ಎ) ವಿದ್ಯಾರ್ಥಿನಿಯರ ವಿದ್ಯಾರ್ಥಿನಿಲಯ: ಶ್ರೀ ಎಂ.ಸೆಂತಿಲ್ ಕುಮಾರ್, ಕ್ಲಾಸ್-1, ಕಂಟ್ರಾಕ್ಟಾರ್, ಮೈಸೂರು ಬಿ)ಆಡಿಟೋರಿಯಂ ನಿರ್ಮಾಣ : ರವಿಂದ್ರನಾಥ್ ಕಂಸ್ಟ್ರಕ್ಷನ್ ಪ್ರೈವೆಟ್ ಲಿಮಿಟೆಡ್, ಬೆಂಗಳೂರು.
ಉ)	ಸದರಿ ಕಟ್ಟಡಗಳನ್ನು ಕಳಪೆ ಮಟ್ಟದಲ್ಲಿ ನಿರ್ಮಿಸಿರುವ ಹಾಗೂ ಹಸ್ತಾಂತರ ಮಾಡದಿರುವ ತಪ್ಪಿತಸ್ಥ ಏಜೆನ್ಸಿ ಹಾಗೂ ಗುತ್ತಿಗೆದಾರರ ವಿರುದ್ಧ ಸರ್ಕಾರ ಕೈಗೊಂಡ ಕ್ರಮವೇನು (ಸಂಪೂರ್ಣ ಮಾಹಿತಿ ನೀಡುವುದು)	ಪ್ರಸ್ತುತ ವಿದ್ಯಾರ್ಥಿನಿಯರ ವಿದ್ಯಾರ್ಥಿನಿಲಯ ಮತ್ತು ಆಡಿಟೋರಿಯಂ ಕಟ್ಟಡಗಳು ನಿರ್ಮಾಣ ಪೂರ್ಣಗೊಂಡಿದ್ದು, ಪರಿಶೀಲಿಸಿ ಕಟ್ಟಡಗಳನ್ನು ಹಸ್ತಾಂತರ ಮಾಡಿಕೊಳ್ಳಲಾಗುತ್ತಿದೆ. ವಿದ್ಯಾರ್ಥಿನಿಯರ ವಿದ್ಯಾರ್ಥಿನಿಲಯದ ಕಟ್ಟಡದ ಗುಣಮಟ್ಟದ ಬಗ್ಗೆ ಯು.ವಿ.ಸಿ.ಇ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯದ ಸಿವಿಲ್ ವಿಭಾಗದ ಅಧಿಕಾರಿಗಳು ಮೂರನೇ ವ್ಯಕ್ತಿ ತಪಾಸಣೆ ನಡೆಸಿದ್ದು, " The Quality and grade of concrete and RCC structural frame (physical observation) adopted in construction work are as per the construction standards and specifications. The Building is safe and sound for the usage ಎಂದು ವರದಿ ನೀಡಿರುತ್ತಾರೆ. ಪ್ರಾಚಾರ್ಯರ ಅಧಿಕೃತ ಜ್ಞಾಪನ ದಿನಾಂಕ 09/01/2021ರಲ್ಲಿ ವಿದ್ಯಾರ್ಥಿನಿಯರ ವಿದ್ಯಾರ್ಥಿನಿಲಯ ಮತ್ತು ಆಡಿಟೋರಿಯಂ ಕಟ್ಟಡಗಳನ್ನು ಮೆ.ರೈಟ್ಸ್‌ರವರು ನಿರ್ಮಾಣ ಮಾಡಿದ್ದು, ಹಸ್ತಾಂತರ ಮಾಡಿಕೊಳ್ಳಲು ಹ್ಯಾಂಡಿಂಗ್‌ಓವರ್ ನೋಟ್ ನೀಡಿದ್ದು, ಸಂಪೂರ್ಣವಾಗಿ ಪರಿಶೀಲನೆ ಮಾಡಿ ಹಸ್ತಾಂತರ ಮಾಡಿಕೊಳ್ಳುವ ಸಂಬಂಧ ಸಂಸ್ಥೆಯ ಹಂತದಲ್ಲಿ ಸಮಿತಿಯನ್ನು ರಚಿಸಲಾಗಿರುತ್ತದೆ.

ಕ್ರ.ಸಂ	ಪ್ರಶ್ನೆ	ಉತ್ತರ
		ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿನಿಯರ ವಿದ್ಯಾರ್ಥಿ ನಿಲಯ ಮತ್ತು ಆಡಿಟೋರಿಯಂ ನಿರ್ಮಾಣಕ್ಕೆ ಸಂಬಂಧಿಸಿದಂತೆ ಕೇಂದ್ರ ಕಛೇರಿಯ ಕಟ್ಟಡ ನಿರ್ಮಾಣ ತಾಂತ್ರಿಕ ಕೋಶದ ಕಾರ್ಯಪಾಲಕ ಅಭಿಯಂತರರು ಹಾಗೂ ತಂಡಕ್ಕೆ ಪರಿವೀಕ್ಷಣೆ ನಡೆಸಿ, ಹಸ್ತಾಂತರ ಪ್ರಕ್ರಿಯೆ ಕೈಗೊಳ್ಳಲು ಸೂಚಿಸಲಾಗಿದೆ.

ಕಡತ ಸಂಖ್ಯೆ: ಇಡಿ 14 ಹೆಚ್‌ಪಿಟಿ 2021

(ಡಾ: ಅಶ್ವಥ್ ನಾರಾಯಣ ಸಿ.ಎನ್)
ಉಪ ಮುಖ್ಯಮಂತ್ರಿಗಳು ಹಾಗೂ
ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ
ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

ಕರ್ನಾಟಕ ವಿಧಾನಸಭೆ

(15ನೇ ವಿಧಾನಸಭೆ, 9ನೇ ಅಧಿವೇಶನ)

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	595
2) ಸದಸ್ಯರ ಹೆಸರು	:	ಡಾ॥ ರಂಗನಾಥ್ ಹೆಚ್.ಡಿ (ಕುಣಿಗಲ್)
3) ಉತ್ತರಿಸುವ ದಿನಾಂಕ	:	04.02.2021.
4) ಉತ್ತರಿಸುವವರು	:	ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ)	ಕುಣಿಗಲ್ ತಾಲ್ಲೂಕಿನ ತೆರೆದಕುಪ್ಪೆ, ಬಾಗೇನಹಳ್ಳಿ, ಭಕ್ತರಹಳ್ಳಿ ಹಾಗೂ ಕೊರಟಗೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಅತೀ ಹೆಚ್ಚು ಚಿರತೆ ಹಾವಳಿಯಿಂದಾಗಿ 7–8 ಜನರು ಮೃತಪಟ್ಟಿದ್ದು, ಚಿರತೆ ಹಾವಳಿ ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;	ತುಮಕೂರು ಪ್ರಾದೇಶಿಕ ವಿಭಾಗ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಚಿರತೆ ದಾಳಿಯಿಂದ 6 ಮಾನವ ಪ್ರಾಣ–ಹಾನಿ ಪ್ರಕರಣಗಳು ದಾಖಲಾಗಿರುತ್ತದೆ. ತುಮಕೂರು ವಿಭಾಗ ವ್ಯಾಪ್ತಿಯ ಕುಣಿಗಲ್ ಹಾಗೂ ಗುಬ್ಬಿ ವಲಯಗಳಲ್ಲಿ ಚಿರತೆ ಹಾವಳಿಯನ್ನು ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ. • ಬಂಡಿಪುರ ಹಾಗೂ ನಾಗರಹೊಳೆ ರಾಷ್ಟ್ರೀಯ ಉದ್ಯಾನವನದಿಂದ ವಿಶೇಷ ಹುಲಿ ಸಂರಕ್ಷಣಾ ದಳದ 30 ಜನ ಸಿಬ್ಬಂದಿಯನ್ನು ಕರೆಸಿ 4 ತಂಡಗಳಾಗಿ ರಚಿಸಿ ದೊಡ್ಡಮಳಲವಾಡಿ ಬ್ಲಾಕ್, ಹೆಬ್ಬೂರು ಬ್ಲಾಕ್, ಸಿ.ಎಸ್.ಪುರ ಬ್ಲಾಕ್ ಮತ್ತು ಮಣಿಕುಪ್ಪೆ ಬ್ಲಾಕ್‌ಗಳಿಗೆ ನಿಯೋಜಿಸಲಾಗಿತ್ತು ಹಾಗೂ ವಿಭಾಗದ ತುಮಕೂರು, ಗುಬ್ಬಿ ಮತ್ತುಕುಣಿಗಲ್ ವಲಯಗಳಿಗೆ ಸೇರಿದ 40 ಸಿಬ್ಬಂದಿಯನ್ನು 4 ತಂಡಗಳಾಗಿ ಕಾರ್ಯಾಚರಣೆಗಾಗಿ ನಿಯೋಜಿಸಲಾಗಿರುತ್ತದೆ. • ಪ್ರಖ್ಯಾತ ವನ್ಯಜೀವಿ ತಜ್ಞರು ಹಾಗೂ ಅನುಭವಿ ಪಶುವೈದ್ಯಾಧಿಕಾರಿಗಳ ಸಹಕಾರದೊಂದಿಗೆ ಕ್ಯಾಮರ ಟ್ರಾಪಿಂಗ್ ಅಳವಡಿಸಿ ಹಾಗೂ ಕ್ಯಾಮರಗಳಲ್ಲಿ ಸೆರೆ ಹಿಡಿಯುವ ಛಾಯಾ ಚಿತ್ರಗಳನ್ನು ದಿನನಿತ್ಯ ಪರಿಶೀಲಿಸಿ ನರಹಂತಕ ಚಿರತೆಯನ್ನು ಸೆರೆಹಿಡಿಯುವ ಕಾರ್ಯಾಚರಣೆ ಕೈಗೊಳ್ಳಲಾಗಿದೆ. • ತುಮಕೂರು ವಿಭಾಗ ವ್ಯಾಪ್ತಿಯಲ್ಲಿನ ತುಮಕೂರು, ಕುಣಿಗಲ್, ಗುಬ್ಬಿ, ತಿಪಟೂರು, ಚಿಕ್ಕನಾಯಕನಹಳ್ಳಿ, ಶಿರಾ ಕೊರಟಗೆರೆ ತಾಲ್ಲೂಕು ವ್ಯಾಪ್ತಿಯಲ್ಲಿ ಜನ ಜಾನುವಾರುಗಳಲ್ಲಿ ಭಯದ ವಾತಾವರಣ ಉಂಟು ಮಾಡಿದ್ದ ಚಿರತೆಗಳನ್ನು ಸುರಕ್ಷಿತವಾಗಿ ಸೆರೆ ಹಿಡಿದು ಅರಣ್ಯ ಪ್ರದೇಶಗಳಿಗೆ ಸ್ಥಳಾಂತರಿಸಲಾಗಿರುತ್ತದೆ. • ಬಂಡಿಪುರ, ನಾಗರಹೊಳೆ ಅರಣ್ಯ ಪ್ರದೇಶದಿಂದ 4 ಸಾಕು ಆನೆಗಳನ್ನು ತಂದುಚಿರತೆ ಬಾಧಿತ ಪ್ರದೇಶಗಳಲ್ಲಿ ಕೂಬಿಂಗ್ ಕಾರ್ಯಾಚರಣೆ ನಡೆಸಲಾಗಿರುತ್ತದೆ.

ಕ್ರಸಂ	ಪ್ರಶ್ನೆ	ಉತ್ತರ
		• ಇಲಾಖಾ ವತಿಯಿಂದ ಚಿರತೆ ಬಾಧಿತ ಪ್ರದೇಶಗಳ ಶಾಲೆ, ವಾಸದ ಮನೆ, ಕೆರೆ ಅಂಗಳ, ದೇವಸ್ಥಾನದ ಸುತ್ತ ಬೆಳೆದಿರುವ ಲಾಂಟಾನಾ/ಮೊದೆಗಳನ್ನು ತೆರವುಗೊಳಿಸಲು ಸಾರ್ವಜನಿಕರು ಹಾಗೂ ಸಂಬಂಧಿಸಿದ ಗ್ರಾಮ ಪಂಚಾಯಿತಿಗಳಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಜಿಲ್ಲಾ ಪಂಚಾಯತ್ ತುಮಕೂರು ರವರ ಮುಖೇನ ಕೋರಲಾಗಿದೆ. ಇಲಾಖಾ ವತಿಯಿಂದಲೂ ಸಹಾ ವನ್ಯಜೀವಿಗಳು ಆವಾಸ ಸ್ಥಾನವನ್ನಾಗಿಸಿಕೊಂಡಿರುವ ಗುಬ್ಬಿ, ತುಮಕೂರು ಹಾಗೂ ಕುಣಿಗಲ್ ವಲಯ ವ್ಯಾಪ್ತಿಯ ಕೆರೆ ಅಂಗಳ ದೇವಸ್ಥಾನ ಹಾಗೂ ಶಾಲಾ ಆವರಣದಲ್ಲಿ ಬೆಳೆದಿರುವ ಲಾಂಟಾನಾವನ್ನು ಕಿತ್ತು ತೆಗೆಯಲು ಲಭ್ಯವಿರುವ ಅನುದಾನವನ್ನು ಉಪಯೋಗಿಸಿಕೊಂಡು ಇಲಾಖಾ ಮುಖಾಂತರವು ಸಹ ಲಾಂಟಾನಾ ತೆರವು ಕಾರ್ಯಚರಣೆ ಕೈಗೊಳ್ಳಲಾಗಿರುತ್ತದೆ. • ಚಿರತೆ/ಕರಡಿ ಭಾದಿತ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಲ್ಲಿ ಟಾಮ್‌ಟಾಮ್, ಧ್ವನಿವರ್ಧಕಗಳ ಮೂಲಕ, ಪತ್ರಿಕಾ ಪ್ರಕಟಣೆ ಹಾಗೂ ಕರಪತ್ರಗಳನ್ನು ವಿತರಿಸುವ ಮೂಲಕ ಸಾರ್ವಜನಿಕರಲ್ಲಿ ಸುರಕ್ಷತೆ ಬಗ್ಗೆ ಅರಿವು ಮೂಡಿಸಲಾಗಿದೆ. • ಸಾರ್ವಜನಿಕರಿಗೆ ಮುಸ್ಸಂಜೆ ಸಮಯದಲ್ಲಿ ಸಾಕು ಪ್ರಾಣಿಗಳು ಹಾಗೂ ಸಣ್ಣ ಮಕ್ಕಳನ್ನು ಮನೆಯ ಒಳಗೆ ಸುರಕ್ಷಿತವಾಗಿ ನೋಡಿಕೊಳ್ಳಲು ಅರಿವು ಮೂಡಿಸಲಾಗಿದೆ. • ಮಾನವ ವನ್ಯಜೀವಿ ಸಂಘರ್ಷದಂತಹ ಸನ್ನಿವೇಶಗಳಲ್ಲಿ ಸಾರ್ವಜನಿಕರು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಸಾರ್ವಜನಿಕರೊಂದಿಗೆ ಪ್ರಜಾ ಪ್ರಗತಿ ದಿನ ಪತ್ರಿಕೆ, ದೂರದರ್ಶನದಲ್ಲಿ ನಡೆಸಿದ ಪೋನ್-ಇನ್-ಕಾರ್ಯಕ್ರಮದಲ್ಲಿ ಮುಂಜಾಗ್ರತಾ ಕ್ರಮಗಳ ಬಗ್ಗೆ ಸಾರ್ವಜನಿಕರೊಂದಿಗೆ ಸಂವಾದದಲ್ಲಿ ಭಾಗವಹಿಸಿ ಚರ್ಚಿಸಿ ತಿಳುವಳಿಕೆ ನೀಡಿ ಪ್ರಶ್ನೆಗಳಿಗೆ ಸ್ಪಷ್ಟಿಕರಣ ನೀಡಲಾಗಿದೆ. • ಅರಣ್ಯ ಪ್ರದೇಶದ ಸುತ್ತಾ ಮುತ್ತಲಿನ ಗ್ರಾಮಗಳಲ್ಲಿ ವನ್ಯಜೀವಿಗಳ ಹಾವಳಿ ಬಗ್ಗೆ ಸಾರ್ವಜನಿಕರು, ಶಾಲಾ ಮಕ್ಕಳಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳು ಹಾಗೂ ಬೀದಿ ನಾಟಕ ಮುಖಾಂತರ ವನ್ಯಜೀವಿ ಮಾನವ ಸಂಘರ್ಷದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಕ್ರಸಂ	ಪ್ರಶ್ನೆ	ಉತ್ತರ
		• ಚಿರತೆ ಬಾಧಿತ ಪ್ರದೇಶಗಳ ಹಿಡುವಳಿ ಜಮೀನುಗಳಲ್ಲಿ ನೀಲಗಿರಿ ನೆಡುತೋಪು ಬೆಳೆಸಿದ್ದು ಹಾಗೂ ಕೆಲವು ಹಿಡುವಳಿ ಜಮೀನುಗಳನ್ನು ರೈತರು ಉಳುಮೆ ಮಾಡದಿರುವುದರಿಂದ ಲಾಂಟಾನ ಹೇರಳವಾಗಿ ಬೆಳೆದಿದ್ದು ಸ್ವಚ್ಛಗೊಳಿಸಲು ಸಂಬಂದಿಸಿದ ಗ್ರಾಮಸ್ಥರುಗಳಿಗೂ ಸೂಚನೆ ನೀಡಲಾಗಿದೆ ಹಾಗೂ ಇಲಾಖಾ ಸಿಬ್ಬಂದಿಗಳನ್ನು ನಿಯೋಜಿಸಿಕೊಂಡು ಚಿರತೆ ಭಾದಿತ ಪ್ರದೇಶಗಳಲ್ಲಿ ಯಾವುದೇ ಘಟನೆಗಳು ಮರುಕಳಿಸದಂತೆ ಕ್ರಮವಹಿಸಲಾಗುತ್ತಿದೆ. • ದಿನಾಂಕ:02.03.2020ರ ಅಧಿಕೃತ ಜ್ಞಾಪನಾ ಪತ್ರದಲ್ಲಿ ಮಾನವ ಪ್ರಾಣ ಹಾನಿಗೆ ಕಾರಣವಾಗಿರುವ ನಿರ್ದಿಷ್ಟವಾದ ಒಂದು ಚಿರತೆಯನ್ನು ಗುರುತಿಸಿ ಸೆರೆಹಿಡಿಯಲು ಅನುಮತಿ ನೀಡಲಾಗಿದ್ದು, ಒಂದು ವೇಳೆ ಸೆರೆ ಹಿಡಿಯುವುದು ಅಸಾಧ್ಯವಾದಲ್ಲಿ ಮಾತ್ರ ಸದರಿ ಚಿರತೆಗೆ ಗುಂಡಿಕ್ಕುವುದನ್ನು ಕೊನೆಯ ಪ್ರಕ್ರಿಯೆಯನ್ನಾಗಿ ಪರಿಗಣಿಸಲು ಸೂಚಿಸಲಾಗಿರುತ್ತದೆ. • ಮೇಲ್ಕಂಡಂತೆ ಕೈಗೊಂಡ ಎಲ್ಲಾ ಮುನ್ನೆಚ್ಚರಿಕೆಗಳ ಫಲವಾಗಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಚಿರತೆ ಹಾವಳಿಯು ಸಂಪೂರ್ಣವಾಗಿ ಹತೋಟಿಗೆ ಬಂದಿರುತ್ತದೆ.
ಆ)	ಚಿರತೆ ಹಾವಳಿಯಿಂದ ಮೃತಪಟ್ಟವರಿಗೆ ಪರಿಹಾರ ಮೊತ್ತ ಹೆಚ್ಚಿಸಲು ಸರ್ಕಾರಕೈಗೊಂಡಿರುವ ನಿರ್ಣಯವೇನು?	ವನ್ಯಪ್ರಾಣಿಗಳ ದಾಳಿಯಿಂದ ಉಂಟಾಗುವ ಮಾನವ-ಪ್ರಾಣ ಹಾನಿ ಪ್ರಕರಣಗಳಲ್ಲಿ ಆದೇಶ ಸಂಖ್ಯೆ :ಅಪಜೀ 143 ಎಫ್‌ಡಬ್ಲ್ಯುಎಲ್ 2010, ದಿನಾಂಕ:03.08.2011 ರಂತೆ ರೂ.5.00 ಲಕ್ಷಗಳನ್ನು ಮೃತರ ಕುಟುಂಬದ ವಾರಸುದಾರರಿಗೆ ನಿಯಮಾನುಸಾರ ಪರಿಶೀಲಿಸಿ ಪಾವತಿಸಲಾಗುತ್ತಿತ್ತು. ಪ್ರಸ್ತುತ, ವನ್ಯಪ್ರಾಣಿ ದಾಳಿಯಿಂದ ಮೃತಪಡುವ ವ್ಯಕ್ತಿಯ ವಾರಸುದಾರರಿಗೆ ದಯಾತ್ಮಕಧನವನ್ನು ಆದೇಶ ಸಂಖ್ಯೆ: ಅಪಜೀ 66 ಎಫ್‌ಡಬ್ಲ್ಯುಎಲ್ 2019, ದಿನಾಂಕ:07.01.2020 ರನ್ವಯ ರೂ.7.50 ಲಕ್ಷಗಳಿಗೆ ಪರಿಷ್ಕರಿಸಲಾಗಿರುತ್ತದೆ. ಅಲ್ಲದೇ ಆದೇಶ ಸಂಖ್ಯೆ: ಅಪಜೀ 61 ಎಫ್‌ಎಪಿ 2018, ದಿನಾಂಕ:16.10.2018 ರ ಪ್ರಕಾರ ಮೃತ ವ್ಯಕ್ತಿಯ ವಾರಸುದಾರರ ವಿವರಗಳನ್ನು ಪಡೆದುಕೊಂಡು ಪ್ರತೀ ಮಾಹೆಗೆ ರೂ.2,000/- ಗಳಂತೆ 5 ವರ್ಷಗಳವರೆಗೆ ಮಾಶಾಸನ ಪಾವತಿಸಲು ಕ್ರಮ ಕೈಗೊಳ್ಳಲಾಗಿದೆ.

ಸಂಖ್ಯೆ: ಅಪಜೀ 21 ಎಫ್‌ಡಬ್ಲ್ಯೂಎಲ್ 2021

(ಅರವಿಂದ ಲಿಂಬಾವಳಿ)
ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕರ್ನಾಟಕ ವಿಧಾನ ಸಭೆ

1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	777
2)	ಮಾನ್ಯ ಸದಸ್ಯರ ಹೆಸರು:	ಶ್ರೀ ಡಾ॥ ಯತೀಂದ್ರ ಸಿದ್ದರಾಮಯ್ಯ (ವರುಣ)
3)	ಉತ್ತರಿಸಬೇಕಾದ ದಿನಾಂಕ:	**04.02.2021**
4)	ಉತ್ತರಿಸುವವರು:	**ಮಾನ್ಯ ಉಪ ಮುಖ್ಯಮಂತ್ರಿಗಳು ಮತ್ತು ಉನ್ನತ ಶಿಕ್ಷಣ, ಐಟಿ/ಬಿಟಿ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು.**

ಕ್ರ.ಸಂ.	ಪ್ರಶ್ನೆ	ಉತ್ತರ
(ಅ)	ಕಳೆದ 3ವರ್ಷಗಳಲ್ಲಿ ಕೌಶಲ್ಯಾಭಿವೃದ್ಧಿ ಇಲಾಖೆಯಿಂದ ರಾಜ್ಯದ ವಿದ್ಯಾವಂತ ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸಲು ಸರ್ಕಾರವು ಯಾವ ನೆರವನ್ನು ಕಲ್ಪಿಸಿದೆ. (ಪೂರ್ಣ ಮಾಹಿತಿ ನೀಡುವುದು)	**ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಆಯುಕ್ತಾಲಯ:** ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಿಂದ ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸಲು ರೂಪಿಸಿರುವ ಯೋಜನೆಗಳು ಈ ಕೆಳಗಿನಂತಿವೆ. **ವೃತ್ತಿ ಮಾರ್ಗದರ್ಶನ:-** ಕಛೇರಿಗೆ ಭೇಟಿ ನೀಡುವ ಉದ್ಯೋಗಾಕಾಂಕ್ಷಿಗಳಿಗೆ ಹಾಗೂ ಶಾಲಾ ಕಾಲೇಜುಗಳಲ್ಲಿ ವೃತ್ತಿ ಮಾರ್ಗದರ್ಶನ, ಸಮಾಲೋಚನೆ, ಅಲ್ಪಾವಧಿ ಕೌಶಲ್ಯ ತರಬೇತಿ ನೀಡಿ ಉದ್ಯೋಗ ಅವಕಾಶಗಳ ಪಡೆಯುವಿಕೆಯನ್ನು ಹೆಚ್ಚಿಸಲಾಗುತ್ತಿದೆ. **ಸ್ಟಡಿ ಸರ್ಕಲ್:-** ಸರ್ಕಾರಿ ವಲಯದ ಎಲ್ಲಾ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕವೇ ನೇಮಕಾತಿಯಾಗುತ್ತಿರುವ ಹಿನ್ನೆಲೆಯಲ್ಲಿ, ರಾಜ್ಯದ ಎಲ್ಲಾ ಉದ್ಯೋಗ ವಿನಿಮಯ ಕಛೇರಿಗಳಲ್ಲಿ ಸ್ಟಡಿ ಸರ್ಕಲ್ ಮೂಲಕ ಉಚಿತ ಪರೀಕ್ಷಾಪೂರ್ವ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. **ಉದ್ಯೋಗ ಮೇಳ:-** ಸ್ಥಳೀಯವಾಗಿ ಲಭ್ಯವಿರುವ ಕೈಗಾರಿಕೆಗಳಿಂದ ಲಭ್ಯವಿರುವ ಖಾಲಿ ಹುದ್ದೆಗಳ ಮಾಹಿತಿ ಪಡೆದು, ಜಿಲ್ಲಾ ಮಟ್ಟದಲ್ಲಿ ಮಿನಿ ಉದ್ಯೋಗ ಮೇಳಗಳನ್ನು ಏರ್ಪಡಿಸುವ ಮೂಲಕ ಉದ್ಯೋಗಾಕಾಂಕ್ಷಿಗಳಿಗೆ ಉದ್ಯೋಗವನ್ನು ಒದಗಿಸಿಕೊಡಲು ಸಹಕರಿಸಲಾಗಿರುತ್ತದೆ. ಕಳೆದ ಮೂರು ವರ್ಷಗಳಲ್ಲಿ ಆಯೋಜಿಸಲಾಗಿದ್ದ ಸ್ಟಡಿ ಸರ್ಕಲ್ ಮತ್ತು ಉದ್ಯೋಗ ಮೇಳಗಳ ವಿವರಗಳು.

ಅವಧಿ	ಉದ್ಯೋಗ ಮೇಳ			ಸ್ಟಡಿ ಸರ್ಕಲ್	
	ಆಯೋಜಿಸಿದ ಮೇಳಗಳ ಸಂಖ್ಯೆ	ಹಾಜರಾದ ಅಭ್ಯರ್ಥಿಗಳ ಸಂಖ್ಯೆ	ಉದ್ಯೋಗಕ್ಕೆ ನೇಮಕಾತಿ ಪತ್ರ ಪಡೆದವರ ಸಂಖ್ಯೆ	ಕಾರ್ಯಕ್ರಮಗಳ ಸಂಖ್ಯೆ	ತರಬೇತಿ ಪಡೆದವರ ಸಂಖ್ಯೆ
2017–18	144	68972	14382	96	5302
2018–19	180	100997	25300	87	4678
2019–20	192	51085	16038	85	4556

ಕೌಶಲ್ಯ ಮಿಷನ್:

ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮದ ವತಿಯಿಂದ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ ಹಾಗೂ ಪ್ರಧಾನ ಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆಯಡಿಯಲ್ಲಿ ರಾಜ್ಯ

ನಿರುದ್ಯೋಗ ಯುವ ಜನತೆಗೆ ಸ್ವಯಂ ಉದ್ಯೋಗ, ಉದ್ಯಮಶೀಲರನ್ನಾಗಿಸಲು ಹಾಗೂ ಉದ್ಯೋಗ ಕಲ್ಪಿಸಲು ಉಚಿತವಾಗಿ ಕೌಶಲ್ಯಾಧಾರಿತ ತರಬೇತಿ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಕಳೆದ ಮೂರು ವರ್ಷಗಳಲ್ಲಿ ಸಿ.ಎಂ.ಕೆ.ಕೆ.ವೈ ಯೋಜನೆಯಡಿಯಲ್ಲಿ 84613 ಅಭ್ಯರ್ಥಿಗಳಿಗೆ ಕೌಶಲ್ಯಾಧಾರಿತ ತರಬೇತಿಯನ್ನು ನೀಡಿ ಸುಮಾರು 13603 ಅಭ್ಯರ್ಥಿಗಳಿಗೆ ಸ್ವಯಂ ಉದ್ಯೋಗ ಹಾಗೂ ಉದ್ಯೋಗಾವಕಾಶ ಕಲ್ಪಿಸಿದೆ. ಪ್ರಧಾನಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆಯಡಿಯಲ್ಲಿ 14919 ಅಭ್ಯರ್ಥಿಗಳಿಗೆ ತರಬೇತಿ ನೀಡಿ 385 ಅಭ್ಯರ್ಥಿಗಳಿಗೆ ಸ್ವಯಂ ಉದ್ಯೋಗ ಹಾಗೂ ಉದ್ಯೋಗಳನ್ನು ಕಲ್ಪಿಸಲಾಗಿರುತ್ತದೆ.

ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (NRLM):

- ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ (ಡಿಡಿಯು-ಜಿಕೆವೈ) ಕಾರ್ಯಕ್ರಮದಡಿಯಲ್ಲಿ ನಿರುದ್ಯೋಗಿ ಯುವಕ-ಯುವತಿಯರಿಗೆ ಉಚಿತ ವಸತಿ ಪ್ರಯಾಣ ಭತ್ಯೆ, ಉಚಿತ ಊಟ-ತಿಂಡಿ, ಉಚಿತ ತರಬೇತಿ, ಪ್ರೋತ್ಸಾಹಧನ ಮತ್ತು ಉದ್ಯೋಗ ಒದಗಿಸಲಾಗುತ್ತಿದೆ.
- ಆರ್‌ಸೆಟಿ ಯೋಜನೆಯಡಿ ನಿರುದ್ಯೋಗಿ ಯುವಕ- ಯುವತಿಯರಿಗೆ ಸ್ವ-ಉದ್ಯೋಗ ತರಬೇತಿ ಯಶಸ್ವಿಯಾಗಿ ಪಡೆದ ಅಭ್ಯರ್ಥಿಗಳಿಗೆ ಸಂಬಂಧಪಟ್ಟ ಬ್ಯಾಂಕ್ ಶಾಖೆಗಳ ಮುಖಾಂತರ ಸ್ವ-ಉದ್ದಿಮೆ ಕೈಗೊಳ್ಳಲು ಆರ್‌ಸೆಟಿ ತರಬೇತಿ ಸಂಸ್ಥೆಗಳು ಸಾಲ-ಸೌಲಭ್ಯ ಒದಗಿಸಲು ಸಹಕರಿಸುತ್ತಿರುತ್ತದೆ.

ಡೇ-ನಲ್ಮ್:

ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಡಿಯ ದೀನ್ ದಯಾಳ್ ಅಂತ್ಯೋದಯ ಯೋಜನೆ ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನದಡಿ ಈ ಕೆಳಕಂಡಂತೆ ಅವಕಾಶವನ್ನು ಕಲ್ಪಿಸಲಾಗಿರುತ್ತದೆ.

1. ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳ ನಿಯುಕ್ತಿ ಉಪಘಟಕ.

ಸದರಿ ಉಪಘಟಕದಡಿ ನಗರದ ನಿರುದ್ಯೋಗ ಯುವಕ / ಯುವತಿಯರಿಗೆ ವಿವಿಧ ಉದ್ಯೋಗಾಧಾರಿತ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ನೀಡುತ್ತಾ, ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ತರಬೇತಿಯನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳಿಗೆ ಶೇ.70 ರಷ್ಟು ಉದ್ಯೋಗವನ್ನು ಕಲ್ಪಿಸಲಾಗುವುದು. ಕಳೆದ 3 ವರ್ಷಗಳಲ್ಲಿ ಈ ಕೆಳಕಂಡಂತೆ ತರಬೇತಿ ಕಾರ್ಯಕ್ರಮಗಳನ್ನು ನೀಡಿ, ಉದ್ಯೋಗವನ್ನು ಕಲ್ಪಿಸಲಾಗಿದೆ.

ವರ್ಷ	ತರಬೇತಿಯನ್ನು ಪಡೆದುಕೊಂಡ ಫಲಾನುಭವಿಗಳ ಸಂಖ್ಯೆ	ಉದ್ಯೋಗವನ್ನು ಪಡೆದುಕೊಂಡ ಫಲಾನುಭವಿಗಳ ಸಂಖ್ಯೆ
2017-18	18775	1104
2018-19	7250	340
2019-20	6792	185

2)ಸ್ವಯಂ ಉದ್ಯೋಗ ಕಾರ್ಯಕ್ರಮ:

ಸದರಿ ಉಪಘಟಕದಡಿ ವೈಯಕ್ತಿಕ ಕಿರುಉದ್ದಿಮೆಯನ್ನು ಸ್ಥಾಪಿಸಲು ರೂ.2.00 ಲಕ್ಷದವರೆಗೆ ಹಾಗೂ ಗುಂಪು ಕಿರುಉದ್ದಿಮೆಯನ್ನು ಸ್ಥಾಪಿಸಲು ರೂ.10.00 ಲಕ್ಷದ ವರೆಗೆ ಬ್ಯಾಂಕಿನಿಂದ ಸಾಲ ಸೌಲಭ್ಯವನ್ನು ಕಲ್ಪಿಸುತ್ತಾ ಶೇ.7 ಕ್ಕಿಂತ ಮೇಲ್ಪಟ್ಟ ಬಡ್ಡಿ ಸಹಾಯಧನವನ್ನು ಯೋಜನೆಯಿಂದ ಭರಿಸಿ ಪಾವತಿಸಲಾಗುವುದು. ಕಳೆದ 3 ವರ್ಷಗಳಲ್ಲಿ ವೈಯಕ್ತಿಕ ಮತ್ತು ಗುಂಪು ಕಿರುಉದ್ದಿಮೆಯನ್ನು ಪ್ರಾರಂಭಿಸಲು ಈ ಕೆಳಕಂಡಂತೆ ಬ್ಯಾಂಕ್‌ನಿಂದ ಸಾಲ ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ.

ಕ್ರ ಸಂ	ವರ್ಷ	ವೈಯಕ್ತಿಕಕಿರು ಉದ್ದಿಮೆ ಪ್ರಾರಂಭಿಸಿರುವ ಫಲಾನುಭವಿಗಳ ಸಂಖ್ಯೆ	ಗುಂಪು ಕಿರು ಉದ್ದಿಮೆ ಪ್ರಾರಂಭಿಸಿರುವ ಗುಂಪುಗಳ ಸಂಖ್ಯೆ
1	2017–18	1903	168
2	2018–19	2427	89
3	2019–20	1194	105

ಸಿಡಾಕ್:

ಕಳೆದ 3 ವರ್ಷಗಳಲ್ಲಿ ಕೌಶಲ್ಯಾಭಿವೃದ್ಧಿ ಇಲಾಖೆಯಿಂದ ರಾಜ್ಯದ ವಿದ್ಯಾವಂತ ನಿರುದ್ಯೋಗಿಗಳಿಗೆ ಸ್ವ-ಉದ್ಯೋಗ ಕಲ್ಪಿಸಲು ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ(ಸಿಡಾಕ್)ವು ಉದ್ಯಮಶೀಲತಾ ತಿಳುವಳಿಕೆ ಹಾಗೂ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮಗಳನ್ನು ಜರುಗಿಸಲಾಗಿರುತ್ತದೆ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಹಮ್ಮಿಕೊಂಡ ಕಾರ್ಯಕ್ರಮಗಳನ್ನು ಸೇರಿಸಿದ ವಿವರಗಳು ಈ ಕೆಳಗಿನಂತಿವೆ.

ವರ್ಷ	ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಅಭ್ಯರ್ಥಿಗಳ ಸಂಖ್ಯೆ
2017–18	24553
2018–19	16491
2019–20	23356

(ಆ) ಪ್ರಸ್ತುತ ಸದರಿ ಇಲಾಖೆಯಿಂದ ಯಾವ ಹೊಸ ಅವಿಷ್ಕಾರಗಳನ್ನು ನೀಡಲು ಕ್ರಮ ತೆಗೆದುಕೊಂಡಿದೆ? (ಮಾಹಿತಿ ನೀಡುವುದು)

ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಆಯುಕ್ತಾಲಯ:

ಕೇಂದ್ರ ಸರ್ಕಾರದ ಅನುದಾನದೊಂದಿಗೆ ಆಯ್ದ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಗಳನ್ನು ಮಾದರಿ ವೃತ್ತಿ ಕೇಂದ್ರಗಳಾಗಿ ಪರಿವರ್ತಿಸುವ ಕಾರ್ಯ ಪ್ರಗತಿಯಲ್ಲಿದ್ದು, ಇದರಿಂದ ಉದ್ಯೋಗ ವಿನಿಯಮಯ ಕಛೇರಿಗಳ ಮೂಲಭೂತ ಸೌಲಭ್ಯಗಳ ಒದಗಿಸುವಿಕೆ ಮತ್ತು ಉದ್ಯೋಗ ಮೇಳಗಳನ್ನು ಪರಿಣಾಮಕಾರಿಯಾಗಿ ಆಯೋಜಿಸಲು ಸೂಕ್ತ ಕ್ರಮ ವಹಿಸಲಾಗುತ್ತಿದೆ.

ಕೌಶಲ್ಯ ಮಿಷನ್:

ಪ್ರಸ್ತುತ ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮದ ವತಿಯಿಂದ ಕೌಶಲ್ಯಾಧಾರಿತ ತರಬೇತಿ ನೀಡುವುದರ ಜೊತೆಗೆ ಅತಿ ಹಿಂದುಳಿದ ಗ್ರಾಮೀಣ ಪ್ರದೇಶಗಳಲ್ಲಿ ನೆಲೆಸಿರುವ ಯುವಜನತೆಗೆ ಅವರಿರುವಲ್ಲಿಯೇ ಅಲ್ಪಾವಧಿ ತರಬೇತಿ ನೀಡಿ ಸ್ವಯಂ ಉದ್ಯೋಗಿಗಳನ್ನಾಗಿಸಲು "Skill On Wheels" ಎಂಬ ಸಂಚಾರಿ ತರಬೇತಿ ಕೇಂದ್ರವನ್ನು ಅನುಷ್ಠಾನಗೊಳಿಸಲು ಉಚಿತ ತರಬೇತಿ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಹಾಗೆಯೇ, ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮಕ್ಕೆ ಸೇರಿದ ಶಿವಮೊಗ್ಗದ ವಿದ್ಯಾಪೀಠದಲ್ಲಿ "ಮಾಸ್ಟರ್ ಟ್ರೈನಿಂಗ್ ಸೆಂಟರ್" ನ್ನು ತೆರೆಯಲು ಉದ್ದೇಶಿಸಲಾಗಿದೆ ಹಾಗೂ ಕೃಷಿವಲಯದಲ್ಲಿ ರೈತರನ್ನು ಆರ್ಥಿಕವಾಗಿ ಸಬಲರನ್ನಾಗಿಸಲು ವಿವಿಧ ಕೋರ್ಸ್‌ಗಳಲ್ಲಿ (Job Roles) ತರಬೇತಿ ನೀಡಲು ಕ್ರಮಕೈಗೊಳ್ಳಲಾಗಿದೆ. ಕೋವಿಡ್ – 19 ರಿಂದಾಗಿ ಉದ್ಯೋಗ ಕಲ್ಪಿಸುವ ನಿಟ್ಟಿನಲ್ಲಿ ಉದ್ಯೋಗದಾತರು ಹಾಗೂ ಉದ್ಯೋಗಾಕಾಕ್ಷಿಗಳನ್ನು ಒಂದೇ ಸೂರಿನಡಿಯಲ್ಲಿ ತರುವ ಸಲುವಾಗಿ "ಸ್ಕಿಲ್ ಕನೆಕ್ಟ್" ಪೋರ್ಟಲ್‌ನ್ನು ಮಾನ್ಯ ಮುಖ್ಯಮಂತ್ರಿಗಳಿಂದ ಉದ್ಘಾಟಿಸಿ ಅನುಷ್ಠಾನಗೊಳಿಸಲಾಗಿದೆ ಹಾಗೂ ಅಂತರ ರಾಜ್ಯ ಹಾಗೂ ಅಂತರರಾಷ್ಟ್ರೀಯ ವಲಸಿಗರಿಗೆ ತರಬೇತಿ ನೀಡಿ ಉದ್ಯೋಗ ಕಲ್ಪಿಸುವ ನಿಟ್ಟಿನಲ್ಲಿ Migrantkar ಪೋರ್ಟಲ್‌ನ್ನು ಸಹ ಅನುಷ್ಠಾನಗೊಳಿಸಲಾಗಿದೆ.

		ಡೇ–ನಲ್ಮ್: ಡೇ–ನಲ್ಮ್ ಯೋಜನೆಯಡಿ ನಗರ ಬೀದಿ ವ್ಯಾಪಾರಿಗಳ ಉದ್ಯಮಶೀಲತೆ ಹಾಗೂ ವೃತ್ತಿಪರತೆ ಹೆಚ್ಚಿಸಲು ಮೊಬೈಲ್ ಅಪ್ಲಿಕೇಶನ್ ಮೂಲಕ ವ್ಯಾಪಾರ ಮಾಡಲು ಇ–ಮಾರುಕಟ್ಟೆ ತಂತ್ರಾಂಶ ಅಭಿವೃದ್ಧಿ ಪಡಿಸಿ ಪ್ಲೆಟ್ ಅನುಷ್ಠಾನಗೊಳಿಸಲಾಗುತ್ತಿದೆ.

ಸಂಖ್ಯೆ: ಕೌಉಜೀಇ 6 ಉಜೀಪ್ರ 2021

(ಡಾ॥ ಸಿ.ಎನ್. ಅಶ್ವಥ್‌ನಾರಾಯಣ)
ಉಪ ಮುಖ್ಯಮಂತ್ರಿಗಳು ಮತ್ತು ಉನ್ನತ ಶಿಕ್ಷಣ, ಐಟಿ/ಬಿಟಿ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು.

ಕರ್ನಾಟಕ ವಿಧಾನಸಭೆ

(15ನೇ ವಿಧಾನಸಭೆ, 9ನೇ ಅಧಿವೇಶನ)

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 788

2) ಸದಸ್ಯರ ಹೆಸರು : ಶ್ರೀ ನಂಜೇಗೌಡ ಕೆ.ವೈ (ಮಾಲೂರು)

3) ಉತ್ತರಿಸುವ ದಿನಾಂಕ : 04.02.2021.

4) ಉತ್ತರಿಸುವವರು : ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕೋಲಾರ ಜಿಲ್ಲೆ ಮಾಲೂರು ಮತ್ತು ಬಂಗಾರಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಪದೇ ಪದೇ ಆನೆ, ಚಿರತೆ ಮತ್ತು ಕರಡಿ ಇತ್ಯಾದಿ ಕಾಡು ಪ್ರಾಣಿಗಳು ಗ್ರಾಮಗಳಿಗೆ ನುಗ್ಗಿ ರೈತರ ಪ್ರಾಣಿಹಾನಿ ಹಾಗೂ ನಷ್ಟ ಉಂಟು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ. ಕೋಲಾರ ಜಿಲ್ಲೆಯ ಮಾಲೂರು ಮತ್ತು ಬಂಗಾರಪೇಟೆ ವಿಧಾನಸಭಾ ಕ್ಷೇತ್ರ ಪ್ರದೇಶದ ವ್ಯಾಪ್ತಿಯ ಪಕ್ಕದ ರಾಜ್ಯಗಳಾದ ಆಂಧ್ರ ಪ್ರದೇಶ, ತಮಿಳುನಾಡು ರಾಜ್ಯಗಳಿಂದ ಆಗಿಂದಾಗ್ಗೆ ಆನೆಗಳು ಬರುತ್ತಿದ್ದು, ಬೆಳೆಹಾನಿ ಹಾಗೂ ಮಾನವ ಪ್ರಾಣಹಾನಿ ಸಂಭವಿಸಿರುತ್ತಿರುತ್ತದೆ ಚಿರತೆ ಹಾವಳಿಯಿಂದ ಸಾಕುಪ್ರಾಣಿಗಳ ಹತ್ಯೆಯಾಗಿತ್ತಿದ್ದು, ಸದರಿ ಪ್ರಕರಣಗಳಿಗೆ ಪರಿಹಾರವನ್ನು ಪಾವತಿಸಲಾಗುತ್ತಿದೆ. ಆದರೆ ಕರಡಿಗಳ ಹಾವಳಿಯಿಂದ ಹಾನಿಯಾದ ಪ್ರಕರಣಗಳು ಯಾವುದೂ ಇರುವುದಿಲ್ಲ.
ಆ)	ಬಂದಿದ್ದಲ್ಲಿ, ಇವುಗಳನ್ನು ತಡೆಯಲು ಸರ್ಕಾರ ಕೈಗೊಂಡ ಶಾಶ್ವತ ಕ್ರಮಗಳೇನು; ಕಳೆದ ಮೂರು ವರ್ಷಗಳಲ್ಲಿ ಒದಗಿಸಿರುವ ಅನುದಾನವೆಷ್ಟು; (ಮಾಹಿತಿ ಒದಗಿಸುವುದು)	ಕೋಲಾರ ಜಿಲ್ಲೆ ಮಾಲೂರು ಮತ್ತು ಬಂಗಾರಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಆನೆ ಹಾವಳಿ ಪ್ರಕರಣಗಳನ್ನು ಶಾಶ್ವತವಾಗಿ ತಡೆಗಟ್ಟಲು 2016-17ನೇ ಸಾಲಿನಲ್ಲಿ ಕಾಮಸಮುದ್ರ ಅರಣ್ಯ ಪ್ರದೇಶದಲ್ಲಿ 35.57 ಕಿ.ಮೀ ಆನೆ ನಿರೋಧಕ ಕಂದಕವನ್ನು ನಿರ್ಮಿಸಲಾಗಿದೆ. ಇದಕ್ಕಾಗಿ ರೂ.124.11ಲಕ್ಷ ವೆಚ್ಚ ಭರಿಸಲಾಗಿರುತ್ತದೆ. ಮುಂದುವರೆದು, ಸದರಿ ಪ್ರದೇಶದಲ್ಲಿ ಕಾಡಾನೆಗಳು ಅರಣ್ಯ ಪ್ರದೇಶದ ಗಡಿ ಅಂಚಿನ ಗ್ರಾಮಗಳಲ್ಲಿ ದಾಳಿ ಇಡುವುದನ್ನು ತಡೆಗಟ್ಟಲು ಆನೆ ತಡೆ ಶಿಬಿರಗಳು ಮತ್ತು ಕಳ್ಳ ಬೇಟೆ ತಡೆ ಶಿಬಿರಗಳನ್ನು ರಚಿಸಿ ಕಾಡಾನೆಗಳ ಚಲನವಲನಗಳನ್ನು ಗಮನಿಸಿ, ತುರ್ತಾಗಿ ಅವುಗಳನ್ನು ಅರಣ್ಯ ಪ್ರದೇಶಗಳಿಗೆ ಹಿಮ್ಮೆಟ್ಟಿಸಲಾಗುತ್ತಿದೆ. ಕಾಡಾನೆಗಳು ನೀರನ್ನು ಅರಸಿ ಗಡಿಯಂಚಿನ ಗ್ರಾಮಗಳಿಗೆ ಬರುವುದನ್ನು ತಡೆಯಲು ಅರಣ್ಯ ಪ್ರದೇಶಗಳಲ್ಲಿ ಕೆರೆ, ನಾಲಾಬಂಡ್‌ಗಳನ್ನು ನಿರ್ಮಿಸಿ ನೀರಿನ ಮೂಲಗಳನ್ನು ಪುನರುಜ್ಜೀವನಗೊಳಿಸಲಾಗಿದೆ.

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>ಮೇಲೆ ಪ್ರಸ್ತಾಪಿಸಿದಂತೆ ಕಾಡಾನೆಗಳ ದಾಳಿಯನ್ನು ತಡೆಯಲು ನಿರ್ವಹಿಸಲಾದ ಕಾಮಗಾರಿಗಳಿಗೆ ಕಳೆದ ಮೂರು ವರ್ಷಗಳಲ್ಲಿ ಒದಗಿಸಲಾದ ಅನುದಾನದ ವಿವರ ಈ ಕೆಳಕಂಡಂತಿದೆ:
<table>
<tr><th>ಕ್ರಸಂ</th><th>ವರ್ಷ</th><th>ಯೋಜನೆ</th><th>ಒದಗಿಸಿದ ಅನುದಾನ (ರೂ ಲಕ್ಷಗಳಲ್ಲಿ)</th></tr>
<tr><td>1</td><td>2017-18</td><td>ಮಾನವ-ವನ್ಯಪ್ರಾಣಿ ಸಂಘರ್ಷ ನಿಯಂತ್ರಣ</td><td>84.47</td></tr>
<tr><td>2</td><td>2018-19</td><td>ಮಾನವ-ವನ್ಯಪ್ರಾಣಿ ಸಂಘರ್ಷ ನಿಯಂತ್ರಣ</td><td>95.00</td></tr>
<tr><td>3</td><td>2019-20</td><td>ಮಾನವ-ವನ್ಯಪ್ರಾಣಿ ಸಂಘರ್ಷ ನಿಯಂತ್ರಣ ಮತ್ತು ಆನೆ ಯೋಜನೆ</td><td>154.817</td></tr>
</table></td></tr>
<tr><td>ಇ)</td><td>ಕಳೆದ ಮೂರು ವರ್ಷಗಳಿಂದ ಈ ಕಾಡು ಪ್ರಾಣಿಗಳಿಂದ ಪ್ರಾಣ ಕಳೆದುಕೊಂಡ ರೈತ ಹಾಗೂ ಸಿಬ್ಬಂದಿಗಳ ಸಂಖ್ಯೆ ಎಷ್ಟು; (ವ್ಯಕ್ತಿವಾರು ಮಾಹಿತಿ ಒದಗಿಸುವುದು)</td><td rowspan="2">ಕಳೆದ ಮೂರು ವರ್ಷಗಳಲ್ಲಿ ವನ್ಯಪ್ರಾಣಿ ದಾಳಿಯಿಂದ ಉಂಟಾದ ಮಾನವ ಪ್ರಾಣಹಾನಿ ಪ್ರಕರಣಗಳ ವ್ಯಕ್ತಿವಾರು ಮಾಹಿತಿ ಪಾವತಿಸಿರುವ ದಯಾತ್ಮಕಧನದ ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ.</td></tr>
<tr><td>ಈ)</td><td>ಇವರುಗಳಿಗೆ ಸರ್ಕಾರದಿಂದ ನೀಡಿರುವ ಪರಿಹಾರ ಧನವೆಷ್ಟು? (ವ್ಯಕ್ತಿವಾರು ಮಾಹಿತಿ ನೀಡುವುದು)</td></tr>
</table>

ಸಂಖ್ಯೆ: ಅಪಜೀ 22 ಎಫ್‌ಡಬ್ಲ್ಯೂಎಲ್ 2021

(ಅರವಿಂದ ಲಿಂಬಾವಳಿ)
ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ಅನುಬಂಧ-1 (ಎಲ್‌ಎಕ್ಯೂ-788)

ಕಳೆದ ಮೂರು ವರ್ಷಗಳಲ್ಲಿ ಮಾಲೂರು ಮತ್ತು ಬಂಗಾರಪೇಟೆ ವಲಯಗಳಲ್ಲಿ ಆನೆ, ಚಿರತೆ ಮತ್ತು ಇನ್ನಿತರೆ ಕಾಡುಪ್ರಾಣಿಗಳಿಂದ ದಾಳಿಗೊಳಗಾದವರ ವಿವರ.

ಕ್ರಸಂ	ವರ್ಷ	ವಲಯ	ದಾಳಿ ನಡೆದ ಸ್ಥಳ	ದಾಳಿ ನಡೆಸಿದ ಪ್ರಾಣಿ	ದಾಳಿಗೊಳಗಾದವರ ವಿವರ	ಪ್ರಾಣಹಾನಿ	ಪರಿಹಾರ (ರೂ.ಲಕ್ಷಗಳಲ್ಲಿ)
1	2017-18	ಬಂಗಾರಪೇಟೆ	ಸಾಕಾರಸನಹಳ್ಳಿ ಗ್ರಾಮ	ಕಾಡಾನೆ	ಶ್ರೀ ಆರ್. ನಾಗರಾಜ ಬಿನ್ ರಾಮಕೃಷ್ಣಪ್ಪ, ಸಾಕಾರಸನಹಳ್ಳಿ ಗ್ರಾಮ, ಕಾಮುಸಮುದ್ರ ಹೋಬಳಿ, ಬಂಗಾರಪೇಟೆ ತಾಲ್ಲೂಕು	ಮೃತಪಟ್ಟಿರುತ್ತಾರೆ	500000.00
1	2018-19	-	-	-	-	-	-
1	2019-20	ಮಾಲೂರು	ಎಂ. ಗುಟ್ಟಹಳ್ಳಿ	ಕಾಡಾನೆ	ಆನಂದಯ್ಯ ಬಿನ್ ಚೆನ್ನಕೇಶವಯ್ಯ, ಕಾಮಾಂಡಹಳ್ಳಿ ಗ್ರಾಮ, ಟೇಕಲ್ ಹೋಬಳಿ, ಮಾಲೂರು ತಾಲ್ಲೂಕು	ಮೃತಪಟ್ಟಿರುತ್ತಾರೆ	750000.00
2	2019-20	ಮಾಲೂರು	ಎಂ. ಗೊಲ್ಲಹಳ್ಳಿ	ಕಾಡಾನೆ	ಗುಟ್ಟ ಮುನಿಯಪ್ಪ, ಪಿ.ಸಿ.ಪಿ ನೌಕರ, ಗುಡೇಗೌಡನಹಳ್ಳಿ, ತಮಿಳುನಾಡು	ಮೃತಪಟ್ಟಿರುತ್ತಾರೆ	750000.00
3	2019-20	ಬಂಗಾರಪೇಟೆ	ಚಿಗರಲೂರು	ಕಾಡಾನೆ	ಬೀರಪ್ಪ ಬಿನ್ ಯರ್ರಪ್ಪ, ಚಿಗರಲೂರು ಗ್ರಾಮ, ಬಂಗಾರಪೇಟೆ ತಾಲ್ಲೂಕು	ಮೃತಪಟ್ಟಿರುತ್ತಾರೆ	750000.00
4	2019-20	ಬಂಗಾರಪೇಟೆ	ದೇವರಗುಟ್ಟಪಳ್ಳಿ	ಕಾಡಾನೆ	ಮೂಗಪ್ಪ ಬಿನ್ ದೊಡ್ಡಕುರಮಪ್ಪ, ದೇವರಗುಟ್ಟಹಳ್ಳಿ, ಬಂಗಾರಪೇಟೆ ತಾಲ್ಲೂಕು	ಮೃತಪಟ್ಟಿರುತ್ತಾರೆ	750000.00
5	2019-20	ಬಂಗಾರಪೇಟೆ	ದೊಡ್ಡಪೊನ್ನಾಂಡಹಳ್ಳಿ	ಕಾಡಾನೆ	ಶ್ರೀ ಧರ್ಮೋಜಿರಾವ್ ಬಿನ್ ಸಂತೋಜಿರಾವ್, ದೊಡ್ಡಪೊನ್ನಾಂಡಹಳ್ಳಿ ಗ್ರಾಮ, ಬಂಗಾರಪೇಟೆ ತಾಲ್ಲೂಕು	ಮೃತಪಟ್ಟಿರುತ್ತಾರೆ	750000.00

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**816**
ಸದಸ್ಯರ ಹೆಸರು	**ಶ್ರೀ ಅನಿಲ್ ಚಿಕ್ಕಮಾದು (ಹೆಚ್.ಡಿ. ಕೋಟೆ)**
ಉತ್ತರಿಸಬೇಕಾದ ದಿನಾಂಕ	**04.02.2021**
ಉತ್ತರಿಸಬೇಕಾದ ಸಚಿವರು	ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ)

	ಪ್ರಶ್ನೆ	ಉತ್ತರ
ಅ)	ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪ್ರಾಧ್ಯಾಪಕರು/ ಉಪನ್ಯಾಸಕರುಗಳ ಕೊರತೆ ಇದ್ದು, ಪದವಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಒದಗಿಸುವಲ್ಲಿ ಇಲಾಖೆ ವಿಫಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಇಲಾಖಾ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಮಂಜೂರಾಗಿರುವ, ಕಾರ್ಯನಿರತ ಮತ್ತು ಖಾಲಿಹುದ್ದೆಗಳ ಬೋಧಕ ಹುದ್ದೆಗಳ ವಿವರಗಳು ಕೆಳಕಂಡಂತಿದೆ.
ಆ)	ಪ್ರಾಧ್ಯಾಪಕರು / ಉಪನ್ಯಾಸಕರ ಕೊರತೆ ನೀಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;	(ಕೆಳಗಿನ ಕೋಷ್ಟಕ ಮತ್ತು ವಿವರಣೆ ನೋಡಿ)

ಕ್ರ. ಸಂ	ಹುದ್ದೆ	ಮಂಜೂರು	ಕಾರ್ಯ ನಿರತ	ಖಾಲಿ ಹುದ್ದೆ
01	ಪ್ರಾಂಶುಪಾಲರು ಗ್ರೇಡ್-1/ ಗ್ರೇಡ್-2	412	03	409
02	ಪ್ರಾಧ್ಯಾಪಕರು	7604	6121	1483
03	ಗ್ರಂಥಪಾಲಕರು	390	274	116
04	ದೈಹಿಕ ಶಿಕ್ಷಣ ಬೋಧಕರು	349	236	113
ಒಟ್ಟು		8755	6634	2121

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿಯಿರುವ 310 ಪ್ರಾಂಶುಪಾಲರ ಹುದ್ದೆಗಳನ್ನು ಹಾಗೂ 1242 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆಯು ಅನುಮೋದನೆ ನೀಡಿದ್ದು, ನೇಮಕಾತಿ ಮಾಡಿಕೊಳ್ಳಲು ವಿಶೇಷ ನೇಮಕಾತಿ ನಿಯಮಗಳನ್ನು ರಚಿಸಿ ಅಂತಿಮಗೊಳಿಸಲಾಗಿರುತ್ತದೆ.

ಆದರೆ, ಪ್ರಸ್ತುತ ಕೋವಿಡ್-19 ಹಿನ್ನೆಲೆಯಲ್ಲಿ 2020-21ನೇ ಸಾಲಿನಲ್ಲಿ ಯಾವುದೇ ನೇಮಕಾತಿಯನ್ನು ಮಾಡುವಂತಿಲ್ಲ ಎಂಬುದಾಗಿ ಆರ್ಥಿಕ ಇಲಾಖೆಯು ನಿರ್ಬಂಧ ವಿಧಿಸಿರುವುದರಿಂದ ನಿರ್ಬಂಧವನ್ನು ತೆರವುಗೊಳಿಸಿ ಪ್ರಾಂಶುಪಾಲರು ಹಾಗೂ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಆರ್ಥಿಕ ಇಲಾಖೆಯ ಅನುಮೋದನೆ ಕೋರಿದೆ.

ಆದಾಗ್ಯೂ, ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ಎದುರಾಗಿ ಲಭ್ಯವಾಗುವ ಬೋಧನಾ ಕಾರ್ಯಭಾರವನ್ನು ನಿರ್ವಹಿಸಲು ಅರ್ಹ ಅತಿಥಿ ಉಪನ್ಯಾಸಕರ ಸೇವೆಯನ್ನು ಬಳಸಿಕೊಂಡು, ಆ ಮೂಲಕ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ತೊಂದರೆಯಾಗದಂತೆ, ಪಾಠ-ಪ್ರವಚನಗಳನ್ನು ನಡೆಸಲು ಕ್ರಮವಹಿಸಲಾಗಿದೆ.

ಇ)	ಸರಗೂರು ಪ್ರಥಮ ದರ್ಜೆ ಕಾಲೇಜಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಉಪನ್ಯಾಸಕರುಗಳನ್ನು ಅನ್ಯಕಾರ್ಯ ನಿಮಿತ್ತ ನಿಯೋಜನೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸರಗೂರಿನ ಕಾಲೇಜಿಗೆ ಮಂಜೂರಾದ, ಕಾರ್ಯನಿರ್ವಹಿಸುತ್ತಿರುವ ಖಾಲಿಯಿರುವ ಹಾಗೂ	ಸರಗೂರು ಪ್ರಥಮ ದರ್ಜೆ ಕಾಲೇಜಿಗೆ ಮಂಜೂರಾಗಿರುವ, ಕಾರ್ಯನಿರತ ಮತ್ತು ಖಾಲಿಯಿರುವ ಹುದ್ದೆಗಳ ವಿವರಗಳನ್ನು ಮತ್ತು ಸರಗೂರು ಕಾಲೇಜಿನಿಂದ ಅನ್ಯ ಕಾಲೇಜಿಗೆ ನಿಯೋಜಿತರಾಗಿರುವ ಮತ್ತು ಅನ್ಯ ಕಾಲೇಜಿನಿಂದ ಸರಗೂರು ಕಾಲೇಜಿಗೆ ನಿಯೋಜಿತರಾಗಿರುವ ವಿಷಯವಾರು ಪ್ರಾಧ್ಯಾಪಕರ ವಿವರಗಳನ್ನು **ಅನುಬಂಧದಲ್ಲಿರಿಸಿದೆ.**

	ನಿಯೋಜನೆ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಉಪನ್ಯಾಸಕರುಗಳ ಮಾಹಿತಿಯನ್ನು ವಿಷಯವಾರು ನೀಡುವುದು,	ಇಲಾಖೆಯಲ್ಲಿ ಆಡಳಿತಾತ್ಮಕ ಹಾಗೂ ಶೈಕ್ಷಣಿಕ ಹಿತದೃಷ್ಟಿಯಿಂದ ಮತ್ತು ಕೋರಿಕೆಗಳ ಮೇರೆಗೆ ಪ್ರಾಧ್ಯಾಪಕರನ್ನು ಒಂದು ಕಾಲೇಜಿನಿಂದ ಮತ್ತೊಂದು ಕಾಲೇಜಿಗೆ ನಿಯೋಜಿಸಲಾಗುತ್ತದೆ. ಅದರಂತೆ ಸರಗೂರು ಕಾಲೇಜಿನಿಂದ 04 ಬೋಧಕರನ್ನು ಅನ್ಯ ಕಾಲೇಜಿಗೆ ಹಾಗೂ ಅನ್ಯ ಕಾಲೇಜಿನಿಂದ 03 ಪ್ರಾಧ್ಯಾಪಕರನ್ನು ಸರಗೂರು ಕಾಲೇಜಿಗೆ ನಿಯೋಜಿಸಲಾಗಿರುತ್ತದೆ
ಈ)	ಉಪನ್ಯಾಸಕರ ಕೊರತೆ ಇದ್ದಾಗ್ಯೂ ಸಹ ವಾಣಿಜ್ಯಶಾಸ್ತ್ರ ಉಪನ್ಯಾಸಕರನ್ನು ನಿಯೋಜನೆ ಮಾಡಲು ಕಾರಣಗಳೇನು;	
ಉ)	ಸರಗೂರು ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳಿಗೆ ಶಿಕ್ಷಣ ಗುಣಮಟ್ಟ ಹೆಚ್ಚಿಸಲು ಹಾಗೂ ಪರೀಕ್ಷಾ ಸಮಯ ಹತ್ತಿರವಿದ್ದಾಗ್ಯೂ ಉಪನ್ಯಾಸಕರಿಲ್ಲದೆ ಶಿಕ್ಷಣ ಕುಂಠಿತವಾಗುತ್ತಿದ್ದು, ಅದನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಪೂರ್ಣ ಮಾಹಿತಿ ನೀಡುವುದು).	ಸರಗೂರು ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಸದರಿ ಕಾಲೇಜಿಗೆ ಅನ್ಯ ಕಾಲೇಜುಗಳಿಂದ 03 ಪ್ರಾಧ್ಯಾಪಕರನ್ನು ನಿಯೋಜಿಸಲಾಗಿರುತ್ತದೆ. ಕೊರತೆಯಿರುವ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ಎದುರಾಗಿ ಲಭ್ಯವಾಗುವ ಬೋಧನಾ ಕಾರ್ಯಭಾರವನ್ನು ನಿರ್ವಹಿಸಲು 09 ಅತಿಥಿ ಉಪನ್ಯಾಸಕರ ಸೇವೆಯನ್ನು ಬಳಸಿಕೊಳ್ಳಲು ಅನುಮತಿ ನೀಡಲಾಗಿದೆ.

ಇಡಿ 35 ಡಿಸಿಇ 2021

(ಡಾ. ಅಶ್ವತ್ಥ ನಾರಾಯಣ ಸಿ.ಎನ್.)
ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ)

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಅನಿಲ್ ಚಿಕ್ಕಮಾದು(ಹೆಚ್ ಡಿ ಕೋಟೆ) ಇವರು ಮಂಡಿಸಿರುವ ಚುಕ್ಕೆ ಗುರುತಿನ/ ಗುರುತಿಲ್ಲದ ಪ್ರಶ್ನೆ ಸಂಖ್ಯೆ 816ಕ್ಕೆ ಅನುಬಂಧ

ಕ್ರ. ಸಂ.	ವಿಷಯ	ಮಂಜೂರಾದ ಹುದ್ದೆ	ಕಾರ್ಯ ನಿರತ	ಖಾಲಿ	ಸರಗೂರು ಕಾಲೇಜಿನಿಂದ ಬೇರೆ ಕಾಲೇಜಿಗೆ ನಿಯೋಜನೆಗೊಂಡಿರುವ ಬೋಧಕರ ಸಂಖ್ಯೆ	ಅನ್ಯ ಕಾಲೇಜಿನಿಂದ ಸಪ್ರದಕಾ, ಸರಗೂರು ಇಲ್ಲಿಗೆ ನಿಯೋಜಿತರಾಗಿರುವ ಬೋಧಕರ ಸಂಖ್ಯೆ	ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರ ಸಂಖ್ಯೆ	ಷರಾ
1	ಪ್ರಾಂಶುಪಾಲರು	1	0	1	0	0	0	ಸಪ್ರದಕಾ, ಹುಲ್ಲಹಳ್ಳ ಇಲ್ಲಿಂದ ಹಿರಿಯ ಪ್ರಾಧ್ಯಾಪಕರನ್ನು ಅನ್ಯ ಕಾರ್ಯ ನಿಮಿತ್ತ ನಿಯೋಜಿಸಿ ಪ್ರಾಂಶುಪಾಲರ ಪ್ರಭಾರದಲ್ಲಿರಿಸಲಾಗಿದೆ.
2	ವಾಣಿಜ್ಯಶಾಸ್ತ್ರ	3	2	1	2	1	4	
3	ಅರ್ಥಶಾಸ್ತ್ರ	1	1	0	1	0	2	
4	ಇಂಗ್ಲೀಷ್	1	1	0	0	0	0	
5	ಇತಿಹಾಸ	1	0	1	0	0	1	
6	ಕನ್ನಡ	1	1	0	0	1	0	
7	ರಾಜ್ಯಶಾಸ್ತ್ರ	1	1	0	0	0	0	
8	ಸಮಾಜಶಾಸ್ತ್ರ	1	0	1	0	1	1	
9	ದೈಹಿಕ ಶಿಕ್ಷಣ ನಿರ್ದೇಶಕರು	1	1	0	1	0	0	
10	ಗ್ರಂಥಪಾಲಕರು	1	1	0	0	0	0	
11	ಪರಿಸರ ಅಧ್ಯಯನ	0	0	0	0	0	1	
	ಒಟ್ಟು	12	8	4	4	3	9	

ಆಯುಕ್ತರು
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	826
ಮಾನ್ಯ ಸದಸ್ಯರ ಹೆಸರು	:	ಶ್ರೀ. ಸುಕುಮಾರ್ ಶೆಟ್ಟಿ ಬಿ.ಎಂ (ಬೈಂದೂರು)
ಉತ್ತರಿಸುವ ದಿನಾಂಕ	:	04.02.2021
ಉತ್ತರಿಸುವ ಸಚಿವರು	:	ಪ್ರವಾಸೋದ್ಯಮ, ಪರಿಸರ ಮತ್ತು ಜೀವಿಶಾಸ್ತ್ರ, ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಕಳೆದ ಮೂರು ವರ್ಷಗಳಲ್ಲಿ ಬೈಂದೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಮಂಜೂರಾದ ಅನುದಾನ ಎಷ್ಟು (ವರ್ಷವಾರು, ಯೋಜನಾವಾರು ಸಂಪೂರ್ಣ ಮಾಹಿತಿ ಒದಗಿಸುವುದು);	ಕಳೆದ ಮೂರು ವರ್ಷಗಳಲ್ಲಿ ಬೈಂದೂರು ವಿಧಾನ ಸಭಾ ಕ್ಷೇತ್ರಕ್ಕೆ ಮಂಜೂರಾದ ಅನುದಾನದ ವಿವರಗಳನ್ನು ಅನುಬಂಧ-1ರಲ್ಲಿ ವಿವರಿಸಲಾಗಿದೆ.
ಆ)	ಬೈಂದೂರು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಮಲೆನಾಡು ಪ್ರದೇಶಗಳಲ್ಲಿ ಉತ್ತಮ ಪ್ರವಾಸೋದ್ಯಮ ತಾಣಗಳಿದ್ದು, ಇವುಗಳು ಅರಣ್ಯ ಪ್ರದೇಶದಲ್ಲಿರುವುದರಿಂದ ಅರಣ್ಯ ಇಲಾಖೆಯ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ (ಸಂಪೂರ್ಣ ವಿವರ ಒದಗಿಸುವುದು);	2020-21ನೇ ಸಾಲಿನಲ್ಲಿ ಬೈಂದೂರು ತಾಲ್ಲೂಕು ಪಡುವರಿ ಗ್ರಾಮದ ಒತ್ತಿನೆಣೆಯಲ್ಲಿ ಟ್ರೀ ಪಾರ್ಕ್ ನಿರ್ಮಾಣಕ್ಕೆ ವಿವರವಾದ ಮಾಸ್ಟರ್ ಪ್ಲಾನ್ ಅನ್ನು (DPR) ಸಿದ್ಧಪಡಿಸುವ ಸಲುವಾಗಿ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ, ಉಡುಪಿ ರವರಿಂದ ಪ್ರಸ್ತಾವನೆ ಸ್ವೀಕೃತವಾಗಿದೆ. ಈ ಬಗ್ಗೆ ಪರಿಶೀಲಿಸಲಾಗುತ್ತಿದೆ.
ಇ)	ಈ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯು ಕರಾವಳಿ ಮತ್ತು ಮಲೆನಾಡು ಪ್ರದೇಶಗಳನ್ನು ಒಳಗೊಂಡಿದ್ದು, ಉತ್ತಮ ಪ್ರವಾಸೋದ್ಯಮ ತಾಣಗಳಿದ್ದು, ಇವುಗಳನ್ನು ಅಭಿವೃದ್ಧಿಪಡಿಸಲು ಇರುವ ಯೋಜನೆಗಳಾವುವು? (ವಿವರ ಒದಗಿಸುವುದು)	ಪ್ರವಾಸೋದ್ಯಮ ಇಲಾಖೆಯ ವತಿಯಿಂದ ಪ್ರವಾಸಿ ಸ್ಥಳಗಳಲ್ಲಿ ಪ್ರವಾಸಿಗರ ಅನುಕೂಲಕ್ಕಾಗಿ ಕೈಗೊಳ್ಳುವ ಪ್ರವಾಸಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿ / ಯೋಜನೆಗಳ ವಿವರ ಈ ಕೆಳಗಿನಂತಿದೆ. 1. ಪ್ರವಾಸಿ ತಾಣಗಳಲ್ಲಿ ಹೋಟೆಲ್ / ರೆಸಾರ್ಟ್ಸ್ ಹಾಗೂ ಇನ್ನಿತರೆ ಸೌಲಭ್ಯ ಒದಗಿಸುವುದು. 2. ಪ್ರವಾಸಿ ಪ್ಲಾಜಾ 3. ಯಾತ್ರಿನಿವಾಸ 4. ಡಾರ್ಮಿಟರಿ 5. ಶೌಚಾಲಯ ಮತ್ತು ಸ್ನಾನ ಗೃಹ ಸೌಲಭ್ಯ ಅಭಿವೃದ್ಧಿ 6. ಕುಡಿಯುವ ನೀರು ಸೌಲಭ್ಯ ಅಭಿವೃದ್ಧಿ (ಆರ್.ಓ.ಪ್ಲಾಂಟ್)

		7. ಸಂಪರ್ಕ ರಸ್ತೆ ಅಭಿವೃದ್ಧಿ 8. ಪಾರ್ಕಿಂಗ್ ಸೌಲಭ್ಯ ಅಭಿವೃದ್ಧಿ 9. ಪ್ರವಾಸಿ ಸೂಚನಾ ಫಲಕಗಳು 10. ಆಸನಗಳ ವ್ಯವಸ್ಥೆ 11. ಮೆಟ್ಟಿಲುಗಳು ಮತ್ತು ರೈಲಿಂಗ್ ಸೌಲಭ್ಯ ಅಭಿವೃದ್ಧಿ 12. ಪರಗೋಲ ನಿರ್ಮಾಣ 13. ಪಾಥ್ವೇ ಸೌಲಭ್ಯ ಅಭಿವೃದ್ಧಿ 14. ವೀಕ್ಷಣಾ ಗೋಪುರ 15. ಪ್ರವಾಸಿ ತಾಣದ ಸಮಗ್ರ ಅಭಿವೃದ್ಧಿಗೆ (comprehensive development) ಸಂಬಂಧಿಸಿದ ಕಾಮಗಾರಿಗಳು

ಸಂಖ್ಯೆ: ಟಿಒಆರ್ 23 ಟಿಡಿವಿ 2021.

(ಸಿ.ಪಿ. ಯೋಗೇಶ್ವರ)
ಪ್ರವಾಸೋದ್ಯಮ, ಪರಿಸರ ಮತ್ತು
ಜೀವಿಶಾಸ್ತ್ರ ಸಚಿವರು.

1

ಅನುಬಂಧ–1

ರೂ.ಲಕ್ಷಗಳಲ್ಲಿ

ಕ್ರ. ಸಂ.	ಕಾಮಗಾರಿಯ ಹೆಸರು	ಮಂಜೂರಾದ ವರ್ಷ/ ಯೋಜನೆ	ಅಂದಾಜು ಮೊತ್ತ	ಅನುಷ್ಠಾನ ಸಂಸ್ಥೆ	ಷರಾ
1	2	3	4	5	6
1	ಬೈಂದೂರು ತಾಲ್ಲೂಕಿನ ಕಿರಿಮಂಜೇಶ್ವರ ಗ್ರಾಮದ ಹೊಸಹಿತ್ಲು ಸಮುದ್ರ ಕಿನಾರೆ ಬಳಿ ಕುಟೀರ ನಿರ್ಮಾಣ ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯ, ಹೈಮಾಸ್ಟ್ ದೀಪ ಅಳವಡಿಕೆ ಹಾಗೂ ಇತರೆ ಮೂಲಭೂತ ಸೌಕರ್ಯಗಳ ಕಾಮಗಾರಿ	2018–19	15.00	ಲೋಕೋಪಯೋಗಿ ಇಲಾಖೆ	ಕಾಮಗಾರಿ ಪ್ರಾರಂಭಿಸಲಾಗಿದೆ.
2	ತ್ರಾಸಿ ಬೀಚ್ ವ್ಯಾಪ್ತಿಯಲ್ಲಿ ಮರೈನ್ ಡ್ರೈವ್ ಕಾಮಗಾರಿ	2018–19	25.00	ಲೋಕೋಪಯೋಗಿ ಇಲಾಖೆ	ಕಾಮಗಾರಿ ಪ್ರಗತಿಯಲ್ಲಿದೆ
3	ಕುಂದಾಪುರ ತಾಲ್ಲೂಕಿನ ತ್ರಾಸಿ ಮರವಂತೆ ಕಡಲ ತೀರದಲ್ಲಿ ಪೆಡೆಸ್ಟ್ರಿಯನ್ ಪಾರ್ಕ್ ವೇ ಮತ್ತು ಸೀಟಿಂಗ್, ವಾಹನ ನಿಲ್ದಾಣ ಓಪನ್ ಏರ್ ಥಿಯೇಟರ್, ಫುಡ್ ಕೋರ್ಟ್ ನಿರ್ಮಾಣ ಹಾಗೂ ಈಗಾಗಲೇ ಇರುವ ಪ್ರವಾಸಿ ಮಂದಿರದ ನವೀಕರಣ ಕಾಮಗಾರಿ	2019–20	500.00	ಲೋಕೋಪಯೋಗಿ ಇಲಾಖೆ	ಸದರಿ ಕಾಮಗಾರಿಯನ್ನು ಅನುಷ್ಠಾನಗೊಳಿಸುವ ಸಂಬಂಧ ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ.
4	ಉಡುಪಿ ಬೈಂದೂರು ವಿಧಾನಸಭಾ ಕ್ಷೇತ್ರ ಪಡುವರಿ ಗ್ರಾಮದ ಸೋಮೇಶ್ವರ ಬೀಚ್ ಅಭಿವೃದ್ಧಿ	2019–20	500.00	ಕೆ.ಆರ್.ಐ.ಡಿ.ಎಲ್, ಬೆಂಗಳೂರು	ಕೆಆರ್‌ಐಡಿಎಲ್ ಸಂಸ್ಥೆಯ ಬದಲಾಗಿ ನಿರ್ಮಿತಿ ಕೇಂದ್ರದ ಮೂಲಕ ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	828
ಮಾನ್ಯ ಸದಸ್ಯರ ಹೆಸರು	:	ಶ್ರೀ ಪ್ರಿಯಾಂಕ್ ಎಂ. ಖರ್ಗೆ (ಚಿತ್ತಾಪುರ)
ಉತ್ತರಿಸುವ ದಿನಾಂಕ	:	04.02.2021
ಉತ್ತರಿಸುವ ಸಚಿವರು	:	ಪ್ರವಾಸೋದ್ಯಮ, ಪರಿಸರ ಮತ್ತು ಜೀವಿಶಾಸ್ತ್ರ, ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಚಿತ್ತಾಪುರ ತಾಲ್ಲೂಕಿನಲ್ಲಿರುವ ಪ್ರವಾಸೋದ್ಯಮ ಇಲಾಖೆಯಡಿಯಲ್ಲಿ ಕಳೆದ ಮೂರು ವರ್ಷಗಳಿಂದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಮಂಜೂರಾದ ಅನುದಾನವೆಷ್ಟು ; ಹಾಗೂ ಬಿಡುಗಡೆಗೊಳಿಸಬೇಕಾಗಿದ್ದ ಮೊತ್ತವೆಷ್ಟು ; ಈ ಅವಧಿಯಲ್ಲಿ ಎಷ್ಟು ಅನುದಾನ ಬಿಡುಗಡೆಗೊಳಿಸಲಾಗಿದೆ (ಕಾಮಗಾರಿವಾರು ಬಿಡುಗಡೆಗೊಳಿಸಿದ ಮೊತ್ತ ಮತ್ತು ಬಾಕಿ ಇರುವ ಮೊತ್ತದ ಸಂಪೂರ್ಣ ವಿವರ ನೀಡುವುದು) ;	ಅನುಬಂಧದಲ್ಲಿ ನೀಡಲಾಗಿದೆ.
ಆ)	ಚಿತ್ತಾಪುರ ತಾಲ್ಲೂಕಿನ ವಿವಿಧ ಕಾಮಗಾರಿಗಳು ಪ್ರಾರಂಭವಾಗದೇ ಜಿಲ್ಲಾಧಿಕಾರಿಗಳ ಖಾತೆಯಲ್ಲಿ ಎಷ್ಟು ಅನುದಾನವಿದೆ (ಕಾಮಗಾರಿವಾರು ಪೂರ್ಣ ವಿವರ ನೀಡುವುದು) ;	ಕಳೆದ ಮೂರು ವರ್ಷಗಳಿಂದ ಚಿತ್ತಾಪುರ ತಾಲ್ಲೂಕಿಗೆ ಮಂಜೂರಾದ ಕಾಮಗಾರಿಗಳ ಪೈಕಿ ಪ್ರಾರಂಭವಾಗದೇ ಜಿಲ್ಲಾಧಿಕಾರಿಗಳ ಖಾತೆಯಲ್ಲಿ ಅನುದಾನ ಉಳಿದಿರುವ ಪ್ರಕರಣಗಳು ಯಾವುದು ಇರುವುದಿಲ್ಲ.
ಇ)	ಜಿಲ್ಲಾಧಿಕಾರಿಗಳ ಖಾತೆಯಲ್ಲಿರುವ ಅನುದಾನ ಕಾಮಗಾರಿಗಳು ಪ್ರಾರಂಭವಾಗದಿರಲು ಕಾರಣವೇನು (ಕಾಮಗಾರಿವಾರು ಸಂಪೂರ್ಣ ಮಾಹಿತಿ ಒದಗಿಸುವುದು) ;	ಉದ್ಭವಿಸುವುದಿಲ್ಲ.
ಈ)	ಇನ್ನೂ ಪ್ರಾರಂಭವಾಗದೇ ಇರುವ ಕಾಮಗಾರಿಗಳನ್ನು ಪ್ರಾರಂಭಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?	ಕಳೆದ ಮೂರು ವರ್ಷಗಳಿಂದ ಚಿತ್ತಾಪುರ ತಾಲ್ಲೂಕಿಗೆ ಸಂಬಂಧಿಸಿದಂತೆ ಈವರೆಗೂ ಪ್ರಾರಂಭಿಸದೇ ಇರುವ ಕಾಮಗಾರಿಗಳ ಪೈಕಿ ಮಂಜೂರಾದ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಸಂಬಂಧಪಟ್ಟವರಿಂದ ನಿವೇಶನ ಪಡೆಯುವುದು, ಅನುಷ್ಠಾನ ಸಂಸ್ಥೆಯಿಂದ ಅಂದಾಜು ಪಟ್ಟಿ ಸಿದ್ಧಪಡಿಸುವುದು, ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಹಾಗೂ ಬದಲಿ ಕಾಮಗಾರಿಗಳ ಪ್ರಸ್ತಾವನೆಗಳಿಗೆ ಅನುಮೋದನೆ ನೀಡಲು ಕ್ರಮ ವಹಿಸಲಾಗುತ್ತಿದೆ.

ಸಂಖ್ಯೆ: ಟಿಓಆರ್ 24 ಟಿಡಿವಿ 2021.

(ಸಿ.ಪಿ. ಯೋಗೇಶ್ವರ)
ಪ್ರವಾಸೋದ್ಯಮ,
ಪರಿಸರ ಮತ್ತು ಜೀವಿಶಾಸ್ತ್ರ, ಸಚಿವರು.

828

ಅನುಬಂಧ (ಪ್ರಶ್ನೆ ಸಂಖ್ಯೆ:828)

ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿಗೆ ಸಂಬಂಧಿಸಿದಂತೆ ಕಳೆದ ಮೂರು ವರ್ಷಗಳಲ್ಲಿ ಮಂಜೂರಾದ ಕಾಮಗಾರಿಗಳ ವಿವರ

(ರೂ.ಲಕ್ಷಗಳಲ್ಲಿ)

ಕ್ರ. ಸಂ	ಯೋಜನೆಗಳ ವಿವರ	ಅಂದಾಜು ಮೊತ್ತ	ಬಿಡುಗಡೆ ಮಾಡಿರುವ ಅನುದಾನ				ಬಿಡುಗಡೆ ಮಾಡಲು ಬಾಕಿ ಇರುವ ಅನುದಾನ
			2017-18	2018-19	2019-20	2020-21	
	ಕಲಬುರಗಿ ಜಿಲ್ಲೆ						
	ಚಿತ್ತಾಪುರ ತಾಲ್ಲೂಕು						
	2017-18						
1	ಕಲಬುರಗಿ ಜಿಲ್ಲೆಯ ಚಿತ್ತಾಪೂರ ತಾಲ್ಲೂಕಿನ ಸೂಗೂರ ಎನ್. ಭೋಜಲಿಂಗೇಶ್ವರ ಸಂಸ್ಥಾನ ಮಠ ಮತ್ತು ದೇವಸ್ಥಾನದ ಬಳಿ ಯಾತ್ರಿನಿವಾಸ ನಿರ್ಮಾಣ (2017-18) **ಬಂಡವಾಳ ವೆಚ್ಚಗಳು**	25.00	10.00	0.00	0.00	0.00	15.00
2	ಕಲಬುರಗಿ ಜಿಲ್ಲೆ ಚಿತ್ತಾಪೂರ ಪಟ್ಟಣದಲ್ಲಿರುವ 200 ವರ್ಷದ ಐತಿಹಾಸಿಕ ಈದ್ಗಾ ಅಭಿವೃದ್ಧಿ ಕಾಮಗಾರಿ. (2017-18) **ಬಂಡವಾಳ ವೆಚ್ಚಗಳು**	50.00	20.00	0.00	0.00	0.00	30.00
3	ಚಿತ್ತಾಪೂರ ತಾಲ್ಲೂಕಿನ ಸಾಲ್ಹಾರ್ ಗ್ರಾಮದ ಕೋರಿ ಸಿದ್ದೇಶ್ವರ ಮಠದ ಬಳಿ ಯಾತ್ರಿನಿವಾಸ ನಿರ್ಮಾಣ .(2017-18) **ಬಂಡವಾಳ ವೆಚ್ಚಗಳು**	50.00	20.00	0.00	0.00	0.00	30.00
4	ಚಿತ್ತಾಪೂರ ತಾಲ್ಲೂಕಿನ ಕೋರಪುರದ ಶ್ರೀ ಅಣವೀರಭದ್ರೇಶ್ವರ ಸ್ವಾಮಿ ದೇವಸ್ಥಾನದ ಬಳಿ ಯಾತ್ರಿನಿವಾಸ ನಿರ್ಮಾಣ. .(2017-18) **ಬಂಡವಾಳ ವೆಚ್ಚಗಳು**	25.00	10.00	0.00	0.00	0.00	15.00
5	ಚಿತ್ತಾಪುರ ತಾಲ್ಲೂಕಿನ ರಾವೂರು ಗ್ರಾಮದ ಶ್ರೀ ಸಿದ್ದಲಿಂಗೇಶ್ವರ ವಿದ್ಯಾಭಿವೃದ್ಧಿ ಸಂಸ್ಥೆಯ ಹತ್ತಿರ ಯಾತ್ರಿನಿವಾಸ ನಿರ್ಮಾಣ .(2017-18) **ಬಂಡವಾಳ ವೆಚ್ಚಗಳು.**	25.00	10.00	0.00	0.00	0.00	15.00
6	ಚಿತ್ತಾಪುರ ತಾಲ್ಲೂಕಿನ ಸೂಗೂರ (ಎನ್) ಗ್ರಾಮದ ಶ್ರೀ ಭೋಜಲಿಂಗೇಶ್ವರ ಸಿದ್ದ ಸಂಸ್ಥಾನ ಮಠದ ಹತ್ತಿರ ಮೂಲಭೂತ ಸೌಕರ್ಯಅಭಿವೃದ್ಧಿ .(2017-18) **ಬಂಡವಾಳ ವೆಚ್ಚಗಳು**	25.00	10.00	0.00	0.00	0.00	15.00
7	ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಪೇಠ ಸಿರೂರ ಗ್ರಾಮದ ಶ್ರೀ ಸಿದ್ದಲಿಂಗೇಶ್ವರ ವಿರಕ್ತ ಮಠದ ಹತ್ತಿರ ಯಾತ್ರಿನಿವಾಸ ನಿರ್ಮಾಣ.. (2017-18) **ಬಂಡವಾಳ ವೆಚ್ಚಗಳು**	25.00	10.00	0.00	0.00	0.00	15.00
8	ಕಲಬುರಗಿ ಜಿಲ್ಲೆ ಚಿತ್ತಾಪೂರ ತಾಲ್ಲೂಕಿನ ಐತಿಹಾಸಿಕ ಹಜರತ್ ಸೈಯದ್ ಖಾಜಾ ಮಿಯಾನ ಚಿಸ್ತಿ (ವಾಡಿ) ದರ್ಗಾದ ಬಳಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿ (2017-18) **ವಿಶೇಷ ಅಭಿವೃದ್ಧಿ ಯೋಜನೆ**	30.00	30.00	0.00	0.00	0.00	0.00
9	ಕಲಬುಗಿ ಜಿಲ್ಲೆ ಚಿತ್ತಾಪೂರ ತಾಲ್ಲೂಕಿನ ಕೊಲ್ಲೂರು ಗ್ರಾಮದಲ್ಲಿರುವ ಪ್ರಾಚೀನ ಕಾಲದ ಶ್ರೀ ರಾಮಲಿಂಗೇಶ್ವರ ದೇವಸ್ಥಾನದ ಹತ್ತಿರ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿ (2017-18) **ವಿಶೇಷ ಅಭಿವೃದ್ಧಿ ಯೋಜನೆ**	50.00	50.00	0.00	0.00	0.00	0.00
10	ಕಲಬುರಗಿ ಜಿಲ್ಲೆ ಚಿತ್ತಾಪೂರ ತಾಲ್ಲೂಕಿನ ಲಾಡ್ಲಾಪೂರ ರಸ್ತೆ 13.5 ಕಿ.ಮೀ ಯಿಂದ ಕಿ.ಮೀ 17 ರವರೆಗೆ ರಸ್ತೆ ಅಭಿವೃದ್ಧಿ (2017-18) **ವಿಶೇಷ ಅಭಿವೃದ್ಧಿ ಯೋಜನೆ**	300.00	200.00	0.00	0.00	75.00	25.00

(ರೂ.ಲಕ್ಷಗಳಲ್ಲಿ)

ಕ್ರ. ಸಂ	ಯೋಜನೆಗಳ ವಿವರ	ಅಂದಾಜು ಮೊತ್ತ	ಬಿಡುಗಡೆ ಮಾಡಿರುವ ಅನುದಾನ				ಬಿಡುಗಡೆ ಮಾಡಲು ಬಾಕಿ ಇರುವ ಅನುದಾನ
			2017-18	2018-19	2019-20	2020-21	
11	ಕಲಬುರಗಿ ಜಿಲ್ಲೆಯ ಹಲಕಟ್ಟಾ ಗ್ರಾಮದಲ್ಲಿರುವ ಪ್ರಾಚೀನ ಕಾಲದ ಶ್ರೀ ಮುರುಘರಾಜೇಂದ್ರ ಮಠದ ಹತ್ತಿರ ಮೂಲಭೂತ ಸೌಕರ್ಯ ಅಭಿವೃದ್ಧಿ	25.00	0.00	20.00	0.00	0.00	5.00
12	ಕಲಬುರಗಿ ಜಿಲ್ಲೆಯ ಚಿತ್ತಾಪೂರ ತಾಲ್ಲೂಕಿನ ರಾವೂರ ಗ್ರಾಮದಲ್ಲಿರುವ ಪ್ರಾಚೀನ ಕಾಲದ ಶ್ರೀ ಸಿದ್ದಲಿಂಗೇಶ್ವರ ಸಂಸ್ಥಾನ ಮಠದ ಹತ್ತಿರ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿ ಬದಲಾಗಿ ಕಲಬುರಗಿ ಜಿಲ್ಲೆಯ ಚಿತ್ತಾಪೂರ ತಾಲ್ಲೂಕಿನ ರಾವೂರ ಗ್ರಾಮದಲ್ಲಿರುವ ಪ್ರಾಚೀನ ಕಾಲದ ಶ್ರೀ ಸಿದ್ದಲಿಂಗೇಶ್ವರ ಸಂಸ್ಥಾನ ಮಠದ ಆವರಣದಲ್ಲಿ ಯಾತ್ರಿನಿವಾಸ ನಿರ್ಮಾಣ.	25.00	25.00	0.00	0.00	0.00	0.00
13	ಕಲಬುರಗಿ ಜಿಲ್ಲೆ ಚಿತ್ತಾಪೂರ ತಾಲ್ಲೂಕಿನ ನಾಲ್ವಾರ ಸನ್ನತಿ ರಸ್ತೆಯಿಂದ 0.00 ಯಿಂದ 0.900 ಕಿ.ಮೀ 8.750 ಯಿಂದ 9.350 ಕಿ.ಮೀ 16.00 ಯಿಂದ 20.00 ಕಿ.ಮೀ ವರೆಗಿನ ರಸ್ತೆ ಅಗಲೀಕರಣ ಸಿಡಿ ಮನ್ ನಿರ್ಮಾಣ ಕಾಮಗಾರಿ (2017-18)(RIDF-XXIII-TRR-22015)	529.31	0.00	200.00	250.00	0.00	79.31
14	**(ಕುಟೀರ ಯೋಜನೆಯಡಿ)** ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಮಾಡಬೂಳ್ ಗ್ರಾಮದ ಸರ್ವೇ ನಂ 48/1 ರಲ್ಲಿ 01-32 ಎಕರೆ ಜಮೀನಿನಲ್ಲಿ ಪ್ರವಾಸಿಗರಿಗೆ ಅತ್ಯುತ್ತಮ ದರ್ಜೆಯ ರಾಜ್ಯ ಹೆದ್ದಾರಿ (ವೆಸೇಡ್ ಫೆಸಿಲಿಟಿ) ಮೂಲ ಸೌಲಭ್ಯ ಅಭಿವೃದ್ಧಿ. .(2017-18) **ಬಂಡವಾಳ ವೆಚ್ಚಗಳು**	188.90	90.00	0.00	0.00	51.68	47.22
15	ಚಿತ್ತಾಪುರ ತಾಲ್ಲೂಕಿನ ವಾಡಿಪೂರ-ಶಿವರಾಂಪೂರ ರಾ.ಹೆ- 149 ಕಿ.ಮಿ. 32.00-46.50 (ಮಾರಡಗಿ ಕ್ರಾಸ್ ದಿಂದ ಕುಲಕುಂದಾ ಕ್ರಾಸ್) (7.00 ಕಿ.ಮೀ)(ಸನ್ನತಿ ಸಂಪರ್ಕ ರಸ್ತೆ) .(2017-18) **ಬಂಡವಾಳ ವೆಚ್ಚಗಳು**	200.00	150.00	0.00	0.00	0.00	50.00
16	ಚಿತ್ತಾಪುರ ತಾಲ್ಲೂಕಿನ ರಾಜ್ಯ ಹೆದ್ದಾರಿ -149 ರಿಂದ ಬುದ್ಧಸ್ತೂಪ ರಸ್ತೆ ವಯಾ ಕನಗನಹಳ್ಳಿ ಕಿ.ಮೀ 0.00 ರಿಂದ 2.0 (ಇತರೇ ಜಿಲ್ಲಾ ಮುಖ್ಯ ರಸ್ತೆ) .(2017-18) **ಬಂಡವಾಳ ವೆಚ್ಚಗಳು**	200.00	150.00	0.00	0.00	0.00	50.00
17	ಕಲಬುರಗಿ ಜಿಲ್ಲೆ, ಚಿತ್ತಾಪೂರ ತಾಲ್ಲೂಕ್ ದಿಗ್ಗಾಂವ್‌ನಿಂದ ನಾಗಾ ಎಲ್ಲಮ್ಮ ದೇವಾಲಯ ಸಂಪರ್ಕ ರಸ್ತೆ ಅಭಿವೃದ್ಧಿ (ಕಿ.ಮೀ.0.00 ಯಿಂದ 1.00)	396.40	297.00	0.00	0.00	0.00	99.40
18	ಕಲಬುರಗಿ ಜಿಲ್ಲೆ, ಚಿತ್ತಾಪೂರ ತಾಲ್ಲೂಕ್ ದಿಗ್ಗಾಂವ್‌ನಿಂದ ನಾಗಾ ಎಲ್ಲಮ್ಮ ದೇವಾಲಯ ಸಂಪರ್ಕ ರಸ್ತೆ ಅಭಿವೃದ್ಧಿ (ಕಿ.ಮೀ.1.00 ಯಿಂದ 2.00) .(2017-18) **ಬಂಡವಾಳ ವೆಚ್ಚಗಳು**						
	ಒಟ್ಟು	**2169.61**	**1082.00**	**220.00**	**250.00**	**126.68**	**490.93**

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 831

ಮಾನ್ಯ ಸದಸ್ಯರ ಹೆಸರು : ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)

ಉತ್ತರಿಸುವ ಸಚಿವರು : ಪ್ರವಾಸೋದ್ಯಮ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

ಉತ್ತರಿಸುವ ದಿನಾಂಕ : 04.02.2021

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಕರ್ನಾಟಕ ಪ್ರವಾಸೋದ್ಯಮ ನೀತಿ 2020-2025ರ ವ್ಯಾಪ್ತಿಯಲ್ಲಿ ಕೃಷಿ ಹಾಗೂ ಗ್ರಾಮೀಣ ಪ್ರವಾಸೋದ್ಯಮಕ್ಕೆ ಪ್ರೋತ್ಸಾಹ ನೀಡಿಕೆ ಕುರಿತಾದ ವಿವರಗಳೇನು ; ಆ ಮೂಲಕ ಉದ್ದೇಶ ಮತ್ತು ಗುರಿ ಸಾಧನೆಗಾಗಿ ರೂಪಿಸಿಕೊಂಡಿರುವ ಕ್ರಿಯಾ ಯೋಜನೆಗಳು ಯಾವುವು ;	ಕರ್ನಾಟಕ ಪ್ರವಾಸೋದ್ಯಮ ನೀತಿ 2020-2025 ರಡಿಯಲ್ಲಿ ನೂತನ ಕೃಷಿ ಪ್ರವಾಸೋದ್ಯಮ ಯೋಜನೆಗೆ ಬಡ್ಡಿ ಸಹಾಯಧನ ಘೋಷಿಸಲಾಗಿರುತ್ತದೆ. ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ. ಕೃಷಿ, ತೋಟಗಾರಿಕೆ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳ ನೆರವಿನೊಂದಿಗೆ, ಕೃಷಿ ಮತ್ತು ಪ್ರವಾಸೋದ್ಯಮ ಯೋಜನೆಗಳ ಬಗ್ಗೆ ಜಾಗೃತಿ ಮೂಡಿಸಲು ಮತ್ತು ರೈತರಿಗೆ ಹಾಗೂ ಸ್ಥಳೀಯ ಸಮುದಾಯಗಳಿಗೆ ತರಬೇತಿ ನೀಡಲು ಹಾಗೂ ಸ್ಥಳೀಯ ಆಹಾರ ಪದಾರ್ಥಗಳು, ಕಲೆ, ಕರಕುಶಲತೆ, ಸ್ಥಳೀಯ ಸರಕುಗಳ ಮಾರಾಟಕ್ಕೆ ವೇದಿಕೆ ಸೃಷ್ಟಿಸಿ ಗ್ರಾಮೀಣ ಜನರ ಆದಾಯ ಹೆಚ್ಚಿಸುವ ಯೋಜನೆಗಳನ್ನು ರೂಪಿಸಲು ಕ್ರಮ ವಹಿಸಲಾಗುವುದು.
ಆ)	ಪ್ರವಾಸೋದ್ಯಮ ನೀತಿಯಡಿಯಲ್ಲಿ ಸ್ಥಳೀಯರಿಗೆ ಹಾಗೂ ಅಲ್ಲಿನ ಸಮುದಾಯಗಳಿಗೆ ಉದ್ಯೋಗ ಮತ್ತು ಪ್ರತಿಭಾ ಪ್ರದರ್ಶನಗಳಿಗೆ ಹಾಗೂ ಅಲ್ಲಿನ ಸಾಂಪ್ರದಾಯಿಕ ಹಿರಿಮೆ-ಗರಿಮೆಗಳನ್ನು ಪ್ರವಾಸಿಗರಿಗೆ ಪ್ರದರ್ಶಿಸುವ ಕುರಿತ ನೀತಿ ನಿಯಮಗಳೇನು ;	1. ಕೃಷಿ ಪ್ರವಾಸೋದ್ಯಮ ಯೋಜನೆಯ ಮೂಲಕ ಸ್ಥಳೀಯ ಸಮುದಾಯಗಳಿಗೆ ಉದ್ಯೋಗ ಮತ್ತು ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆ ಕಲ್ಪಿಸಿದಂತಾಗುವುದು. 2. ಕೃಷಿ ಪ್ರವಾಸೋದ್ಯಮ ಉತ್ತೇಜಿಸಲು ಬಡ್ಡಿ ಸಹಾಯಧನ ನೀಡಲು ಅವಕಾಶ ಕಲ್ಪಿಸಲಾಗಿದೆ. 3. ಕೃಷಿ ಮತ್ತು ಗ್ರಾಮೀಣ ಪ್ರವಾಸೋದ್ಯಮ ಯೋಜನೆಗಳ ಪ್ರಚಾರವನ್ನು ಮುದ್ರಣ ಮಾಧ್ಯಮ, ಸಾಮಾಜಿಕ ಮಾಧ್ಯಮ, ವೆಬ್ ಸೈಟ್ ಇತ್ಯಾದಿಗಳ ಮೂಲಕ ಕೈಗೊಳ್ಳಲು ಅವಕಾಶ ಕಲ್ಪಿಸಲಾಗಿದೆ.
ಇ)	ಕೃಷಿ ಪ್ರವಾಸೋದ್ಯಮದ ಮೂಲಕ ಕೃಷಿಕರಿಗೆ ನೆರವು ನೀಡುವ ಕುರಿತು ಸರ್ಕಾರದ ನೀತಿ ನಿಯಮಗಳು ಹಾಗೂ ಸ್ಥಳೀಯ ರಾಜ್ಯದಾದ್ಯಂತವಾಗಿ ಎಲ್ಲರಿಗೂ ಕೃಷಿಯ ಮಹತ್ವ ಮತ್ತು ಅದರ ಉಪಯುಕ್ತತೆಗಳ ಕುರಿತಾದ ಅರಿವು ಮೂಡಿಸುವಲ್ಲಿ ಇಲಾಖೆಯವರ ಮುಂದಿರುವ ಪ್ರಸ್ತಾವನೆಗಳು ಯಾವುವು)	ಪ್ರವಾಸೋದ್ಯಮ ಇಲಾಖೆಯಲ್ಲಿ ಈ ರೀತಿಯ ಯಾವುದೇ ಪ್ರಸ್ತಾವನೆಗಳು ಇರುವುದಿಲ್ಲ.

ಕಡತ ಸಂಖ್ಯೆ : ಟಿಓಆರ್ 11 ಟಿಡಿವಿ 2021

Yogeesh

(ಸಿ. ಪಿ. ಯೋಗೇಶ್ವರ)

ಪ್ರವಾಸೋದ್ಯಮ, ಪರಿಸರ

ಮತ್ತು ಜೀವಿಶಾಸ್ತ್ರ, ಸಚಿವರು

ಪರಿಷ್ಕರಿಸಬಹುದಾಗಿದ್ದು, ಅದಕ್ಕೆ ಮಾರುಕಟ್ಟೆ ಬೇಡಿಕೆ ಮತ್ತು ಉದ್ಯಮದ ಸಲಹೆಸೂಚನೆಗಳ ಅನುಸಾರ ಸೂಕ್ತ ಸೇರ್ಪಡೆಗಳು/ಅಳಿಸುವಿಕೆಗಳು/ ಮಾರ್ಪಾಡುಗಳನ್ನು ಮಾಡಬಹುದಾಗಿದೆ.

ಹೆಚ್ಚುವರಿ ಬಂಡವಾಳ ಹೂಡಿಕೆ ಸಹಾಯಧನ

ಮೇಲೆ ವಿವರಿಸಲಾದ ಬಂಡವಾಳ ಹೂಡಿಕೆ ಸಹಾಯಧನಗಳ ಜೊತೆಗೆ, ನೂತನ ಪ್ರವಾಸೋದ್ಯಮ ಯೋಜನೆಗಳು ಹಾಗೂ ವಿಸ್ತರಿತ ಪ್ರವಾಸೋದ್ಯಮ ಯೋಜನೆಗಳು ಈ ಕೆಳಕಂಡ ಮಾನದಂಡಗಳನ್ನು ಪಾಲಿಸಿದ್ದಲ್ಲಿ, ಅವು ಹೆಚ್ಚುವರಿ ಹೂಡಿಕೆ ಸಹಾಯಧನವನ್ನು ಕ್ಲೇಮು ಮಾಡಲು ಅರ್ಹವಾಗಿರುತ್ತವೆ.

ಹೆಚ್ಚುವರಿ ಸಹಾಯಧನಕ್ಕೆ ಅರ್ಹತೆ	ಹೆಚ್ಚುವರಿ ಶೇಕಡಾವಾರು ಸಹಾಯಧನ ಯೋಜನೆಯ EPC ಯ ಎದುರಾಗಿ
ಪ್ರವಾಸೋದ್ಯಮ ಯೋಜನೆಯನ್ನು ಮಹಿಳೆಯರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ವಿಕಲಚೇತನ ಉದ್ಯಮಿಗಳು ಕೈಗೊಂಡಿದ್ದರೆ	ಶೇಕಡಾ 5ರಷ್ಟು

14.2.2 ಬಡ್ಡಿ ಸಹಾಯಧನ

ನೂತನ ಪ್ರವಾಸೋದ್ಯಮ ಯೋಜನೆಗಳು ಹಾಗೂ ವಿಸ್ತರಿತ ಪ್ರವಾಸೋದ್ಯಮ ಯೋಜನೆಗಳು, ಐದು ವರ್ಷಗಳ ಅವಧಿಗೆ 25 ಲಕ್ಷ ರೂಪಾಯಿಗಳಿಗೆ ಒಳಪಟ್ಟು, ಪ್ರವಾಸೋದ್ಯಮ ಯೋಜನೆಗಳಿಗೆ ಸಂಬಂಧಿಸಿದ ಸ್ಥಿರ ಬಂಡವಾಳ ಹೂಡಿಕೆಯ ಮೇಲೆ ತೆಗೆದುಕೊಂಡ ಅವಧಿ ಸಾಲದ ಮೇಲೆ, ವಾರ್ಷಿಕ ಶೇಕಡಾ 5.ರಷ್ಟು ಬಡ್ಡಿ ಸಹಾಯ ಧನವನ್ನು ಪಡೆಯಲು ಅರ್ಹವಾಗಿರ ತಕ್ಕದ್ದು. ಪ್ರವಾಸೋದ್ಯಮ ಯೋಜನೆಗೆ ಸಂಬಂಧಿಸಿದ ಬ್ಯಾಂಕ್ ಸಾಲದ ಮೇಲಿನ ಬಡ್ಡಿ ಸಹಾಯಧನವು



ಚನ್ನಪಟ್ಟಣ ಆಟಿಕೆಗಳು

•• ಉದಾಹರಣೆಗೆ ಒಂದು ಪ್ರವಾಸೋದ್ಯಮ ಯೋಜನೆಗೆ ರೂ.10.00 ಲಕ್ಷಗಳನ್ನು ಶೇ.11.ರಷ್ಟು ವಾರ್ಷಿಕ ಬಡ್ಡಿದರದಲ್ಲಿ ಸಾಲವನ್ನು ಪಡೆದಿದ್ದಲ್ಲಿ ಇಲಾಖೆಯು ಶೇ.5.ರಷ್ಟು ಬಡ್ಡಿಯನ್ನು ಅಂದರೆ ರೂ.50,000/-ಗಳನ್ನು ಸಹಾಯಧನ ರೂಪದಲ್ಲಿ ನೀಡುತ್ತದೆ (ಒಟ್ಟು ಪಾವತಿಸಬೇಕಾದ ಒಟ್ಟು ಬಡ್ಡಿ ರೂ.1,10,000/-ಗಳಲ್ಲಿ ರೂ.50,000/-ಗಳನ್ನು ಪಾವತಿಸಲಾಗುವುದು)

ವಾರ್ಷಿಕ 7.5 ಲಕ್ಷ ರೂಪಾಯಿಗಳನ್ನು ಮೀರತಕ್ಕದ್ದಲ್ಲ ಮತ್ತು ಇದನ್ನು ಬಡ್ಡಿ ಸಮೇತ ಸಾಲದ ಕಂತನ್ನು ಸಕಾಲದಲ್ಲಿ ಮರುಪಾವತಿ ಮಾಡಿದರೆ ಮಾತ್ರ ನೀಡಲಾಗುತ್ತದೆ. ಈ ಮುಂದಿನ ಅರ್ಹ ಪ್ರವಾಸೋದ್ಯಮ ಯೋಜನೆಗಳಿಗೆ ಸಂಬಂಧಿಸಿದ ನೂತನ ಪ್ರವಾಸೋದ್ಯಮ ಯೋಜನೆ ಅಥವಾ ವಿಸ್ತರಿತ ಪ್ರವಾಸೋದ್ಯಮ ಯೋಜನೆಗಳ ಈ ನೀತಿಯ ಅಡಿಯಲ್ಲಿ ಬಡ್ಡಿ ಸಹಾಯಧನವನ್ನು ಪಡೆಯಲು ಅರ್ಹವಾಗಿರತಕ್ಕದ್ದು.

1. ಕೃಷಿ ಪ್ರವಾಸೋದ್ಯಮ ಯೋಜನೆ
2. ಸಾಂಸ್ಕೃತಿಕ ಪ್ರವಾಸೋದ್ಯಮ ಯೋಜನೆ.
3. ಪಾರಂಪರಿಕ ಪ್ರವಾಸೋದ್ಯಮ ಯೋಜನೆ.
4. ಸುರಕ್ಷತಾ ಮತ್ತು ನೈರ್ಮಲ್ಯ ಪ್ರವಾಸೋದ್ಯಮ ಯೋಜನೆ

[illegible]

ಬಡ್ಡಿ ಸಹಾಯಧನವನ್ನು ಪಡೆಯುತ್ತಿರುವ ಪ್ರವಾಸೋದ್ಯಮ ಯೋಜನೆಯು, ಬಂಡವಾಳ ಹೂಡಿಕೆ ಸಹಾಯಧನವನ್ನು ಕ್ಲೇಮು ಮಾಡಲು ಅರ್ಹವಾಗಿರತಕ್ಕದ್ದಲ್ಲ.

ಬಡ್ಡಿ ಸಹಾಯಧನಕ್ಕೆ ಅರ್ಹವಾಗಿರುವ ಪ್ರವಾಸೋದ್ಯಮ ಯೋಜನೆಗಳ ಮೇಲ್ಕಂಡ ಪಟ್ಟಿಯನ್ನು ಪ್ರವಾಸೋದ್ಯಮ ಇಲಾಖೆಯು ಕಾಲಕಾಲಕ್ಕೆ ಪರಿಶೀಲಿಸಿ, ಪರಿಷ್ಕರಿಸಬಹುದಾಗಿದ್ದು, ಅದಕ್ಕೆ ಮಾರುಕಟ್ಟೆ ಬೇಡಿಕೆ ಮತ್ತು ಉದ್ಯಮದ ಸಲಹೆ ಸೂಚನೆಗಳ ಅನುಸಾರ ಸೂಕ್ತ ಸೇರ್ಪಡೆಗಳು/ ಅಳಿಸುವಿಕೆಗಳು/ ಮಾರ್ಪಾಡುಗಳನ್ನು ಮಾಡಬಹುದಾಗಿದೆ.

14.3 ಪ್ರವಾಸೋದ್ಯಮ ಯೋಜನೆಗಳಿಗಾಗಿ ರಿಯಾಯಿತಿಗಳು

ಕರ್ನಾಟಕ ಸರ್ಕಾರವು ರಾಜ್ಯದಲ್ಲಿ ನೂತನ ಪ್ರವಾಸೋದ್ಯಮ ಯೋಜನೆ ಹಾಗೂ ವಿಸ್ತರಿತ ಪ್ರವಾಸೋದ್ಯಮ ಯೋಜನೆ ಅಭಿವೃದ್ಧಿ ಪಡಿಸುವುದಕ್ಕಾಗಿ ಈ ಮುಂದಿನಂತೆ ರಿಯಾಯಿತಿಗಳನ್ನು ನೀಡಲಾಗುತ್ತದೆ -

14.3.1 ಮುದ್ರಾಂಕ ಶುಲ್ಕದ ಮೇಲೆ ವಿನಾಯಿತಿ

ನೂತನ ಪ್ರವಾಸೋದ್ಯಮ ಯೋಜನೆಗಳು ಮತ್ತು ಪ್ರವಾಸೋದ್ಯಮ ವಿಸ್ತರಣಾ ಯೋಜನೆಗಳು ಈ ಕೆಳಗಿನವುಗಳಿಗೆ ಸಂಬಂಧಿಸಿದಂತೆ ಶೇ.100ರಷ್ಟು ಮುದ್ರಾಂಕ ಶುಲ್ಕ ವಿನಾಯಿತಿ ಪಡೆಯಲು ಅರ್ಹವಾಗಿರುತ್ತವೆ.

1. ರಾಜ್ಯ ಹಣಕಾಸು ನಿಗಮ, ರಾಷ್ಟ್ರಮಟ್ಟದ ಹಣಕಾಸು ಸಂಸ್ಥೆಗಳು, ವಾಣಿಜ್ಯ ಬ್ಯಾಂಕುಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕು (ಆರ್.ಆರ್.ಬಿ)ಗಳು, ಸಹಕಾರ ಬ್ಯಾಂಕುಗಳು, ಕೆವಿಐ ಕೆವಿಐಸಿ, ಕರ್ನಾಟಕ ರಾಜ್ಯ ಪ.ಜಾ/ಪ.ಪಂ.ಗಳ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಮತ್ತು ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾದ ಇತರೆ ಸಂಸ್ಥೆಗಳಿಂದ ಪಡೆಯುವ ವಿಂಡೆ ಸಾಲವನ್ನೊಳಗೊಂಡಂತೆ, ರಾಜ್ಯ ಸರ್ಕಾರದಿಂದ ಸಾಲವನ್ನು ಪಡೆಯುವುದಕ್ಕಾಗಿ ಮಾಡಿಕೊಂಡಿರುವ ಸಾಲದ ಕರಾರುಗಳು, ಸಾಲದ ಒಪ್ಪಂದ ಪತ್ರಗಳು,

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 836
ಸದಸ್ಯರ ಹೆಸರು : ಶ್ರೀ ದೇವಾನಂದ್ ಫುಲಸಿಂಗ್ ಚವಾಣ್
ಉತ್ತರಿಸುವ ದಿನಾಂಕ : 04.02.2021.
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ವಿಜಯಪುರ ಜಿಲ್ಲೆಯ ನಾಗಠಾಣ ವಿಧಾನಸಭಾ ಕ್ಷೇತ್ರಕ್ಕೆ ಕಳೆದ 3 ವರ್ಷಗಳಲ್ಲಿ ಯಾವ ಯಾವ ಯೋಜನೆಗಳಿಂದ ಎಷ್ಟೆಷ್ಟು ಅನುದಾನ ಮಂಜೂರು ಮಾಡಿ ಬಿಡುಗಡೆ ಮಾಡಲಾಗಿರುತ್ತದೆ.	ಅನುಬಂಧದಲ್ಲಿ ನೀಡಿದೆ.
ಆ)	ಕಳೆದ 3 ವರ್ಷಗಳಲ್ಲಿ ವಿಜಯಪುರ ಜಿಲ್ಲೆಯ ನಾಗಠಾಣ ವಿಧಾನಸಭಾ ಕ್ಷೇತ್ರಕ್ಕೆ. ಎಷ್ಟು ಡಾ: ಅಂಬೇಡ್ಕರ್ ಭವನ/ವಾಲ್ಮೀಕಿ ಭವನ/ಡಾ: ಜಗಜೀವನರಾಂ ಭವನಗಳನ್ನು ಮಂಜೂರು ಮಾಡಲಾಗಿದೆ.	ಕಳೆದ ಮೂರು ವರ್ಷಗಳಲ್ಲಿ ನಾಗಠಾಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 01 ಡಾ:ಬಿ.ಆರ್.ಅಂಬೇಡ್ಕರ್ ಭವನ ಮತ್ತು 02 ಡಾ:ಬಾಬು ಜಗಜೀವನ ರಾಂ ಭವನಗಳನ್ನು ನಿರ್ಮಾಣ ಮಾಡಲು ಮಂಜೂರಾತಿ ನೀಡಲಾಗಿರುತ್ತದೆ.
ಇ)	ಕಳೆದ 03 ವರ್ಷಗಳಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ನೀಡುವ ಎಸ್.ಸಿ./ಎಸ್.ಟಿ. ಸಂಘ ಸಂಸ್ಥೆಗಳಿಗೆ ನೀಡಿರುವ ಅನುದಾನವೆಷ್ಟು?	ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಪರಿಶಿಷ್ಟ ಜಾತಿಯ ಧಾರ್ಮಿಕ ಸಂಘ ಸಂಸ್ಥೆಗಳ ವತಿಯಿಂದ ನಡೆಸುತ್ತಿರುವ ಶೈಕ್ಷಣಿಕ ಸಂಸ್ಥೆಗಳು ಹಾಗೂ ಸಮುದಾಯ ಭವನಗಳ ಕಟ್ಟಡ ನಿರ್ಮಾಣ ಸಂಬಂಧವಾಗಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ 217 ಪ್ರಕರಣಗಳಲ್ಲಿ ರೂ.11816.48 ಲಕ್ಷಗಳಿಗೆ ಮಂಜೂರಾತಿ ನೀಡಿ ರೂ.9675.48 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ದಾರ್ಮಿಕ ಸಂಸ್ಥೆಗಳು/ಸಂಘ ಸಂಸ್ಥೆಗಳು/ಸ್ವಯಂ ಸೇವಾ ಸಂಸ್ಥೆಗಳು/ಟ್ರಸ್ಟ್‌ಗಳು ನಡೆಸುವ ವಿದ್ಯಾರ್ಥಿ ನಿಲಯಗಳ ಕಟ್ಟಡ, ಶಾಲಾ ಕಾಲೇಜುಗಳ ಕಟ್ಟಡ ಹಾಗೂ ಸಮುದಾಯ ಭವನಗಳ ಕಟ್ಟಡ ನಿರ್ಮಾಣಕ್ಕೆ ರೂ.1500.00 ಲಕ್ಷಗಳಿಗೆ ಮಂಜೂರಾತಿ ನೀಡಿ ರೂ.1101.50 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಸದರಿ ಅನುದಾನದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಶಿಕ್ಷಣ ಸೇವಾ ಸಂಸ್ಥೆ, ಝಳಕಿ, ವಿಜಯಪುರ ಜಿಲ್ಲೆ ಇವರಿಗೆ ರೂ.50.00 ಲಕ್ಷಗಳನ್ನು ಹಾಗೂ ಶ್ರೀ ಮಹರ್ಷಿ ವಾಲ್ಮೀಕಿ ವಿದ್ಯಾವರ್ದಕ ಸಂಘ, ಹೆಗಡಿಹಾಳ, ಮುದ್ದೇಬಿಹಾಳ ತಾಲ್ಲೂಕು, ವಿಜಯಪುರ ಜಿಲ್ಲೆ ಇವರಿಗೆ ಹೆಚ್ಚುವರಿಯಾಗಿ ರೂ.50.00 ಲಕ್ಷಗಳನ್ನು ಶಾಲಾ ಕಟ್ಟಡ ನಿರ್ಮಾಣ ಕಾಮಾಗಾರಿಗಳಿಗೆ ಬಿಡುಗಡೆ ಮಾಡಲಾಗಿರುತ್ತದೆ.

ಸಂಖ್ಯೆ: ಸಕಇ 20 ಆರ್&ಐ 2021

(ಬಿ.ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು.

836

ಅನುಬಂಧ

ಸಮಾಜ ಕಲ್ಯಾಣ ಇಲಾಖೆ ಆಯುಕ್ತಾಲಯ:-

ರೂ.ಲಕ್ಷಗಳಲ್ಲಿ

ಯೋಜನೆಗಳ ವಿವರ	ಮಂಜೂರಾತಿ ಮೊತ್ತ	ಬಿಡುಗಡೆ ಮಾಡಿದ ಮೊತ್ತ
ಪರಿಶಿಷ್ಟ ಜಾತಿ ಕಾಲೋನಿಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು.	264.00	247.50
ಡಾ.ಬಿ.ಆರ್.ಅಂಬೇಡ್ಕರ್/ ಬಾಬು ಜಗಜೀವನ ರಾಮ್ ಸಮುದಾಯ ಭವನಗಳ ನಿರ್ಮಾಣ.	36.00	9.60
ಒಟ್ಟು	300.00	257.10

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ:-

ರೂ.ಲಕ್ಷಗಳಲ್ಲಿ

ಯೋಜನೆ ವಿವರ	ಮಂಜೂರಾತಿ ಮೊತ್ತ	ಬಿಡುಗಡೆ ಮಾಡಿದ ಮೊತ್ತ
ಪ್ರಗತಿ ಕಾಲೋನಿ	60.00	60.00
ಒಟ್ಟು	60.00	60.00

ಡಾ: ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ

ರೂ.ಲಕ್ಷಗಳಲ್ಲಿ

ಯೋಜನೆ ವಿವರ	ಮಂಜೂರಾತಿ ಮೊತ್ತ	ಬಿಡುಗಡೆ ಮಾಡಿದ ಮೊತ್ತ
ಸ್ವಯಂ ಉದ್ಯೋಗ ಯೋಜನೆ	8.75	8.75
ಸ್ವಯಂ ಉದ್ಯೋಗ ಯೋಜನೆ ಹೈನುಗಾರಿಕೆ	4.00	4.00
ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆ	325.00	325.00
ಮಹಿಳಾ ಸಮೃದ್ಧಿ ಯೋಜನೆ	121.35	121.35
ಟ್ಯಾಕ್ಸಿ ಯೋಜನೆ	33.00	33.00
ಹೈನುಗಾರಿಕೆ ನೇರಸಾಲ	123.60	123.60
ವೃತ್ತಿ ಕೌಶಲ್ಯ ತರಬೇತಿ	15.00	15.00
ವಿಕಲ ಚೇತನ ನೆರವು ಯೋಜನೆ	4.25	4.25
ಸಮೃದ್ಧಿ ಯೋಜನೆ	0.00	0.00
ಐರಾವತಿ ಯೋಜನೆ	0.00	0.00
ಗಂಗಾ ಕಲ್ಯಾಣ	1126.60	617.66
ಒಟ್ಟು	1761.55	1252.61

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ:-

ರೂ.ಲಕ್ಷಗಳಲ್ಲಿ

ಯೋಜನೆ ವಿವರ	ಮಂಜೂರಾತಿ ಮೊತ್ತ	ಬಿಡುಗಡೆ ಮಾಡಿದ ಮೊತ್ತ
ಸ್ವಯಂ ಉದ್ಯೋಗ	0.70	0.70
ನೇರಸಾಲ ಯೋಜನೆ	3.60	3.60
ವೃತ್ತಿ ಕೌಶಲ್ಯ	0.00	0.00
ಪ್ರವಾಸಿ ಟ್ಯಾಕ್ಸಿ	3.00	3.00
ಉದ್ಯಮ ಶೀಲತಾ ಅಭಿವೃದ್ಧಿ	17.00	17.00
ಮೈಕ್ರೋ ಕ್ರೆಡಿಟ್ ಕಿರುಸಾಲ	4.00	4.00
ಗಂಗಾ ಕಲ್ಯಾಣ ಯೋಜನೆ	27.49	19.99
ಐರಾವತ	0.00	0.00
ಸಮೃದ್ಧಿ	0.00	0.00
ಒಟ್ಟು	55.79	48.29

ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ:-

ರೂ.ಲಕ್ಷಗಳಲ್ಲಿ

ಯೋಜನೆ ವಿವರ	ಮಂಜೂರಾತಿ ಮೊತ್ತ	ಬಿಡುಗಡೆ ಮಾಡಿದ ಮೊತ್ತ
ಸ್ವಯಂ ಉದ್ಯೋಗ	1.75	1.75
ಉದ್ಯಮ ಶೀಲತಾ ಅಭಿವೃದ್ಧಿ	7.00	3.50
ಎಂ.ಸಿ.ಎಫ್	2.75	2.75
ಗಂಗಾ ಕಲ್ಯಾಣ ಯೋಜನೆ	26.00	19.00
ಐ.ಎಸ್.ಬಿ	5.00	5.00
ಒಟ್ಟು	42.5	32

ಕರ್ನಾಟಕ ವಿಧಾನ ಸಭೆ

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ	: 851
ಮಾನ್ಯ ಸದಸ್ಯರ ಹೆಸರು	: ಶ್ರೀ ಬಸವನಗೌಡ ದದ್ದಲ(ರಾಯಚೂರು ಗ್ರಾಮಾಂತರ)
ಉತ್ತರಿಸಬೇಕಾದ ದಿನಾಂಕ	: 04-02-2021
ಉತ್ತರಿಸುವ ಸಚಿವರು	: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ.ಸಂ	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಇರಬೇಕಾದಲ್ಲಿ ನಿಗದಿಪಡಿಸಿರುವ ಜನಸಂಖ್ಯಾ ಅನುಪಾತವೆಷ್ಟು (ಸರ್ಕಾರದ ಆದೇಶದೊಂದಿಗೆ ಸಂಪೂರ್ಣ ವಿವರ ನೀಡುವುದು);	IPHS ನಾರ್ಮ್ಸ್ ಪ್ರಕಾರ ಸಮತಟ್ಟು ಪ್ರದೇಶಗಳಲ್ಲಿ 30,000 ಜನಸಂಖ್ಯೆ ಹಾಗೂ ಗುಡ್ಡ ಗಾಡು ಹಾಗೂ ಗಿರಿಜನ ಪ್ರದೇಶಗಳಲ್ಲಿ 20,000 ಜನಸಂಖ್ಯೆಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಲು ಮಾರ್ಗಸೂಚಿಗಳಲ್ಲಿ ಅವಕಾಶವಿರುತ್ತದೆ. ಅದರಂತೆ, ನಿರ್ದೇಶನಾಲಯದಿಂದ ಹೊರಡಿಸಲಾಗಿರುವ ಸುತ್ತೋಲೆಯನ್ನು ಅನುಬಂಧದಲ್ಲಿ ನೀಡಲಾಗಿದೆ.
ಆ	ರಾಯಚೂರು ಗ್ರಾಮೀಣ ವಿಧಾನ ಸಭಾ ಕ್ಷೇತ್ರದಲ್ಲಿ ನಿಯಮದಂತೆ ಜನಸಂಖ್ಯೆಗೆ ಅನುಗುಣವಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆಯೇ; ಇಲ್ಲದಿದ್ದಲ್ಲಿ, ಸಂಖ್ಯೆಗೆ ಅನುಗುಣವಾಗಿ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವ ಉದ್ದೇಶ ಸರ್ಕಾರಕ್ಕಿದೆಯೇ;	ರಾಯಚೂರು ಗ್ರಾಮೀಣ ವಿಧಾನಸಭಾ ಕ್ಷೇತ್ರದಲ್ಲಿ ನಿಯಮದಂತೆ 2011ರ ಜನಗಣತಿಯನ್ವಯ 8 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸ್ಥಾಪನೆಗೆ ಅವಕಾಶವಿದ್ದು, ಹಾಲಿ 9 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.
ಇ	ಹಾಗಿದ್ದಲ್ಲಿ, ರಾಯಚೂರು ಗ್ರಾಮೀಣ ವಿಧಾನ ಸಭಾ ಕ್ಷೇತ್ರಕ್ಕೆ ಯಾವಾಗ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲಾಗುವುದು (ಸಂಪೂರ್ಣ ವಿವರ ನೀಡುವುದು)	ಹೆಚ್ಚುವರಿಯಾಗಿ, ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಕಾರ್ಯನಿರ್ವಹಿಸುತ್ತಿರುವದರಿಂದ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರು ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆಕುಕ 08 ಎಸ್ಎಂಎಂ 2021

(ಡಾ|| ಕೆ.ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

851

ಕರ್ನಾಟಕ ಸರ್ಕಾರ

ಸಂಖ್ಯೆ: ಕುಕಸೇ(1)ಪಿಹೆಚ್‌ಸಿ: 92—93

ಆರೋಗ್ಯ ಮತ್ತು ಕು.ಕ. ಸೇವೆಗಳ ನಿರ್ದೇಶನಾಲಯ
ಬೆಂಗಳೂರು, ದಿನಾಂಕ: ನೇ ಜನವರಿ 1993.
24-2-93

ಸುತ್ತೋಲೆ

ವಿಷಯ: ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮಂಜೂರಾತಿಯ ಬಗ್ಗೆ ಸಲ್ಲಿಸುವ ಪ್ರಸ್ತಾವನೆಗೆ ಮಾರ್ಗ ಸೂಚಿ.

—:—:—:—:—

ಹಾಲಿ ನಿಯಮದ ಪ್ರಕಾರ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಲು ಗ್ರಾಮೀಣ ಜನಸಂಖ್ಯೆಯನ್ನಾಧರಿಸಲಾಗುತ್ತಿದೆ. ಬಯಲುಸೀಮೆಗೆ 30,000 ಜನಸಂಖ್ಯೆ ಮತ್ತು ಗುಡ್ಡಗಾಡು ಮತ್ತು ಆದಿವಾಸಿ ಪ್ರದೇಶಗಳಲ್ಲಿ 20,000 ಜನಸಂಖ್ಯೆಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಲಾಗುತ್ತಿದೆ.

ಯಾವ ಸ್ಥಳಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರ ಆವಶ್ಯಕತೆ ಇದೆಯೋ ಅಂತಹ ಸ್ಥಳದ 1991ನೇ ಜನಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು ಜಿಲ್ಲಾ ಪರಿಷತ್ ಅನುಮೋದನೆ ಪಡೆಯತಕ್ಕದ್ದು. ಈ ವಿಷಯವನ್ನು ಜಿಲ್ಲಾ ಪರಿಷತ್‌ಗೆ ಸರಿಯಾಗಿ ಮನದಟ್ಟು ಮಾಡುವುದು. ಪ್ರಾಥಮಿಕ ಆರೋಗ್ಯ ಕೇಂದ್ರಕ್ಕಾಗಿ ಪ್ರಸ್ತಾವನೆ ಸಲ್ಲಿಸಲು ಕೆಳಕಂಡ ಸೂಚನೆಯನ್ನು ಅನುಸರಿಸುವುದು ಹಾಗೂ ಈ ಪತ್ರದೊಂದಿಗೆ ಲಗತ್ತಿಸಿರುವ (ತಃಪಟ್ಟಿ) ಚೆಕ್‌ಲಿಸ್ಟ್‌ನೊಂದಿಗೆ ಪ್ರಸ್ತಾವನೆ ಸಲ್ಲಿಸುವುದು.

DHFWO send proposals these

ಬಯಲು ಸೀಮೆಯಲ್ಲಿದ್ದಲ್ಲಿ 30,000 ಜನಸಂಖ್ಯೆ ಅಥವಾ ಗುಡ್ಡಗಾಡು ಪ್ರದೇಶದಲ್ಲಿದ್ದಲ್ಲಿ 20,000 ಜನಸಂಖ್ಯೆ ವ್ಯಾಪ್ತಿ ಪ್ರಸ್ತಾವಿಸಿದ ಸ್ಥಳವನ್ನು ಹೊಂದಿರಬೇಕು.

2) ಪ್ರಸ್ತಾವಿಸಿದ ಸ್ಥಳವು ಈಗ ಹತ್ತಿರವಿರುವ ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಕನಿಷ್ಠ 8 ಕಿ.ಮೀ. ಅಂತರ ಇರಬೇಕು.

3) ಪ್ರಸ್ತಾವಿಸಿದ ಸ್ಥಳದಲ್ಲಿ ಕನಿಷ್ಠ ಸೌಲಭ್ಯಗಳಾದ ಸಾರಿಗೆ, ನೀರು, ವಿದ್ಯುತ್ ಮತ್ತು ಶಿಕ್ಷಣ ಸೌಲಭ್ಯಗಳು ಇರಬೇಕು.

4) ಪ್ರಸ್ತಾವಿಸಿದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕಟ್ಟಡ ಮತ್ತು ಆವರ್ತ ಮತ್ತು ಅನಾವರ್ತ ವೆಚ್ಚವನ್ನು ಭರಿಸಲು ಸಾಕಷ್ಟು ಹಣ ಆಯವ್ಯಯದಲ್ಲಿ ಒದಗಿಸಿಕೊಳ್ಳಬೇಕು.

5) ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರು ಮಾಡಲು ಆಯ್ದ ಸ್ಥಳವು ಜಿಲ್ಲಾ ಪರಿಷತ್ ಸಾಮಾನ್ಯ ಸಭೆಯಲ್ಲಿ ಅನುಮೋದಿಸಿದ ನಡವಳಿಯೊಂದಿಗೆ ಪ್ರಸ್ತಾವನೆ ಸಲ್ಲಿಸುವುದು.

6) ಆದಷ್ಟು ಹೊಸ ಸ್ಥಳದಲ್ಲಿ ಪ್ರಾ.ಆ.ಕೇಂದ್ರಗಳನ್ನು ಮಂಜೂರು ಮಾಡಲು ಪ್ರಸ್ತಾವನೆ ಸಲ್ಲಿಸದಿರಲು ಪ್ರಯತ್ನಿಸುವುದು. ಹಾಲಿ ಇರುವ ಪ್ರಾಥಮಿಕ ಆರೋಗ್ಯ ಘಟಕಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರವಾಗಿ ಮೇಲ್ದರ್ಜೆಗೇರಿಸಲು ಪ್ರಸ್ತಾವನೆ ಸಲ್ಲಿಸುವುದು.

7) ಪ್ರಸ್ತಾವಿಸಿದ ಸ್ಥಳವು ಯಾವ ವಿಧಾನ ಸಭಾ ಕ್ಷೇತ್ರಕ್ಕೆ ಬರುತ್ತದೆ.

1/3/93

8) ಕಟ್ಟಡಕ್ಕಾಗಿ ನಿವೇಶನ ಒದಗಿಸಿದ ಬಗ್ಗೆ ಕೆಳಕಂಡ ವಿವರ ಒದಗಿಸುವುದು
   1) ಸರ್ವೆ ನಂ.
   2) ದಾನಿಗಳ ಹೆಸರು
   3) ಖಾತೆಯ ಪ್ರತಿ
   4) ದಾನಪತ್ರದ ಪ್ರತಿ.

PO TUMKUR

9) ಆಯ್ಕೆ ಮಾಡಲಾಗುವ ಸ್ಥಳಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರ ಆವಶ್ಯಕತೆಯ ಬಗ್ಗೆ ನ್ಯಾಯಸಮ್ಮತತೆಯನ್ನು ಪರಿಶೀಲಿಸುವುದು.

ಅಪೂರ್ಣವಾಗಿ ಸಲ್ಲಿಸಲಾಗುವ ಪ್ರಸ್ತಾವನೆಗಳನ್ನು ಪರಿಗಣಿಸಲಾಗುವುದಿಲ್ಲ.

(ಸಹಿ) 2/4/93
ನಿರ್ದೇಶಕರ ಪರವಾಗಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು.
13/1/93

4/3/93 22/3/93
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ,

1) ಪ್ರತಿಯನ್ನು ವಿಭಾಗೀಯ ಜಂಟಿ ನಿರ್ದೇಶಕರು, ಆರೋಗ್ಯ ...
ಬೆಂಗಳೂರು ...

ಕರ್ನಾಟಕ ವಿಧಾನಸಭೆ
(15ನೇ ವಿಧಾನಸಭೆ, 9ನೇ ಅಧಿವೇಶನ)

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	881
2) ಸದಸ್ಯರ ಹೆಸರು	:	ಶ್ರೀ ಹೂಲಗೇರಿ .ಡಿ.ಎಸ್ (ಲಿಂಗಸುಗೂರು)
3) ಉತ್ತರಿಸುವ ದಿನಾಂಕ	:	04-02-2021
4) ಉತ್ತರಿಸುವವರು	:	ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಯಚೂರು ಜಿಲ್ಲೆಯ ಲಿಂಗಸುಗೂರು ಪಟ್ಟಣದಲ್ಲಿ 'ಟ್ರೀ ಪಾರ್ಕ್' ಮಂಜೂರು ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;</td><td>ಲಿಂಗಸೂಗೂರು ಪಟ್ಟಣಕ್ಕೆ ಸಮೀಪದಲ್ಲಿರುವ ಅಡವಿಭಾವಿ ಸರ್ವೆ ನಂ.9/1ರಲ್ಲಿ 5.00 ಹೆಕ್ಟೇರ್ ಪ್ರದೇಶದಲ್ಲಿ 2015-16ರಲ್ಲಿ "ಟ್ರೀ ಪಾರ್ಕ್" ನಿರ್ಮಾಣ ಮಾಡಿ ಹಂತಹಂತವಾಗಿ ಇಲ್ಲಿಯವರೆಗೂ ಅಭಿವೃದ್ಧಿಪಡಿಸಲಾಗುತ್ತಿದೆ.
• ಟ್ರೀಪಾರ್ಕ್ ಪ್ರದೇಶಕ್ಕೆ ಫೆನ್ಸಿಂಗ್ ಮಾಡಲಾಗಿದೆ.
• ಟ್ರೀಪಾರ್ಕ್‌ನಲ್ಲಿ ವಾಕಿಂಗ್ ಪಾಥ್ ನಿರ್ಮಾಣ ಮಾಡಲಾಗಿದೆ.
• ಟ್ರೀಪಾರ್ಕ್ ಪ್ರದೇಶದಲ್ಲಿ 2400 ಸಸಿಗಳನ್ನು ನೆಡಲಾಗಿದೆ.
• ವನ್ಯಪ್ರಾಣಿಗಳ ಸಿಮೆಂಟ್ ಮೂರ್ತಿಗಳನ್ನು ಅಳವಡಿಸಿದೆ.
• ಮಕ್ಕಳ ಉದ್ಯಾನವನ ನಿರ್ಮಿಸಲಾಗಿದೆ.
• ಶೌಚಾಲಯ ಮತ್ತು ಸ್ವಚ್ಛತೆಗೆ ಕ್ರಮ ಕೈಗೊಳ್ಳಲಾಗಿದೆ.
• ಪರಗೋಲಾ ನಿರ್ಮಿಸಿದೆ, ಕಲ್ಲು ಬೆಂಚು ಅಳವಡಿಸಿದೆ.</td></tr>
<tr><td>ಆ)</td><td>ಈ ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನಲ್ಲಿ ಒಟ್ಟು ಎಷ್ಟು ಅರಣ್ಯ ಪ್ರದೇಶವಿದೆ; ಸದರಿ ಪ್ರದೇಶವನ್ನು ಅಭಿವೃದ್ಧಿಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;</td><td>ಲಿಂಗಸೂಗೂರು ತಾಲ್ಲೂಕು ವ್ಯಾಪ್ತಿಯಲ್ಲಿ ಇರುವ ಅರಣ್ಯ ಪ್ರದೇಶದ ವಿವರ ಈ ಕೆಳಗಿನಂತಿದೆ:
<table><tr><th>ಕಾಯ್ದಿಟ್ಟ ಅರಣ್ಯ (ಹೆಕ್ಟೇರ್ ಗಳಲ್ಲಿ)</th><th>ರಕ್ಷಿತ ಅರಣ್ಯ (ಹೆಕ್ಟೇರ್ ಗಳಲ್ಲಿ)</th><th>ಅವರ್ಗೀಕೃತ ಅರಣ್ಯ (ಹೆಕ್ಟೇರ್ ಗಳಲ್ಲಿ)</th><th>ಕಂದಾಯ ದಾಖಲೆ ಗಳಲ್ಲಿರುವ ಅರಣ್ಯ (ಹೆಕ್ಟೇರ್ ಗಳಲ್ಲಿ)</th><th>ಒಟ್ಟು (ಹೆಕ್ಟೇರ್ ಗಳಲ್ಲಿ)</th></tr><tr><td>2750.46</td><td>329.94</td><td>7833.50</td><td>40.95</td><td>10954.85</td></tr></table>
ಸದರಿ ಅರಣ್ಯ ಪ್ರದೇಶದಲ್ಲಿ ನೈಸರ್ಗಿಕ ಅರಣ್ಯ ಸಂರಕ್ಷಣೆ, ನೆಡುತೋಪು ಬೆಳೆಸುವುದು, ಒತ್ತುವರಿಯಾಗದಂತೆ ಗಡಿಗುಂಟ ಜಾನುವಾರು ನಿರೋಧಕ ಕಂದಕ ತೋಡುವ ಕಾಮಗಾರಿಗಳನ್ನು ಕೈಗೊಂಡು ಅಭಿವೃದ್ಧಿಪಡಿಸಲಾಗುತ್ತಿದೆ.</td></tr>
</table>

ಇ)	ಲಿಂಗಸುಗೂರು ವಿಧಾನಸಭಾ ಕ್ಷೇತ್ರಕ್ಕೆ 2018-19 ಹಾಗೂ 2019-20ನೇ ಸಾಲಿನಲ್ಲಿ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯಿಂದ ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು;	ಲಿಂಗಸುಗೂರು ವಿಧಾನಸಭಾ ಕ್ಷೇತ್ರಕ್ಕೆ 2018-19 ಹಾಗೂ 2019-20ನೇ ಸಾಲಿನಲ್ಲಿ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯಿಂದ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ.
ಈ)	ಕಾರ್ಯಕ್ರಮಗಳಿಗೆ ಬಿಡುಗಡೆಯಾಗಿರುವ ಅನುದಾನ ಎಷ್ಟು; ಆ ಪೈಕಿ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ?	ಕಾರ್ಯಕ್ರಮಗಳಿಗೆ ಬಿಡುಗಡೆಯಾಗಿರುವ ಅನುದಾನ ಹಾಗೂ ಕಾಮಗಾರಿಗಳ ವಿವರಗಳನ್ನು ಅನುಬಂಧ-2ರಲ್ಲಿ ಒದಗಿಸಲಾಗಿದೆ.

ಸಂಖ್ಯೆ: ಅಪಜೀ 06 ಎಫ್‌ಟಿಎಸ್ 2021

(ಅರವಿಂದ ಲಿಂಬಾವಳಿ)
ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು

188

ಅನುಬಂಧ-1

ಪ್ರಾದೇಶಿಕ ಅರಣ್ಯ ವಿಭಾಗ, ರಾಯಚೂರು

ಲಿಂಗಸೂಗೂರು ವಿಧಾನ ಸಭೆ ಸದಸ್ಯರಾದ ಶ್ರೀ ಹೂಲಿಗೇರಿ ಡಿ.ಎಸ್. ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂ: 881ಕ್ಕೆ ವಿವರ (ಅ)

2018-19

ಕ್ರ.ಸಂ	ತಾಲೂಕು/ವಲಯ	ಯೋಜನೆ	ಕಾಮಗಾರಿ ವಿವರ	ಭೌತಿಕ ಹೆಕ್ಟೇರ್/ಕಿ.ಮೀ	ನೆಟ್ಟ ಸಸಿಗಳ ಸಂಖ್ಯೆ	ಸಸಿಗಳ ಎತ್ತರ
1	2	3	4	5	6	7
1	ಲಿಂಗಸುಗೂರು	ನಗರ ಪ್ರದೇಶ ಹಸಿರೀಕರಣ	ಲಿಂಗಸುಗೂರು ಪಟ್ಟಣದಲ್ಲಿ ಸಸಿಗಳನ್ನು ನೆಡುವುದು	3	900	14X20– 10 ಅಡಿ
2	ಲಿಂಗಸುಗೂರು	ಕೆ.ಎಫ್.ಡಿ.ಎಫ್ (ನಗರ ಪ್ರದೇಶ ಹಸಿರೀಕರಣ)	ಹಟ್ಟಿ ಪಟ್ಟಣದಲ್ಲಿ ಸಸಿಗಳನ್ನು ನೆಡುವುದು	6	1800	14X20– 10 ಅಡಿ
3	ಲಿಂಗಸುಗೂರು	ಕೆ.ಎಫ್.ಡಿ.ಎಫ್ (ರಸ್ತೆಬದಿ ನೆಡುತೋಪು ಬೆಳೆಸುವುದು-139 ಪ್ರ.ಕಾ)	ಮೇದಿನಾಪುರ ದಿಂದ ಹಟ್ಟಿ ರಸ್ತೆಬದಿ ನೆಡುತೋಪು ಬೆಳೆಸುವುದು	3	1200	14X20– 10 ಅಡಿ
4	ಲಿಂಗಸುಗೂರು	ಕೆ.ಎಫ್.ಡಿ.ಎಫ್ (ರಸ್ತೆಬದಿ ನೆಡುತೋಪು ಬೆಳೆಸುವುದು-139 ಪ್ರ.ಕಾ)	[illegible] ದಿಂದ ಮೇದಿನಾಪುರ ರಸ್ತೆಬದಿ ನೆಡುತೋಪು ಬೆಳೆಸುವುದು	3	1200	14X20– 10 ಅಡಿ
5	ಲಿಂಗಸುಗೂರು	ಕೆ.ಎಫ್.ಡಿ.ಎಫ್ (ರಸ್ತೆಬದಿ ನೆಡುತೋಪು ಬೆಳೆಸುವುದು-139 ಪ್ರ.ಕಾ)	[illegible] ದಿಂದ ಪೈಲುಗುಡ್ಡ ರಸ್ತೆಬದಿ ನೆಡುತೋಪು ಬೆಳೆಸುವುದು	11	3300	14X20– 10 ಅಡಿ
6	ಲಿಂಗಸುಗೂರು	ಕಾಂಪಾ	ಗುಂತಗೋಳ ಅರಣ್ಯ ಪ್ರದೇಶದಲ್ಲಿ ಬ್ಲಾಕ್ ನೆಡುತೋಪು ಬೆಳೆಸುವುದು	40	8000	10X16– 8 ಅಡಿ
7	ಲಿಂಗಸುಗೂರು	ಕಾಂಪಾ	[illegible] ದಿಂದ ನಾಗಲಾಪುರ ಬಾರ್ಡರ್ ಕೆನಾಲ್ ಬದಿ ನೆಡುತೋಪು ಬೆಳೆಸುವುದು.	56	11200	14X20– 10 ಅಡಿ
8	ಲಿಂಗಸುಗೂರು	ಆರ್.ಎಸ್.ಪಿ.ಡಿ. ಸಿರಿಚಂದನವನ	ಸಾರ್ವಜನಿಕರಿಗೆ ವಿತರಿಸಲು ಸಸಿಗಳನ್ನು ಬೆಳೆಸುವುದು.	34500	–	6"x9" & 8"x12"
					27600	

2019-20

ಕ್ರ.ಸಂ	ತಾಲೂಕು/ವಲಯ	ಯೋಜನೆ	ಕಾಮಗಾರಿ ವಿವರ	ಭೌತಿಕ ಹೆಕ್ಟೇರ್/ಕಿ.ಮೀ	ನೆಟ್ಟ ಸಸಿಗಳ ಸಂಖ್ಯೆ	ಸಸಿಗಳ ಎತ್ತರ
1	ಲಿಂಗಸುಗೂರು	ಕೆ.ಎಫ್.ಡಿ.ಎಫ್ (ನಗರ ಪ್ರದೇಶ ಹಸಿರೀಕರಣ)	[illegible] ಲಿಂಗಸುಗೂರು ಪಟ್ಟಣದಲ್ಲಿ ನೆಡುತೋಪು ಬೆಳೆಸುವುದು	3	900	14X20– 10 ಅಡಿ
2	ಲಿಂಗಸುಗೂರು	ಕೆ.ಎಫ್.ಡಿ.ಎಫ್ (ನಗರ ಪ್ರದೇಶ ಹಸಿರೀಕರಣ)	ಹಟ್ಟಿ ಪಟ್ಟಣದಲ್ಲಿ ನೆಡುತೋಪು ಬೆಳೆಸುವುದು	3	900	14X20– 10 ಅಡಿ
3	ಲಿಂಗಸುಗೂರು	ಕೆ.ಎಫ್.ಡಿ.ಎಫ್ (ರಸ್ತೆಬದಿ ನೆಡುತೋಪು ಬೆಳೆಸುವುದು-139 ಪ್ರ.ಕಾ)	ಪೈಲುಗುಡ್ಡ ದಿಂದ ಸೋಮನಾಯಕನ ತಾಂಡಾ ವರೆಗೆ ರಸ್ತೆಬದಿ ನೆಡುತೋಪು ಬೆಳೆಸುವುದು	3	900	14X20– 10 ಅಡಿ
4	ಲಿಂಗಸುಗೂರು	ಕಾಂಪಾ	ಗುಂತಗೋಳ ಬ್ಲಾಕ್	25	5000	10X16– 8 ಅಡಿ
5	ಲಿಂಗಸುಗೂರು	ಆರ್.ಎಸ್.ಪಿ.ಡಿ. ಸಿರಿಚಂದನವನ	ಸಾರ್ವಜನಿಕರಿಗೆ ವಿತರಿಸಲು ಸಸಿಗಳನ್ನು ಬೆಳೆಸುವುದು.	30000	–	6"x9" & 8"x12"
				34	7700	

ಅನುಬಂಧ-2

ಪ್ರಾದೇಶಿಕ ಅರಣ್ಯ ವಿಭಾಗ, ರಾಯಚೂರು

ಲಿಂಗಸೂಗೂರು ವಿಧಾನ ಸಭೆ ಸದಸ್ಯರಾದ ಶ್ರೀ. ಹೂಲಿಗೇರಿ ಡಿ.ಎಸ್. ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂ: ೫೫೧ಕ್ಕೆ ವಿವರ (ಈ)

2018-19

ಕ್ರಸಂ	ತಾಲೂಕು/ವಲಯ	ಯೋಜನೆ	ಕಾಮಗಾರಿ ವಿವರ	ಹೆಕ್ಟೇರ್/ ಕಿ.ಮೀ	ನೆಟ್ಟ ಸಸಿಗಳ ಸಂಖ್ಯೆ	ವೆಚ್ಚ ಮಾಡಲಾದ
1	3	4	5	6	7	8
1	ಲಿಂಗಸುಗೂರು	ನಗರ ಪ್ರದೇಶ ಹಸಿರೀಕರಣ	ಲಿಂಗಸುಗೂರು ಪಟ್ಟಣದಲ್ಲಿ ಸಸಿಗಳನ್ನು ನೆಡುವುದು	3	900	5.31
2	ಲಿಂಗಸುಗೂರು	ಕೆ.ಎಫ್.ಡಿ.ಎಫ್ (ನಗರ ಪ್ರದೇಶ ಹಸಿರೀಕರಣ)	ಹಟ್ಟಿ ಪಟ್ಟಣದಲ್ಲಿ ಸಸಿಗಳನ್ನು ನೆಡುವುದು	6	1800	19.202
3	ಲಿಂಗಸುಗೂರು	ಕೆ.ಎಫ್.ಡಿ.ಎಫ್ (ರಸ್ತೆಬದಿ ನೆಡುತೋಪು ಬೆಳೆಸುವುದು-139 ಪ್ರಕಾ)	ಮೇದಿನಾಪುರ ದಿಂದ ಹಟ್ಟಿ ರಸ್ತೆಬದಿ ನೆಡುತೋಪು ಬೆಳೆಸುವುದು	3	1200	4.769
4	ಲಿಂಗಸುಗೂರು	ಕೆ.ಎಫ್.ಡಿ.ಎಫ್ (ರಸ್ತೆಬದಿ ನೆಡುತೋಪು ಬೆಳೆಸುವುದು-139 ಪ್ರಕಾ)	ಮುದಗೋಳ ಚೌಂಡಿ ದಿಂದ ಮೇದಿನಾಪುರ ರಸ್ತೆಬದಿ ನೆಡುತೋಪು ಬೆಳೆಸುವುದು	3	1200	4.769
5	ಲಿಂಗಸುಗೂರು	ಕೆ.ಎಫ್.ಡಿ.ಎಫ್ (ರಸ್ತೆಬದಿ ನೆಡುತೋಪು ಬೆಳೆಸುವುದು-139 ಪ್ರಕಾ)	ಹಟ್ಟಿ ದಿಂದ ಬೈಲುಗುಡ್ಡ ರಸ್ತೆಬದಿ ನೆಡುತೋಪು ಬೆಳೆಸುವುದು	11	3300	19.58
6	ಲಿಂಗಸುಗೂರು	ಕಾಂಪಾ	ಗುಂತಗೋಳ ಅರಣ್ಯ ಪ್ರದೇಶದಲ್ಲಿ ಬ್ಲಾಕ್ ನೆಡುತೋಪು ಬೆಳೆಸುವುದು	40	8000	7.29
7	ಲಿಂಗಸುಗೂರು	ಕಾಂಪಾ	ಹಿರೇಜಾವೂರು ದಿಂದ ನಾಗಲಾಪುರ ಜಾರ್ವಾರ್ ಕೆನಾಲ್ ಬದಿ ನೆಡುತೋಪು ಬೆಳೆಸುವುದು.	56	11200	39.37
8	ಲಿಂಗಸುಗೂರು	ಆರ್.ಎಸ್.ಪಿ.ಡಿ. ಸಿರಿಚಂದನವನ	ಸಾರ್ವಜನಿಕರಿಗೆ ವಿತರಿಸಲು ಸಸಿಗಳನ್ನು ಬೆಳೆಸುವುದು.	34500		4.908
				122	27600	105.57

2019-20

1	ಲಿಂಗಸುಗೂರು	ಕೆ.ಎಫ್.ಡಿ.ಎಫ್ (ನಗರ ಪ್ರದೇಶ ಹಸಿರೀಕರಣ)	ಎ.ಪಿ.ಎಂ.ಸಿ ಆವರಣ ಲಿಂಗಸುಗೂರು ಪಟ್ಟಣದಲ್ಲಿ ನೆಡುತೋಪು ಬೆಳೆಸುವುದು	3	900	5.578
2	ಲಿಂಗಸುಗೂರು	ಕೆ.ಎಫ್.ಡಿ.ಎಫ್ (ನಗರ ಪ್ರದೇಶ ಹಸಿರೀಕರಣ)	ಹಟ್ಟಿ ಪಟ್ಟಣದಲ್ಲಿ ನೆಡುತೋಪು ಬೆಳೆಸುವುದು	3	900	5.578
3	ಲಿಂಗಸುಗೂರು	ಕೆ.ಎಫ್.ಡಿ.ಎಫ್ (ರಸ್ತೆಬದಿ ನೆಡುತೋಪು ಬೆಳೆಸುವುದು-139 ಪ್ರಕಾ)	ಬೈಲುಗುಡ್ಡ ದಿಂದ ಸೋಮನಾಯಕನ ತಾಂಡಾ ವರೆಗೆ ರಸ್ತೆಬದಿ ನೆಡುತೋಪು ಬೆಳೆಸುವುದು	3	900	5.805
4	ಲಿಂಗಸುಗೂರು	ಕಾಂಪಾ	ಗುಂತಗೋಳ ಬ್ಲಾಕ್	25	5000	4.723
5	ಲಿಂಗಸುಗೂರು	ಆರ್.ಎಸ್.ಪಿ.ಡಿ. ಸಿರಿಚಂದನವನ	ಸಾರ್ವಜನಿಕರಿಗೆ ವಿತರಿಸಲು ಸಸಿಗಳನ್ನು ಬೆಳೆಸುವುದು.	30000		4.463
				34	7700	26.147

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	882
ಸದಸ್ಯರ ಹೆಸರು	:	ಶ್ರೀ. ಶಿವಾನಂದ ಎಸ್.ಪಾಟೀಲ್
ಉತ್ತರಿಸುವ ದಿನಾಂಕ	:	04/02/2021
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಸಚಿವರು

<table>
<tr><th>ಕ್ರಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ವಿಜಯಪುರ ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ನಡೆಯುತ್ತಿರುವ ಸರ್ಕಾರಿ ಮೆಟ್ರಿಕ್ ನಂತರದ ಮತ್ತು ಮೆಟ್ರಿಕ್ ಪೂರ್ವ ಬಾಲಕ ಬಾಲಕಿಯರ ವಸತಿ ನಿಲಯಗಳು ಮತ್ತು ಆಶ್ರಮ ಶಾಲೆಗಳು ಹಾಗೂ ವಸತಿ ಶಾಲೆಗಳು ಎಷ್ಟು;</td><td>
ವಿಜಯಪುರ ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನಡೆಸುತ್ತಿರುವ ಪರಿಶಿಷ್ಟ ಜಾತಿಯ ಸರ್ಕಾರಿ ವಿದ್ಯಾರ್ಥಿ ನಿಲಯಗಳು ಹಾಗೂ ವಸತಿ ಶಾಲೆಗಳ ವಿವರ ಈ ಕೆಳಕಂಡಂತಿರುತ್ತದೆ.
<table>
<tr><th>ವಿವರ</th><th>ಸಂಖ್ಯೆ</th></tr>
<tr><td>ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ</td><td>46</td></tr>
<tr><td>ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯ</td><td>11</td></tr>
<tr><td>ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ</td><td>10</td></tr>
<tr><td>ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ</td><td>7</td></tr>
<tr><td>ವಸತಿ ಶಾಲೆಗಳು (1 ರಿಂದ 5ನೇ ತರಗತಿ)</td><td>1</td></tr>
<tr><td>ಒಟ್ಟು</td><td>75</td></tr>
</table>
ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖಾವತಿಯಿಂದ ವಿಜಯಪುರ ಜಿಲ್ಲೆಯಲ್ಲಿ 02 ವಿದ್ಯಾರ್ಥಿನಿಲಯಗಳು ಹಾಗೂ 01 ಆಶ್ರಮ ಶಾಲೆ ಕಾರ್ಯನಿರ್ವಹಿಸುತ್ತಿವೆ. ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರ.ಸಂ</th><th>ವಿದ್ಯಾರ್ಥಿನಿಲಯ/ಆಶ್ರಮ ಶಾಲೆ</th></tr>
<tr><td>1</td><td>ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ ಬಿಜಾಪುರ ಸಿಟಿ</td></tr>
<tr><td>2</td><td>ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯ ಬಿಜಾಪುರ</td></tr>
<tr><td>3</td><td>ಆಶ್ರಮ ಶಾಲೆ, ಹೂವಿನಹಿಪ್ಪರಗಿ</td></tr>
</table>
</td></tr>
<tr><td>ಆ)</td><td>ಈ ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನಡೆಯುತ್ತಿರುವ ಸರ್ಕಾರಿ ಮೆಟ್ರಿಕ್ ನಂತರದ ಮತ್ತು ಮೆಟ್ರಿಕ್ ಪೂರ್ವ ಬಾಲಕ ಬಾಲಕಿಯರ ವಸತಿ ನಿಲಯಗಳು ಮತ್ತು ಆಶ್ರಮ ಶಾಲೆಗಳು ಹಾಗೂ ವಸತಿ ಶಾಲೆಗಳಲ್ಲಿ ಆ ಪೈಕಿ ಯಾವ ಯಾವ ವಸತಿ ನಿಲಯಗಳಿಗೆ ಮತ್ತು ಶಾಲೆಗಳಿಗೆ ಸ್ವಂತ ಕಟ್ಟಡಗಳು ಮತ್ತು ನಿವೇಶನಗಳು ಇರುವುದಿಲ್ಲ;</td><td rowspan="2">
75 ವಿದ್ಯಾರ್ಥಿ ನಿಲಯ/ ವಸತಿ ಶಾಲೆಗಳ ಪೈಕಿ 62 ವಿದ್ಯಾರ್ಥಿ/ ವಸತಿ ಶಾಲೆಗಳು ಸ್ವಂತ ಕಟ್ಟಡದಲ್ಲಿರುತ್ತವೆ. ಬಾಡಿಗೆ ಕಟ್ಟಡದಲ್ಲಿರುವ ಬಾಕಿ 13 ವಿದ್ಯಾರ್ಥಿ ನಿಲಯಗಳ ಪೈಕಿ 06 ವಿದ್ಯಾರ್ಥಿ ನಿಲಯಗಳಿಗೆ ಈಗಾಗಲೇ ಸ್ವಂತ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ. 04 ವಿದ್ಯಾರ್ಥಿ ನಿಲಯಗಳ ಕಟ್ಟಡ ನಿರ್ಮಾಣ ಸಂಬಂಧವಾಗಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆ ಸಂಘದ ವತಿಯಿಂದ ಸಿದ್ದಪಡಿಸಲಾದ ಅಂದಾಜು ಪಟ್ಟಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು ಪರಿಶೀಲನೆಯಲ್ಲಿದೆ, 03 ವಿದ್ಯಾರ್ಥಿ ನಿಲಯಗಳಿಗೆ ನಿವೇಶನಗಳನ್ನು ಪಡೆಯಲಾಗಿರುತ್ತದೆ. ವಿದ್ಯಾರ್ಥಿ ನಿಲಯವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖಾವತಿಯಿಂದ ವಿಜಯಪುರ ಜಿಲ್ಲೆಯಲ್ಲಿ 01 ವಿದ್ಯಾರ್ಥಿನಿಲಯ ಹಾಗೂ ಆಶ್ರಮ ಶಾಲೆ ಸ್ವಂತ ಕಟ್ಟಡದಲ್ಲಿ ಹಾಗೂ 01 ವಿದ್ಯಾರ್ಥಿನಿಲಯ ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ. ವಿವರ ಈ ಕೆಳಕಂಡಂತಿದೆ.
</td></tr>
<tr><td>ಇ)</td><td>ಶಾಲೆಗಳಿಗೆ ಸ್ವಂತ ಕಟ್ಟಡ ನಿರ್ಮಿಸಲು ಮತ್ತು ಸ್ವಂತ ನಿವೇಶನ ಪಡೆಯಲು ಸರ್ಕಾರದಿಂದ ಯಾವ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ</td></tr>
</table>

<table>
<tr>
<td></td>
<td></td>
<td>
<table>
<tr><th>ಕ್ರ.ಸಂ</th><th>ವಿದ್ಯಾರ್ಥಿನಿಲಯ/ಆಶ್ರಮ ಶಾಲೆ</th><th>ಸ್ವಂತ/ನಿವೇಶನ</th></tr>
<tr><td>1</td><td>ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ ಬಿಜಾಪುರ ಸಿಟಿ</td><td>ಸ್ವಂತ</td></tr>
<tr><td>2</td><td>ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯ ಬಿಜಾಪುರ</td><td>ನಿವೇಶನ ಲಭ್ಯವಿದೆ</td></tr>
<tr><td>3</td><td>ಆಶ್ರಮ ಶಾಲೆ, ಹೂವಿನಹಿಪ್ಪರಗಿ</td><td>ಸ್ವಂತ</td></tr>
</table>
ನಿವೇಶನ ಲಭ್ಯವಿರುವ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯಕ್ಕೆ ರೂ.348.06 ಲಕ್ಷಗಳ ವೆಚ್ಚದಲ್ಲಿ ಸ್ವಂತ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲಾಗಿದೆ.
</td>
</tr>
<tr>
<td>ಈ)</td>
<td>ಬಸವನ ಬಾಗೇವಾಡಿ, ನಿಡಗುಂದಿ ಮತ್ತು ಕೋಲ್ಹಾರ ತಾಲ್ಲೂಕುಗಳಲ್ಲಿ ಯಾವ ಯಾವ ಸರ್ಕಾರಿ ಮೆಟ್ರಿಕ್ ನಂತರದ ಮತ್ತು ಮೆಟ್ರಿಕ್ ಪೂರ್ವ ಬಾಲಕ-ಬಾಲಕಿಯರ ವಸತಿ ನಿಲಯಗಳಿಗೆ ಸ್ವಂತ ಕಟ್ಟಡ ನಿರ್ಮಿಸಲು ಸರ್ಕಾರಕ್ಕೆ ಸಲ್ಲಿಸಲಾಗಿದೆ?</td>
<td>ಬಸವನಬಾಗೇವಾಡಿ ಟೌನ್‌ನಲ್ಲಿರುವ ಸರ್ಕಾರಿ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯಕ್ಕೆ ಸ್ವಂತ ಕಟ್ಟಡ ನಿರ್ಮಾಣ ಮಾಡಲು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆ ಸಂಘದ ವತಿಯಿಂದ ಸಿದ್ಧಪಡಿಸಲಾಗಿರುವ ಅಂದಾಜು ಪಟ್ಟಿ ಮತ್ತು ನಕ್ಷೆಗೆ ಅನುಮೋದನೆ ನೀಡುವ ಕುರಿತು ಪರಿಶೀಲನೆಯಲ್ಲಿದೆ. ಮುಂದುವರೆದು, ನಿಡಗುಂದಿ ಮತ್ತು ಕೋಲ್ಹಾರ ತಾಲ್ಲೂಕುಗಳಲ್ಲಿ ಇಲಾಖೆಯ ವತಿಯಿಂದ ನಡೆಸಲಾಗುತ್ತಿರುವ ಪರಿಶಿಷ್ಟ ಜಾತಿಯ ಎಲ್ಲಾ ವಿದ್ಯಾರ್ಥಿ ನಿಲಯಗಳು ಸ್ವಂತ ಕಟ್ಟಡದಲ್ಲಿರುತ್ತದೆ.</td>
</tr>
</table>

ಸಕಇ 35 ಪಕವಿ 2021

(ಬಿ. ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು.

882

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ-882 ಕ್ಕೆ ಅನುಬಂಧ

ಕ್ರ ಸಂ	ತಾಲ್ಲೂಕು	ವಿದ್ಯಾರ್ಥಿ ನಿಲಯದ ವಿವರ	ಸ್ಥಳ	ಸ್ವಂತ ಕಟ್ಟಡ ನಿರ್ಮಾಣ ಮಾಡಲು ಕೈಗೊಂಡಿರುವ ಕ್ರಮ
1	ವಿಜಾಪುರ	ಸರಕಾರಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ	ವಿಜಯಪುರ ಟೌನ್	ನಿವೇಶನ ಲಭ್ಯವಿರುತ್ತದೆ
2	ವಿಜಾಪುರ	ಸರಕಾರಿ ಮೆಟ್ರಿಕ್ ನಂತರದ ಬಾಲಕಿಯರ ವೃತ್ತಿಪರ ವಿದ್ಯಾರ್ಥಿ ನಿಲಯ	ವಿಜಾಪುರ	ಸ್ವಂತ ಕಟ್ಟಡ ನಿರ್ಮಾಣ ಮಾಡಲು ಅಂದಾಜು ಪಟ್ಟಿ ಮತ್ತು ನಕ್ಷೆಗೆ ಅನುಮೋದನೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ
3	ವಿಜಾಪುರ	ಸರಕಾರಿ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ	ವಿಜಯಪುರ ಟೌನ್	ನಿವೇಶನ ಲಭ್ಯವಿರುತ್ತದೆ
4	ಇಂಡಿ	ಸರಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ಹಳಗುಣಕಿ	ಸ್ವಂತ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದೆ.
5	ಇಂಡಿ	ಸರಕಾರಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ	ಇಂಡಿ ಟೌನ್	ಸ್ವಂತ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದೆ.
6	ಸಿಂದಗಿ	ಸರಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯ	ಸಿಂದಗಿ	ಸ್ವಂತ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದೆ.
7	ಸಿಂದಗಿ	ಸರಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯ	ದೇವರಹಿಪ್ಪರಗಿ	ನಿವೇಶನ ಲಭ್ಯವಿರುತ್ತದೆ
8	ಸಿಂದಗಿ	ಸರಕಾರಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ	ಸಿಂದಗಿ ಟೌನ್	ಸ್ವಂತ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದೆ.
9	ಬಬಾಗೇವಾಡಿ	ಸರಕಾರಿ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ	ಬಬಾಗೇವಾಡಿ	ಸ್ವಂತ ಕಟ್ಟಡ ನಿರ್ಮಾಣ ಮಾಡಲು ಅಂದಾಜು ಪಟ್ಟಿ ಮತ್ತು ನಕ್ಷೆಗೆ ಅನುಮೋದನೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ
10	ಮುದ್ದೇ ಬಿಹಾಳ	ಸರಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ಕೋಳೂರ	ಸ್ವಂತ ಕಟ್ಟಡ ನಿರ್ಮಾಣ ಮಾಡಲು ಅಂದಾಜು ಪಟ್ಟಿ ಮತ್ತು ನಕ್ಷೆಗೆ ಅನುಮೋದನೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ
11	ಮುದ್ದೇ ಬಿಹಾಳ	ಸರಕಾರಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ	ತಾಳಿಕೋಟೆ ಟೌನ್	ಸ್ವಂತ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದೆ.
12	ಮುದ್ದೇ ಬಿಹಾಳ	ಸರಕಾರಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ	ಮುದ್ದೇಬಿಹಾಳ	ಸ್ವಂತ ಕಟ್ಟಡ ನಿರ್ಮಾಣ ಮಾಡಲು ಅಂದಾಜು ಪಟ್ಟಿ ಮತ್ತು ನಕ್ಷೆಗೆ ಅನುಮೋದನೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ
13	ಮುದ್ದೇ ಬಿಹಾಳ	ಸರಕಾರಿ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ	ಮುದ್ದೇಬಿಹಾಳ	ಸ್ವಂತ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	897
ಸದಸ್ಯರ ಹೆಸರು	:	ಶ್ರೀ ಮಹದೇವ ಕೆ (ಪಿರಿಯಾಪಟ್ಟಣ)
ಉತ್ತರಿಸಬೇಕಾದ ದಿನಾಂಕ	:	04.02.2021
ಉತ್ತರಿಸುವವರು	:	ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಪಿರಿಯಾಪಟ್ಟಣ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಎಷ್ಟು ಅರಣ್ಯ ಪ್ರದೇಶವಿದೆ; ಈ ಮತಕ್ಷೇತ್ರದಲ್ಲಿ ಅರಣ್ಯದಂಚಿನ ವ್ಯಾಪ್ತಿಗೆ ಒಳಪಟ್ಟಿರುವ ಗ್ರಾಮಗಳೆಷ್ಟು;	ಪಿರಿಯಾಪಟ್ಟಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಒಟ್ಟು 7030.77 ಹೆಕ್ಟೇರ್ ಅರಣ್ಯ ಪ್ರದೇಶವಿರುತ್ತದೆ. ಪಿರಿಯಾಪಟ್ಟಣ ವಲಯ ವ್ಯಾಪ್ತಿಯ ಅರಣ್ಯ ಪ್ರದೇಶಗಳ ಅಂಚಿನ ಗ್ರಾಮಗಳು ಒಟ್ಟು 32 ಇದ್ದು, ಅವುಗಳು ಈ ಕೆಳಗಿನಂತಿವೆ. 1) ಅಬ್ಬೂರು — 17) ಹಿಟ್ನೆಹೆಬ್ಬಾಗಿಲು 2) ಅಡಗೂರು — 18) ಇಟ್ಟಗಳ್ಳಿ 3) ಐಚನಹಳ್ಳಿ — 19) ಕಲ್ಕೆರೆ 4) ಅಂಬಲಾರೆ — 20) ಕಂಬೀಪುರ 5) ಅಂಕನಹಳ್ಳಿ — 21) ಕುಂದನಹಳ್ಳಿ 6) ಅವರೇಕಾಯಿಗುಡ್ಡ — 22) ಮಲ್ಲಿನಾಥಪುರ 7) ಅವರೇಕಾಯಿಗುಡ್ಡ — 23) ಮಂಚದೇವನಹಳ್ಳಿ 8) ಆವರ್ತಿ — 24) ಮುಮ್ಮಡಿಕಾವಲು 9) ಬಾವಲಾಳು — 25) ಮುತ್ತುಗೂರು 10) ಭೀರತಮ್ಮನಹಳ್ಳಿ — 26) ಪಿ.ಬಸವನಹಳ್ಳಿ 11) ಬಿಲಗುಂದ — 27) ರಾಶಿಮಂಟಿಕಾವಲು 12) ಚರಪುರ — 28) ಸತ್ಯಾಗಾಲ 13) ಚನ್‌ಕಲ್‌ಕಾವಲು — 29) ಶ್ಯಾನುಭೋಗನಹಳ್ಳಿ 14) ದಿಂಡಗಾಡು — 30) ಸೂಳೆಕೋಟೆ 15) ಗಂಗನಕುಪ್ಪೆ — 31) ಸುಂಕದಕಟ್ಟೆ 16) ಗರಿಗುಡ್ಡಕಾವಲ್ — 32) ತಮ್ಮಡಹಳ್ಳಿ
ಆ)	ಆ ಪೈಕಿ ಪಂಚವಳ್ಳಿ, ಆನೆಚೌಕೂರು, ಐಲಾಪುರ, ಅಬ್ಬಳತ್ತಿ, ಕೋಗಿಲಾವಡಿ, ಬೂದ್ದಿತಿಟ್ಟು ಗ್ರಾಮಗಳಿಗೆ ಆನೆಗಳು ನುಗ್ಗಿ ರೈತರ ಬೆಳೆನಾಶ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ರೈತರ ಬೆಳೆ ನಷ್ಟಕ್ಕೆ ಸರ್ಕಾರದಿಂದ ಎಷ್ಟು ರೈತರಿಗೆ ಪರಿಹಾರ ನೀಡಲಾಗಿದೆ; (ಗ್ರಾಮವಾರು ರೈತರ ವಿವರ ನೀಡುವುದು)	ಬಂದಿದೆ. ಕಳೆದ 2 ವರ್ಷಗಳಲ್ಲಿ ಪಂಚವಳ್ಳಿ, ಆನೆಚೌಕೂರು, ಐಲಾಪುರ, ಅಬ್ಬಳತ್ತಿ, ಕೋಗಿಲಾವಡಿ, ಬೂದಿತಿಟ್ಟು ಗ್ರಾಮಗಳ ವ್ಯಾಪ್ತಿಯಲ್ಲಿ ಕಾಡಾನೆಗಳ ಹಾವಳಿಯಿಂದ ರೈತರ ಬೆಳೆನಾಶ ಪ್ರಕರಣಗಳ ಹಾಗೂ ಪಾವತಿಸಿದ ದಯಾತ್ಮಕ ಧನದ ಗ್ರಾಮವಾರು ರೈತರ ವಿವರವನ್ನು **ಅನುಬಂಧ-1** ರಲ್ಲಿ ಒದಗಿಸಿದೆ.

...2...

ಈ)	ಈ ಕ್ಷೇತ್ರದ ಅರಣ್ಯದಂಚಿನ ವ್ಯಾಪ್ತಿಯಲ್ಲಿ ವಾಸ ಮಾಡುವ ಗ್ರಾಮಗಳಲ್ಲಿ ಮಾನವ–ಆನೆ ಸಂಘರ್ಷ ನಡೆದಿದೆಯೇ; ಎಷ್ಟು ಪ್ರಕರಣಗಳು ದಾಖಲು ಆಗಿವೆ; (ವಿವರ ನೀಡುವುದು)	ಪಿರಿಯಾಪಟ್ಟಣ ಮತ ಕ್ಷೇತ್ರದ ಅರಣ್ಯದಂಚಿನ ಗ್ರಾಮಗಳ ವ್ಯಾಪ್ತಿಯಲ್ಲಿ ಪ್ರಸಕ್ತ ಸಾಲಿನಲ್ಲಿ ಯಾವುದೇ ಮಾನವ ಆನೆ ಸಂಘರ್ಷ ಪ್ರಕರಣ ದಾಖಲಾಗಿರುವುದಿಲ್ಲ.
ಉ)	ಸರ್ಕಾರ ಮಾನವ–ಆನೆ ಸಂಘರ್ಷವನ್ನು ತಡೆಯಲು 2019–20ನೇ ಸಾಲಿನ ಆಯ–ವ್ಯಯದಲ್ಲಿ ರೈಲು ಕಂಬಿ ತಡೆ ಗೋಡೆ ನಿರ್ಮಾಣ ಯೋಜನೆಯನ್ನು ಘೋಷಣೆ ಮಾಡಿದಂತೆ ಪಿರಿಯಾಪಟ್ಟಣ ಮತ ಕ್ಷೇತ್ರದಲ್ಲಿ ಈ ಯೋಜನೆ ಅನುಷ್ಠಾನಗೊಳ್ಳುವುದೇ; ಯಾವ ಕಾಲಮಿತಿಯಲ್ಲಿ ಯೋಜನೆ ಜಾರಿಗೊಳಿಸಲಾಗುವುದು; ಈ ಯೋಜನೆ ಅನುಷ್ಠಾನವಾದರೆ ಪಿರಿಯಾಪಟ್ಟಣ ಮತ ಕ್ಷೇತ್ರದಲ್ಲಿ ಎಷ್ಟು ಕಿ.ಮೀ ತಡೆಗೋಡೆ ನಿರ್ಮಾಣ ಮಾಡಲಾಗುವುದು: (ವಿವರ ನೀಡುವುದು).	2020–21ನೇ ಸಾಲಿಗೆ ಯಾವುದೇ ಹೊಸ ಕಾಮಗಾರಿಗೆ ಅನುದಾನ ಬಿಡುಗಡೆಯಾಗದೇ ಇರುವುದರಿಂದ ಪ್ರಸ್ತುತ ಭೌತಿಕ ಗುರಿಯನ್ನು ನಿಗಧಿಪಡಿಸಿರುವುದಿಲ್ಲ. ಪ್ರಸ್ತುತ, ಪಿರಿಯಾಪಟ್ಟಣ ವಲಯ ವ್ಯಾಪ್ತಿಯಲ್ಲಿ ರೈಲ್ವೆ ಬ್ಯಾರಿಕೇಡ್ ನಿರ್ಮಾಣದ ಕುರಿತು ಪ್ರಸ್ತಾಪ ಇರುವುದಿಲ್ಲ.

ಸಂಖ್ಯೆ: ಅಪಜೀ 10 ಎಫ್‌ಎಎಫ್ 2021

(ಅರವಿಂದ ಲಿಂಬಾವಳಿ)
ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು

897

ಅನುಬಂಧ-1

ಕ್ರಸಂ	ರೈತರ ವಿವರ	ಗ್ರಾಮ	ಹಾನಿ ಸ್ವರೂಪ	ಪರಿಹಾರ ಮೊತ್ತ
2019-20 ನೇ ಸಾಲಿನಲ್ಲಿ ದಾಖಲಾಗಿರುವ ಪ್ರಕರಣಗಳ ವಿವರ				
1	ಪಿ.ಎನ್.ಚಂದ್ರಪ್ಪ	ಪಂಚವಳ್ಳಿ	ಬೆಳೆಹಾನಿ	7620.00
2	ಮಾದೇಶ	ಪಂಚವಳ್ಳಿ	ಬೆಳೆಹಾನಿ	7620.00
3	ಶಂಕರ್‌ಗುರು	ಕೋಗಿಲವಾಡಿ	ಬೆಳೆಹಾನಿ	2640.00
4	ಸುಧಾ ಕೆ.ಹೆಚ್	ಕೋಗಿಲವಾಡಿ	ಬೆಳೆಹಾನಿ	3720.00
5	ನಟರಾಜ್	ಕೋಗಿಲವಾಡಿ	ಬೆಳೆಹಾನಿ	1980.00
6	ರಾಜಶೇಖರ	ಕೋಗಿಲವಾಡಿ	ಬೆಳೆಹಾನಿ	3720.00
7	ಜ್ಯೋತಿ	ಕೋಗಿಲವಾಡಿ	ಬೆಳೆಹಾನಿ	1320.00
8	ಸುಕನ್ಯ	ಕೋಗಿಲವಾಡಿ	ಬೆಳೆಹಾನಿ	2640.00
9	ಪಾಪೇಗೌಡ	ಕೋಗಿಲವಾಡಿ	ಬೆಳೆಹಾನಿ	5280.00
10	ಕಮಲಮ್ಮ	ಕೋಗಿಲವಾಡಿ	ಬೆಳೆಹಾನಿ	2640.00
11	ಶಿವಣ್ಣೇಗೌಡ	ಕೋಗಿಲವಾಡಿ	ಬೆಳೆಹಾನಿ	6600.00
12	ಮಾಚಯ್ಯ	ಕೋಗಿಲವಾಡಿ	ಬೆಳೆಹಾನಿ	7710.00
13	ಚಿಕ್ಕೇಗೌಡ	ಕೋಗಿಲವಾಡಿ	ಬೆಳೆಹಾನಿ	7710.00
14	ಕೆ.ಎ.ನಾಗರಾಜ್	ಕೋಗಿಲವಾಡಿ	ಬೆಳೆಹಾನಿ	2640.00
15	ಮಾದೇಗೌಡ	ಕೋಗಿಲವಾಡಿ	ಬೆಳೆಹಾನಿ	2640.00
16	ರಮೇಶನಾಯಕ	ಕೋಗಿಲವಾಡಿ	ಬೆಳೆಹಾನಿ	2640.00
17	ಕೆ.ಸಿ.ಪುಟ್ಟೇಗೌಡ	ಕೋಗಿಲವಾಡಿ	ಬೆಳೆಹಾನಿ	2640.00
18	ಸರೋಜಮ್ಮ	ಕೋಗಿಲವಾಡಿ	ಬೆಳೆಹಾನಿ	1200.00

2020-21 ನೇ ಸಾಲಿನಲ್ಲಿ ದಾಖಲಾಗಿರುವ ಪ್ರಕರಣ

1	ಸೋಮಪ್ಪ	ಪಂಚವಳ್ಳಿ	ಬೆಳೆಹಾನಿ	2480.00

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 907
ವಿಧಾನಸಭೆ ಸದಸ್ಯರ ಹೆಸರು : ಶ್ರೀ ಶ್ರೀನಿವಾಸ್ ಎಂ.
ಉತ್ತರಿಸುವ ದಿನಾಂಕ : 04-02-2021
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು.

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಮಂಡ್ಯ ವಿಧಾನಸಭಾ ಕ್ಷೇತ್ರದಲ್ಲಿ ಗ್ರಾಮ ಹಾಗೂ ಹೋಬಳಿ ಕೇಂದ್ರಗಳಲ್ಲಿ ಡಾ॥ಬಿ.ಆರ್ ಅಂಬೇಡ್ಕರ್ ಹಾಗೂ ಡಾ॥ಬಾಬು ಜಗಜೀವನರಾಮ್ ಭವನಗಳು ಅಪೂರ್ಣಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಬಂದಿದೆ.</td></tr>
<tr><td>ಆ)</td><td>ಬಂದಿದ್ದಲ್ಲಿ, ಈಗಾಗಲೇ ಅನೇಕ ಬಾರಿ ಮನವಿಗಳನ್ನು ಸಲ್ಲಿಸಿದ್ದರೂ ಯಾವುದೇ ಕ್ರಮಕ್ಕೈಗೊಳ್ಳದಿರಲು ಕಾರಣವೇನು;</td><td rowspan="3">ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಮಂಡ್ಯ ವಿಧಾನಸಭಾ ಕ್ಷೇತ್ರದ ಗ್ರಾಮ ಮತ್ತು ಹೋಬಳಿ ಕೇಂದ್ರಗಳಲ್ಲಿ ಮಂಜೂರಾದ ಡಾ॥ ಬಿ.ಆರ್ ಅಂಬೇಡ್ಕರ್ / ಡಾ॥ ಬಾಬು ಜಗಜೀವನರಾಮ್ ಭವನಗಳ ವಿವರಗಳನ್ನು ಈ ಕೆಳಕಂಡಂತೆ ವಿವರಿಸಿದೆ.
(ರೂ. ಲಕ್ಷಗಳಲ್ಲಿ)
<table><tr><th>ಮಂಜೂರಾದ ಭವನಗಳ ಸಂಖ್ಯೆ</th><th>ಮಂಜೂರಾತಿ ಮೊತ್ತ</th><th>ಬಿಡುಗಡೆ ಮೊತ್ತ</th><th>ಬಾಕಿ ಬಿಡುಗಡೆ ಮೊತ್ತ</th><th>ಪೂರ್ಣಗೊಂಡ ಭವನಗಳ ಸಂಖ್ಯೆ</th><th>ಅಪೂರ್ಣ ಗೊಂಡ ಭವನಗಳ ಸಂಖ್ಯೆ</th></tr><tr><td>13</td><td>221.00</td><td>179.00</td><td>42.00</td><td>3</td><td>10</td></tr></table>
ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಮುಂದುವರೆದು, ಅಪೂರ್ಣಗೊಂಡಿರುವ ಭವನಗಳಿಗೆ ಇಲಾಖೆಯ ವತಿಯಿಂದ ನಿಗಧಿಪಡಿಸಿರುವ ಮಂಜೂರಾತಿ ಮೊತ್ತಕ್ಕೆ ಅನುಗುಣವಾಗಿ ಭವನಗಳ ಭೌತಿಕ ಮತ್ತು ಆರ್ಥಿಕ ಪ್ರಗತಿ ವರದಿಯನ್ನು ಆಧರಿಸಿ ಬಾಕಿ ಅನುದಾನ ಬಿಡುಗಡೆ ಮಾಡಲು ಕ್ರಮವಹಿಸಲಾಗುತ್ತಿದೆ.

ತದನಂತರ, ಸರ್ಕಾರದ ಸುತ್ತೋಲೆ ದಿನಾಂಕ:09-06-2020ರಲ್ಲಿ ಡಾ॥ ಬಿ.ಆರ್ ಅಂಬೇಡ್ಕರ್ / ಡಾ॥ ಬಾಬು ಜಗಜೀವನರಾಂ ಭವನ ಹಾಗೂ ಇತರೆ ಸಮುದಾಯ ಭವನಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಮಾರ್ಗಸೂಚಿಯನ್ವಯ ಅನುದಾನವನ್ನು ಬಿಡುಗಡೆಗೊಳಿಸಿದ ನಂತರ, ಬಿಡುಗಡೆಗೊಳಿಸಿದ ಅನುದಾನವನ್ನು ಹೊರತುಪಡಿಸಿ, ಹೆಚ್ಚುವರಿಯಾಗಿ ಅನುದಾನ ಕೋರುವುದಾಗಲೀ ಅಥವಾ ಪ್ರಸ್ತಾವನೆ ಸಲ್ಲಿಸುವುದಾಗಲೀ ಮಾಡುವಂತಿಲ್ಲ. ಒಂದು ವೇಳೆ ಭವನಗಳ ನಿರ್ಮಾಣಕ್ಕೆ ಹೆಚ್ಚುವರಿ ಬೇಕಾಗುವ ವೆಚ್ಚವನ್ನು ಸ್ಥಳೀಯ ಮೂಲಗಳಿಂದ ಭರಿಸಿ ಕಾಮಗಾರಿಯನ್ನು ಪೂರ್ಣಗೊಳಿಸಲು ಸೂಕ್ತ ಕ್ರಮವಹಿಸಲು ನಿರ್ದೇಶನ ನೀಡಲಾಗಿರುತ್ತದೆ.</td></tr>
<tr><td>ಇ)</td><td>ಈ ಅಪೂರ್ಣಗೊಂಡಿರುವ ಭವನಗಳು ಪೂರ್ಣಗೊಳ್ಳುವುದು ಯಾವಾಗ;</td></tr>
<tr><td>ಈ)</td><td>ಅಪೂರ್ಣಗೊಂಡಿರುವ ಭವನಗಳ ಸಂಪೂರ್ಣ ಮಾಹಿತಿ ನೀಡುವುದು?</td></tr>
</table>

ಸಕಇ 42 ಪಕವಿ 2021

(ಬಿ. ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು.

907

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಶ್ರೀನಿವಾಸ್ ಎಂ (ಮಂಡ್ಯ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:-907ಕ್ಕೆ ಅನುಬಂಧ

ರೂ ಲಕ್ಷಗಳಲ್ಲಿ

ಕ್ರ ಸಂ	ಭವನದ ವಿವರ	ಗ್ರಾಮ	ಮಂಜೂರಾತಿ ಮೊತ್ತ	ಬಿಡುಗಡೆ ಮೊತ್ತ	ಬಾಕಿ ಬಿಡುಗಡೆ ಮೊತ್ತ	ನಿರ್ಮಾಣ ಏಜೆನ್ಸಿ	ಭವನದ ಕಾಮಗಾರಿಯ ಪ್ರಗತಿಯ ಹಂತ	ಷರಾ
1	2	3	4	5	6	7	8	9
1	ಅಂಬೇಡ್ಕರ್ ಭವನ	ಕೆರೆಗೋಡು ಹೋಬಳಿ ಕೇಂದ್ರ.	97.00	97.00	0.00	ನಿರ್ಮಿತಿ ಕೇಂದ್ರ	ಮೊದಲನೇ ಮಹಡಿ ಛಾವಣಿ ಪೂರ್ಣಗೊಂಡಿರುತ್ತದೆ.	ಮಾನ್ಯ ಶಾಸಕರು, ಮಂಡ್ಯ ವಿಧಾನಸಭಾ ಕ್ಷೇತ್ರ ರವರು ಸದರಿ ಹೋಬಳಿ / ಗ್ರಾಮಗಳಲ್ಲಿನ ಡಾ॥ ಬಿ.ಆರ್ ಅಂಬೇಡ್ಕರ್ / ಡಾ॥ ಬಾಬು ಜಗಜೀವನರಾಮ್ ಭವನಗಳ ಮುಂದುವರೆದ ಕಾಮಗಾರಿಗಳಿಗೆ ಹೆಚ್ಚುವರಿ ಅನುದಾನ ಬಿಡುಗಡೆ ಮಾಡಲು ಕೋರಿರುತ್ತಾರೆ. ಇಲಾಖೆಯ ವತಿಯಿಂದ ಸದರಿ ಸ್ಥಳಗಳಲ್ಲಿ ಭವನಗಳ ನಿರ್ಮಾಣಕ್ಕೆ ಮಂಜೂರಾತಿ ನೀಡಲಾದ ಮೊತ್ತವನ್ನು ಹೊರತುಪಡಿಸಿ, ಹೆಚ್ಚುವರಿ ಅನುದಾನವನ್ನು ಸರ್ಕಾರದ ಸುತ್ತೋಲೆಯಂತೆ ಸ್ಥಳೀಯ ಮೂಲಗಳಿಂದ ಭರಿಸಲು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿರುತ್ತದೆ.
2	ಜಗಜೀವನರಾಮ್ ಭವನ	ಮಾರಗೌಡನಹಳ್ಳಿ	10.00	5.00	5.00	ಕೆ.ಆರ್.ಐ.ಡಿ.ಎಲ್	ತಳಪಾಯ ಕೆಲಸ ಪ್ರಗತಿಯಲ್ಲಿದೆ	
3	ಅಂಬೇಡ್ಕರ್ ಭವನ	ಬಸರಾಳು	10.00	5.00	5.00	ಕೆ.ಆರ್.ಐ.ಡಿ.ಎಲ್	ಮುಂದುವರೆದ ಕಾಮಗಾರಿಗೆ ಅಂದಾಜುಪಟ್ಟಿಗೆ ಕ್ರಮವಹಿಸಲಾಗಿದೆ.	
4	ಅಂಬೇಡ್ಕರ್ ಭವನ	ಬೇಬಿ	10.00	10.00	0.00	ಕೆ.ಆರ್.ಐ.ಡಿ.ಎಲ್	ಇಟ್ಟಿಗೆ ಗೋಡೆ ರೂಫ್ ಲೆವೆಲ್‌ವರೆಗೆ ಪ್ರಗತಿಯಲ್ಲಿದೆ	
5	ಅಂಬೇಡ್ಕರ್ ಭವನ	ರಾಯಶೆಟ್ಟಿಪುರ	10.00	10.00	0.00	ಪಿ.ಆರ.ಇ.ಡಿ	ಪ್ರಗತಿಯಲ್ಲಿದೆ	
6	ಅಂಬೇಡ್ಕರ್ ಭವನ	ನಲ್ಲಹಳ್ಳಿ	10.00	5.00	5.00	ಕೆ.ಆರ್.ಐ.ಡಿ.ಎಲ್	ಪ್ರಾರಂಭಿಸಬೇಕಿರುತ್ತದೆ	ಮಾನ್ಯ ಶಾಸಕರ ನಿಧಿಯಿಂದ ರೂ.15.00 ಲಕ್ಷಗಳು ಹಾಗೂ ಇಲಾಖೆ ವತಿಯಿಂದ ರೂ.10.00 ಲಕ್ಷಗಳನ್ನು ಭರಿಸಿ ಒಟ್ಟಾರೆ ರೂ.25.00 ಲಕ್ಷಗಳ ವೆಚ್ಚದಲ್ಲಿ ಭವನ ನಿರ್ಮಾಣ ಮಾಡಲು ಉದ್ದೇಶಿಸಿದ್ದು. ನಿರ್ಮಾಣ ಏಜೆನ್ಸಿಯಿಂದ ಅಂದಾಜುಪಟ್ಟಿ ಪಡೆಯಲು ಕ್ರಮವಹಿಸಲಾಗಿರುತ್ತದೆ.
7	ಅಂಬೇಡ್ಕರ್ ಭವನ	ದೊಡ್ಡಕೊತ್ತಗೆರೆ	10.00	10.00	0.00	ಕೆ.ಆರ್.ಐ.ಡಿ.ಎಲ್	ಲಿಂಟಲ್ ಹಂತದವರೆಗೆ ಪ್ರಗತಿಯಲ್ಲಿದೆ.	-
8	ಅಂಬೇಡ್ಕರ್ ಭವನ	ಚಾಕನಹಳ್ಳಿ	10.00	3.00	7.00	ಕೆ.ಆರ್.ಐ.ಡಿ.ಎಲ್	ಬೇಸ್‌ಮೆಂಟ್ ಮುಗಿದಿದೆ.	

ಕ್ರ ಸಂ	ಭವನದ ವಿವರ	ಗ್ರಾಮ	ಮಂಜೂರಾತಿ ಮೊತ್ತ	ಬಿಡುಗಡೆ ಮೊತ್ತ	ಬಾಕಿ ಬಿಡುಗಡೆ ಮೊತ್ತ	ನಿರ್ಮಾಣ ಏಜೆನ್ಸಿ	ಭವನದ ಕಾಮಗಾರಿಯ ಪ್ರಗತಿಯ ಹಂತ	ಷರಾ
1	2	3	4	5	6	7	8	9
9	ಅಂಬೇಡ್ಕರ್ ಭವನ	ಹನಕೆರೆ	12.00	3.00	9.00	ಕೆ.ಆರ್.ಐ.ಡಿ.ಎಲ್	ಪ್ರಗತಿಯಲ್ಲಿದೆ	
10	ಅಂಬೇಡ್ಕರ್ ಭವನ	ಹುನುಗನಹಳ್ಳಿ	12.00	3.00	9.00	ಕೆ.ಆರ್.ಐ.ಡಿ.ಎಲ್	ಪ್ರಗತಿಯಲ್ಲಿದೆ	
ಒಟ್ಟು			191.00	151.00	40.00	-	-	-

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	911
ಮಾನ್ಯ ಸದಸ್ಯರ ಹೆಸರು	ಶ್ರೀ ಮುನಿಯಪ್ಪ ವಿ (ಶಿಡ್ಲಘಟ್ಟ)
ಉತ್ತರಿಸಬೇಕಾದ ದಿನಾಂಕ	04-02-2021
ಉತ್ತರಿಸುವ ಸಚಿವರು	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಶಿಡ್ಲಘಟ್ಟ ವಿಧಾನ ಸಭಾ ಕ್ಷೇತ್ರದ ಸಾರ್ವಜನಿಕ ಆಸ್ಪತ್ರೆ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರು ಮತ್ತು ಸಿಬ್ಬಂದಿಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ	ಹಾಗಿದ್ದಲ್ಲಿ, ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;	ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ತೆಗೆದುಕೊಂಡ ಕ್ರಮದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.
ಇ	ಶಿಡ್ಲಘಟ್ಟ ವಿಧಾನಸಭಾ ಕ್ಷೇತ್ರದ ಸಾರ್ವಜನಿಕ ಆಸ್ಪತ್ರೆ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಮೂಲಭೂತ ಸೌಕರ್ಯಗಳು ಇಲ್ಲದೇ ರೋಗಿಗಳಿಗೆ ತೊಂದರೆಯಾಗುತ್ತಿರುವುದರಿಂದ ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಈ	ಹಾಗಿದ್ದಲ್ಲಿ ಸಾರ್ವಜನಿಕ ಆಸ್ಪತ್ರೆ ಮತ್ತು ಕ್ಷೇತ್ರದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ತೆಗೆದುಕೊಂಡ ಕ್ರಮಗಳೇನು; (ವಿವರ ಒದಗಿಸುವುದು)	ಸಾರ್ವಜನಿಕ ಆಸ್ಪತ್ರೆ ಮತ್ತು ಕ್ಷೇತ್ರದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಮೂಲಭೂತ ಸೌಕರ್ಯಗಳ ಬಗ್ಗೆ ಮಾನ್ಯ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಬೆಂಗಳೂರು, ಇವರ ಸುತ್ತೋಲೆ ಸಂಖ್ಯೆ: ಹೆಚ್‌ಬಿಡಿ (2)175/2014-15, ದಿ:16-11-2015 ರಲ್ಲಿ ಮುಕ್ತ ನಿಧಿ ಹಾಗೂ ಕಟ್ಟಡದ ನಿರ್ವಹಣೆಗೆ ವಾರ್ಷಿಕವಾಗಿ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.
ಉ	ಶಿಡ್ಲಘಟ್ಟ ವಿಧಾನ ಸಭಾ ಕ್ಷೇತ್ರದಲ್ಲಿ ಮಾನಸಿಕ ರೋಗಿಗಳಿಗೆ ಮಾತ್ರೆ ಮತ್ತು ಔಷಧಿಗಳು ಕಡಿಮೆ ಸರಬರಾಜು ಆಗುತ್ತಿರುವುದರಿಂದ, ರೋಗಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ
ಊ	ಹಾಗಿದ್ದಲ್ಲಿ ಮಾನಸಿಕ ರೋಗಿಗಳಿಗೆ ಮಾತ್ರೆ ಮತ್ತು ಔಷಧಿಗಳು ಹೆಚ್ಚಿನ ಪ್ರಮಾಣದಲ್ಲಿ ಒದಗಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?	ಆರೋಗ್ಯ ಕೇಂದ್ರಗಳಿಂದ ಪಡೆದ ಬೇಡಿಕೆ ಪಟ್ಟಿಯ ಅನುಸಾರ ಈಗಾಗಲೇ ಎರಡು ಬಾರಿ ಟೆಂಡರ್ ಆಹ್ವಾನಿಸಲಾಗಿದೆ. ಯಾವುದೇ ಬಿಡ್‌ದಾರರು ಅರ್ಹರಾಗಿರುವುದಿಲ್ಲ. ಆದ ಕಾರಣ ಮರು ಟೆಂಡರ್ ಕರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆಯು ಮುಗಿದಿದ್ದು, ಅರ್ಹ ಬಿಡ್‌ದಾರರಿಗೆ ಖರೀದಿ ಆದೇಶ ನೀಡುವ ಹಂತದಲ್ಲಿರುತ್ತದೆ

ಆಕುಕ 07 ಹೆಚ್‌ಎಸ್‌ಡಿ 2021

(ಡಾ|| ಕೆ ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

911

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:911ಕ್ಕೆ ಅನುಬಂಧ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯದ ವಿಶೇಷ ನೇಮಕಾತಿ ವಿಭಾಗದಿಂದ ಇಲಾಖೆಯಲ್ಲಿ ಖಾಲಿ ಇರುವ ವೈದ್ಯರು ಹಾಗೂ ಸಿಬ್ಬಂದಿಗಳನ್ನು ಭರ್ತಿ ಮಾಡಲು ಈ ಕೆಳಕಂಡಂತೆ ಕ್ರಮ ವಹಿಸಲಾಗುತ್ತಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ತಜ್ಞರು/ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ/ದಂತ ಆರೋಗ್ಯಾಧಿಕಾರಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಪ್ರಕ್ರಿಯೆ ಜಾರಿಯಲ್ಲಿದ್ದು, ವಿಶೇಷ ನೇಮಕಾತಿ ಸಮಿತಿಯಿಂದ ನೇರ ನೇಮಕಾತಿ ಮುಖಾಂತರ 1460 ತಜ್ಞ ವೈದ್ಯರುಗಳ ಹುದ್ದೆಗಳನ್ನು(636 ಬ್ಯಾಕ್‌ಲಾಗ್ ಒಳಗೊಂಡಂತೆ), 1265 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳನ್ನು(19 ಬ್ಯಾಕ್‌ಲಾಗ್ ಹುದ್ದೆಗಳು ಸೇರಿದಂತೆ) ಹಾಗೂ 90 ದಂತ ಆರೋಗ್ಯಾಧಿಕಾರಿಗಳ ಹುದ್ದೆಗಳನ್ನು (02 ಬ್ಯಾಕ್‌ಲಾಗ್ ಹುದ್ದೆಗಳು ಸೇರಿದಂತೆ) ಭರ್ತಿ ಮಾಡಲು ಈಗಾಗಲೇ ಅಧಿಸೂಚನೆ ಸಂಖ್ಯೆ:ಎಸ್‌ಆರ್‌ಸಿ/68/2019-20, ದಿ:10.09.20 ನ್ನು ಹೊರಡಿಸಿ, ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಅಹ್ವಾನಿಸಲಾಗಿದ್ದು, ದಾಖಲೆಗಳ ಪರಿಶೀಲನೆ ಮುಗಿದಿರುತ್ತದೆ. ತಾತ್ಕಾಲಿಕ ಪಟ್ಟಿಯನ್ನು ಪ್ರಚುರಪಡಿಸುವ ಹಂತದಲ್ಲಿದೆ.

ಕಿರಿಯ ಆರೋಗ್ಯ ಸಹಾಯಕರು:

ಆಕುಕ ಇಲಾಖೆಯಲ್ಲಿ ಒಟ್ಟು 9850 ಕಿರಿಯ ಆರೋಗ್ಯ ಸಹಾಯಕ ಹುದ್ದೆಗಳು ಮಂಜೂರಾಗಿದ್ದು, ಖಾಲಿಯಿದ್ದ ಹುದ್ದೆಗಳ ಪೈಕಿ 2124 ಹುದ್ದೆಗಳನ್ನು 2018ನೇ ಸಾಲಿನಲ್ಲಿ ವಿಶೇಷ ನೇಮಕಾತಿ ನಿಯಮಗಳಡಿಯಲ್ಲಿ ಭರ್ತಿ ಮಾಡಲಾಗಿದ್ದು, ಒಟ್ಟಾರೆ 7123 ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಪ್ರಸ್ತುತ 2727 ಹುದ್ದೆಗಳು ಖಾಲಿಯಿರುತ್ತವೆ.

ಶುಶ್ರೂಷಕರು:

ಆಕುಕ ಇಲಾಖೆಯಲ್ಲಿ ಒಟ್ಟು 8471 ಶುಶ್ರೂಷಕರ ಹುದ್ದೆಗಳು ಮಂಜೂರಾಗಿದ್ದು. ಖಾಲಿಯಿದ್ದ 4551 ಹುದ್ದೆಗಳ ಪೈಕಿ ಮೊದಲನೇ ಹಂತದಲ್ಲಿ 981 ಹುದ್ದೆಗಳನ್ನು ಭರ್ತಿ ಮಾಡಲಾಗಿರುತ್ತದೆ. ಜೊತೆಗೆ ಸರ್ಕಾರದ ಅಧಿಸೂಚನೆ ಸಂಖ್ಯೆ ಹೆಚ್‌ಎಫ್‌ಡಬ್ಲ್ಯೂ 550 ಹೆಚ್‌ಎಸ್‌ಹೆಚ್ 2016 ದಿನಾಂಕ 27.05.2017ರಲ್ಲಿ ಶುಶ್ರೂಷಕರು (ಡಿಪ್ಲಮೋ ನರ್ಸಿಂಗ್)-889 ಹುದ್ದೆಗಳಿಗೆ ರಾಜ್ಯವಲಯದಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆ ಶುಶ್ರೂಷಕರುಗಳಿಗೆ ಕೃಪಾಂಕ ಮತ್ತು ವಯೋಮಿತಿ ಸಡಿಲಿಕೆ ಸೌಲಭ್ಯಗಳನ್ನು ನೀಡಿ ಸರ್ಕಾರವು ವಿಶೇಷ ನೇಮಕಾತಿ ನಿಯಮಗಳನ್ನು ರಚಿಸಿ ದಿನಾಂಕ:16.07.2020ರಲ್ಲಿ ಅಂತಿಮ ಆಯ್ಕೆಪಟ್ಟಿಯನ್ನು ಪ್ರಚುರ ಪಡಿಸಲಾಗಿದ್ದು, ಅಂತಿಮ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಪೈಕಿ ನೈಜತೆ ವರದಿಗಳು ಸ್ವೀಕೃತವಾಗಿರುವ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶವನ್ನು ನೀಡಲಾಗಿರುತ್ತದೆ. ಪ್ರಸ್ತುತ 5790 ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, 2681 ಹುದ್ದೆಗಳು ಖಾಲಿಯಿರುತ್ತವೆ. ಇದರ ಜೊತೆಗೆ 5778 ಶುಶ್ರೂಷಕರನ್ನು ಎನ್.ಹೆಚ್.ಎಂ. ಮುಖಾಂತರ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲಾಗಿದೆ.

ಫಾರ್ಮಾಸಿಸ್ಟ್, ಕ್ಷ-ಕಿರಣ ತಂತ್ರಜ್ಞರು ಹಾಗೂ ಕಿರಿಯ ಪ್ರಯೋಗ ಶಾಲಾ ತಂತ್ರಜ್ಞರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ:

ಆಕುಕ ಇಲಾಖೆಯಲ್ಲಿ 2932 ಫಾರ್ಮಾಸಿಸ್ಟ್ ಹುದ್ದೆಗಳು ಮಂಜೂರಾಗಿದ್ದು, 1974 ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಹಾಗೂ 2411 ಕಿರಿಯ ಪ್ರಯೋಗ ಶಾಲಾ ತಂತ್ರಜ್ಞರ ಹುದ್ದೆಗಳು ಮಂಜೂರಾಗಿದ್ದು, 1821

ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಸರ್ಕಾರದ ಪತ್ರ ಸಂಖ್ಯೆ: ಆಕುಕ 709 ಹೆಚ್‌ಎಸ್‌ಎಂ 2017, ದಿನಾಂಕ:03.08.2019ರಲ್ಲಿ ಇಲಾಖೆಯಲ್ಲಿ ಪ್ರಸ್ತುತ ಖಾಲಿ ಇರುವ ಫಾರ್ಮಾಸಿಸ್ಟ್, ಕ್ಷ-ಕಿರಣ ತಂತ್ರಜ್ಞ ಹಾಗೂ ಕಿರಿಯ ಪ್ರಯೋಗ ಶಾಲಾ ತಂತ್ರಜ್ಞರ ಹುದ್ದೆಗಳನ್ನು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ: ಆಇ 843 ವೆಚ್ಚ-5/2018, ದಿನಾಂಕ:26.07.2019ರಲ್ಲಿ ನೀಡಿರುವ ಸಹಮತಿ ಪ್ರಕಾರ ಈ ಕೆಳಕಂಡಂತೆ ಭರ್ತಿ ಮಾಡಲು ಅನುಮೋದನೆಯನ್ನು ನೀಡಿರುತ್ತಾರೆ.

Sl. No.	Designation	No. of Posts				
		2019-20		2020-21		Total
		Regular	Outsource	Regular	Outsource	
01.	Jr. Lab Technician	150	150	–	–	300
02.	X-Ray Technician	08	–	–	–	08
03.	Pharmacist	200	200	200	200	800

ಸರ್ಕಾರದ ಆದೇಶದ ಪ್ರಕಾರ ಹೊರ ಗುತ್ತಿಗೆ ಆಧಾರದ ಮೇಲೆ 150 ಕಿರಿಯ ವೈದ್ಯಕೀಯ ಪ್ರಯೋಗಶಾಲಾ ತಂತ್ರಜ್ಞರು ಮತ್ತು 400 ಫಾರ್ಮಾಸಿಸ್ಟ್ ಹುದ್ದೆಗಳನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿ ಭರ್ತಿ ಮಾಡಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಸೂಚಿಸಲಾಗಿರುತ್ತದೆ. ಅಲ್ಲದೇ ಎನ್.ಹೆಚ್.ಎಂ. ಮುಖಾಂತರ 620 ಫಾರ್ಮಾಸಿಸ್ಟ್ ಹುದ್ದೆಗಳನ್ನು ಹಾಗೂ 1621 ಕಿರಿಯ ವೈದ್ಯಕೀಯ ಪ್ರಯೋಗಶಾಲಾ ತಂತ್ರಜ್ಞರನ್ನು ಗುತ್ತಿಗೆ ಆಧಾರದ ಮೇರೆಗೆ ನೇಮಕಾತಿ ಮಾಡಿಕೊಳ್ಳಲಾಗಿದೆ.

ಮುಂದುವರೆದು, ಇಲಾಖೆಯಲ್ಲಿ ಖಾಲಿ ಇರುವ 150 ಕಿರಿಯ ವೈದ್ಯಕೀಯ ಪ್ರಯೋಗ ಶಾಲಾ ತಂತ್ರಜ್ಞರು, 08 ಕ್ಷ-ಕಿರಣ ತಂತ್ರಜ್ಞರು ಹಾಗೂ 400 ಫಾರ್ಮಾಸಿಸ್ಟ್ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ಕರ್ನಾಟಕ ಸಿವಿಲ್ ಸೇವೆಗಳ (ಸ್ಪರ್ಧಾತ್ಮಕ ಪರೀಕ್ಷೆಗಳು ಹಾಗೂ ಆಯ್ಕೆ ಮೂಲಕ ನೇಮಕಾತಿ (ಸಾಮಾನ್ಯ) ನಿಯಮಗಳು 2020ನ್ನು ರಚಿಸಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಿಂದ ಕ್ರಮ ಕೈಗೊಳ್ಳಲಾಗುತ್ತಿದ್ದು, ಸದರಿ ನಿಯಮಗಳು ಜಾರಿಗೆ ಬಂದ ನಂತರ ಆ ನಿಯಮಗಳನ್ವಯ ತುಂಬಲು ಪರಿಶೀಲಿಸಲಾಗುತ್ತಿದೆ.

<u>ಹೈದ್ರಾಬಾದ್-ಕರ್ನಾಟಕ ಪ್ರದೇಶದಲ್ಲಿ ಖಾಲಿ ಇರುವ ಅರೆ ವೈದ್ಯಕೀಯ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.</u>

ಹೈದ್ರಾಬಾದ್-ಕರ್ನಾಟಕ ಪ್ರದೇಶದಲ್ಲಿ ಖಾಲಿ ಇರುವ 293 ಅರೆ ವೈದ್ಯಕೀಯ ಹುದ್ದೆಗಳನ್ನು (ಗ್ರೂಪ್ 'ಬಿ' ವೃಂದದ 10 ಹುದ್ದೆಗಳು ಮತ್ತು ಗ್ರೂಪ್ 'ಸಿ' ವೃಂದದ 283 ಹುದ್ದೆಗಳು) ಭರ್ತಿ ಮಾಡುವ ಸಂಬಂಧ ಕರ್ನಾಟಕ ಸಿವಿಲ್ ಸೇವೆಗಳ (ಸ್ಪರ್ಧಾತ್ಮಕ ಪರೀಕ್ಷೆಗಳು ಹಾಗೂ ಆಯ್ಕೆ ಮೂಲಕ ನೇಮಕಾತಿ (ಸಾಮಾನ್ಯ) ನಿಯಮಗಳು 2020ನ್ನು ರಚಿಸಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಿಂದ ಕ್ರಮ ಕೈಗೊಳ್ಳಲಾಗುತ್ತಿದ್ದು, ಸದರಿ ನಿಯಮಗಳು ಜಾರಿಗೆ ಬಂದ ನಂತರ ಆ ನಿಯಮಗಳನ್ವಯ ತುಂಬಲು ಪರಿಶೀಲಿಸಲಾಗುತ್ತದೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 922

ಮಾನ್ಯ ಸದಸ್ಯರ ಹೆಸರು : ಶ್ರೀ ಬಂಡೆಪ್ಪ ಖಾಶೆಂಪುರ್ (ಬೀದರ್ ದಕ್ಷಿಣ)

ಉತ್ತರಿಸಬೇಕಾದ ದಿನಾಂಕ : 04.02.2021

ಉತ್ತರಿಸುವ ಸಚಿವರು : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಇದುವರೆವಿಗೂ ಆಯುಷ್ಮಾನ್ ಕರ್ನಾಟಕ ಯೋಜನೆಯಡಿ ಚಿಕಿತ್ಸೆ ಪಡೆದವರ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ಒದಗಿಸುವುದು)	ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಇದುವರೆವಿಗೂ (ದಿ:31.01.2021ರವರೆಗೆ) ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಯೋಜನೆಯಡಿ ಚಿಕಿತ್ಸೆ ಪಡೆದವರ ಸಂಖ್ಯೆ:12,92,869 ಆಗಿರುತ್ತದೆ. (ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-1**ರಲ್ಲಿ ಲಗತ್ತಿಸಿದೆ)
ಆ	ಕಳೆದ ಎರಡು ವರ್ಷಗಳಲ್ಲಿ ಆಯುಷ್ಮಾನ್ ಕರ್ನಾಟಕ ಯೋಜನೆಯಡಿ ಚಿಕಿತ್ಸೆಗಾಗಿ ಸರ್ಕಾರ ಖರ್ಚು ಮಾಡಿದ ಮೊತ್ತವೆಷ್ಟು; (ಜಿಲ್ಲಾವಾರು ಮಾಹಿತಿ ಒದಗಿಸುವುದು)	ಕಳೆದ ಎರಡು ವರ್ಷಗಳಲ್ಲಿ ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಯೋಜನೆಯಡಿ ಚಿಕಿತ್ಸೆಗಾಗಿ ಸರ್ಕಾರ ಖರ್ಚು ಮಾಡಿದ ಮೊತ್ತ: ರೂ.1,40,110.00ಲಕ್ಷಗಳು ಆಗಿರುತ್ತದೆ. (ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-2**ರಲ್ಲಿ ಲಗತ್ತಿಸಿದೆ)
ಇ	ಈ ಯೋಜನೆಯಡಿ ಖರ್ಚು ಮಾಡಲಾದ ಮೊತ್ತದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಪಾಲೆಷ್ಟು?	ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಯೋಜನೆಯನ್ನು 30.10.2018ರಿಂದ ಅನುಷ್ಠಾನಗೊಳಿಸಿದ್ದು, ಅದರಂತೆ, ದಿನಾಂಕ:30.10.2018 ರ MOU ರನ್ವಯ ಒಟ್ಟು 115 ಲಕ್ಷ ಬಿಪಿಎಲ್ ಕುಟುಂಬಗಳಿದ್ದು, Socio-Economic Caste Census-2011 (SECC) Data ದನ್ವಯ 62.09 ಲಕ್ಷ ಕುಟುಂಬಗಳು ಆಯುಷ್ಮಾನ್ ಭಾರತ್ -ಆರೋಗ್ಯ ಕರ್ನಾಟಕ ಯೋಜನೆಯ ಚಿಕಿತ್ಸಾ ಸೌಲಭ್ಯ ಪಡೆಯಬಹುದಾಗಿದ್ದು, ಅದರಂತೆ, ವಿವರ ಈ ಕೆಳಕಂಡಂತಿದೆ: ಈ ಯೋಜನೆಯಡಿ ಖರ್ಚು ಮಾಡಲಾದ ಮೊತ್ತದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಪಾಲು ಈ ಕೆಳಕಂಡಂತಿದೆ: **Number of 11500000 BPL Beneficiaries entitled for the scheme** Decription / Count / % on 115 lakhs Benef. Families GoI (SECC & RSBY) / 6,209,073 / 54% GoK (BPL) / 5,290,927 / 46% **Total / 11,500,000 / 100%** ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಯೋಜನೆಯಲ್ಲಿ ಒಟ್ಟು ಕ್ಲೈಮ್ಸ್‌ಗಳ ವೆಚ್ಚದಲ್ಲಿ 54% ನ 60% ಮೊತ್ತವನ್ನು ಕೇಂದ್ರ ಸರ್ಕಾರದ ಅನುದಾನದಿಂದ ಹಾಗೂ ಉಳಿಕೆ SECC Data ದ 54% ನ 40% ಹಾಗೂ GoK ಬಿಪಿಎಲ್ ಕುಟುಂಬಗಳ 46% ನ ಒಟ್ಟು ಮೊತ್ತವನ್ನು ರಾಜ್ಯ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನದಿಂದ ಪಾವತಿಸಲಾಗುತ್ತಿರುತ್ತದೆ.

Table in answer ಇ:

Number of 11500000 BPL Beneficiaries entitled for the scheme		
Decription	Count	% on 115 lakhs Benef. Families
GoI (SECC & RSBY)	6,209,073	54%
GoK (BPL)	5,290,927	46%
Total	**11,500,000**	**100%**

ಆಕುಕ 24 ಎಸ್‌ಬಿವಿ 2021

(ಡಾ॥ ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ANNEXURE - 1

AB ArK Scheme_District wise Preauth approved summary for the period from 30th October 2018 to 31st January 2021

Sl No.	District	Preauth Approved Cases		
		Non Covid Cases	Covid Cases	Total Cases
1	Bagalkote	32,312	1,026	33,338
2	Bangalore - Rural	14,476	5,363	19,839
3	Bangalore - Urban	52,007	51,622	1,03,629
4	Belagavi	68,023	2,214	70,237
5	Bellary	52,843	5,933	58,776
6	Bidar	27,071	1,423	28,494
7	Chamarajanagara	33,792	2,971	36,763
8	Chickkaballapur	42,926	2,570	45,496
9	Chickmagalur	30,518	1,399	31,917
10	Chitradurga	48,567	2,346	50,913
11	Dakshina Kannada	30,427	2,562	32,989
12	Davanagere	37,321	2,098	39,419
13	Dharwad	30,933	2,179	33,112
14	Gadag	22,071	1,392	23,463
15	Hassan	58,655	3,668	62,323
16	Haveri	43,494	2,371	45,865
17	Kalburgi	46,887	2,042	48,929
18	Kodagu	15,139	1,426	16,565
19	Kolar	35,358	3,842	39,200
20	Koppal	33,564	1,413	34,977
21	Mandya	58,354	4,715	63,069
22	Mysore	58,171	4,091	62,262
23	Raichur	33,371	2,187	35,558
24	Ramanagara	27,661	3,699	31,360
25	Shimoga	44,935	4,388	49,323
26	Tumkur	61,401	4,857	66,258
27	Udupi	20,687	3,007	23,694
28	Uttara Kannada	34,731	2,497	37,228
29	Vijayapura	38,812	1,217	40,029
30	Yadgir	21,043	888	21,931
31	Other State	-	5,913	5,913
Grand Total		**11,55,550**	**1,37,319**	**12,92,869**

ANNEXURE - 2

AB ArK Scheme_District wise Paid summary for the FY 2019-20 & 2020-21* (as on 31st January 2021)

SI No.	District	Paid Cases					
		Non Covid Cases		Covid Cases		Total Cases	
		Cases	Amount (in lakhs)	Cases	Amount (in lakhs)	Cases	Amount (in lakhs)
1	Bagalkote	19,845	3,844.51	599	106.35	20,444	3,950.86
2	Bangalore - Rural	8,194	1,540.55	3,808	1,381.00	12,002	2,921.55
3	Bangalore - Urban	31,627	6,491.99	38,252	15,210.01	69,879	21,701.99
4	Belagavi	40,130	8,204.93	1,125	225.11	41,255	8,430.04
5	Bellary	30,752	3,884.76	3,471	613.17	34,223	4,497.93
6	Bidar	16,651	2,332.02	1,056	169.02	17,707	2,501.03
7	Chamarajanagara	21,437	3,166.71	875	167.45	22,312	3,334.17
8	Chickkaballapur	27,088	2,819.69	1,379	308.65	28,467	3,128.34
9	Chickmagalur	20,097	3,229.71	603	154.54	20,700	3,384.25
10	Chitradurga	23,850	3,382.58	1,357	273.07	25,207	3,655.64
11	Dakshina Kannada	17,884	4,187.51	1,646	637.89	19,530	4,825.40
12	Davanagere	19,929	3,780.17	917	372.51	20,846	4,152.69
13	Dharwad	18,742	2,929.81	1,422	338.07	20,164	3,267.88
14	Gadag	13,404	2,312.47	807	142.07	14,211	2,454.54
15	Hassan	37,273	5,104.38	2,700	538.39	39,973	5,642.77
16	Haveri	25,197	3,494.73	1,693	356.53	26,890	3,851.26
17	Kalburgi	29,745	4,095.91	672	219.64	30,417	4,315.54
18	Kodagu	9,470	1,510.02	801	113.09	10,271	1,623.10
19	Kolar	21,948	3,283.12	2,582	609.73	24,530	3,892.85
20	Koppal	20,311	2,745.00	726	119.23	21,037	2,864.24
21	Mandya	36,145	6,075.82	2,598	644.84	38,743	6,720.66
22	Mysore	34,608	7,496.27	1,497	559.58	36,105	8,055.85
23	Raichur	19,100	2,617.22	911	185.74	20,011	2,802.96
24	Ramanagara	16,646	2,320.83	1,753	645.82	18,399	2,966.65
25	Shimoga	25,792	4,515.71	1,723	564.76	27,515	5,080.47
26	Tumkur	36,038	5,022.94	2,557	703.18	38,595	5,726.11
27	Udupi	11,597	2,837.21	1,877	717.58	13,474	3,554.80
28	Uttara Kannada	20,939	3,152.04	1,905	316.94	22,844	3,468.98
29	Vijayapura	22,300	3,860.68	325	77.42	22,625	3,938.09
30	Yadgir	12,050	1,769.54	452	78.87	12,502	1,848.40
31	Other State	-	-	4,238	1,550.95	4,238	1,550.95
Grand Total		6,88,789	1,12,008.80	86,327	28,101.20	7,75,116	1,40,110.00

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	942
ಸದಸ್ಯರ ಹೆಸರು	ಶ್ರೀ ರೇವಣ್ಣ ಹೆಚ್.ಡಿ. (ಹೊಳೇನರಸೀಪುರ)
ಉತ್ತರಿಸಬೇಕಾದ ದಿನಾಂಕ	04.02.2021
ಉತ್ತರಿಸಬೇಕಾದ ಸಚಿವರು	ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ)

	ಪ್ರಶ್ನೆ	ಉತ್ತರ
ಅ	ಹಾಸನ ಜಿಲ್ಲೆ ಹೊಳೆನರಸೀಪುರ ತಾಲ್ಲೂಕು ಹಳೇಕೋಟೆ ಹೋಬಳಿ ಹರದನಹಳ್ಳಿ ಗ್ರಾಮದಲ್ಲಿ ನೂತನವಾಗಿ 2019-20ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಗೊಂಡಿರುವ ಮಾದರಿ ವಸತಿಯುಕ್ತ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ ಪ್ರಸ್ತುತ ಬಿ.ಎ. ವಿಭಾಗದಲ್ಲಿ ಹೆಚ್.ಇ.ಎಸ್., ಹೆಚ್.ಇ.ಜಿ., ಹೆಚ್.ಪಿ.ಎಸ್., ಹೆಚ್.ಪಿ.ಜೆ, ಹೆಚ್.ಕೆ.ಎಸ್., ಹೆಚ್.ಇ.ಪಿ., ಐಚ್ಚಕ ವಿಷಯಗಳುಳ್ಳ ಕಾಂಬಿನೇಷನ್‌ಗಳನ್ನು ಬಿ.ಎಸ್ಸಿ., ವಿಭಾಗದಲ್ಲಿ ಪಿ.ಸಿ.ಎಮ್., ಪಿ.ಎಂ.ಸಿ.ಎಸ್., ಐಚ್ಚಿಕ ವಿಷಯಗಳುಳ್ಳ ವಿಭಾಗಗಳನ್ನು ಮಂಜೂರು ಮಾಡಿ, ಈ ವಿಷಯಗಳನ್ನು ಬೋಧನೆ ಮಾಡಲು ಅಗತ್ಯವಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳನ್ನು ತುರ್ತಾಗಿ ನೇಮಿಸುವಂತೆ ವಿಶ್ವವಿದ್ಯಾನಿಲಯದ ಸ್ಥಳೀಯ ಸಮಿತಿಯು ಷರತ್ತನ್ನು ವಿಧಿಸಿದ್ದು, ಕಳೆದ ವರ್ಷದಲ್ಲಿ ಬಿ.ಎ. ಪದವಿಯ ಹೆಚ್.ಇ.ಎಸ್ ಮತ್ತು ಬಿ.ಕಾಂ ಎರಡು ವಿಭಾಗಗಳು ಮಾತ್ರ ಪ್ರಾರಂಭಗೊಂಡು ತರಗತಿಗಳು ನಡೆಯುತ್ತಿದ್ದು, 2020-21ನೇ ಶೈಕ್ಷಣಿಕ ವರ್ಷದಿಂದ ಮೈಸೂರು ವಿಶ್ವವಿದ್ಯಾನಿಲಯ ಮಂಜೂರು ಮಾಡಿರುವಐಚ್ಚಿಕ ವಿಷಯಗಳುಳ್ಳ ಎಲ್ಲಾ ಕಾಂಬಿನೇಷನ್‌ಗಳನ್ನು ಪ್ರಾರಂಭಿಸ ಬೇಕಾಗಿರುವುದರಿಂದ ಅಗತ್ಯವಿರುವ 15 ಬೋಧಕ ಹುದ್ದೆಗಳು, 10 ಬೋಧಕೇತರ ಹುದ್ದೆಗಳು, ಮತ್ತು ವಸತಿ ನಿಲಯವನ್ನು ನಡೆಸಲು 10 ಹುದ್ದೆಗಳನ್ನು ಸೃಜಿಸಬೇಕಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಆದೇಶ ಸಂ: ಇಡಿ 80 ಹೆಚ್.ಪಿ.ಸಿ. 2018, ದಿ.14.09.2018ರಲ್ಲಿ ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲ್ಲೂಕಿನ ಹರದನಹಳ್ಳಿಯಲ್ಲಿ ಮಾದರಿ ವಸತಿಯುಕ್ತ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜನ್ನು ಪ್ರಾರಂಭಿಸಲು ಅನುಮೋದನೆ ನೀಡಿರುತ್ತದೆ. ಆಯುಕ್ತರ ಆದೇಶ ಸಂಖ್ಯೆ: ಕಾಶಿಇ: 42: ಬೋಹುಸೃ:2018-19, ದಿ.26.02.2020 ರಲ್ಲಿ ಮಾದರಿ ವಸತಿಯುಕ್ತ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಹರದನಹಳ್ಳಿ, ಹೊಳೆನರಸೀಪುರ ತಾಲ್ಲೂಕು ಇಲ್ಲಿಗೆ ಕೆಳಕಂಡ ವಿಷಯಗಳ ಪ್ರಾಧ್ಯಾಪಕರ ಹುದ್ದೆಗಳನ್ನು ಮಂಜೂರು ಮಾಡಲಾಗಿರುತ್ತದೆ. ಕ್ರ.ಸಂ / ವಿಷಯ / ಹುದ್ದೆ 1 / ಕನ್ನಡ / 01 2 / ಇಂಗ್ಲೀಷ್ / 01 3 / ಭೌತಶಾಸ್ತ್ರ / 01 4 / ಗಣಿತಶಾಸ್ತ್ರ / 01 5 / ಗಣಕವಿಜ್ಞಾನ / 01 6 / ವಾಣಿಜ್ಯಶಾಸ್ತ್ರ / 03 ಒಟ್ಟು / 08 ಮುಂದುವರೆದು, ಸದರಿ ಕಾಲೇಜಿಗೆ ಅಗತ್ಯವಿರುವ 15 ಬೋಧಕ ಹುದ್ದೆಗಳು ಹಾಗೂ 10 ಬೋಧಕೇತರ ಹುದ್ದೆಗಳನ್ನು ಹಾಗೂ ಹಾಸ್ಟೆಲ್‌ಗೆ ಅಗತ್ಯವಿರುವ 10 ಹುದ್ದೆಗಳನ್ನು ಸೃಜಿಸಲಾಗಿರುತ್ತದೆ.
ಆ	ಹರದನಹಳ್ಳಿ ಗ್ರಾಮದಲ್ಲಿ ನೂತನವಾಗಿ 2019-20ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಗೊಂಡಿರುವ ಮಾದರಿ ವಸತಿಯುಕ್ತ	ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ 03 ಪ್ರಾಧ್ಯಾಪಕರನ್ನು ಅನ್ಯ ಕಾಲೇಜಿನಿಂದ ನಿಯೋಜಿಸಲಾಗಿರುತ್ತದೆ ಹಾಗೂ 04 ಅತಿಥಿ

	ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿಗೆ ಮೈಸೂರು ವಿಶ್ವವಿದ್ಯಾನಿಲಯ ವಿಧಿಸಿರುವ ಷರತ್ತಿನಂತೆ ಈವರೆಗೂ ಯಾವುದೇ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಹುದ್ದೆ ಸೃಜನೆಯಾಗದಿರುವುದರಿಂದ ವಿಧ್ಯಾರ್ಥಿಗಳ ವ್ಯಾಸಂಗಕ್ಕೆ ತೊಂದರೆಯಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ	ಉಪನ್ಯಾಸಕರ ಸೇವೆಯನ್ನು ಬಳಸಿಕೊಳ್ಳಲು ಅನುಮತಿ ನೀಡಲಾಗಿದೆ. 03 ಬೋಧಕೇತರ ಸಿಬ್ಬಂದಿ ವರ್ಗದವರನ್ನು ಅನ್ಯ ಕಾಲೇಜುಗಳಿಂದ ನಿಯೋಜಿಸಲಾಗಿರುತ್ತದೆ.
ಇ	ಹಾಗಿದ್ದಲ್ಲಿ, ಹರದನಹಳ್ಳಿ ಗ್ರಾಮದಲ್ಲಿ ನೂತನವಾಗಿ 2019–20ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಗೊಂಡಿರುವ ಮಾದರಿ ವಸತಿಯುಕ್ತ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿಗೆ ಮೈಸೂರು ವಿಶ್ವವಿದ್ಯಾನಿಲಯವು ಅನುಮೋದನೆ ಮಾಡಿರುವ ಐಚ್ಛಿಕ ವಿಷಯಗಳುಳ್ಳ ಕಾಂಬಿನೇಷನ್‌ಗಳ ಕೋರ್ಸುಗಳನ್ನು 2020–21ನೇ ಶೈಕ್ಷಣಿಕ ವರ್ಷದಲ್ಲಿ ಪ್ರಾರಂಭಿಸಲು ಈಗಾಗಲೇ ಅಗತ್ಯವಿರುವ ವ್ಯವಸ್ಥೆಯನ್ನು ಮಾಡಿಕೊಂಡಿದ್ದು, ಅದರಂತೆ ಅಗತ್ಯವಿರುವ 15 ಬೋಧಕ ಹುದ್ದೆಗಳು, 10 ಬೋಧಕೇತರ ಹುದ್ದೆಗಳು ಮತ್ತು ವಸತಿನಿಲಯ ನಡೆಸಲು ಅಗತ್ಯವಿರುವ 10 ಹುದ್ದೆಗಳನ್ನು ಸರ್ಕಾರ ಇದುವರವಿಗೂ ಮಂಜೂರು ಮಾಡದೇ ಇರಲು ಕಾರಣವೇನು? ಯಾವ ಕಾಲಮಿತಿಯೊಳಗೆ ಈ ಬೋಧಕ/ ಬೋಧಕೇತರ ಹುದ್ದೆಗಳನ್ನು ಸೃಜನೆ ಮಾಡಿ ಈ ಹುದ್ದೆಗಳನ್ನು ಭರ್ತಿ ಮಾಡಲಾಗುವುದು? ಸಂಪೂರ್ಣ ಮಾಹಿತಿ ನೀಡುವುದು	<u>ಬೋಧಕ/ ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರ ಹುದ್ದೆಗಳು:</u> ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿನ 310 ಪ್ರಾಂಶುಪಾಲರ ಹುದ್ದೆಗಳನ್ನು ಹಾಗೂ 1242 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ವಿಶೇಷ ನೇಮಕಾತಿ ನಿಯಮಗಳನ್ನು ರೂಪಿಸಲಾಗಿದೆ. ಆದರೆ, ಪ್ರಸ್ತುತ ಕೋವಿಡ್-19 ಹಿನ್ನೆಲೆಯಲ್ಲಿ 2020-21ನೇ ಸಾಲಿನಲ್ಲಿ ಯಾವುದೇ ನೇಮಕಾತಿಯನ್ನು ಮಾಡುವಂತಿಲ್ಲ ಎಂಬುದಾಗಿ ಆರ್ಥಿಕ ಇಲಾಖೆಯು ನಿರ್ಬಂಧ ವಿಧಿಸಿರುವುದರಿಂದ ನಿರ್ಬಂಧವನ್ನು ತೆರವುಗೊಳಿಸಿ ಪ್ರಾಂಶುಪಾಲರು ಹಾಗೂ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಆರ್ಥಿಕ ಇಲಾಖೆಯ ಅನುಮೋದನೆ ಕೋರಿದೆ. ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರ ನೇಮಕಾತಿ ಕುರಿತು ಆರ್ಥಿಕ ಇಲಾಖೆಯು ತಿಳಿಸಿರುವಂತೆ ಒಂದು ವರ್ಷದ ನಂತರ ವಿವರವಾದ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಗೆ ತಿಳಿಸಲಾಗಿರುತ್ತದೆ. <u>ಬೋಧಕೇತರ ಹುದ್ದೆಗಳು:</u> ಇಲಾಖೆಯಲ್ಲಿ ಖಾಲಿ ಇರುವ ಪ್ರಥಮ ದರ್ಜೆ ಸಹಾಯಕರು ಮತ್ತು ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳ ಪೈಕಿ 123 ಪ್ರಥಮ ದರ್ಜೆ ಸಹಾಯಕರು, 88 ದ್ವಿತೀಯ ದರ್ಜೆ ಸಹಾಯಕರು ಮತ್ತು 29 ಗ್ರಂಥಾಲಯ ಸಹಾಯಕರ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಕರ್ನಾಟಕ ಲೋಕಸೇವಾ ಆಯೋಗವು ನೇಮಕಾತಿಗೆ ಅಧಿಸೂಚನೆಯನ್ನು ಹೊರಡಿಸಿದ್ದು, ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಆಯ್ಕೆ ಪಟ್ಟಿಯನ್ನು ನೀಡಿದ ನಂತರ ಸದರಿ ಖಾಲಿ ಹುದ್ದೆಗಳನ್ನು ನಿಯಮಾನುಸಾರ ಭರ್ತಿ ಮಾಡಲು ಕ್ರಮವಹಿಸಲಾಗುವುದು.

		ಇಲಾಖೆಯ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಖಾಲಿ ಇರುವ ಪರಿಚಾರಕರ (ಗ್ರೂಪ್-ಡಿ) ಹುದ್ದೆಗಳಿಗೆ ಸೇವಾ ಗುತ್ತಿಗೆ ಏಜೆನ್ಸಿ ಮುಖಾಂತರ ಸೇವೆಯನ್ನು ಪಡೆಯುವ ಕುರಿತು ಆರ್ಥಿಕ ಇಲಾಖೆಯು ಕೋರಿರುವಂತೆ ಕೆಲವು ದಾಖಲೆ/ಮಾಹಿತಿಗಳೊಂದಿಗೆ ಪ್ರಸ್ತಾವನೆಯನ್ನು ಮರು ಸಲ್ಲಿಸುವಂತೆ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಗೆ ತಿಳಿಸಲಾಗಿರುತ್ತದೆ.

ಇಡಿ 34 ಡಿಸಿಇ 2021

(ಡಾ. ಅಶ್ವಥ್ ನಾರಾಯಣ ಸಿ.ಎನ್.)
ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ)

ಕರ್ನಾಟಕ ವಿಧಾನ ಸಭೆ

1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	945
2)	ಮಾನ್ಯ ಸದಸ್ಯರ ಹೆಸರು:	ಶ್ರೀ ಎಸ್.ಎನ್. ನಾರಾಯಣಸ್ವಾಮಿ (ಬಂಗಾರಪೇಟೆ)
3)	ಉತ್ತರಿಸಬೇಕಾದ ದಿನಾಂಕ:	**04.02.2021**
4)	ಉತ್ತರಿಸುವವರು:	**ಮಾನ್ಯ ಉಪ ಮುಖ್ಯಮಂತ್ರಿಗಳು ಮತ್ತು ಉನ್ನತ ಶಿಕ್ಷಣ, ಐಟಿ/ಬಿಟಿ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು.**

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	**ಕಳೆದ 3 ವರ್ಷಗಳಲ್ಲಿ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆಯಿಂದ ನಿರುದ್ಯೋಗಿ ಯುವ ಜನತೆಗೆ ನೀಡಲಾದ ತರಬೇತಿಯನ್ನು ಎಷ್ಟು ಜನ ಪಡೆದಿದ್ದಾರೆ; ಆ ಪೈಕಿ ಮಹಿಳಾ ಮತ್ತು ಪುರುಷರ ಸಂಖ್ಯೆ ಎಷ್ಟು;**	see below

ಕೌಶಲ್ಯ ಮಿಷನ್:

- ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮದಿಂದ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿ 84613 ಅಭ್ಯರ್ಥಿಗಳು ಹಾಗೂ ಪ್ರಧಾನ ಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆಯಡಿ 14919 ಅಭ್ಯರ್ಥಿಗಳು ಅಲ್ಪಾವಧಿ ಕೌಶಲ್ಯಾಧಾರಿತ ತರಬೇತಿಯನ್ನು ಪಡೆದುಕೊಂಡಿರುತ್ತಾರೆ.
- ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿ 27922 ಮಹಿಳಾ ಅಭ್ಯರ್ಥಿಗಳು ಹಾಗೂ 56691 ಪುರುಷ ಅಭ್ಯರ್ಥಿಗಳು ತರಬೇತಿ ಪಡೆದಿದ್ದು, ಪ್ರಧಾನಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆಯಡಿ 4923 ಮಹಿಳಾ ಅಭ್ಯರ್ಥಿಗಳು ಹಾಗೂ 9996 ಪುರುಷ ಅಭ್ಯರ್ಥಿಗಳು ಉಚಿತ ಕೌಶಲ್ಯಾಧಾರಿತ ತರಬೇತಿಯನ್ನು ಪಡೆದಿರುತ್ತಾರೆ.

ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (NRLM):

ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ನಿಂದ ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ (ಡಿಡಿಯು-ಜಿಕೆವೈ) ಹಾಗೂ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಕೇಂದ್ರ-ಆರ್‌ಸೆಟಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಎರಡು ಯೋಜನೆಗಳಡಿ ಕಳೆದ ಮೂರು ವರ್ಷಗಳಲ್ಲಿ ನೀಡಿದ ತರಬೇತಿ ಪಡೆದವರ ವಿವರ ಈ ಕೆಳಕಂಡಂತಿದೆ.

ವರ್ಷ	ಯೋಜನೆ			
	ಡಿಡಿಯು-ಜಿಕೆವೈ		ಆರ್‌ಸೆಟಿ	
	ಮಹಿಳೆ	ಪುರುಷ	ಮಹಿಳೆ	ಪುರುಷ
2017-18	1894	3519	14496	12875
2018-19	3047	2781	8937	6954
2019-20	117	123	9600	14775

ಡೇ-ನಲ್ಮ್:

ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ, ಡೇ-ನಲ್ಮ್ ಅಭಿಯಾನದ ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳನಿಯುಕ್ತಿ ಉಪಘಟಕದಡಿ ಈ ಕೆಳಕಂಡಂತೆ ತರಬೇತಿಯನ್ನು ನೀಡಲಾಗಿದೆ.

ವರ್ಷ	ತರಬೇತಿಯನ್ನು ಪಡದುಕೊಂಡ ಫಲಾನುಭವಿಗಳ ಸಂಖ್ಯೆ	ತರಬೇತಿಯನ್ನು ಪಡದುಕೊಂಡ ಸಂಖ್ಯೆ	
		ಪುರುಷ	ಮಹಿಳೆ
2017-18	18775	6196	12579
2018-19	7250	2393	4858
2019-20	6792	2241	4551

ಸಿಡಾಕ್:

ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್) ವು ಉದ್ಯಮಶೀಲತಾ ತಿಳುವಳಿಕೆ, ಉದ್ಯಮಶೀಲತಾಭಿವೃದ್ಧಿ ಹಾಗೂ ವಿಷಯಾಧಾರಿತ ಉದ್ಯಮಶೀಲತಾಭಿವೃದ್ಧಿ (3 ದಿನ, 6 ದಿನ ಹಾಗೂ 30 ದಿನಗಳ) ಕಾರ್ಯಕ್ರಮಗಳನ್ನು ನೀಡಲಾಗಿದ್ದು, ತರಬೇತಿ ಪಡೆದವರ ವಿವರಗಳು ಈ ಕೆಳಗಿನಂತಿವೆ.

ವರ್ಷ	ತರಬೇತಿ ಪಡೆದವರು		
	ಒಟ್ಟು	ಪುರಷರು	ಮಹಿಳೆಯರು
2017-18	24,553	12,423	12,130
2018-19	16,491	9,614	6,877
2019-20	23,016	12,448	10,568

(ಆ) ತರಬೇತಿ ಪಡೆದ ಎಷ್ಟು ಜನರಿಗೆ ಉದ್ಯೋಗ ಲಭಿಸಿದೆ; ಸ್ವಂತ ಉದ್ದಿಮೆಗಳನ್ನು ನಡೆಸುತ್ತಿರುವವರ ಸಂಖ್ಯೆ ಎಷ್ಟು;

ಕೌಶಲ್ಯ ಮಿಷನ್:

ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿ ಹಾಗೂ ಪ್ರಧಾನ ಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆಯಡಿ ಫಲಾನುಭವಿಗಳು ಆಯ್ಕೆಮಾಡಿಕೊಂಡ ಜಾಬ್‌ರೋಲ್‌ಗಳಲ್ಲಿ ತರಬೇತಿ ನೀಡಿ, ಸ್ವಯಂ ಉದ್ಯೋಗ, ಉದ್ಯಮಶೀಲರನ್ನಾಗಿ ಹೊಂದುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಒಟ್ಟು 13988 ಅಭ್ಯರ್ಥಿಗಳಿಗೆ ಉದ್ಯೋಗ ಹಾಗೂ ಸ್ವಯಂ ಉದ್ಯೋಗಳನ್ನು ಕಲ್ಪಿಸಲಾಗಿರುತ್ತದೆ. ವಿವರಗಳು ಈ ಕೆಳಕಂಡಂತಿದೆ.

ಸರ್ಕಾರಿ ಸಂಸ್ಥೆಗಳು	ಖಾಸಗಿ ಉದ್ಯೋಗ ಪಡೆದ ಅಭ್ಯರ್ಥಿಗಳ ಸಂಖ್ಯೆ	ಸ್ವ ಉದ್ಯೋಗ ನಡೆಸುತ್ತಿರುವ ಅಭ್ಯರ್ಥಿಗಳಿಗೆ ಸಂಖ್ಯೆ
ಜಿ.ಟಿ.ಟಿ.ಸಿ	3630	0
ಕೆ.ಜಿ.ಎಂ.ಎಸ್. ಡಿ.ಸಿ.	1434	2
ಎ.ಟಿ.ಡಿ.ಸಿ.	1055	1838
ಬಿ.ಎಂ.ಟಿ.ಸಿ./ಕೆ. ಎಸ್.ಆರ್.ಟಿ.ಸಿ /ಸೆಂಟ್ರಲ್	3299	2345
ಒಟ್ಟು	**9418**	**4185**

ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (NRLM):

ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆಯಡಿ ಡಿಡಿಯು-ಜಿಕೆವೈ ಯೋಜನೆಯಡಿ 23998 ಜನರಿಗೆ ಉದ್ಯೋಗ ಲಭಿಸಿದೆ.

ಆರ್‌ಸೆಟಿ ಯೋಜನೆಯಡಿಯಲ್ಲಿ - 54109 ಸ್ವ-ಉದ್ದಿಮೆ ತರಬೇತಿ ನೀಡಲಾಗಿದೆ.

ಡೇ-ನಲ್ಮ್:

ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳನಿಯುಕ್ತಿ ಉಪಘಟಕದಡಿ ಈ ಕೆಳಕಂಡಂತೆ ಉದ್ಯೋಗವನ್ನು ಕಲ್ಪಿಸಲಾಗಿರುತ್ತದೆ.

ವರ್ಷ	ವೇತನಾಧಾರಿತ ಉದ್ಯೋಗ	ಸ್ವಯಂ ಉದ್ಯೋಗ
2017-18	457	657
2018-19	179	161
2019-20	104	81

ಸಿಡಾಕ್:

ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್) ದಿಂದ ತರಬೇತಿ ಪಡೆದವರಲ್ಲಿ ಸ್ವಂತ ಉದ್ದಿಮೆಗಳನ್ನು ಪ್ರಾರಂಭಿಸಿದವರ ವಿವರಗಳು ಈ ಕೆಳಗಿನಂತಿವೆ.

ವರ್ಷ	ಸ್ವಂತ ಉದ್ದಿಮೆಗಳನ್ನು ಪ್ರಾರಂಭಿಸಿದವರ ವಿವರ
2017-18	466
2018-19	2853
2019-20	2673

ಇ) ತರಬೇತಿ ಪಡೆದ ಸ್ವಂತ ಉದ್ಯೋಗ ನಡೆಸಲು ಇವರಿಗೆ ಆರ್ಥಿಕ ಸಹಾಯವನ್ನು ನೀಡಲಾಗಿದೆಯೇ (ಸಾಲ ಸಬ್ಸಿಡಿ) ಆಗಿದ್ದಲ್ಲಿ ಎಷ್ಟು ಜನರಿಗೆ ಸಾಲ ಸೌಲಭ್ಯ ಸಿಕ್ಕಿದೆ;

ಕೌಶಲ್ಯ ಮಿಷನ್:

ಈ ಯೋಜನೆಗಳಡಿ ಉಚಿತ ಕೌಶಲ್ಯಾಧಾರಿತ ತರಬೇತಿಯನ್ನು ನೀಡಲಾಗುತ್ತಿದ್ದು, ಆರ್ಥಿಕ ಸಹಾಯ / ಸಾಲ ಸಬ್ಸಿಡಿ ಸೌಲಭ್ಯ ನೀಡುವಂತಹ ಕಾರ್ಯಕ್ರಮಗಳಿರುವುದಿಲ್ಲ.

ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (NRLM):

- ಡಿಡಿಯು-ಜಿಕೆವೈಯಡಿಯಲ್ಲಿ ಯಾವುದೇ ಸಾಲ-ಸೌಲಭ್ಯವಿರುವುದಿಲ್ಲ. ಉಚಿತ ತರಬೇತಿಯನ್ನು ಮಾತ್ರ ನೀಡಲಾಗುವುದು.
- ಆರ್‌ಸೆಟಿ 54109 ಅಭ್ಯರ್ಥಿಗಳಿಗೆ ಸಾಲ ಸೌಲಭ್ಯ ದೊರಕಿದೆ.

ಡೇ-ನಲ್ಮ್:

ತರಬೇತಿಯನ್ನು ಪಡೆದ ಅಭ್ಯರ್ಥಿಗಳು ಸ್ವಯಂ ಉದ್ಯೋಗವನ್ನು ಪ್ರಾರಂಭಿಸಲು ಇಚ್ಛಿಸಿದಲ್ಲಿ ಡೇ-ನಲ್ಮ್ ಅಭಿಯಾನದ ಸ್ವಯಂ ಉದ್ಯೋಗ ಕಾರ್ಯಕ್ರಮ ಉಪಘಟಕದಡಿ ಈ ಕೆಳಕಂಡಂತೆ ಅವಕಾಶವನ್ನು ಕಲ್ಪಿಸಲಾಗಿರುತ್ತದೆ.

ಸದರಿ ಉಪಘಟಕದಡಿ ವೈಯಕ್ತಿಕ ಕಿರು ಉದ್ದಿಮೆಯನ್ನು ಸ್ಥಾಪಿಸಲು ರೂ.2.00 ಲಕ್ಷದವರೆಗೆ ಹಾಗೂ ಗುಂಪು ಕಿರು ಉದ್ದಿಮೆಯನ್ನು ಸ್ಥಾಪಿಸಲು ರೂ.10.00ಲಕ್ಷದ ವರೆಗೆ ಬ್ಯಾಂಕಿನಿಂದ ಸಾಲ ಸೌಲಭ್ಯವನ್ನು ಕಲ್ಪಿಸುತ್ತಾ ಶೇ.7ಕ್ಕಿಂತ ಮೇಲ್ಪಟ್ಟ ಬಡ್ಡಿ ಸಹಾಯಧನವನ್ನು ಯೋಜನೆಯಿಂದ ಭರಿಸಿ ಪಾವತಿಸಲಾಗುವುದು.
ಕಳೆದ ಮೂರು ವರ್ಷಗಳಲ್ಲಿ 899 ಅಭ್ಯರ್ಥಿಗಳಿಗೆ ಸ್ವಯಂ ಉದ್ಯೋಗವನ್ನು ಕೈಗೊಳ್ಳಲು ಬ್ಯಾಂಕಿನಿಂದ ಸಾಲ ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ.

ಸಿಡಾಕ್:

ಸಿಡಾಕ್ ಸಂಸ್ಥೆಯಿಂದ ಸ್ವಂತ ಉದ್ಯೋಗ ನಡೆಸಲು ಯಾವುದೇ ಆರ್ಥಿಕ ಸಹಾಯ (ಸಾಲ ಸಬ್ಸಿಡಿ ಇತ್ಯಾದಿ) ವನ್ನು ನೀಡಲಾಗಿರುವುದಿಲ್ಲ.

ಈ) ಕೋಲಾರ ಜಿಲ್ಲೆಯಲ್ಲಿ ಈ ಯೋಜನೆಯಡಿ ಸೌಲಭ್ಯ ಪಡೆದವರು ಎಷ್ಟು?

ಕೌಶಲ್ಯ ಮಿಷನ್:

ಕೋಲಾರ ಜಿಲ್ಲೆಯಲ್ಲಿ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿ 1276 ಅಭ್ಯರ್ಥಿಗಳು ಉಚಿತ ಕೌಶಲ್ಯಾಧಾರಿತ ತರಬೇತಿಯನ್ನು ಪಡೆದಿರುತ್ತಾರೆ. ಅದರಂತೆ 422 ಅಭ್ಯರ್ಥಿಗಳಿಗೆ ಉದ್ಯೋಗವಕಾಶವನ್ನು ಒದಗಿಸಲಾಗಿರುತ್ತದೆ.

ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (NRLM):

- ಡಿಡಿಯು-ಜಿಕೆವೈಯಡಿಯಲ್ಲಿ 1542 ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗಿದೆ. 1127 ಅಭ್ಯರ್ಥಿಗಳಿಗೆ ಉದ್ಯೋಗ ಕಲ್ಪಿಸಲಾಗಿದೆ.
- ಆರ್‌ಸೆಟಿ ಯೋಜನೆಯಡಿಯಲ್ಲಿ ಕೋಲಾರ ಜಿಲ್ಲೆಯಲ್ಲಿ ಸೌಲಭ್ಯ ಪಡೆದವರ ಸಂಖ್ಯೆ: 4274.

ಡೇ–ನಲ್ಮ್:

ಕೋಲಾರ ಜಿಲ್ಲೆಯಲ್ಲಿ ಈ ಯೋಜನೆಯಡಿ ಸೌಲಭ್ಯವನ್ನು ಪಡೆದ ಫಲಾನುಭವಿಗಳ ಸಂಖ್ಯೆ ಈ ಕೆಳಕಂಡಂತಿರುತ್ತದೆ.

ಘಟಕದ ಹೆಸರು	ವರ್ಷ		
	2017–18	2018–19	2019–20
ಸಾಮಾಜಿಕ ಕ್ರೋಢೀಕರಣ ಮತ್ತು ಸಾಂಸ್ಥಿಕ ಅಭಿವೃದ್ಧಿ	782 ಸದಸ್ಯರು (52 ಮಹಿಳಾ ಸ್ವ–ಸಹಾಯ ಗುಂಪು)	690 ಸದಸ್ಯರು (46 ಮಹಿಳಾ ಸ್ವ–ಸಹಾಯ ಗುಂಪು)	1125 ಸದಸ್ಯರು (75 ಮಹಿಳಾ ಸ್ವ–ಸಹಾಯ ಗುಂಪು)
ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳ ನಿಯುಕ್ತಿ	511	150	0
ಸ್ವಯಂ ಉದ್ಯೋಗ ಕಾರ್ಯಕ್ರಮ (ವೈಯಕ್ತಿಕ, ಗುಂಪು ಕಿರು ಉದ್ದಿಮೆ & ಎಸ್‌ಹೆಚ್‌ಜಿ ಬ್ಯಾಂಕ್ ಕ್ರೆಡಿಟ್ ಲಿಂಕೇಜ್)	418	99	436
ನಗರದ ವಸತಿ ರಹಿತರಿಗೆ ಆಶ್ರಯ	11	22	18
ನಗರದ ಬೀದಿ ವ್ಯಾಪಾರಸ್ಥರಿಗೆ ಬೆಂಬಲ	900	660	1446

ಸಿಡಾಕ್:

ಕೋಲಾರ ಜಿಲ್ಲೆಯಲ್ಲಿ ಸಿಡಾಕ್ ಸಂಸ್ಥೆಯಿಂದ ಜರುಗಿಸಿದ ಉದ್ಯಮಶೀಲತಾ ತಿಳುವಳಿಕೆ, ಉದ್ಯಮಶೀಲತಾಭಿವೃದ್ಧಿ ಹಾಗೂ ವಿಷಯಾಧಾರಿತ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮಗಳ ಸೌಲಭ್ಯ ಪಡೆದವರ ವಿವರಗಳು ಈ ಕೆಳಗಿನಂತಿರುತ್ತದೆ.

ವರ್ಷ	ತರಬೇತಿ ಸೌಲಭ್ಯ ಪಡೆದವರು.
2017–18	0
2018–19	88
2019–20	221

ಸಂಖ್ಯೆ: ಕೌಉಜೀಇ 4 ಉಜೀಪ್ರ 2021

(ಡಾ॥ ಸಿ.ಎನ್. ಅಶ್ವಥ್‌ನಾರಾಯಣ)

ಉಪ ಮುಖ್ಯಮಂತ್ರಿಗಳು ಮತ್ತು ಉನ್ನತ ಶಿಕ್ಷಣ, ಐಟಿ/ಬಿಟಿ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	946
ಮಾನ್ಯ ಸದಸ್ಯರ ಹೆಸರು	:	ಶ್ರೀ ಎಂ.ಪಿ ಕುಮಾರಸ್ವಾಮಿ (ಮೂಡಿಗೆರೆ)
ಉತ್ತರಿಸುವ ದಿನಾಂಕ	:	04.02.2021
ಉತ್ತರಿಸುವ ಸಚಿವರು	:	ಮಾನ್ಯ ಉಪ ಮುಖ್ಯ ಮಂತ್ರಿಗಳು (ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ)

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ನಾನ್-ಇಂಜಿನಿಯರಿಂಗ್ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರು (ಗ್ರೇಡ್-1) ಹುದ್ದೆಗಳಿಗೆ 2004 ರಲ್ಲಿ ಮುಂಬಡ್ತಿ ನೀಡುವಾಗ ಪರಿಶಿಷ್ಟ ಜಾತಿಗೆ ಮೀಸಲಾದ ರೋಸ್ಟರ್ ಬಿಂದುವಿನ ಎದುರು ಪರಿಶಿಷ್ಟ ಜಾತಿಯ ಅರ್ಹ ಅಭ್ಯರ್ಥಿ ಇದ್ದರೂ ಹಾಗೂ ಬ್ಯಾಕ್‌ಲಾಗ್ ಪ್ರಾಂಶುಪಾಲರ ಹುದ್ದೆಗಳನ್ನು ಗುರುತಿಸಿದ್ದರೂ ಸಹ ಸಾಮಾನ್ಯ ವರ್ಗದ ಅಭ್ಯರ್ಥಿಗೆ ಮುಂಬಡ್ತಿ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ತಾಂತ್ರಿಕ ಶಿಕ್ಷಣ ಇಲಾಖೆಯ ಪ್ರಾಂಶುಪಾಲರು ಗ್ರೇಡ್-1 ಹುದ್ದೆಯ ಮುಂಬಡ್ತಿ ಸಂಬಂಧವಾಗಿ ದಿನಾಂಕ:23.09.2004ರಂದು ಇಲಾಖಾ ಮುಂಬಡ್ತಿ ಸಭೆ ನಡೆದಿರುತ್ತದೆ. ಸದರಿ ಇಲಾಖಾ ಮುಂಬಡ್ತಿ ಸಭಾ ನಡವಳಿಯಲ್ಲಿ ಗಿರಿಧರ ರಾಮನಾರಾಯಣ ಇನ್‌ಸ್ಟಿಟ್ಯೂಟ್ ಆಫ್ ಕಮರ್ಷಿಯಲ್ ಪ್ರಾಕ್ಟೀಸ್, ಬೆಂಗಳೂರು ಮತ್ತು ಎಸ್.ಆರ್.ಸಿ.ಐ.ಬಿ.ಎಂ, ಬೆಂಗಳೂರು ಇಲ್ಲಿನ 2 ನಾನ್-ಇಂಜಿನಿಯರಿಂಗ್ ಪ್ರಾಂಶುಪಾಲರು ಗ್ರೇಡ್-1 ಹುದ್ದೆಗಳು ಖಾಲಿ ಇದ್ದು, ರೋಸ್ಟರ್ ಸಂಖ್ಯೆ:3 ಮತ್ತು 4ರ ಮೇರೆಗೆ ಸಾಮಾನ್ಯ ಅಭ್ಯರ್ಥಿಗಳಿಂದ ತುಂಬಬೇಕಾಗಿದ್ದ ಕಾರಣ ಕ್ರ. ಸಂ:(1) & (2)ರಲ್ಲಿನ ಅಧಿಕಾರಿಗಳು ವಯೋನಿವೃತ್ತರಾಗಿರುವುದರಿಂದ ಶ್ರೀ ಎನ್.ಎನ್.ಹಿರೇಪಟ್ (ಕ್ರ.ಸಂ.5) ಹಾಗೂ ಶ್ರೀ ಜಯಚಂದ್ರ (ಕ್ರ.ಸಂ:6) ಇವರುಗಳಿಗೆ ಮುಂಬಡ್ತಿ ನೀಡಲು ಇಲಾಖಾ ಮುಂಬಡ್ತಿ ಸಮಿತಿಯು ಶಿಫಾರಸ್ಸು ಮಾಡಿದೆ. ಒಂದು ಪರಿಶಿಷ್ಟ ಜಾತಿ, ಒಂದು ಪರಿಶಿಷ್ಟ ಪಂಗಡ ಬ್ಯಾಕ್‌ಲಾಗ್‌ನ್ನು ಮುಂದೆ ಕೊಂಡೊಯ್ಯಲಾಗಿದೆ ಎಂದು ತಿಳಿಸಲಾಗಿದೆ. ಸರ್ಕಾರದ ಆದೇಶ ಸಂಖ್ಯೆ:ಡಿಪಿಎಆರ್ 10 ಎಸ್‌ಬಿಸಿ 97, ದಿನಾಂಕ:24.06.1997ರಲ್ಲಿ ಮುಂಬಡ್ತಿಯಲ್ಲಿನ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೌಕರರಿಗೆ ಹೆಚ್ಚುವರಿ ಬಿಂದುಗಳನ್ನು ಗುರುತಿಸಿ ಆದೇಶಿಸಲಾಗಿದೆ. (ಪರಿಶಿಷ್ಟ ಜಾತಿ:5,9,11,18,20,24,26,30 & 32ನೇ ಬಿಂದುಗಳು) ತಾಂತ್ರಿಕ ಶಿಕ್ಷಣ ಇಲಾಖೆಯ ಪಾಲಿಟೆಕ್ನಿಕ್‌ಗಳಲ್ಲಿ ಖಾಲಿಯಿರುವ ನಾನ್-ಇಂಜಿನಿಯರಿಂಗ್ ಪ್ರಾಂಶುಪಾಲರು ಗ್ರೇಡ್-1 ಹುದ್ದೆಯ ಮುಂಬಡ್ತಿಗಾಗಿ ದಿನಾಂಕ:03.02.2006ರಂದು ಇಲಾಖಾ ಮುಂಬಡ್ತಿ ಸಭೆಯು ನಡೆದಿರುತ್ತದೆ. ಸದರಿ ಸಭೆಯು ಸರ್ಕಾರದ ಆದೇಶ ಸಂಖ್ಯೆ:ಡಿಪಿಎಆರ್ 10 ಎಸ್‌ಬಿಸಿ 97ರನ್ವಯ ಪರಿಶಿಷ್ಟ ಜಾತಿಯ ಬ್ಯಾಕ್‌ಲಾಗ್ ತುಂಬಲು 5ನೇ ಬಿಂದು ಹೆಚ್ಚುವರಿಯಾಗಿ ಗುರುತಿಸಿರುವುದರಿಂದ ಉಪನ್ಯಾಸಕ ವೃಂದದ ಜೇಷ್ಠತೆಯನುಸಾರ ಪರಿಶಿಷ್ಟ ಜಾತಿಯ ಅಭ್ಯರ್ಥಿಯಾದ ಶ್ರೀ ಎಂ ಅಭಿಲಾಷ್ ಇವರನ್ನು ಪ್ರಾಂಶುಪಾಲರು ಗ್ರೇಡ್-1 ಹುದ್ದೆಯ ಮುಂಬಡ್ತಿಗೆ ಪರಿಗಣಿಸಿರುತ್ತದೆ.

ಆ)	ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿರುವ ಸರ್ಕಾರಿ ನೌಕರರಿಗೆ ತತ್ಪರಿಣಾಮದ ಜೇಷ್ಠತೆಯನ್ನು ವಿಸ್ತರಿಸುವ ಅಧಿನಿಯಮ 2017ರ ಕಂಡಿಕೆ–5 ರಲ್ಲಿ ಮುಂಬಡ್ತಿ ಮತ್ತು ಜೇಷ್ಠತೆಯನ್ನು ಪುನರ್ ಅವಲೋಕಿಸಲು ಅವಕಾಶವಿದ್ದು, ಅದನ್ನು ಅನುಷ್ಠಾನಗೊಳಿಸಲು ನಾನ್–ಇಂಜಿನಿಯರಿಂಗ್ ಪಾಲಿಟೆಕ್ನಿಕ್ ಪ್ರಾಂಶುಪಾಲರು (ಗ್ರೇಡ್–1) ಹುದ್ದೆಗಳ ಜೇಷ್ಠತಾ ಪಟ್ಟಿಯಲ್ಲಿ ಪರಿಶಿಷ್ಟ ಜಾತಿ ಅಭ್ಯರ್ಥಿಗೆ ರೋಸ್ಟರ್ ಬಿಂದುವಿನ ಅನ್ವಯ ಮುಂಬಡ್ತಿಗೆ ಅರ್ಹತದಾಯಕ ದಿನಾಂಕವನ್ನು ನಿಗಧಿಗೊಳಿಸಿ ಜೇಷ್ಠತಾ ಪಟ್ಟಿಯನ್ನು ಪ್ರಚುರಪಡಿಸಲು ಸಲ್ಲಿಸಲಾಗಿರುವ ಮನವಿಗಳ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು?	• ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 114 ಡಿಟಿಇ 2019, ದಿನಾಂಕ:23.12.2019ರಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ಪ್ರಾಂಶುಪಾಲರು/ಪ್ರಾಂಶುಪಾಲರು ಗ್ರೇಡ್–1 ವೃಂದದ ಪರಿಷ್ಕೃತ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು (ದಿ:16.05.2019ರಲ್ಲಿದ್ದಂತೆ) ಕರ್ನಾಟಕ ರಾಜ್ಯದ (ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿರುವ ಸರ್ಕಾರಿ ನೌಕರರಿಗೆ ತತ್ಪರಿಣಾಮದ ಜೇಷ್ಠತೆಯನ್ನು ವಿಸ್ತರಿಸುವ ಅಧಿನಿಯಮ, 2017ರ ಪ್ರಕರಣ 3 ಮತ್ತು 4ನ್ನು ಅದರ ಪ್ರಕರಣ 5 ರೊಂದಿಗೆ ಸಹವಾಚನ ಮಾಡಿಕೊಂಡಂತೆ ದಿನಾಂಕ: 27.04.1978ರಿಂದ ಮೀಸಲಾತಿಯನ್ವಯ ನೀಡಲಾದ ಪದೋನ್ನತಿಗಳಂತೆ ತಯಾರಿಸಿ ಆಕ್ಷೇಪಣೆ / ಸಲಹೆಗಳಿಗೆ ಪ್ರಕಟಿಸಲಾಗಿತ್ತು. • ತಾಂತ್ರಿಕ ಶಿಕ್ಷಣ ಇಲಾಖೆಯ ಪ್ರಾಂಶುಪಾಲರು / ಪ್ರಾಂಶುಪಾಲರು ಗ್ರೇಡ್–1 ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಸರ್ಕಾರದಲ್ಲಿ ಸ್ವೀಕೃತವಾಗಿರುವ ಆಕ್ಷೇಪಣೆಗಳನ್ನು ಪರಿಶೀಲಿಸಿ ವರದಿ / ಅಭಿಪ್ರಾಯ ಸಲ್ಲಿಸುವಂತೆ ಸರ್ಕಾರದ ಪತ್ರ ಸಂಖ್ಯೆ: ಇಡಿ 114 ಡಿಟಿಇ 2019, ದಿನಾಂಕ:29.02.2020ರಲ್ಲಿ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಇವರನ್ನು ಕೋರಲಾಗಿತ್ತು. • ಅದರಂತೆ, ತಾಂತ್ರಿಕ ಶಿಕ್ಷಣ ಇಲಾಖೆಯು ಪ್ರಾಂಶುಪಾಲರು/ ಪ್ರಾಂಶುಪಾಲರು ಗ್ರೇಡ್–1 ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಸ್ವೀಕೃತವಾಗಿರುವ ಸದರಿ ಆಕ್ಷೇಪಣೆಗಳನ್ನು ಪರಿಶೀಲಿಸಿ ವರದಿ ಸಲ್ಲಿಸಲು ಇಲಾಖೆಯ ಅಧಿಕಾರಿಗಳನ್ನೊಳಗೊಂಡ ಸಮಿತಿಯನ್ನು ತಾಂತ್ರಿಕ ಶಿಕ್ಷಣ ಇಲಾಖೆಯ ಜ್ಞಾಪನ ಸಂಖ್ಯೆ:ಡಿಟಿಇ 10 ಇಎಸ್ಪಿ(1)ಎ 2019–20, ದಿನಾಂಕ:14.05.2020ರಲ್ಲಿ ರಚಿಸಲಾಗಿತ್ತು. ಸದರಿ ಅಧಿಕಾರಿಗಳ ಸಮಿತಿಯು ಪ್ರಾಂಶುಪಾಲರು / ಪ್ರಾಂಶುಪಾಲರು ಗ್ರೇಡ್–1 ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಸ್ವೀಕೃತವಾದ ಆಕ್ಷೇಪಣೆಗಳನ್ನು ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಇವರು ದಿನಾಂಕ:17.12.2020ರ ಪತ್ರದಲ್ಲಿ ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಶ್ರೀ ಶೇಖರ, ಸಹಾಯಕ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಆಕ್ಷೇಪಣೆಗಳ ಬಗ್ಗೆ ಸಲ್ಲಿಸಿರುವ ವರದಿಗೆ ಸಂಬಂಧಿಸಿದಂತೆ ಕೆಲವೊಂದು ಅಂಶಗಳಿಗೆ ಸ್ಪಷ್ಟೀಕರಣವನ್ನು ಸಲ್ಲಿಸುವಂತೆ ಸರ್ಕಾರದ ಪತ್ರ ಸಂಖ್ಯೆ:ಇಡಿ 114 ಡಿಟಿಇ 2019, ದಿನಾಂಕ: 02.01.2021ರಲ್ಲಿ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಇವರನ್ನು ಕೋರಲಾಗಿದೆ.

		• ಅದರಂತೆ, ತಾಂತ್ರಿಕ ಶಿಕ್ಷಣ ಇಲಾಖೆಯು ಸರ್ಕಾರದ ದಿನಾಂಕ:02.01.2021ರ ಪತ್ರದಲ್ಲಿ ಕೋರಿರುವ ಸ್ಪಷ್ಟೀಕರಣಗಳಿಗೆ ಸಂಬಂಧಿಸಿದಂತೆ ಪರಿಶೀಲಿಸಿ ವರದಿ ಸಲ್ಲಿಸಲು ಈ ಹಿಂದೆ ನೇಮಿಸಲಾಗಿದ್ದ ಇಲಾಖೆಯ ಅಧಿಕಾರಿಗಳನ್ನೊಳಗೊಂಡ ಸಮಿತಿಗೆ
		ತಾಂತ್ರಿಕ ಶಿಕ್ಷಣ ಇಲಾಖೆಯ ಪತ್ರ ಸಂಖ್ಯೆ:DTE-ADMIO EST(1A)84 2020, ದಿನಾಂಕ:22.01.2021ರಲ್ಲಿ ಸೂಚಿಸಿದ್ದು, ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಸದರಿ ಸಮಿತಿಯು ಸಲ್ಲಿಸಿದ ವರದಿಯನ್ನು ದಿನಾಂಕ:30.01.2021ರಂದು ಸರ್ಕಾರಕ್ಕೆ ಸಲ್ಲಿಸಿದ್ದು, ಸದರಿ ವರದಿಯನ್ನು ಪರಿಶೀಲಿಸಿ ನಿಯಮಾನುಸಾರ ಕ್ರಮವಹಿಸಲಾಗುವುದು.

ಇಡಿ 13 ಟಿಪಿಇ 2021

(ಡಾ|| ಅಶ್ವತ್ಥನಾರಾಯಣ್.ಸಿ.ಎನ್)
ಉಪ ಮುಖ್ಯ ಮಂತ್ರಿಗಳು
(ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ)

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	960
ಸದಸ್ಯರ ಹೆಸರು	:	ಡಾ॥ ಭರತ್ ಶೆಟ್ಟಿ ವೈ (ಮಂಗಳೂರು ನಗರ ಉತ್ತರ)
ಉತ್ತರಿಸಬೇಕಾದ ದಿನಾಂಕ	:	04.02.2021
ಉತ್ತರಿಸುವ ಸಚಿವರು	:	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕ್ರಸ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿನ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಬಲವರ್ಧನೆಗಾಗಿ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು;	ರಾಜ್ಯದಲ್ಲಿನ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಬಲವರ್ಧನೆಗಾಗಿ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಕಳೆದ 03 ವರ್ಷಗಳಲ್ಲಿ ಕೆಳಕಂಡಂತೆ ಅನುದಾನ ಒದಗಿಸಲಾಗಿದೆ.

ರೂ.ಲಕ್ಷಗಳಲ್ಲಿ

ಕ್ರಸಂ	ಕಾರ್ಯಕ್ರಮದ ವಿವರ	2018-19	2019-20	2020-21
1	ಕೊಠಡಿಗಳ ದುರಸ್ಥಿಗಾಗಿ	4603.00	5103.00	0.00
2	ಶಾಲಾ ಕೊಠಡಿಗಳ ನಿರ್ಮಾಣಕ್ಕಾಗಿ	29480.45	39409.50	19210.00
3	ಶಾಲೆಗಳ ನಿರ್ವಹಣೆಗಾಗಿ	2500.00	2500.00	3000.00
4	ಇಲಾಖಾ ಅನುದಾನದ ಜೊತೆ ಮಹಾತ್ಮ ಗಾಂಧಿ NAREGA ಅನುದಾನವನ್ನು ಒಗ್ಗೂಡಿಸುವ ಮೂಲಕ	0.00	0.00	2921.00
5	RIDF-25 ಯೋಜನೆಯಡಿ ಕೊಠಡಿಗಳ ಮರು ನಿರ್ಮಾಣ	0.00	0.00	25000.00
6	ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ಮೂಲಭೂತ ಸೌಲಭ್ಯ ಒದಗಿಸಲು	0.00	0.00	10000.00

- 2020–21ನೇ ಸಾಲಿನಲ್ಲಿ ನರೇಗಾ ಯೋಜನೆಯಡಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಮೂಲಭೂತ ಸೌಲಭ್ಯ ಒದಗಿಸಲು ರೂ.2921.00ಲಕ್ಷಗಳನ್ನು ರಾಜ್ಯದ 34 ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿದೆ.
- 2020–21ನೇ ಸಾಲಿನಲ್ಲಿ ಎಲ್ಲಾ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಕುಡಿಯುವ ನೀರು ಒದಗಿಸಲು ಮತ್ತು ಶೌಚಾಲಯಗಳ ನಿರ್ವಹಣೆಗಾಗಿ ರೂ.3000.00ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.
- 2020–21ನೇ ಸಾಲಿನಲ್ಲಿ 739 ಪ್ರಾಥಮಿಕ ಶಾಲೆಗಳ 1035 ಕೊಠಡಿಗಳನ್ನು ನಿರ್ಮಾಣ ಮಾಡಲು ರೂ.4000.00ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.
- 2020–21ನೇ ಸಾಲಿನಲ್ಲಿ 263 ಪ್ರೌಢ ಶಾಲೆಗಳ 441 ಕೊಠಡಿಗಳು ಮತ್ತು 19 ಪದವಿಪೂರ್ವ ಕಾಲೇಜುಗಳ 134 ಕೊಠಡಿಗಳನ್ನು ನಿರ್ಮಾಣ ಮಾಡಲು ರೂ.7992.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.
- ಆರ್‌ಐಡಿಎಫ್ ಯೋಜನೆಯಡಿ 6044 ಪ್ರಾಥಮಿಕ ಶಾಲಾ ಕೊಠಡಿಗಳು ಮತ್ತು 425 ಪ್ರೌಢ ಶಾಲಾ ಕೊಠಡಿಗಳ ನಿರ್ಮಾಣಕ್ಕಾಗಿ ರೂ.75800.00 ಲಕ್ಷಗಳಿಗೆ ಅನುಮೋದನೆಯಾಗಿ, 2020–21ನೇ ಸಾಲಿನಲ್ಲಿ ರೂ.25000.00 ಲಕ್ಷಗಳನ್ನು 29 ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿದೆ.
- 2020–21ನೇ ಸಾಲಿನಲ್ಲಿ ಕೆಪಿಎಸ್ ಶಾಲೆಗಳ ಮೂಲಭೂತ ಸೌಲಭ್ಯಕ್ಕಾಗಿ ರೂ.10000.00ಲಕ್ಷಗಳನ್ನು ಒದಗಿಸಲಾಗಿದ್ದು, ರೂ.5000.00ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

		• ಆರ್‌ಐಡಿಎಫ್ ಯೋಜನೆಯಡಿ ಪದವಿ ಪೂರ್ವ ಕಾಲೇಜು ಕೊಠಡಿಗಳ ನಿರ್ಮಾಣಕ್ಕಾಗಿ 2020-21ನೇ ಸಾಲಿನಲ್ಲಿ ರೂ.7203.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.
ಆ)	ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರುಗಳಿಗೆ ಅತ್ಯವಶ್ಯಕ ಸೌಲಭ್ಯ ಕಲ್ಪಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು?	ಡಾ॥ನಂಜುಂಡಪ್ಪ ವರದಿ ಆಧರಿಸಿ ಹಿಂದುಳಿದ ತಾಲ್ಲೂಕುಗಳಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿ ಶಿಕ್ಷಕರ ಅನುಕೂಲಕ್ಕಾಗಿ 127 ವಸತಿ ಗೃಹಗಳನ್ನು ನಿರ್ಮಾಣ ಮಾಡಲಾಗಿದೆ.

ಇಪಿ 32 ಯೋಸಕ 2020

(ಎಸ್.ಸುರೇಶ್ ಕುಮಾರ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಪಂಪ್‌ಸೆಟ್ ಸರಬರಾಜು ಮಾಡಲು ಹಾಗೂ ವಿದ್ಯುತ್ ಸಂಪರ್ಕ ಕಲ್ಪಿಸಲು ಬಾಕಿ ಇರುವ ಕೊಳವೆಬಾವಿಗಳ ವಿವರಗಳು ಈ ಕೆಳಕಂಡಂತಿದೆ.

ಕ್ರ.ಸಂ	ವಿಧಾನಸಭಾ ಕ್ಷೇತ್ರ	2018–19ನೇ ಸಾಲಿನಲ್ಲಿ ಕೊರೆಯಲಾದ ಕೊಳವೆಬಾವಿಗಳ ಪೈಕಿ ಪಂಪ್‌ಸೆಟ್ ಸರಬರಾಜು ಮಾಡಿ, ವಿದ್ಯುತ್ ಸಂಪರ್ಕ ಕಲ್ಪಿಸಲು ಬಾಕಿ ಇರುವ ಕೊಳವೆಬಾವಿಗಳು
1	ಹಾಸನ	6
2	ಹೊಳೆನರಸೀಪುರ	4
3	ಅರಕಲಗೂಡು	6
4	ಸಕಲೇಶಪುರ	2
5	ಬೇಲೂರು	6
6	ಅರಸೀಕೆರೆ	9
7	ಶ್ರವಣಬೆಳಗೊಳ	3
	ಒಟ್ಟು	36

ಸಂಖ್ಯೆ: ಸಕಇ 40 ಎಸ್‌ಡಿಸಿ 2021

(ಬಿ.ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು.

<table>
<tr>
<td>(ಆ)</td>
<td>ಸದರಿ ಯೋಜನೆಯಡಿ ಆಯ್ಕೆ ಮಾಡಲಾಗಿರುವ ಫಲಾನುಭವಿಗಳಿಗೆ ಯೋಜನೆಯಂತೆ ಕೊಳವೆ ಬಾವಿಗಳನ್ನು ಕೊರೆಯಿಸಲಾಗಿದೆಯೇ;ಕೊಳವೆ ಬಾವಿಗಳನ್ನು ಕೊರೆಯಲು ಗುತ್ತಿಗೆ ಪಡೆದ ಸಂಸ್ಥೆಗಳ ವಿವರ ನೀಡುವುದು;</td>
<td>
ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ ಕೈಗೊಳ್ಳಲಾದ ಕೊಳವೆ ಬಾವಿಗಳ ಪ್ರಗತಿ ಹಾಗೂ ಗುತ್ತಿಗೆದಾರರ ವಿವರಗಳು ಈ ಕೆಳಗಿನಂತಿವೆ.
<table>
<tr><th>ಕ್ರಸಂ</th><th>ವರ್ಷ</th><th>ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಗುರಿ ಹಾಗೂ ಗುತ್ತಿಗೆ ಪಡೆದ ಸಂಸ್ಥೆಗಳು</th><th>ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಗುರಿ</th></tr>
<tr><td>1</td><td>2017–18</td><td>326</td><td rowspan="2">73</td></tr>
<tr><td>2</td><td>2018--19</td><td>286</td></tr>
<tr><td></td><td>ಬಾಕಿ</td><td>18</td><td>01
31	Diploma in Computer Application (DICA)
32	Diploma in Basic Web Designing (DBWD)
33	Diploma in Basic Programming (DBC)
34	Computer Hardware & Networking (CH&N)
35	Diploma in Advance Web Designing (DIWD)
36	Diploma in Advance Programming (DIAP)
37	Diploma in Database Management (DIDM)
38	Diploma in Graphic Design (DIGD)
39	Diploma in Computer Teachers Training Course (DCTTC)
40	Advanced Diploma in Computer Application (ADCA)
41	"O" Level Programmer (OLP)

ಕರ್ನಾಟಕ ವಿಧಾನ ಸಭೆ

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	998
2.	ಮಾನ್ಯ ಸದಸ್ಯರ ಹೆಸರು	ಶ್ರೀ ರಾಮದಾಸ್ ಎಸ್.ಎ. (ಕೃಷ್ಣರಾಜ)
3.	ಉತ್ತರಿಸಬೇಕಾದ ದಿನಾಂಕ	04/02/2021
4.	ಉತ್ತರಿಸುವವರು	ಮಾನ್ಯ ಕಾರ್ಮಿಕ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಅಸಂಘಟಿತ ವಲಯದ ಕಾರ್ಮಿಕರಿಗೆ ಸರ್ಕಾರವು ಘೋಷಿಸಿರುವ ಯೋಜನೆಗಳು ಯಾವುವು;	ಅಸಂಘಟಿತ ವಲಯದ ಕಾರ್ಮಿಕರಿಗೆ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಹಾಗೂ ಕರ್ನಾಟಕ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಗಳ ಮೂಲಕ ಹಲವಾರು ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ಸದರಿ ವಿವರಗಳು ಈ ಕೆಳಕಂಡಂತಿವೆ. <u>ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:-</u> ಮಂಡಳಿಯಲ್ಲಿ ನೋಂದಾಯಿತರಾದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ 19 ವಿವಿಧ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ರೂಪಿಸಿ ಜಾರಿಗೊಳಿಸಲಾಗುತ್ತಿದೆ. ವಿವರಗಳನ್ನು <u>**ಅನುಬಂಧ-1**</u> ರಲ್ಲಿ ಲಗತ್ತಿಸಿದೆ. <u>ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:-</u> ಕರ್ನಾಟಕ ರಾಜ್ಯ ಸರ್ಕಾರವು, ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸಲು ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯನ್ನು ಸ್ಥಾಪಿಸಿದ್ದು, ಅಸಂಘಟಿತ ಕಾರ್ಮಿಕರಿಗೆ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. (1) <u>**ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ:-**</u> ಖಾಸಗಿ ವಾಣಿಜ್ಯ ಸಾರಿಗೆ ವಾಹನ ಚಾಲಕರಿಗೆ ಸಂಬಂಧಪಟ್ಟಂತೆ ಯೋಜನೆಯಡಿ ಈ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತಿದೆ. (ಅ) **ಅಪಘಾತ ಪರಿಹಾರ ಸೌಲಭ್ಯ:** ಯೋಜನೆಯಡಿ, ಅಪಘಾತದಿಂದಾದ ಮರಣ ಪ್ರಕರಣಗಳಲ್ಲಿ ರೂ. 5 ಲಕ್ಷದ ಪರಿಹಾರ, ಸಂಪೂರ್ಣ ಶಾಶ್ವತ ದುರ್ಬಲತೆ ಪ್ರಕರಣಗಳಲ್ಲಿ ರೂ. 2 ಲಕ್ಷದ ಪರಿಹಾರ ಮತ್ತು ಒಳರೋಗಿಯಾಗಿ ಚಿಕಿತ್ಸೆ ಪಡೆದಲ್ಲಿ ರೂ.1 ಲಕ್ಷದವರೆಗೂ ಚಿಕಿತ್ಸಾ ವೆಚ್ಚದ ಮರುಪಾವತಿ ನೀಡಲಾಗುವುದು.

(ಆ) **ಶೈಕ್ಷಣಿಕ ಧನ ಸಹಾಯ** : ಅಪಘಾತದ ಕಾರಣ ನಿಧನರಾದ ಅಥವಾ ಸಂಪೂರ್ಣ ಶಾಶ್ವತ ದುರ್ಬಲತೆ ಹೊಂದಿದ ಫಲಾನುಭವಿಗಳ ಇಬ್ಬರು ಮಕ್ಕಳಿಗೆ ಪದವಿಪೂರ್ವ ವ್ಯಾಸಂಗದವರೆಗೆ ವಾರ್ಷಿಕ ರೂ.10,000/-ಗಳ ಶೈಕ್ಷಣಿಕ ಸಹಾಯಧನ ನೀಡಲಾಗುತ್ತಿದೆ.

(ಇ) **ಸ್ಮಾರ್ಟ್ ಕಾರ್ಡ್ ಸೌಲಭ್ಯ** : ಯೋಜನೆಯ ಕುರಿತು ಫಲಾನುಭವಿಗಳಲ್ಲಿ ಜಾಗೃತಿ ಮೂಡಿಸಲು ಎಲ್ಲಾ ಖಾಸಗಿ ವಾಣಿಜ್ಯ ಸಾರಿಗೆ ವಾಹನ ಚಾಲಕರಿಗೆ ಸ್ಮಾರ್ಟ್ ಕಾರ್ಡ್ ವಿತರಿಸಲಾಗುತ್ತಿದೆ.

(ಈ) **ಶ್ರಮ ಸಮ್ಮಾನ ಪ್ರಶಸ್ತಿ** : ಪ್ರತಿ ವರ್ಷ ಮಾರ್ಚ್ 01 ರಂದು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಕಾರ್ಮಿಕ ಸಮ್ಮಾನ ದಿನಾಚರಣೆ ಆಚರಿಸಿ, ಉತ್ತಮ ಹಾಗೂ ಸುರಕ್ಷತಾ ಚಾಲನೆ ಮಾಡಿದ ತ್ರಿಚಕ್ರ ಹಾಗೂ ನಾಲ್ಕು ಚಕ್ರದ ವಾಹನ ಚಾಲಕರಿಗೆ ಪ್ರತಿ ಜಿಲ್ಲೆಗೆ ಪ್ರತ್ಯೇಕವಾಗಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಪ್ರಶಸ್ತಿ ಮತ್ತು 8 ವಿಶೇಷ ಪುರಸ್ಕಾರ ಪ್ರಶಸ್ತಿಗಳು ಸೇರಿ ಒಟ್ಟು ರಾಜ್ಯಾದ್ಯಂತ 660 ಚಾಲಕರಿಗೆ "ಶ್ರಮ ಸಮ್ಮಾನ ಪ್ರಶಸ್ತಿ" ನೀಡಿ ಗೌರವಿಸಲಾಗುತ್ತಿದೆ.

(ಈ) **ಅಪಘಾತ ಜೀವ ರಕ್ಷಕ:-** ಅಪಘಾತಕ್ಕೊಳಗಾದ ಗಾಯಾಳುಗಳನ್ನು ರಕ್ಷಿಸುವ ಸ್ವಯಂಸೇವಕರನ್ನು ಸೃಷ್ಟಿಸುವ ಉದ್ದೇಶದಿಂದ ಅಪಘಾತ ಜೀವರಕ್ಷಕ ಕಾರ್ಯಕ್ರಮದಡಿ ಚಾಲಕರಿಗೆ ಪ್ರಥಮ ಚಿಕಿತ್ಸಾ ತರಬೇತಿಯನ್ನು ನೀಡಲಾಗುತ್ತಿದೆ.

(2) **<u>ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ:-</u>**

(ಅ) **"ಸ್ಮಾರ್ಟ್ ಕಾರ್ಡ್":-** ಯೋಜನೆಯಡಿ 11 ಅಸಂಘಟಿತ ವರ್ಗಗಳಾದ **"ಹಮಾಲರು, ಮನೆಗೆಲಸದವರು, ಚಿಂದಿ ಆಯುವವರು, ಟೈಲರ್ಸ್, ಮೆಕ್ಯಾನಿಕ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಕ್ಷೌರಿಕರು ಹಾಗೂ ಭಟ್ಟಿ ಕಾರ್ಮಿಕ"**ರನ್ನು ನೋಂದಾಯಿಸಿ ಸ್ಮಾರ್ಟ್ ಕಾರ್ಡ್ ವಿತರಿಸಲಾಗುತ್ತಿದೆ.

(ಆ) **ಶ್ರಮ ಸಮ್ಮಾನ ಪ್ರಶಸ್ತಿ** : ಪ್ರತಿ ವರ್ಷ, ಮಾರ್ಚ್ 01 ರಂದು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಕಾರ್ಮಿಕ ಸಮ್ಮಾನ ದಿನಾಚರಣೆ ಆಚರಿಸಿ, 11 ಅಸಂಘಟಿತ ವರ್ಗಗಳಾದ **"ಹಮಾಲರು, ಮನೆಗೆಲಸದವರು, ಚಿಂದಿ ಆಯುವವರು, ಟೈಲರ್ಸ್, ಮೆಕ್ಯಾನಿಕ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಕ್ಷೌರಿಕರು ಹಾಗೂ ಭಟ್ಟಿ ಕಾರ್ಮಿಕ"** ವಲಯಗಳಲ್ಲಿ ವಿಶೇಷ ಸಾಧನೆ ಮಾಡಿದ ಕಾರ್ಮಿಕರನ್ನು ಗುರುತಿಸಿ, ಪ್ರತಿಯೊಂದು ಜಿಲ್ಲೆಗೆ ಪ್ರತಿಯೊಂದು ವಲಯಕ್ಕೆ ಪ್ರಥಮ, ದ್ವಿತೀಯ ಹಾಗೂ ತೃತೀಯ ಪ್ರಶಸ್ತಿ ಮತ್ತು 8 ವಿಶೇಷ ಪುರಸ್ಕಾರ ಪ್ರಶಸ್ತಿಗಳು ಸೇರಿ ಒಟ್ಟು 3,630 ಕಾರ್ಮಿಕರಿಗೆ "ಶ್ರಮ ಸಮ್ಮಾನ ಪ್ರಶಸ್ತಿ" ನೀಡಿ ಗೌರವಿಸಲಾಗುತ್ತಿದೆ.

		(ಇ) **ಕಾರ್ಮಿಕ ಸೇವಾ ಕೇಂದ್ರ** :- ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ 2008ರ ಕಲಂ 9ರನ್ವಯ ಫಲಾನುಭವಿಗಳಲ್ಲಿ ಅಸಂಘಟಿತ ಕಾರ್ಮಿಕರಿಗೆ ಲಭ್ಯವಿರುವ ಎಲ್ಲಾ ಯೋಜನೆಗಳ ಕುರಿತು ಮಾಹಿತಿ ನೀಡಲು, ಯೋಜನೆಗಳ ಸೌಲಭ್ಯಗಳನ್ನು ಪಡೆದುಕೊಳ್ಳಲು ಅವಶ್ಯಕವಿರುವ ದಾಖಲಾತಿಗಳನ್ನು ಸಿದ್ಧಪಡಿಸಲು ಹಾಗೂ ನಿಗಧಿಪಡಿಸಿದ ಅರ್ಜಿ ನಮೂನೆಗಳನ್ನು ಭರ್ತಿ ಮಾಡಿ ಸಂಬಂಧಪಟ್ಟವರಿಗೆ ರವಾನಿಸಲು ಸಹಾಯವಾಗುವಂತೆ ರಾಜ್ಯದ ಎಲ್ಲಾ 175 ತಾಲ್ಲೂಕುಗಳಲ್ಲಿ ತಲಾ ಒಂದರಂತೆ ಕಾರ್ಮಿಕ ಸೇವಾ ಕೇಂದ್ರಗಳನ್ನು ಹಾಗೂ ಬೆಂಗಳೂರು ವ್ಯಾಪ್ತಿಯಲ್ಲಿ 6 ಕಾರ್ಮಿಕ ಸೇವಾ ಕೇಂದ್ರಗಳು ಸೇರಿ ಒಟ್ಟು 181 ಕಾರ್ಮಿಕ ಸೇವಾ ಕೇಂದ್ರಗಳನ್ನು ತೆರೆಯಲು ನಿರ್ಣಯಿಸಿದ್ದು, ಈಗಾಗಲೇ 159 ತಾಲ್ಲೂಕುಗಳಲ್ಲಿ ಕಾರ್ಮಿಕ ಸೇವಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಕಾರ್ಮಿಕ ಇಲಾಖೆ ಹಾಗೂ ಅದರ ಅಧೀನದಲ್ಲಿ ಬರುವ ಮಂಡಳಿಗಳು ಅಸಂಘಟಿತ ಕಾರ್ಮಿಕರಿಗೆ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ಕುರಿತು ಮಾಹಿತಿ, ಸಹಾಯ ಹಾಗೂ ಸೌಲಭ್ಯಗಳನ್ನು ಸದರಿ ಸೇವಾ ಕೇಂದ್ರಗಳಲ್ಲಿ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ನೇಮಕಗೊಂಡ ಕಾರ್ಮಿಕ ಬಂಧುಗಳ ಮೂಲಕ ಪಡೆಯಬಹುದಾಗಿದೆ.
ಆ)	ರಾಜ್ಯದಲ್ಲಿ ಕಟ್ಟಡ ಕಾರ್ಮಿಕರ ನೋಂದಣಿ ಅರ್ಜಿಗಳಲ್ಲಿ ಅನರ್ಹ ಕಟ್ಟಡ ಕಾರ್ಮಿಕರನ್ನು ಗುರುತಿಸಲು ಯಾವ ಕ್ರಮವನ್ನು ಕೈಗೊಳ್ಳಲಾಗಿದೆ;	ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಕಟ್ಟಡ ಕಾರ್ಮಿಕರ ನೋಂದಣಿ ಸಮಯದಲ್ಲಿ ಅನರ್ಹ ಕಾರ್ಮಿಕರು ನೋಂದಣಿಯಾಗುವುದನ್ನು ತಪ್ಪಿಸುವ ಉದ್ದೇಶದಿಂದ ಈ ಕೆಳಕಂಡ ಕ್ರಮಗಳನ್ನು ಮಂಡಳಿಯಿಂದ ಕೈಗೊಳ್ಳಲಾಗಿದೆ. ಅರ್ಜಿದಾರರು ಒಂದು ಲಾಗಿನ್ ಐಡಿಯಿಂದ ಒಂದು ನೋಂದಣಿ ಅರ್ಜಿಯನ್ನು ಮಾತ್ರ ಇ-ಸಹಿ ಮೂಲಕ ಸಲ್ಲಿಸಬಹುದಾಗಿದೆ. ಸೇವಾ ಸಿಂಧುವಿನಲ್ಲಿ ನೋಂದಣಿಯಾದ (Common Service Centre - CSC) / ಸೆಂಟರ್‌ಗಳಲ್ಲಿ ಒಂದಕ್ಕಿಂತ ಹೆಚ್ಚು ಅರ್ಜಿಗಳು ಒಂದೇ ಲಾಗಿನ್ ಐಡಿ ಮೂಲಕ ಸಲ್ಲಿಸಬಹುದಾಗಿದೆ. ಆದರೆ, ಪ್ರತಿ ಒಂದು ಅರ್ಜಿಗೆ ಸಂಬಂಧಿಸಿದ ಅರ್ಜಿದಾರರು ಆಧಾರ್ ಸಂಖ್ಯೆಗೆ ಲಿಂಕ್‌ಗೊಂಡ ಇ-ಸಹಿ ಕಡ್ಡಾಯವಾಗಿರುತ್ತದೆ. ಸದರಿ ಆಧಾರ್‌ಗೆ ಲಿಂಕ್‌ಗೊಂಡ ಮೊಬೈಲ್ ನಂಬರ್‌ಗೆ ಓಟಿಪಿ ಕಳುಹಿಸಲಾಗುವುದು. ಸದರಿ ಓಟಿಪಿ ನಂಬರ್ ಅನ್ನು ಅರ್ಜಿದಾರರು ನೋಂದಣಿ ಅರ್ಜಿಯನ್ನು ಸಲ್ಲಿಸುವ ಸಮಯದಲ್ಲಿ ತಿಳಿಸುವುದು ಕಡ್ಡಾಯವಾಗಿರುತ್ತದೆ. ಒಂದು ವೇಳೆ ಓಟಿಪಿ ತಿಳಿಸದಿದ್ದಲ್ಲಿ ನೋಂದಣಿ ಪ್ರಕ್ರಿಯೆ ಪೂರ್ಣಗೊಳ್ಳುವುದಿಲ್ಲ. ಅಲ್ಲದೆ, ಸಂಬಂಧಿಸಿದ ಕಾರ್ಮಿಕ ನಿರೀಕ್ಷಕರು ತಮ್ಮಲ್ಲಿ ಸ್ವೀಕರಿಸಿದ ನೋಂದಣಿ ಅರ್ಜಿಗಳನ್ನು ಪರಿಶೀಲಿಸಿ ಇ-ಸಹಿ ಇಲ್ಲದೆ ನೋಂದಣಿ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಆನ್‌ಲೈನ್ ಮೂಲಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರನ್ನು ನೋಂದಾಯಿಸುವ ಪ್ರಕ್ರಿಯೆ ಜಾರಿಯಲ್ಲಿದ್ದು, ನೋಂದಣಿಗಾಗಿ ಸ್ವೀಕರಿಸಿದ ಅರ್ಜಿಗಳನ್ನು ಸಂಬಂಧಿಸಿದ ಕಾರ್ಮಿಕ ನಿರೀಕ್ಷಕರು 45 ದಿನಗಳೊಳಗಾಗಿ ಖುದ್ದು ಪರಿಶೀಲನೆ ಮಾಡಿ ಸದರಿ ಅರ್ಜಿದಾರರು ಅರ್ಹ ಕಟ್ಟಡ ಕಾರ್ಮಿಕರೆಂದು ಕಂಡು ಬಂದಲ್ಲಿ ಅನುಮೋದನೆ ನೀಡಿ ನೋಂದಣಿ ಮಾಡುತ್ತಾರೆ.

ಮಂಡಳಿಯ ಫಲಾನುಭವಿಗಳ ನೋಂದಣಿ, ನವೀಕರಣ ಮತ್ತು ಸೌಲಭ್ಯಗಳನ್ನು ಪಡೆಯಲು ತಂತ್ರಾಂಶದ ಮೂಲಕ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಅರ್ಜಿದಾರರು ಆಧಾರ್ ಲಿಂಕ್‌ಗೆ ಒಳಪಟ್ಟ ಮೊಬೈಲ್ ಸಂಖ್ಯೆಗೆ ಓಟಿಪಿಯನ್ನು ಕಳುಹಿಸಿಕೊಡಲಾಗುವುದು. ಸದರಿ ಓಟಿಪಿ ಸಂಖ್ಯೆಯನ್ನು ಅರ್ಜಿದಾರರು ತಿಳಿಸುವುದನ್ನು ಕಡ್ಡಾಯ ಮಾಡುವುದರ ಮೂಲಕ ದುರುಪಯೋಗವಾಗುವುದನ್ನು ತಡೆಯಲಾಗಿರುತ್ತದೆ.

ಮಂಡಳಿ ವತಿಯಿಂದ ಕಾರ್ಮಿಕರಲ್ಲಿ ಮಂಡಳಿಯ ಸೌಲಭ್ಯಗಳ ಕುರಿತು ಅರಿವು ಮೂಡಿಸಲು ವಿವಿಧ ಮಾಹಿತಿ ಶಿಕ್ಷಣ ಮತ್ತು ಸಂವಹನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಸದರಿ ಚಟುವಟಿಕೆಗಳಲ್ಲಿ ಅನರ್ಹ ಕಟ್ಟಡ ಕಾರ್ಮಿಕರು ತಪ್ಪು ಮಾಹಿತಿ ನೀಡಿ ನೋಂದಾಯಿಸಿಕೊಂಡು ಮಂಡಳಿಯ ಸೌಲಭ್ಯವನ್ನು ಪಡೆದುಕೊಂಡಿದ್ದು ಕಂಡು ಬಂದಲ್ಲಿ **"ಕಾನೂನು ರೀತ್ಯ ಕ್ರಮ ಕೈಗೊಳ್ಳಲಾಗುತ್ತದೆ"** ಎಂದು ಎಚ್ಚರಿಕೆಯ ಬರಹವನ್ನು ಪ್ರಕಟಿಸಲಾಗುತ್ತಿದೆ.

ಇ) ರಾಜ್ಯದಲ್ಲಿ ಕಟ್ಟಡ ಕಾಮಿಕರ ಕಲ್ಯಾಣ ಮಂಡಳಿಯಲ್ಲಿ ವಿವಿಧ ಯೋಜನೆಗಳಡಿಯಲ್ಲಿ ನೀಡಲಾಗುವ ಸಹಾಯಧನವು ಫಲಾನುಭವಿಗಳಿಗೆ ಮಂಜೂರಾತಿಯಾಗಿದ್ದರೂ ಹಣ ಬಿಡುಗಡೆ ಆಗದೇ ಇರುವ ಪ್ರಕರಣಗಳೆಷ್ಟು; (ಜಿಲ್ಲಾವಾರು ಮಾಹಿತಿಯನ್ನು ನೀಡುವುದು)

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವಿವಿಧ ಯೋಜನೆಗಳಡಿ ನೀಡಲಾಗುವ ಸಹಾಯಧನವು ಫಲಾನುಭವಿಗಳಿಗೆ ಮಂಜೂರಾಗಿ ಹಣ ಬಿಡುಗಡೆಗಾಗಿ ಇದುವರೆವಿಗೂ ಬಾಕಿಯಿರುವ ಪ್ರಕರಣಗಳು ಒಟ್ಟು 6333. ಜಿಲ್ಲಾವಾರು ವಿವರ ಈ ಕೆಳಕಂಡಂತಿದೆ.

ಕ್ರ. ಸಂ.	ಜಿಲ್ಲೆ	ಪ್ರಕರಣಗಳ ಸಂಖ್ಯೆ	ಬಿಡುಗಡೆಯಾಗ ಬೇಕಾದ ಮೊತ್ತ
1	ಬೆಂಗಳೂರು	1422	1,48,20,000
2	ಬೆಳಗಾವಿ	2646	2,05,74,000
3	ಬೀದರ	300	19,79,000
4	ಗದಗ	130	65,00,000
5	ಹುಬ್ಬಳ್ಳಿ	676	25,43,000
6	ಹಾಸನ	765	1,15,59,000
7	ಕಲಬುರಗಿ	335	79,50,000
8	ವಿಜಯಪುರ	17	3,90,000
9	ಮಂಡ್ಯ	23	2,67,000
10	ರಾಮನಗರ	19	3,00,000
	ಒಟ್ಟು	**6333**	**6,68,82,000**

ಮೇಲಿನ ಹಣ ಬಿಡುಗಡೆಗಾಗಿ ಬಾಕಿ ಇರುವ ಅರ್ಜಿಗಳನ್ನು ಕೂಡಲೇ ವಿಲೇವಾರಿ ಮಾಡಲು ಬ್ಯಾಂಕ್ ಅಧಿಕಾರಿಗಳಿಗೆ ಸೂಚಿಸಲಾಗಿರುತ್ತದೆ.

ಈ)	ಹಣ ಬಿಡುಗಡೆ ಮಾಡುವ ಬಗ್ಗೆ ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗಿದೆ;	ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ:- ಅರ್ಹ ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ಇರುವ ವಿವಿಧ ಸೌಲಭ್ಯಗಳನ್ನು ತುರ್ತಾಗಿ ಅನುಮೋದಿಸಿ ನಿಗಧಿತ ಅವಧಿಯೊಳಗೆ ಸಹಾಯಧನವನ್ನು ಒದಗಿಸಲು ಸಂಬಂಧಿಸಿದ ಎಲ್ಲಾ ಸಹಾಯಕ ಕಾರ್ಮಿಕ ಆಯುಕ್ತರಿಗೆ ಮತ್ತು ಕಾರ್ಮಿಕ ಅಧಿಕಾರಿಗಳಿಗೆ ಮಂಜೂರಾತಿ ಅಧಿಕಾರವನ್ನು ವಿಕೇಂದ್ರಿಕರಿಸಲಾಗಿದೆ. ನಿಗಧಿತ ಅವಧಿಯೊಳಗೆ ಸಹಾಯಧನವನ್ನು ಒದಗಿಸಲು ಉದ್ದೇಶಿಸಿ ಕೆನರಾ ಬ್ಯಾಂಕ್ ಹೊಂಬೇಗೌಡನಗರ ಶಾಖೆ ಇಲ್ಲಿ ಎಲ್ಲಾ ಸಹಾಯಕ ಕಾರ್ಮಿಕ ಆಯುಕ್ತರು ಮತ್ತು ಕಾರ್ಮಿಕ ಅಧಿಕಾರಿಗಳ ಹೆಸರಲ್ಲಿ ಪ್ರತ್ಯೇಕವಾದ ಬ್ಯಾಂಕ್ ಅಕೌಂಟ್‌ಗಳನ್ನು ತೆರೆದು ಮುಂಗಡವಾಗಿ ಹಣವನ್ನು ವರ್ಗಾಹಿಸಲಾಗುತ್ತಿದೆ. ಸದರಿ ಬ್ಯಾಂಕ್‌ನಿಂದ ಪ್ರತಿ ದಿನ ಫಲಾನುಭವಿಗಳಿಗೆ ಎನ್.ಇ.ಎಫ್.ಟಿ/ ಆರ್.ಟಿ.ಜಿ.ಎಸ್ ಮೂಲಕ ಸಹಾಯಧನವನ್ನು ವರ್ಗಾಯಿಸಲಾಗುತ್ತಿದೆ. ಈ ರೀತಿ ಖಾತೆಗೆ ಸಹಾಯಧನವು ಜಮೆಯಾದ ಪ್ರಕರಣಗಳಲ್ಲಿ ಯಶಸ್ವಿಗೊಂಡ ಫಲಾನುಭವಿಗಳ ವಿವರ ಮತ್ತು ಯಶಸ್ವಿಯಾಗದೇ ಇರುವ ಫಲಾನುಭವಿಗಳ ವಿವರಗಳನ್ನು ಸಹಾಯಕ ಕಾರ್ಮಿಕ ಆಯುಕ್ತರು ಮತ್ತು ಕಾರ್ಮಿಕ ಅಧಿಕಾರಿಗಳಿಗೆ ಸಲ್ಲಿಸಲಾಗುತ್ತಿದೆ. ಸದರಿ ಯಶಸ್ವಿಯಾಗದೇ ಇರುವ ಫಲಾನುಭವಿಗಳ ತಾಂತ್ರಿಕ ದೋಷಗಳನ್ನು ಮತ್ತು ಇತರೆ ಅವಶ್ಯಕತೆ ಇರುವ ದಾಖಲೆಗಳನ್ನು ಸಂಬಂಧಿಸಿದ ಸಹಾಯಕ ಕಾರ್ಮಿಕ ಆಯುಕ್ತರು ಮತ್ತು ಕಾರ್ಮಿಕ ಅಧಿಕಾರಿಗಳು ಪುನಃ ಬ್ಯಾಂಕ್‌ಗೆ ಸಲ್ಲಿಸಿ ಫಲಾನುಭವಿಗಳಿಗೆ ನೇರವಾಗಿ ಬ್ಯಾಂಕ್ ಮೂಲಕ ಸಹಾಯಧನ ಒದಗಿಸಬಹುದಾಗಿದೆ. ಪ್ರತಿ ತಿಂಗಳ ಅಂತ್ಯಕ್ಕೆ ಸಂಬಂಧಿಸಿದ ಸಹಾಯಕ ಕಾರ್ಮಿಕ ಆಯುಕ್ತರು, ಕಾರ್ಮಿಕ ಅಧಿಕಾರಿಗಳು ತಮ್ಮ ಕಛೇರಿಯ ಮಾಹಿತಿಯೊಂದಿಗೆ ಸಂಬಂಧಿಸಿದ ಬ್ಯಾಂಕ್ ಖಾತೆಯ ವಿವರಗಳೊಂದಿಗೆ ಹಾಗೂ ಮಂಡಳಿಯೊಂದಿಗೆ Reconciliation ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.
ಉ)	ರಾಜ್ಯದಲ್ಲಿ ಕಟ್ಟಡ ಕಾರ್ಮಿಕರು, ಕ್ಷೌರಿಕರು ಮತ್ತು ದೋಬಿಗಳಿಗೆ ರೂ.5000/-ಗಳ ಸಹಾಯಧನವನ್ನು ಸರ್ಕಾರವು ಘೋಷಿಸಿದ್ದು, ಈ ಸಂಬಂಧ ಎಷ್ಟು ಅರ್ಜಿಗಳು ಬಂದಿದ್ದವು; ಆ ಪೈಕಿ ಎಷ್ಟು ಫಲಾನುಭವಿಗಳಿಗೆ ಸಹಾಯಧನವು ಮಂಜೂರಾಗಿದೆ ಹಾಗೂ ಸಹಾಯಧನವು ಮಂಜುರಾಗಿದ್ದರೂ ಹಣ ಬಿಡುಗಡೆ ಆಗದೆ ಇರುವ ಪ್ರಕರಣಗಳೆಷ್ಟು? (ಜಿಲ್ಲಾವಾರು ಮಾಹಿತಿಯನ್ನು ನೀಡುವುದು)	**ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:-** ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಲಾಕ್ ಡೌನ್ ಸಮಯಕ್ಕೆ ಅಂದರೆ ದಿನಾಂಕ: 23-03-2020 ರ ಪೂರ್ವದಲ್ಲಿ ನೋಂದಣಿಯಾಗಿದ್ದ 21,78,019 ಕಾರ್ಮಿಕರ ಪೈಕಿ ಆಧಾರ್ ಸಂಖ್ಯೆ ಮತ್ತು ಬ್ಯಾಂಕ್ ಖಾತೆ ವಿವರಗಳನ್ನು ಮಂಡಳಿಯಲ್ಲಿ ಹೊಂದಿದ್ದ 11,56,752 ಕಾರ್ಮಿಕರುಗಳಿಗೆ ಮಂಡಳಿಯಿಂದ ನೇರವಾಗಿ ಡಿಬಿಟಿ ಮತ್ತು ನೆಫ್ಟ್ ಮೂಲಕ ರೂ.5000/-ಗಳ ಪರಿಹಾರ ಧನವನ್ನು ಸಂಬಂಧಿಸಿದ ಫಲಾನುಭವಿಗಳ ಖಾತೆಗೆ ಜಮೆ ಮಾಡಲಾಗಿರುತ್ತದೆ.

ದಿನಾಂಕ: 16-04-2020 ರಂದು ಮಂಡಳಿ ವತಿಯಿಂದ ಪತ್ರಿಕಾ ಪ್ರಕಟಣೆ ಹೊರಡಿಸಿ ದಿನಾಂಕ: 23-03-2020 ರ ಪೂರ್ವದಲ್ಲಿ ನೋಂದಣಿಯಾಗಿ ಅಗತ್ಯ ದಾಖಲೆಗಳನ್ನು ಮಂಡಳಿಯಲ್ಲಿ ಹೊಂದಿರದ ಕಾರ್ಮಿಕರು ಅಗತ್ಯ ದಾಖಲೆಗಳನ್ನು ಜಿಲ್ಲಾ ಮಟ್ಟದ ಕಾರ್ಮಿಕ ಅಧಿಕಾರಿಗಳ ಕಛೇರಿಗಳಿಗೆ ಅಥವಾ ತಾಲೂಕು ಮಟ್ಟದ ಹಿರಿಯ/ ಕಾರ್ಮಿಕ ನಿರೀಕ್ಷಕರುಗಳ ಕಛೇರಿಗೆ ಅಥವಾ ಮಂಡಳಿಯ ಇ-ಮೇಲ್ / ವಾಟ್ಸಪ್‌ಗೆ ಸಲ್ಲಿಸಿ ಸದರಿ ಸಹಾಯಧನವನ್ನು ಪಡೆದುಕೊಳ್ಳಬಹುದಾಗಿದೆ ಎಂದು ತಿಳಿಸಲಾಗಿತ್ತು. ಈ ರೀತಿ ಒಟ್ಟು 4,91,679 ಫಲಾನುಭವಿಗಳು ಅಗತ್ಯ ದಾಖಲೆಗಳನ್ನು ಸಲ್ಲಿಸಿ ರೂ.5000/- ಗಳ ಸಹಾಯಧನವನ್ನು ಪಡೆದಿರುತ್ತಾರೆ.

ಕೋವಿಡ್-19 ಅವಧಿಯಲ್ಲಿ ಒಟ್ಟು 16,48,431 ಫಲಾನುಭವಿಗಳಿಗೆ ತಲಾ ರೂ. 5000/- ಗಳಂತೆ ಒಟ್ಟು ರೂ. 824.21 ಕೋಟಿಯಷ್ಟು ಸಹಾಯಧನವನ್ನು ವಿತರಿಸಲಾಗಿರುತ್ತದೆ. ಸದರಿ ಫಲಾನುಭವಿಗಳ ಜಿಲ್ಲಾವಾರು ವಿವರವನ್ನು <u>ಅನುಬಂಧ-2</u>ರಲ್ಲಿ ಲಗತ್ತಿಸಿದೆ.

ಸಹಾಯಧನವು ಮಂಜೂರಾಗಿದ್ದರೂ ಹಣ ಬಿಡುಗಡೆ ಆಗದೆ ಇರುವ ಪ್ರಕರಣಗಳು ಮಂಡಳಿಯಲ್ಲಿ ಯಾವುದು ಬಾಕಿ ಇರುವುದಿಲ್ಲ.

<u>ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:-</u>

ಕೋವಿಡ್-19ರ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಮೂಲಕ ಅಸಂಘಟಿತ ಕಾರ್ಮಿಕರಾದ ಅಗಸರು ಮತ್ತು ಕ್ಷೌರಿಕರಿಗೆ ತಲಾ ರೂ.5000/-ಗಳ ಒಂದು ಭಾರಿಯ ನೆರವನ್ನು ಸರ್ಕಾರವು ಘೋಷಿಸಿದ್ದು, ಸಂಬಂಧಿಸಿದ ವಿವರ ಈ ಕೆಳಕಂಡಂತಿವೆ:-

ಸದರಿ ನೆರವನ್ನು ಕೋರಿ ಅಗಸ ವೃತ್ತಿಯಲ್ಲಿ ತೊಡಗಿಕೊಂಡ 74,782 ಮತ್ತು ಕ್ಷೌರಿಕ ವೃತ್ತಿಯಲ್ಲಿ ತೊಡಗಿಕೊಂಡ 66,820 ಕಾರ್ಮಿಕರು ಸೇರಿದಂತೆ ಒಟ್ಟು 1,41,602 ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಅವುಗಳಲ್ಲಿ 1,19,642 ಅರ್ಜಿದಾರರಿಗೆ ಘೋಷಿತ ನೆರವಿನ ಮೊತ್ತ ತಲಾ ರೂ. 5,000/-ದಂತೆ ಒಟ್ಟು ರೂ. 59.821 ಕೋಟಿಗಳನ್ನು DBT ಮೂಲಕ ಅವರವರ ಬ್ಯಾಂಕ್ ಖಾತೆಗೆ ನೇರವಾಗಿ ಜಮೆ ಮಾಡಲಾಗಿದೆ.

ತಾಂತ್ರಿಕ ಕಾರಣ, ಮಾರ್ಗಸೂಚಿಯನ್ವಯ ಮಾಹಿತಿ ಒದಗಿಸದ ಹಾಗೂ ಷರತ್ತುಗಳನ್ನು ಪೂರೈಸದಿರುವ 14,719 ಅರ್ಜಿಗಳು ಮಂಜೂರಾತಿಗೆ ಬಾಕಿಯಿದ್ದು, ಸದರಿ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ ಎಲ್ಲಾ ಅರ್ಹ ಕಾರ್ಮಿಕರಿಗೆ ಘೋಷಿತ ನೆರವಿನ ಮೊತ್ತವನ್ನು ಬಿಡುಗಡೆ ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ.

ಕಾಇ 36 ಎಲ್ಇಟಿ 2021

(ಅರೆಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಸಚಿವರು

ಅನುಬಂಧ-1

(ಕರ್ನಾಟಕ ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ರಾಮ್‌ದಾಸ್ ಎಸ್.ಎ (ಕೃಷ್ಣರಾಜ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ; 998)

ಕನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿವತಿಯಿಂದ ಫಲಾನುಭವಿಗಳಿಗೆ ಸಿಗುವ ಸೌಲಭ್ಯಗಳು

1. **ಪಿಂಚಣಿ ಸೌಲಭ್ಯ:** ಮೂರು ವರ್ಷ ಸದಸ್ಯತ್ವದೊಂದಿಗೆ 60 ವರ್ಷ ಪೂರೈಸಿದ ಫಲಾನುಭವಿಗೆ ಮಾಸಿಕ ರೂ.2,000/-
2. **ಕುಟುಂಬ ಪಿಂಚಣಿ ಸೌಲಭ್ಯ:** ಮೃತ ಪಿಂಚಣಿದಾರರ ಪತಿ / ಪತ್ನಿ ಮಾಸಿಕ ರೂ.1000/-
3. **ದುರ್ಬಲತೆ ಪಿಂಚಣಿ:** ನೋಂದಾಯಿತ ಫಲಾನುಭವಿಯು ಖಾಯಿಲೆಗಳಿಂದ ಅಥವಾ ಕಟ್ಟಡ ಕಾಮಗಾರಿಗಳ ಅಪಘಾತದಿಂದ ಶಾಶ್ವತ/ಭಾಗಶಃ ಅಂಗವಿಕಲತೆ ಹೊಂದಿದ್ದರೆ ಮಾಸಿಕ ರೂ.2,000/- ಪಿಂಚಣಿ ಹಾಗೂ ಶೇಕಡವಾರು ದುರ್ಬಲತೆಯನ್ನಾಧರಿಸಿ ರೂ.2,00,000/- ದವರೆಗೆ ಅನುಗ್ರಹ ರಾಶಿ ಸಹಾಯಧನ.
4. **ಕನ್ನಡಕ, ಶ್ರವಣಯಂತ್ರ, ಕೃತಕ ಕೈಕಾಲು ಮತ್ತು** ಗಾಲಿ ಕುರ್ಚಿ ಮರುಪಾವತಿ ಸೌಲಭ್ಯ.
5. **ಟ್ರೈನಿಂಗ್-ಕಮ್-ಟೂಲ್‌ಕಿಟ್ ಸೌಲಭ್ಯ (ಶ್ರಮ ಸಾಮರ್ಥ್ಯ) :** ರೂ.30,000/- **ವರೆಗೆ**
6. **ಶ್ರಮ ಸಂಸಾರ ಸಾಮರ್ಥ್ಯ ತರಬೇತಿ ಸೌಲಭ್ಯ:** ನೋಂದಾಯಿತ ಫಲಾನುಭವಿಯ ಅವಲಂಬಿತರಿಗೆ
7. **ವಸತಿ ಸೌಲಭ್ಯ (ಕಾರ್ಮಿಕ ಗೃಹ ಭಾಗ್ಯ):** ರೂ.2,00,000/- ದವರೆಗೆ ಮುಂಗಡ ಸೌಲಭ್ಯ
8. **ಹೆರಿಗೆ ಸೌಲಭ್ಯ (ತಾಯಿ ಲಕ್ಷ್ಮೀ ಬಾಂಡ್):** ಮಹಿಳಾ ಫಲಾನುಭವಿಯ ಮೊದಲ ಎರಡು ಮಕ್ಕಳಿಗೆ ಹೆಣ್ಣು ಮಗುವಿನ ಜನನಕ್ಕೆ ರೂ. 30,000/- ಮತ್ತು ಗಂಡು ಮಗುವಿನ ಜನನಕ್ಕೆ ರೂ.20,000/-
9. **ಶಿಶು ಪಾಲನಾ ಸೌಲಭ್ಯ:**
10. **ಅಂತ್ಯಕ್ರಿಯೆ ವೆಚ್ಚ :** ರೂ.4,000/- ಹಾಗೂ ಅನುಗ್ರಹ ರಾಶಿ ರೂ.50,000/-ಸಹಾಯಧನ
11. **ಶೈಕ್ಷಣಿಕ ಸಹಾಯಧನ (ಕಲಿಕೆ ಭಾಗ್ಯ):** ಫಲಾನುಭವಿಯ ಇಬ್ಬರು ಮಕ್ಕಳ ವಿದ್ಯಾಭ್ಯಾಸಕ್ಕಾಗಿ:

ಕ್ರ.ಸಂ	ತರಗತಿ (ಉತ್ತೀರ್ಣಕ್ಕೆ)	ವಾರ್ಷಿಕ ಸಹಾಯ ಧನ	
		ಗಂಡು	ಹೆಣ್ಣು
I.	ನರ್ಸರಿ	3,000	4,000
II.	1 ರಿಂದ 4ನೇ ತರಗತಿ	3,000	4,000
III.	5 ರಿಂದ 8ನೇ ತರಗತಿ	5,000	6,000
IV.	9 ಹಾಗೂ 10ನೇ ತರಗತಿ	10,000	11,000
V.	ಪ್ರಥಮ ಪಿಯುಸಿ ಮತ್ತು ದ್ವಿತೀಯ ಪಿ.ಯು.ಸಿ	10,000	14,000
VI.	ಐಟಿಐ	12,000	15,000
VII.	ಪದವಿ ಪ್ರತಿ ವರ್ಷಕ್ಕೆ	15,000	20,000
VIII.	ಸ್ನಾತಕೋತ್ತರ ಪದವಿ ಸೇರ್ಪಡೆಗೆ	20,000	20,000
	ಮತ್ತು ಪ್ರತಿ ವರ್ಷಕ್ಕೆ	20,000	25,000
IX.	ಇಂಜನಿಯರಿಂಗ್ ಕೋರ್ಸ್ ಬಿಇ/ ಬಿ.ಟೆಕ್ ಸೇರ್ಪಡೆಗೆ	25,000	25,000
	ಮತ್ತು ಪ್ರತಿ ವರ್ಷಕ್ಕೆ	25,000	30,000
X.	ವೈದ್ಯಕೀಯ ಕೋರ್ಸ್‌ಗೆ ಸೇರ್ಪಡೆಗೆ	30,000	30,000
	ಮತ್ತು ಪ್ರತಿ ವರ್ಷಕ್ಕೆ	40,000	50,000
XI.	ಡಿಪ್ಲೋಮಾ	15,000	20,000
XII.	ಎಂ.ಟೆಕ್ / ಎಂ.ಇ	30,000	35,000
XIII.	ಎಂ.ಡಿ (ವೈದ್ಯಕೀಯ)	45,000	55,000
XIV.	ಪಿಹೆಚ್‌ಡಿ (ಪ್ರತಿ ವರ್ಷಕ್ಕೆ) ಗರಿಷ್ಠ 03 ವರ್ಷ	25,000	30,000

12. **ವೈದ್ಯಕೀಯ ಸಹಾಯಧನ (ಕಾರ್ಮಿಕ ಆರೋಗ್ಯ ಭಾಗ್ಯ)**: ನೋಂದಾಯಿತ ಫಲಾನುಭವಿ ಹಾಗೂ ಅವರ ಅವಲಂಭಿತರಿಗೆ **ರೂ.300/-** ರಿಂದ **ರೂ.10,000/-ವರೆಗೆ**

13. **ಅಪಘಾತ ಪರಿಹಾರ**: ಮರಣ ಹೊಂದಿದ್ದಲ್ಲಿ **ರೂ.5,00,000/-**, ಸಂಪೂರ್ಣ ಶಾಶ್ವತ ದುರ್ಬಲತೆಯಾದಲ್ಲಿ **ರೂ.2,00,000/- ಮತ್ತು** ಭಾಗಶಃ ಶಾಶ್ವತ ದುರ್ಬಲತೆಯಾದಲ್ಲಿ **ರೂ.1,00,000/-**

14. **ಪ್ರಮುಖ ವೈದ್ಯಕೀಯ ವೆಚ್ಚ ಸಹಾಯಧನ (ಕಾರ್ಮಿಕ ಚಿಕಿತ್ಸಾ ಭಾಗ್ಯ)**: ಹೃದ್ರೋಗ, ಕಿಡ್ನಿ ಜೋಡಣೆ, ಕ್ಯಾನ್ಸರ್ ಶಸ್ತ್ರಚಿಕಿತ್ಸೆ, ಕಣ್ಣಿನ ಶಸ್ತ್ರಚಿಕಿತ್ಸೆ, ಪಾರ್ಶ್ವವಾಯು, ಮೂಳೆ ಶಸ್ತ್ರಚಿಕಿತ್ಸೆ, ಗರ್ಭಕೋಶ ಶಸ್ತ್ರಚಿಕಿತ್ಸೆ, ಅಸ್ತಮ ಚಿಕಿತ್ಸೆ, ಗರ್ಭಪಾತ ಪ್ರಕರಣಗಳು, ಪಿತ್ತಕೋಶದ ತೊಂದರೆಗೆ ಸಂಬಂಧಿತ ಚಿಕಿತ್ಸೆ, ಮೂತ್ರ ಪಿಂಡದಲ್ಲಿನ ಕಲ್ಲು ತೆಗೆಯುವ ಚಿಕಿತ್ಸೆ, ಮೆದುಳಿನ ರಕ್ತಸ್ರಾವದ ಚಿಕಿತ್ಸೆ, ಅಲ್ಸರ್ ಚಿಕಿತ್ಸೆ, ಡಯಾಲಿಸಿಸ್ ಚಿಕಿತ್ಸೆ, ಕಿಡ್ನಿ ಶಸ್ತ್ರಚಿಕಿತ್ಸೆ, ಇ.ಎನ್.ಟಿ. ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ನರರೋಗ ಶಸ್ತ್ರಚಿಕಿತ್ಸೆ, ವ್ಯಾಸ್ಕ್ಯೂಲರ್ ಶಸ್ತ್ರಚಿಕಿತ್ಸೆ, ಅನ್ನನಾಳದ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಕರುಳಿನ ಶಸ್ತ್ರಚಿಕಿತ್ಸೆ, ಸ್ತನ ಸಂಬಂಧಿತ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಹರ್ನಿಯ ಶಸ್ತ್ರಚಿಕಿತ್ಸೆ, ಅಪೆಂಡಿಕ್ಸ್ ಶಸ್ತ್ರಚಿಕಿತ್ಸೆ, ಮೂಳೆ ಮುರಿತ/ಡಿಸ್‌ಲೊಕೇಶನ್ ಚಿಕಿತ್ಸೆ, ಇತರೆ ಔದ್ಯೋಗಿಕ ಖಾಯಿಲೆಗಳ ಚಿಕಿತ್ಸೆಗಳಿಗೆ **ರೂ.2,00,000/-ವರೆಗೆ**

15. **ಮದುವೆ ಸಹಾಯಧನ (ಗೃಹ ಲಕ್ಷ್ಮೀ ಬಾಂಡ್)**: ಫಲಾನುಭವಿ ಅಥವಾ ಅವರ ಇಬ್ಬರು ಮಕ್ಕಳ ಮದುವೆಗೆ ತಲಾ **ರೂ.50,000/-**

16. **LPG ಸಂಪರ್ಕ ಸೌಲಭ್ಯ (ಕಾರ್ಮಿಕ ಅನಿಲ ಭಾಗ್ಯ)**: ಅನಿಲ ಸಂಪರ್ಕದೊಂದಿಗೆ ಎರಡು ಬರ್ನರ್ ಸ್ಟೌವ್

17. **ಬಿಎಂಟಿಸಿ ಬಸ್ ಪಾಸ್ ಸೌಲಭ್ಯ**: ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿರುವಂತಹ / ವಾಸಸ್ಥಳದಿಂದ ಬೆಂಗಳೂರಿಗೆ ಪ್ರಯಾಣಿಸುವ ನೋಂದಾಯಿತ ಕಟ್ಟಡ ಕಾರ್ಮಿಕರಿಗೆ

18. **ಕೆಎಸ್‌ಆರ್‌ಟಿಸಿ ಬಸ್ ಪಾಸ್‌ನ ಸೌಲಭ್ಯ**: ರಾಜ್ಯದಾದ್ಯಂತ ವಿದ್ಯಾಭ್ಯಾಸದಲ್ಲಿ ತೊಡಗಿರುವ ನೋಂದಾಯಿತ ಕಾರ್ಮಿಕರ ಇಬ್ಬರು ಮಕ್ಕಳಿಗೆ (ಈ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ)

19. **ತಾಯಿ ಮಗು ಸಹಾಯ ಹಸ್ತ**: ಮಹಿಳಾ ಫಲಾನುಭವಿಯು ಮಗುವಿಗೆ ಜನ್ಮ ನೀಡಿದ ಸಂದರ್ಭದಲ್ಲಿ ಆಕೆಯ ಮಗುವಿನ ಶಾಲಾ ಪೂರ್ವ ಶಿಕ್ಷಣ ಮತ್ತು ಪೌಷ್ಠಿಕತೆಗಾಗಿ ಮಗುವಿಗೆ ಮೂರು ವರ್ಷಗಳು ತುಂಬುವವರೆಗೆ ವಾರ್ಷಿಕ **ರೂ.6,000/-** ಗಳ ಸಹಾಯಧನ.

998

ಅನುಬಂಧ-02

(ಕರ್ನಾಟಕ ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ರಾಮ್‌ದಾಸ್ ಎಸ್.ಎ (ಕೃಷ್ಣರಾಜ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ; 998)

District wise Details of Registered Beneficiaries of the KBOCWWB who have been Credited with Rs.5000 during COVID-19 as on 09.09.2020

Sl No.	District	Payment Done from Board Through DBT Aadhaar	Payment Done From Board Through NEFT	payment done From Labour Officer's
1	Bagalkote	15579	3393	10555
2	Belgaum	41674	11281	17026
3	Ballary	45372	4036	33433
4	Bengalore	36357	5378	42032
5	Bidar	43651	5117	22846
6	Bijapur	17613	3773	24239
7	Chamarajnagar	40290	1117	13252
8	Chikkaballapur	15980	1031	6735
9	Chikkamagalur	19550	9040	6139
10	Chitradurga	60049	3927	14556
11	Davanagere	58869	3194	22245
12	Gadag	11999	5102	6748
13	Hassan	54320	3401	15182
14	Haveri	13247	11138	19991
15	Hubli	48299	7813	20973
16	Gulbarga	40707	6335	37875
17	Karwar	47485	13792	17664
18	Kolar	44575	726	21288
19	Koppal	65794	5757	5348
20	Madikeri	951	468	1443
21	Mandya	24824	1643	14622
22	Mangalore	35657	7593	13132
23	Mysore	34030	2852	28120
24	Raichur	38789	2080	13279
25	Ramnagar	9638	1059	18393
26	Shimoga	92815	7055	13569
27	Tumkur	23338	2317	15527
28	Udupi	17430	7409	7759
29	Yadgiri	15774	4269	7708
	Total	**10,14,656**	**1,42,096**	**4,91,679**
	Grand Total	**16,48,431**		
	Total Amount Disbursed	**824,21,55,000**		

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 990
ಸದಸ್ಯರ ಹೆಸರು : ಶ್ರೀ. ಸುಕುಮಾರ್ ಶೆಟ್ಟಿ ಬಿ.ಎಂ.
ಉತ್ತರಿಸುವ ದಿನಾಂಕ : 04/02/2021
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ)	ಉಡುಪಿ ಜಿಲ್ಲೆಯಲ್ಲಿ ಇರುವ ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯಗಳ ವಿವರ ಹಾಗೂ ಮಂಜೂರಾದ ಹುದ್ದೆಗಳ ವಿವರ ಒದಗಿಸುವುದು; (ವಸತಿ ನಿಲಯವಾರು ಸಂಪೂರ್ಣ ಮಾಹಿತಿ ಒದಗಿಸುವುದು)	ಉಡುಪಿ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ 15 ಮೆಟ್ರಿಕ್ ಪೂರ್ವ ಹಾಗೂ 7 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖಾ ವತಿಯಿಂದ 08 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿವೆ. ನಿಲಯಗಳಲ್ಲಿ ಮಂಜೂರಾದ ಮತ್ತು ಭರ್ತಿಯಾದ ಹುದ್ದೆಗಳ ವಿವರವನ್ನು ಅನುಬಂಧ-1 ಮತ್ತು 2 ರಲ್ಲಿ ನೀಡಿದೆ.
ಆ)	ಉಡುಪಿಯಲ್ಲಿ ಪಿಯುಸಿ ಮತ್ತು ಪದವಿ ಶಿಕ್ಷಣ ಪಡೆಯಲು ಗ್ರಾಮೀಣ ಭಾಗದ ಹೆಚ್ಚು ಬಡ ವಿದ್ಯಾರ್ಥಿಗಳು ಕಾಲೇಜುಗಳಿಗೆ ದಾಖಲಾತಿ ಆಗುತ್ತಿರುವ ಸಂಖ್ಯೆಗೆ ಅನುಗುಣವಾಗಿ ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯಗಳಲ್ಲಿ ಸೀಟುಗಳ ಸಂಖ್ಯೆ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?	2013-14ರ ಆಯವ್ಯಯ ಘೋಷಣೆಯಂತೆ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ಕೋರಿ ಅರ್ಜಿ ಸಲ್ಲಿಸುವ ಎಲ್ಲಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯದಲ್ಲಿ ಪ್ರವೇಶ ಕಲ್ಪಿಸಲಾಗುತ್ತಿದೆ. ಆದುದರಿಂದ ಸೀಟುಗಳ ಸಂಖ್ಯೆ ಹೆಚ್ಚಿಸುವ ಪ್ರಮೇಯ ಉದ್ಭವಿಸಿರುವುದಿಲ್ಲ.

ಸಕಇ 36 ಪಕವಿ 2021

(ಬಿ. ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು.

990

ಅನುಬಂಧ-1

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 990ಕ್ಕೆ ಉತ್ತರ

ಉಡುಪಿ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯದಲ್ಲಿನ ಗ್ರೂಪ್ ಸಿ ಮತ್ತು ಡಿ ಹುದ್ದೆಗಳ ವಿವರ

ಕ್ರಸಂ	ತಾಲೂಕು	ವಿದ್ಯಾರ್ಥಿ ನಿಲಯದ ಹೆಸರು	ವಾರ್ಡನ್			ಜೂ.ವಾರ್ಡನ್			ಅಡುಗೆಯವರು			ಅಡುಗೆ ಸಹಾಯಕರು			ರಾತ್ರಿ ಕಾವಲುಗಾರರು		
			ಮಂಜೂರು	ಭರ್ತಿ	ಖಾಲಿ	ಮಂಜೂರು	ಭರ್ತಿ	ಖಾಲಿ	ಮಂಜೂರು	ಭರ್ತಿ	ಖಾಲಿ	ಮಂಜೂರು	ಭರ್ತಿ	ಖಾಲಿ	ಮಂಜೂರು	ಭರ್ತಿ	ಖಾಲಿ
1	ಉಡುಪಿ	ಮೆ.ಪೂ. ಬಾಲಕರ ವಿ.ನಿ ಕುಂಜಿಬೆಟ್ಟು	1	1	0	0	0	0	2	1	1	1	0	1	1	0	1
2		ಮೆ.ಪೂ. ಬಾಲಕರ ವಿ.ನಿ ಯಡ್ತಾಡಿ	1	1	0	0	0	0	2	2	0	1	0	1	1	0	1
3		ಮೆ.ಪೂ. ಬಾಲಕರ ವಿ.ನಿ ಕೂರಾಡಿ	1	1	0	0	0	0	2	2	0	1	0	1	1	1	0
4		ಮೆ.ಪೂ. ಬಾಲಕರ ವಿ.ನಿ ಪಡುಬಿದ್ರಿ	1	0	1	0	0	0	2	0	2	1	0	1	1	0	1
5		ಮೆ.ಪೂ. ಬಾಲಕಿಯರ ವಿ ನಿ ಬನ್ನಂಜೆ	1	1	0	0	0	0	2	1	1	1	0	1	1	0	1
6		ಮೆ.ಪೂ. ಬಾಲಕಿಯರ ವಿ ನಿ ಕಾಪು	1	0	1	0	0	0	2	1	1	1	0	1	1	1	0
7		ಮೆ.ಪೂ. ಬಾಲಕಿಯರ ವಿ ನಿ ಯಡ್ತಾಡಿ	1	1	0	0	0	0	2	1	1	1	1	0	1	0	1
8		ಮೆ.ಪೂ.ಬಾಲಕಿಯರ ವಿ ನಿ ಕೂರಾಡಿ	1	0	1	0	0	0	2	1	1	1	0	1	1	0	1
9		ಮೆ.ನಂತರದ ಬಾಲಕರ ವಿ.ನಿ 76 ಬಡಗಬೆಟ್ಟು	1	0	1	1	1	0	3	0	3	1	0	1	1	0	1
10		ಮೆ.ನಂತರದ ಬಾಲಕಿಯರ ವಿ.ನಿ ಬನ್ನಂಜೆ	1	1	0	1	1	0	3	3	0	2	0	2	1	1	0
11		ಮೆ.ನಂತರದ ಬಾಲಕಿಯರ ವಿ.ನಿ ಉಡುಪಿ ಟೌನ್	1	0	1	0	0	0	2	2	0	2	0	2	1	0	1
		ಒಟ್ಟು	11	6	5	2	2	0	24	14	10	15	1	14	11	3	8
12	ಕುಂದಾಪುರ	ಮೆ.ಪೂ. ಬಾಲಕರ ವಿ.ನಿ. ಕುಂದಾಪುರ	1	1	0	0	0	0	2	0	2	1	1	0	1	0	1
13		ಮೆ.ಪೂ. ಬಾಲಕರ ವಿ.ನಿ. ಅಂಪಾರು	1	0	1	0	0	0	2	1	1	1	0	1	1	0	1
14		ಮೆ.ಪೂ. ಬಾಲಕರ ವಿ.ನಿ. ಬೈಂದೂರು	1	1	0	0	0	0	2	0	2	1	0	1	1	1	0
15		ಮೆ.ಪೂ ಬಾಲಕಿಯರ ವಿ.ನಿ. ಕುಂದಾಪುರ	1	1	0	0	0	0	2	1	1	1	0	1	1	0	1
16		ಮೆ.ನಂತರದ ಬಾಲಕರ ವಿ.ನಿ ಕುಂದಾಪುರ	1	1	0	0	0	0	2	2	0	1	0	1	1	1	0
17		ಮೆ.ನಂತರದ ಬಾಲಕಿಯರ ವಿ.ನಿ ಕುಂದಾಪುರ	1	0	1	0	0	0	2	1	1	1	0	1	1	0	1
		ಒಟ್ಟು	6	4	2	0	0	0	12	5	7	6	1	5	6	2	4
18	ಕಾರ್ಕಳ	ಮೆ.ಪೂ. ಬಾಲಕರ ವಿದ್ಯಾರ್ಥಿ ನಿಲಯ ಹೆಬ್ರಿ	1	1	0	0	0	0	2	1	1	1	0	1	1	0	1
19		ಮೆ.ಪೂ. ಬಾಲಕರ ವಿದ್ಯಾರ್ಥಿ ನಿಲಯ ಬಜಗೋಳಿ	1	0	1	0	0	0	1	0	1	1	0	1	1	0	1
20		ಮೆಪೂ ಬಾಲಕಿಯರ ವಿ.ನಿ ಕಾರ್ಕಳ ಟೌನ್	1	0	1	0	0	0	3	0	3	1	1	0	1	0	1
21		ಮೆ.ನಂತರದ ಬಾಲಕರ ವಿ.ನಿ ನಿಟ್ಟೆ	1	0	1	0	0	0	2	1	1	1	0	1	1	0	1
22		ಮೆ.ನಂತರದ ಬಾಲಕಿಯರ ವಿ.ನಿ ಕಾರ್ಕಳ ಟೌನ್	1	0	1	0	0	0	2	1	1	1	0	1	1	0	1
		ಒಟ್ಟು	5	1	4	0	0	0	10	3	7	5	1	4	5	0	5
		ಒಟ್ಟಾರೆ	22	11	11	2	2	0	46	22	24	26	3	23	22	5	17

ಅನುಭಂದ-1

ಕ್ರಸಂ	ವಿದ್ಯಾರ್ಥಿನಿಲಯಗಳ ವಿವರ
	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ ವಿವರ
1	ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ,ಕುಂಜಿಬೆಟ್ಟು
2	ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ,ಯಡ್ತಾಡಿ
3	ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಕೂರಾಡಿ
4	ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಪಡುಬಿದ್ರಿ
5	ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಹೆಬ್ರಿ
6	ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಬಜಗೋಳಿ
7	ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಕುಂದಾಪುರ
8	ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಅಂಪಾರು (ಬೈಂದೂರು ಕ್ಷೇತ್ರ)
9	ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಬೈಂದೂರು
10	ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಬನ್ನಂಜೆ
11	ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಕಾಪು
12	ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಯಡ್ತಾಡಿ
13	ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಕೂರಾಡಿ
14	ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಕಾರ್ಕಳ ಟೌನ್
15	ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಕುಂದಾಪುರ
	ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ ವಿವರ
16	ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ, ಬಡಗಬೆಟ್ಟು
17	ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯ, ಬನ್ನಂಜೆ
18	ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯ, ಉಡುಪಿ ಟೌನ್
19	ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ, ನಿಟ್ಟೆ
20	ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯ, ಕಾರ್ಕಳ ಟೌನ್
21	ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯ, ಕುಂದಾಪುರ
22	ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯ, ಕುಂದಾಪುರ

990

ಚುಕ್ಕೆ ಗುರುತಿಲ್ಲದ ಪಶ್ನೆ ಸಂಖ್ಯೆ:990ಕ್ಕೆ
ಅನುಬಂಧ-2

ಕ್ರ. ಸಂ.	ವಿದ್ಯಾರ್ಥಿನಿಲಯದ ಹೆಸರು	ಮಂಜೂರಾದ ಹುದ್ದೆಗಳ ವಿವರ				ಒಟ್ಟು
		ವಾರ್ಡನ್	ಅಡುಗೆಯವರು	ಅಡುಗೆ ಸಹಾಯಕರು	ಕಾವಲುಗಾರರು	
1	ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ ಆದಿಉಡುಪಿ	1	2	1	1	5
2	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ. ಶಂಕರನಾರಾಯಣ	1	2	1	–	4
3	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ ಅಜೆಕಾರು, ಕಾರ್ಕಳ	1	2	1	–	4
4	ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ ಉಡುಪಿ ಟೌನ್	1	3	2	1	7
5	ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ ಉಡುಪಿ ಟೌನ್	1	3	2	1	7
6	ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯ, ಕುಂದಾಪುರ	1	3	2	1	7
7	ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ, ಬೈಂದೂರು	1	3	2	1	7
8	ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ ಬಂಡೀಮಠ, ಕಾರ್ಕಳ	1	2	1	–	4
ಒಟ್ಟು		8	20	12	5	45

ಕರ್ನಾಟಕ ವಿಧಾನ ಸಭೆ

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1004
2.	ಮಾನ್ಯ ಸದಸ್ಯರ ಹೆಸರು	ಶ್ರೀ ನರೇಂದ್ರ ಆರ್. (ಹನೂರು)
3.	ಉತ್ತರಿಸಬೇಕಾದ ದಿನಾಂಕ	04/02/2021
4.	ಉತ್ತರಿಸುವವರು	ಮಾನ್ಯ ಕಾರ್ಮಿಕ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಚಾಮರಾಜನಗರ ಜಿಲ್ಲೆಯಲ್ಲಿ ಇರುವ ಸಂಘಟಿತ ಹಾಗೂ ಅಸಂಘಟಿತ ಕಾರ್ಮಿಕರ ಸಂಖ್ಯೆ ಎಷ್ಟು (ಕ್ಷೇತ್ರವಾರು ವಿವರ ನೀಡುವುದು);	**ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ:-** ಚಾಮರಾಜನಗರ ಜಿಲ್ಲೆಯಲ್ಲಿ ಸಂಘಟಿತ ವಲಯದ 35 ಸಂಸ್ಥೆಗಳಲ್ಲಿ ಒಟ್ಟು 5511 ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದಾರೆ. **ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:-** ಅಸಂಘಟಿತ ಕಾರ್ಮಿಕರ ಸಂಖ್ಯೆಗೆ ಸಂಬಂಧಿಸಿದಂತೆ ಈವರೆಗೆ ಯಾವುದೇ ಸಮೀಕ್ಷೆ ನಡೆಸಿಗುವುದಿಲ್ಲ. ಆದ್ದರಿಂದ ಅಸಂಘಟಿತ ಕಾರ್ಮಿಕರ ನಿಖರ ಸಂಖ್ಯೆ ಲಭ್ಯವಿರುವುದಿಲ್ಲ. ಆದರೆ, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಜಾರಿಗೊಳಿಸುತ್ತಿರುವ ವಿವಿಧ ಯೋಜನೆಗಳಡಿ ಫಲಾನುಭವಿಗಳಾಗಿ ನೋಂದಾಯಿತರಾದ ಕಾರ್ಮಿಕರ ಸಂಖ್ಯೆ ಲಭ್ಯವಿದ್ದು ವಿವರ ಈ ಕೆಳಕಂಡಂತಿದೆ:- **1. ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ:** ಸಾರಿಗೆ ಇಲಾಖೆಯು ಒದಗಿಸಿರುವ ದತ್ತಾಂಶದ ಪ್ರಕಾರ ಚಾಮರಾಜನಗರ ಜಿಲ್ಲೆಯಲ್ಲಿ ಊರ್ಜಿತ ಖಾಸಗಿ ವಾಣಿಜ್ಯ ಸಾರಿಗೆ ವಾಹನ ಚಾಲನ ಪರವಾನಗಿ ಹೊಂದಿರುವ ಎಲ್ಲಾ 9,743 ಚಾಲಕರು ಈ ಯೋಜನೆಯಡಿ ಫಲಾನುಭವಿಗಳಾಗಿರುತ್ತಾರೆ. **2. ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ:** ಈ ಯೋಜನೆಯಡಿ 11 ವರ್ಗಗಳಾದ ಹಮಾಲರು, ಗೃಹಕಾರ್ಮಿಕರು, ಚಿಂದಿ ಆಯುವವರು, ಟೈಲರ್‌ಗಳು, ಮೆಕ್ಯಾನಿಕ್ಸ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಕ್ಷೌರಿಕರು ಹಾಗೂ ಭಟ್ಟಿ ಕಾರ್ಮಿಕ ವೃತ್ತಿಯ 3,165 ಅಸಂಘಟಿತ ಕಾರ್ಮಿಕರನ್ನು ನೋಂದಾಯಿಸಿ ಸ್ಮಾರ್ಟ್ ಕಾರ್ಡ್‌ಗಳನ್ನು ವಿತರಿಸಲಾಗಿದೆ. **3. ಕೋವಿಡ್-19ರ ವಿಶೇಷ ಪ್ಯಾಕೇಜ್:-** ಕೋವಿಡ್-19ರ ಲಾಕ್‌ಡೌನ್ ಕಾರಣ ಸಂಕಷ್ಟಕ್ಕೊಳಗಾದ ಕಾರ್ಮಿಕರಿಗೆ ಸನ್ಮಾನ್ಯ ಮುಖ್ಯಮಂತ್ರಿಯವರು ಘೋಷಿಸಿದ ಒಂದು

		ಬಾರಿಯ ರೂ.5,000 ಗಳ ವಿಶೇಷ ಪ್ಯಾಕೇಜ್ ಅಡಿ ನೆರವನ್ನು ಕೋರಿ ಚಾಮರಾಜನಗರ ಜಿಲ್ಲೆಯಲ್ಲಿ ಅಗಸ ವೃತ್ತಿಯಲ್ಲಿ ತೊಡಗಿರುವ 2,950 ಕಾರ್ಮಿಕರು ಹಾಗೂ ಕ್ಷೌರಿಕ ವೃತ್ತಿಯಲ್ಲಿ ತೊಡಗಿರುವ 1,057 ಕಾರ್ಮಿಕರು ಅರ್ಜಿ ಸಲ್ಲಿಸಿರುತ್ತಾರೆ. **4. ಪ್ರಧಾನ ಮಂತ್ರಿ ಶ್ರಮ್ ಯೋಗಿ ಮಾನ್-ಧನ್ ಯೋಜನೆ (ಪಿಎಂ-ಎಸ್‌ವೈಎಂ):-** ಈ ಯೋಜನೆಯಡಿ ಇದುವರೆವಿಗೂ ಚಾಮರಾಜನಗರ ಜಿಲ್ಲೆಯಲ್ಲಿ ಒಟ್ಟು 1,707 ಕಾರ್ಮಿಕರನ್ನು ಫಲಾನುಭವಿಯಾಗಿ ನೋಂದಾಯಿಸಲಾಗಿದೆ. **<u>ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:-</u>** ಚಾಮರಾಜನಗರ ಜಿಲ್ಲೆಯಲ್ಲಿ ಅಸಂಘಟಿತ ಕಾರ್ಮಿಕರ ವ್ಯಾಪ್ತಿಗೆ ಒಳಪಡುವ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ತಾಲ್ಲೂಕುವಾರು ನೋಂದಣಿ ವಿವರ ಈ ಕೆಳಗಿನಂತಿದೆ. ಚಾಮರಾಜನಗರ ವೃತ್ತ : 20,373 ಕೊಳ್ಳೇಗಾಲ ವೃತ್ತ : 19,473 ಗುಂಡ್ಲಪೇಟೆ ವೃತ್ತ : 7,298 **ಒಟ್ಟು : 47,149**
ಆ)	ಈ ಕೊರೋನ ಕಾಯಿಲೆ ಬಂದಂತಹ ಸಂದರ್ಭದಲ್ಲಿ ಹಾಗೂ ಪ್ರಸ್ತುತ ಈ ಕಾರ್ಮಿಕರಿಗೆ ಸರ್ಕಾರ ಕಲ್ಪಿಸಿರುವ ಸೌಲಭ್ಯಗಳೇನು (ವಿವರ ನೀಡುವುದು)	**<u>ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:-</u>** ಕೋವಿಡ್-19ರ ಕಾರಣ ಲಾಕ್‌ಡೌನ್ ಜಾರಿಗೊಳಿಸಿದ ಹಿನ್ನೆಲೆಯಲ್ಲಿ ಸಂಕಷ್ಟಕ್ಕೊಳಗಾದ ಹಲವು ವರ್ಗದವರಿಗೆ ವಿಶೇಷ ಪ್ಯಾಕೇಜ್‌ನ್ನು ಘೋಷಿಸಿರುತ್ತದೆ. ಸದರಿ ಘೋಷಣೆಯಂತೆ ಕ್ಷೌರಿಕ ಹಾಗೂ ದೋಬಿ/ ಅಗಸ ವೃತ್ತಿಗಳಲ್ಲಿ ತೊಡಗಿರುವ ಅಸಂಘಟಿತ ಕಾರ್ಮಿಕರಿಗೆ ತಲಾ ರೂ. 5,000/-ಗಳ ಒಂದು ಬಾರಿಯ ನೆರವನ್ನು SOP ಮಾರ್ಗಸೂಚಿಗಳನ್ವಯ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಮೂಲಕ ನೀಡಲಾಗುತ್ತಿದೆ. ಸದರಿ ವಿಶೇಷ ಪ್ಯಾಕೇಜ್ ಅಡಿಯಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿ ಅಗಸ ವೃತ್ತಿಯಲ್ಲಿ ತೊಡಗಿರುವ 2,950 ಕಾರ್ಮಿಕರು ಹಾಗೂ ಕ್ಷೌರಿಕ ವೃತ್ತಿಯಲ್ಲಿ ತೊಡಗಿರುವ 1,057 ಕಾರ್ಮಿಕರು ಸೇರಿದಂತೆ ಒಟ್ಟು 4,007 ಕಾರ್ಮಿಕರು ಅರ್ಜಿ ಸಲ್ಲಿಸಿರುತ್ತಾರೆ. ಅವುಗಳಲ್ಲಿ ಈವರೆಗೆ 3,510 ಅರ್ಜಿದಾರರಿಗೆ ತಲಾ ರೂ. 5,000/- ಗಳಂತೆ ಒಟ್ಟು ರೂ. 1,75,50,000/- ನೆರವನ್ನು ಅವರವರ ಬ್ಯಾಂಕ್ ಖಾತೆಗೆ ಡಿ.ಬಿ.ಟಿ ಮೂಲಕ ವರ್ಗಾಯಿಸಲಾಗಿದೆ. ಪ್ರಸ್ತುತ ಅಸಂಘಟಿತ ಕಾರ್ಮಿಕರಿಗೆ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯಿಂದ ನೀಡಲಾಗುತ್ತಿರುವ ಸೌಲಭ್ಯಗಳ ವಿವರಗಳನ್ನು <u>ಅನುಬಂಧ-1</u>ರಲ್ಲಿ ಲಗತ್ತಿಸಿದೆ.

		ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:- ಕೋರೊನೊ ಸಂಕ್ರಾಮಿಕ ರೋಗದ ಸಂದರ್ಭದಲ್ಲಿ ನೋಂದಾಯಿತ ಕಟ್ಟಡ ಕಾರ್ಮಿಕರ ಖಾತೆಗೆ ರೂ.5,000/- ಗಳ ಒಂದು ಬಾರಿ ಪರಿಹಾರ ಧನಸಹಾಯವನ್ನು ನೀಡಲು ಘೋಷಣೆ ಮಾಡಿದ್ದು ಚಾಮರಾಜನಗರ ಜಿಲ್ಲಾ ವ್ಯಾಪ್ತಿಯಲ್ಲಿ **17,110 ಫಲಾನುಭವಿಗಳಿಗೆ** ತಲಾ ರೂ.5000/- ಗಳಂತೆ ಒಟ್ಟು **ರೂ. 8,55,50,000/-**ಗಳನ್ನು ಅವರ ಖಾತೆಗೆ ಜಮೆ ಮಾಡಲಾಗಿದೆ. ಚಾಮರಾಜನಗರ ಜಿಲ್ಲಾ ವ್ಯಾಪ್ತಿಯಲ್ಲಿ ಒಟ್ಟು 5,000 ಆಹಾರ ಸಾಮಾಗ್ರಿಗಳ ಕಿಟ್‌ಗಳನ್ನು ವಿತರಿಸಲಾಗಿರುತ್ತದೆ. ಮಂಡಳಿಯಲ್ಲಿ ನೋಂದಾಯಿತರಾದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ 19 ವಿವಿಧ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ರೂಪಿಸಿ ಜಾರಿಗೊಳಿಸಲಾಗುತ್ತಿದೆ. ವಿವರಗಳನ್ನು **ಅನುಬಂಧ-2** ರಲ್ಲಿ ಲಗತ್ತಿಸಿದೆ. **ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ:-** ಕೊರೊನ ಖಾಯಿಲೆ ಬಂದಂತದ ಸಂದರ್ಭದಲ್ಲಿ ಕಾರ್ಮಿಕ ಕಲ್ಯಾಣ ಮಂಡಳಿಯಿಂದ ಸಂಘಟಿತ ಕಾರ್ಮಿಕರಿಗೆ ಯಾವುದೇ ಸೌಲಭ್ಯ ನೀಡಿರುವುದಿಲ್ಲ. ಮಂಡಳಿಯಲ್ಲಿ ಪ್ರಸ್ತುತ ಸಂಘಟಿತ ಕಾರ್ಮಿಕರಿಗೆ ಈ ಕೆಳಕಂಡ ಯೋಜನೆಗಳ ಅಡಿಯಲ್ಲಿ ವಿವಿಧ ಸೌಲಭ್ಯ ನೀಡಲಾಗುತ್ತಿದೆ. 1. ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ 2. ವೈದ್ಯಕೀಯ ನೆರವು. 3. ಅಪಘಾತ ಧನ ಸಹಾಯ. 4. ಮೃತ ಕಾರ್ಮಿಕರ ಅಂತ್ಯ ಸಂಸ್ಕಾರಕ್ಕೆ ಧನ ಸಹಾಯ. 5. ವಾರ್ಷಿಕ ವೈದ್ಯಕೀಯ ತಪಾಸಣೆ ಶಿಬಿರಕ್ಕೆ ಧನ ಸಹಾಯ. 6. ವಾರ್ಷಿಕ ಕ್ರೀಡಾಕೂಟ ಹಮ್ಮಿಕೊಳ್ಳುವ ಕಾರ್ಮಿಕ ಸಂಘಟನೆಗೆ ಧನ ಸಹಾಯ.

ಕಾಇ 37 ಎಲ್‌ಇಟಿ 2021

(ಅರೆಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಸಚಿವರು

1004

ಅನುಬಂಧ-1

(ಕರ್ನಾಟಕ ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ನರೇಂದ್ರ.ಆರ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1004)

ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯಿಂದ ನೀಡಲಾಗುತ್ತಿರುವ ಯೋಜನೆಗಳ ವಿವರ

(1) **ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ:-** ಈ ಯೋಜನೆಯಡಿ ಖಾಸಗಿ ವಾಣಿಜ್ಯ ಸಾರಿಗೆ ವಾಹನ ಚಾಲಕರು ಫಲಾನುಭವಿಗಳಾಗಿದ್ದು, ಈ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತಿದೆ.

(ಅ) **ಅಪಘಾತ ಪರಿಹಾರ ಸೌಲಭ್ಯ :** ಅಪಘಾತದಿಂದ ಮರಣ ಹೊಂದಿದ ಪ್ರಕರಣಗಳಲ್ಲಿ ನಾಮನಿರ್ದೇಶಿತರಿಗೆ ರೂ. 5 ಲಕ್ಷದ ಪರಿಹಾರ, ಸಂಪೂರ್ಣ ಶಾಶ್ವತ ದುರ್ಬಲತೆ ಪ್ರಕರಣಗಳಲ್ಲಿ ರೂ.2 ಲಕ್ಷದ ವರಗೆ ಪರಿಹಾರ ಮತ್ತು ಒಳರೋಗಿಯಾಗಿ ಚಿಕಿತ್ಸೆ ಪಡೆದಲ್ಲಿ ರೂ.1 ಲಕ್ಷದವರೆಗೆ ಚಿಕಿತ್ಸಾ ವೆಚ್ಚದ ಮರುಪಾವತಿ ನೀಡಲಾಗುತ್ತಿದೆ.

(ಆ) **ಶೈಕ್ಷಣಿಕ ಧನ ಸಹಾಯ :** ಅಪಘಾತದ ಕಾರಣ ನಿಧನರಾದ ಹಾಗೂ ಸಂಪೂರ್ಣ ಶಾಶ್ವತ ದುರ್ಬಲತೆ ಹೊಂದಿದ ಫಲಾನುಭವಿಗಳ ಗರಿಷ್ಠ ಇಬ್ಬರು ಮಕ್ಕಳಿಗೆ ಪದವಿಪೂರ್ವ ವ್ಯಾಸಂಗದವರೆಗೆ ವಾರ್ಷಿಕ ತಲಾ ರೂ.10,000/-ಗಳ ಶೈಕ್ಷಣಿಕ ಸಹಾಯಧನ ನೀಡಲಾಗುತ್ತಿದೆ.

(ಇ) **ಸ್ಮಾರ್ಟ್ ಕಾರ್ಡ್ ಸೌಲಭ್ಯ :** ಯೋಜನೆಯ ಕುರಿತು ಫಲಾನುಭವಿಗಳಲ್ಲಿ ಜಾಗೃತಿ ಮೂಡಿಸಲು ಎಲ್ಲಾ ಖಾಸಗಿ ವಾಣಿಜ್ಯ ಸಾರಿಗೆ ವಾಹನ ಚಾಲಕರಿಗೆ ಸ್ಮಾರ್ಟ್ ಕಾರ್ಡ್ ವಿತರಿಸಲಾಗುತ್ತಿದೆ.

(ಈ) **ಶ್ರಮ ಸಮ್ಮಾನ ಪ್ರಶಸ್ತಿ :**

- ಪ್ರತಿ ವರ್ಷ ಸರ್ಕಾರದ ಆದೇಶದಂತೆ, 2020ರ ಮಾರ್ಚ್ 01 ರಂದು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಕಾರ್ಮಿಕ ಸಮ್ಮಾನ ದಿನಾಚರಣೆ ಆಚರಿಸಿ, ಉತ್ತಮ ಹಾಗೂ ಸುರಕ್ಷತಾ ಚಾಲನೆ ಮಾಡಿದ ತ್ರಿಚಕ್ರ ಹಾಗೂ ನಾಲ್ಕು ಚಕ್ರದ ವಾಹನ ಚಾಲಕರಿಗೆ ಪ್ರತಿ ಜಿಲ್ಲೆಗೆ ಪ್ರತ್ಯೇಕವಾಗಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಪ್ರಶಸ್ತಿ ಮತ್ತು 8 ವಿಶೇಷ ಪುರಸ್ಕಾರ ಪ್ರಶಸ್ತಿಗಳು ಸೇರಿ ಒಟ್ಟು ರಾಜ್ಯಾದ್ಯಂತ 660 ಚಾಲಕರಿಗೆ "ಶ್ರಮ ಸಮ್ಮಾನ ಪ್ರಶಸ್ತಿ" ನೀಡಿ ಗೌರವಿಸಲಾಗುತ್ತಿದೆ.
- ಪ್ರಥಮ ಪ್ರಶಸ್ತಿಯು ರೂ. 15,000ಗಳ ಮೌಲ್ಯದ ಚಿನ್ನದ ಪದಕ, ದ್ವಿತೀಯ ಪ್ರಶಸ್ತಿಯು ರೂ. 10,000ದ ಮೌಲ್ಯದ ಬೆಳ್ಳಿ ಪದಕ ಹಾಗೂ ತೃತೀಯ ಪ್ರಶಸ್ತಿಯು ರೂ. 8,000ದ ಮೌಲ್ಯದ ಬೆಳ್ಳಿ ಪದಕ ಹೊಂದಿದ್ದು, ವಿಶೇಷ ಪುರಸ್ಕಾರವು ರೂ.1,000/-ಗಳ ನಗದು ಬಹುಮಾನ ಹಾಗೂ ಪ್ರಶಂಸಾಪತ್ರವನ್ನು ಹೊಂದಿರುತ್ತದೆ.

(ಈ) **ಅಪಘಾತ ಜೀವ ರಕ್ಷಕ:-** ಅಪಘಾತಕ್ಕೊಳಗಾದ ಗಾಯಾಳುಗಳನ್ನು ರಕ್ಷಿಸುವ ಸ್ವಯಂಸೇವಕರನ್ನು ಸೃಷ್ಟಿಸುವ ಉದ್ದೇಶದಿಂದ ಅಪಘಾತ ಜೀವರಕ್ಷಕ ಕಾರ್ಯಕ್ರಮದಡಿ ಚಾಲಕರಿಗೆ ಪ್ರಥಮ ಚಿಕಿತ್ಸಾ ತರಬೇತಿಯನ್ನು ನೀಡಿ ಅಪಘಾತ ಜೀವರಕ್ಷಕರನ್ನಾಗಿ ಸಜ್ಜುಗೊಳಿಸಲಾಗುತ್ತಿದೆ.

(2) **ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ:-**

(ಅ) **"ಸ್ಮಾರ್ಟ್ ಕಾರ್ಡ್":-** ಪ್ರಸ್ತುತ ಈ ಯೋಜನೆಯಡಿ 11 ಅಸಂಘಟಿತ ವಲಯಗಳಾದ "ಹಮಾಲರು, ಮನೆಗೆಲಸದವರು, ಚಿಂದಿ ಆಯುವವರು, ಟೈಲರ್ಸ್, ಮೆಕ್ಯಾನಿಕ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಕ್ಷೌರಿಕರು ಹಾಗೂ ಭಟ್ಟಿ ಕಾರ್ಮಿಕ"ರನ್ನು ನೋಂದಾಯಿಸಿ ಸ್ಮಾರ್ಟ್ ಕಾರ್ಡ್ ವಿತರಿಸಲಾಗುತ್ತಿದೆ.

(ಆ) ಶ್ರಮ ಸಮ್ಮಾನ ಪ್ರಶಸ್ತಿ:

- ಪ್ರತಿ ವರ್ಷ, ಸರ್ಕಾರದ ಆದೇಶದಂತೆ, 2020ರ ಮಾರ್ಚ್ 01 ರಂದು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಕಾರ್ಮಿಕ ಸಮ್ಮಾನ ದಿನಾಚರಣೆ ಆಚರಿಸಿ, 11 ಅಸಂಘಟಿತ ವಲಯಗಳಾದ "ಹಮಾಲರು, ಮನೆಗೆಲಸದವರು, ಚಿಂದಿ ಆಯುವವರು, ಟೈಲರ್ಸ್, ಮೆಕ್ಯಾನಿಕ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಕ್ಷೌರಿಕರು ಹಾಗೂ ಭಟ್ಟಿ ಕಾರ್ಮಿಕ" ವಲಯಗಳಲ್ಲಿ ವಿಶೇಷ ಸಾಧನೆ ಮಾಡಿದ ಕಾರ್ಮಿಕರನ್ನು ಗುರುತಿಸಿ, ಪ್ರತಿಯೊಂದು ಜಿಲ್ಲೆಗೆ ಪ್ರತಿಯೊಂದು ವಲಯಕ್ಕೆ ಪ್ರಥಮ, ದ್ವಿತೀಯ ಹಾಗೂ ತೃತೀಯ ಪ್ರಶಸ್ತಿ ಮತ್ತು 8 ವಿಶೇಷ ಪುರಸ್ಕಾರ ಪ್ರಶಸ್ತಿಗಳು ಸೇರಿ ಒಟ್ಟು 3630 ಕಾರ್ಮಿಕರಿಗೆ "ಶ್ರಮ ಸಮ್ಮಾನ ಪ್ರಶಸ್ತಿ" ನೀಡಿ ಗೌರವಿಸಲಾಗುತ್ತಿದೆ.
- ಪ್ರಥಮ ಪ್ರಶಸ್ತಿಯು ರೂ. 15,000ಗಳ ಮೌಲ್ಯದ ಚಿನ್ನದ ಪದಕ, ದ್ವಿತೀಯ ಪ್ರಶಸ್ತಿಯು ರೂ. 10,000ದ ಮೌಲ್ಯದ ಬೆಳ್ಳಿ ಪದಕ ಹಾಗೂ ತೃತೀಯ ಪ್ರಶಸ್ತಿಯು ರೂ. 8,000ದ ಮೌಲ್ಯದ ಬೆಳ್ಳಿ ಪದಕ ಹೊಂದಿದ್ದು, ವಿಶೇಷ ಪುರಸ್ಕಾರವು ರೂ.1,000/-ಗಳ ನಗದು ಬಹುಮಾನ ಹಾಗೂ ಪ್ರಶಂಸಾಪತ್ರವನ್ನು ಹೊಂದಿರುತ್ತದೆ.

(ಇ) ಕಾರ್ಮಿಕ ಸೇವಾ ಕೇಂದ್ರ :-

ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ 2008ರ ಕಲಂ 9ರನ್ವಯ ಫಲಾನುಭವಿಗಳಲ್ಲಿ ಅಸಂಘಟಿತ ಕಾರ್ಮಿಕರಿಗೆ ಲಭ್ಯವಿರುವ ಎಲ್ಲಾ ಯೋಜನೆಗಳ ಕುರಿತು ಮಾಹಿತಿ ನೀಡಲು, ಯೋಜನೆಗಳ ಸೌಲಭ್ಯಗಳನ್ನು ಪಡೆದುಕೊಳ್ಳಲು ಅವಶ್ಯಕವಿರುವ ದಾಖಲಾತಿಗಳನ್ನು ಸಿದ್ಧಪಡಿಸಲು ಹಾಗೂ ನಿಗಧಿಪಡಿಸಿದ ಅರ್ಜಿ ನಮೂನೆಗಳನ್ನು ಭರ್ತಿ ಮಾಡಿ ಸಂಬಂಧಪಟ್ಟವರಿಗೆ ರವಾನಿಸಲು ಸಹಾಯವಾಗುವಂತೆ ರಾಜ್ಯದ 169 ತಾಲ್ಲೂಕುಗಳಲ್ಲಿ ಕಾರ್ಮಿಕ ಸೇವಾ ಕೇಂದ್ರಗಳನ್ನು ತೆರೆಯಲಾಗಿದೆ. ಸದರಿ ಕೇಂದ್ರಗಳಲ್ಲಿ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಮೂಲಕ ನೇಮಕಗೊಂಡ ಕಾರ್ಮಿಕ ಬಂಧುಗಳು ಕಾರ್ಯನಿರ್ವಹಿಸುತ್ತಿದ್ದಾರೆ.

3. (ಅ)**ಪ್ರಧಾನ ಮಂತ್ರಿ ಶ್ರಮಯೋಗಿ ಮಾನ್‌ಧನ್ ಯೋಜನೆ (ಪಿಎಂ-ಎಸ್‌ವೈಎಂ)**:- ಕೇಂದ್ರ ಸರ್ಕಾರದ ಈ ಯೋಜನೆಯಡಿ 18 – 40 ವರ್ಷ ವಯೋಮಾನದ ಅಸಂಘಟಿತ ಕಾರ್ಮಿಕರು ನೊಂದಾಯಿಸಿಕೊಂಡು 60 ವರ್ಷ ಪೂರೈಸಿದ ನಂತರ ಮಾಸಿಕ ನಿಶ್ಚಿತ ರೂ.3,000/- ಗಳ ಪಿಂಚಣಿ ಸೌಲಭ್ಯ ಪಡೆಯಬಹುದಾಗಿದೆ. ಈ ಯೋಜನೆಯಡಿ ಫಲಾನುಭವಿಗಳಿಗೆ ಅವರ ವಯಸ್ಸಿನ ಆಧಾರದ ಮೇಲೆ ಮಾಸಿಕ ತಲಾ ರೂ. 55/- ರಿಂದ ರೂ. 200/- ರವರೆಗೆ ಕೇಂದ್ರ ಸರ್ಕಾರವು ಸಮಾನಾಂತರ ವಂತಿಕೆಯನ್ನು ಪಾವತಿಸುತ್ತದೆ.

(ಆ) **ನ್ಯೂ ಪೆನ್ಷನ್ ಸ್ಕೀಮ್ ಫಾರ್ ಟ್ರೇಡರ್ಸ್ ಅಂಡ್ ಸೆಲ್ಫ್ ಎಂಪ್ಲಾಯ್ಡ್ ಪರ್ಸನ್ಸ್**:-

ಈ ಯೋಜನೆಯಡಿ ಅಂಗಡಿ ಮಾಲೀಕರು, ಚಿಲ್ಲರೆ ವ್ಯಾಪಾರಿಗ ಳು, ಅಕ್ಕಿ ಗಿರಣಿ ಮಾಲೀಕರು, ಎಣ್ಣೆ ಗಿರಣಿ ಮಾಲೀಕರು, ವರ್ಕ್‌ಶಾಪ್ ಮಾಲೀಕರು, ಕಮಿಷನ್ ಏಜೆಂಟ್ಸ್, ರಿಯಲ್ ಎಸ್ಟೇಟ್‌ನ ಬ್ರೋಕರ್ಸ್, ಸಣ್ಣ ಹೋಟೆಲ್ ಹಾಗೂ ರೆಸ್ಟೋರೆಂಟ್‌ನ ಮಾಲೀಕರು ಹಾಗೂ ಅಂತಹ ಇತರೆ ಸಣ್ಣ ವ್ಯಾಪಾರಗಳಲ್ಲಿ ತೊಡಗಿಸಿಕೊಂಡ ವ್ಯಾಪಾರಿಗಳು/ಲಘು ವ್ಯಾಪಾರಿಗಳು ಹಾಗೂ ಸ್ವಯಂ ಉದ್ಯೋಗಿಗಳು ಫಲಾನುಭವಿಗಳಾಗುತ್ತಾರೆ.

1004

ಅನುಬಂಧ-2

(ಕರ್ನಾಟಕ ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ನರೇಂದ್ರ.ಆರ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ; 1004)

ಕನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿವತಿಯಿಂದ ಫಲಾನುಭವಿಗಳಿಗೆ ಸಿಗುವ ಸೌಲಭ್ಯಗಳು

1. ಪಿಂಚಣಿ ಸೌಲಭ್ಯ: ಮೂರು ವರ್ಷ ಸದಸ್ಯತ್ವದೊಂದಿಗೆ 60 ವರ್ಷ ಪೂರೈಸಿದ ಫಲಾನುಭವಿಗೆ ಮಾಸಿಕ ರೂ.2,000/-
2. ಕುಟುಂಬ ಪಿಂಚಣಿ ಸೌಲಭ್ಯ: ಮೃತ ಪಿಂಚಣಿದಾರರ ಪತಿ / ಪತ್ನಿ ಮಾಸಿಕ ರೂ.1000/-
3. ದುರ್ಬಲತೆ ಪಿಂಚಣಿ: ನೋಂದಾಯಿತ ಫಲಾನುಭವಿಯು ಖಾಯಿಲೆಗಳಿಂದ ಅಥವಾ ಕಟ್ಟಡ ಕಾಮಗಾರಿಗಳ ಅಪಘಾತದಿಂದ ಶಾಶ್ವತ/ಭಾಗಶಃ ಅಂಗವಿಕಲತೆ ಹೊಂದಿದ್ದರೆ ಮಾಸಿಕ ರೂ.2,000/- ಪಿಂಚಣಿ ಹಾಗೂ ಶೇಕಡವಾರು ದುರ್ಬಲತೆಯನ್ನಾಧರಿಸಿ ರೂ.2,00,000/- ದವರೆಗೆ ಅನುಗ್ರಹ ರಾಶಿ ಸಹಾಯಧನ.
4. ಕನ್ನಡಕ, ಶ್ರವಣಯಂತ್ರ, ಕೃತಕ ಕೈಕಾಲು ಮತ್ತು ಗಾಲಿ ಕುರ್ಚಿ ಮರುಪಾವತಿ ಸೌಲಭ್ಯ.
5. ಟ್ರೈನಿಂಗ್-ಕಮ್-ಟೂಲ್‌ಕಿಟ್ ಸೌಲಭ್ಯ (ಶ್ರಮ ಸಾಮರ್ಥ್ಯ) : ರೂ.30,000/- ವರೆಗೆ
6. ಶ್ರಮ ಸಂಸಾರ ಸಾಮರ್ಥ್ಯ ತರಬೇತಿ ಸೌಲಭ್ಯ: ನೋಂದಾಯಿತ ಫಲಾನುಭವಿಯ ಅವಲಂಭಿತರಿಗೆ
7. ವಸತಿ ಸೌಲಭ್ಯ (ಕಾರ್ಮಿಕ ಗೃಹ ಭಾಗ್ಯ): ರೂ.2,00,000/- ದವರೆಗೆ ಮುಂಗಡ ಸೌಲಭ್ಯ
8. ಹೆರಿಗೆ ಸೌಲಭ್ಯ (ತಾಯಿ ಲಕ್ಷ್ಮೀ ಬಾಂಡ್): ಮಹಿಳಾ ಫಲಾನುಭವಿಯ ಮೊದಲ ಎರಡು ಮಕ್ಕಳಿಗೆ ಹೆಣ್ಣು ಮಗುವಿನ ಜನನಕ್ಕೆ ರೂ. 30,000/- ಮತ್ತು ಗಂಡು ಮಗುವಿನ ಜನನಕ್ಕೆ ರೂ.20,000/-
9. ಶಿಶು ಪಾಲನಾ ಸೌಲಭ್ಯ:
10. ಅಂತ್ಯಕ್ರಿಯೆ ವೆಚ್ಚ : ರೂ.4,000/- ಹಾಗೂ ಅನುಗ್ರಹ ರಾಶಿ ರೂ.50,000/-ಸಹಾಯಧನ
11. ಶೈಕ್ಷಣಿಕ ಸಹಾಯಧನ (ಕಲಿಕೆ ಭಾಗ್ಯ): ಫಲಾನುಭವಿಯ ಇಬ್ಬರು ಮಕ್ಕಳ ವಿದ್ಯಾಭ್ಯಾಸಕ್ಕಾಗಿ:

ಕ್ರಸಂ	ತರಗತಿ (ಉತ್ತೀರ್ಣಕ್ಕೆ)	ವಾರ್ಷಿಕ ಸಹಾಯ ಧನ	
		ಗಂಡು	ಹೆಣ್ಣು
I.	ನರ್ಸರಿ	3,000	4,000
II.	1 ರಿಂದ 4ನೇ ತರಗತಿ	3,000	4,000
III.	5 ರಿಂದ 8ನೇ ತರಗತಿ	5,000	6,000
IV.	9 ಹಾಗೂ 10ನೇ ತರಗತಿ	10,000	11,000
V.	ಪ್ರಥಮ ಪಿಯುಸಿ ಮತ್ತು ದ್ವಿತೀಯ ಪಿ.ಯು.ಸಿ	10,000	14,000
VI.	ಐಟಿಐ	12,000	15,000
VII.	ಪದವಿ ಪ್ರತಿ ವರ್ಷಕ್ಕೆ	15,000	20,000
VIII.	ಸ್ನಾತಕೋತ್ತರ ಪದವಿ ಸೇರ್ಪಡೆಗೆ	20,000	20,000
	ಮತ್ತು ಪ್ರತಿ ವರ್ಷಕ್ಕೆ	20,000	25,000
IX.	ಇಂಜಿನಿಯರಿಂಗ್ ಕೋರ್ಸ್ ಬಿಇ/ ಬಿ.ಟೆಕ್ ಸೇರ್ಪಡೆಗೆ	25,000	25,000
	ಮತ್ತು ಪ್ರತಿ ವರ್ಷಕ್ಕೆ	25,000	30,000
X.	ವೈದ್ಯಕೀಯ ಕೋರ್ಸ್‌ಗೆ ಸೇರ್ಪಡೆಗೆ	30,000	30,000
	ಮತ್ತು ಪ್ರತಿ ವರ್ಷಕ್ಕೆ	40,000	50,000
XI.	ಡಿಪ್ಲೋಮಾ	15,000	20,000
XII.	ಎಂ.ಟೆಕ್ / ಎಂ.ಇ	30,000	35,000
XIII.	ಎಂ.ಡಿ (ವೈದ್ಯಕೀಯ)	45,000	55,000
XIV.	ಪಿಹೆಚ್‌ಡಿ (ಪ್ರತಿ ವರ್ಷಕ್ಕೆ) ಗರಿಷ್ಠ 03 ವರ್ಷ	25,000	30,000

12. **ವೈದ್ಯಕೀಯ ಸಹಾಯಧನ (ಕಾರ್ಮಿಕ ಆರೋಗ್ಯ ಭಾಗ್ಯ)**: ನೋಂದಾಯಿತ ಫಲಾನುಭವಿ ಹಾಗೂ ಅವರ ಅವಲಂಬಿತರಿಗೆ **ರೂ.300/-** ರಿಂದ **ರೂ.10,000/-ವರೆಗೆ**
13. **ಅಪಘಾತ ಪರಿಹಾರ**: ಮರಣ ಹೊಂದಿದ್ದಲ್ಲಿ **ರೂ.5,00,000/-**, ಸಂಪೂರ್ಣ ಶಾಶ್ವತ ದುರ್ಬಲತೆಯಾದಲ್ಲಿ **ರೂ.2,00,000/-** ಮತ್ತು ಭಾಗಶಃ ಶಾಶ್ವತ ದುರ್ಬಲತೆಯಾದಲ್ಲಿ **ರೂ.1,00,000/-**
14. **ಪ್ರಮುಖ ವೈದ್ಯಕೀಯ ವೆಚ್ಚ ಸಹಾಯಧನ (ಕಾರ್ಮಿಕ ಚಿಕಿತ್ಸಾ ಭಾಗ್ಯ)**: ಹೃದ್ರೋಗ, ಕಿಡ್ನಿ ಜೋಡಣೆ, ಕ್ಯಾನ್ಸರ್ ಶಸ್ತ್ರಚಿಕಿತ್ಸೆ, ಕಣ್ಣಿನ ಶಸ್ತ್ರಚಿಕಿತ್ಸೆ, ಪಾರ್ಶ್ವವಾಯು, ಮೂಳೆ ಶಸ್ತ್ರಚಿಕಿತ್ಸೆ, ಗರ್ಭಕೋಶ ಶಸ್ತ್ರಚಿಕಿತ್ಸೆ, ಅಸ್ತಮ ಚಿಕಿತ್ಸೆ, ಗರ್ಭಪಾತ ಪ್ರಕರಣಗಳು, ಪಿತ್ತಕೋಶದ ತೊಂದರೆಗೆ ಸಂಬಂಧಿತ ಚಿಕಿತ್ಸೆ, ಮೂತ್ರ ಪಿಂಡದಲ್ಲಿನ ಕಲ್ಲು ತೆಗೆಯುವ ಚಿಕಿತ್ಸೆ, ಮೆದುಳಿನ ರಕ್ತಸ್ರಾವದ ಚಿಕಿತ್ಸೆ, ಅಲ್ಸರ್ ಚಿಕಿತ್ಸೆ, ಡಯಾಲಿಸಿಸ್ ಚಿಕಿತ್ಸೆ, ಕಿಡ್ನಿ ಶಸ್ತ್ರಚಿಕಿತ್ಸೆ, ಇ.ಎನ್.ಟಿ. ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ನರರೋಗ ಶಸ್ತ್ರಚಿಕಿತ್ಸೆ, ವ್ಯಾಸ್ಕ್ಯೂಲರ್ ಶಸ್ತ್ರಚಿಕಿತ್ಸೆ, ಅನ್ನನಾಳದ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಕರುಳಿನ ಶಸ್ತ್ರಚಿಕಿತ್ಸೆ, ಸ್ತನ ಸಂಬಂಧಿತ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಹರ್ನಿಯ ಶಸ್ತ್ರಚಿಕಿತ್ಸೆ, ಅಪೆಂಡಿಕ್ಸ್ ಶಸ್ತ್ರಚಿಕಿತ್ಸೆ, ಮೂಳೆ ಮುರಿತ/ಡಿಸ್‌ಲೊಕೇಶನ್ ಚಿಕಿತ್ಸೆ, ಇತರೆ ಔದ್ಯೋಗಿಕ ಖಾಯಿಲೆಗಳ ಚಿಕಿತ್ಸೆಗಳಿಗೆ **ರೂ.2,00,000/-**ವರೆಗೆ
15. **ಮದುವೆ ಸಹಾಯಧನ (ಗೃಹ ಲಕ್ಷ್ಮೀ ಬಾಂಡ್)**: ಫಲಾನುಭವಿ ಅಥವಾ ಅವರ ಇಬ್ಬರು ಮಕ್ಕಳ ಮದುವೆಗೆ ತಲಾ **ರೂ.50,000/-**
16. **ಐಕಲು ಸಂಪರ್ಕ ಸೌಲಭ್ಯ (ಕಾರ್ಮಿಕ ಅನಿಲ ಭಾಗ್ಯ)**: ಅನಿಲ ಸಂಪರ್ಕದೊಂದಿಗೆ ಎರಡು ಬರ್ನರ್ ಸ್ಟೌವ್
17. **ಬಿಎಂಟಿಸಿ ಬಸ್ ಪಾಸ್ ಸೌಲಭ್ಯ**: ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿರುವಂತಹ / ವಾಸಸ್ಥಳದಿಂದ ಬೆಂಗಳೂರಿಗೆ ಪ್ರಯಾಣಿಸುವ ನೋಂದಾಯಿತ ಕಟ್ಟಡ ಕಾರ್ಮಿಕರಿಗೆ
18. **ಕೆಎಸ್‌ಆರ್‌ಟಿಸಿ ಬಸ್ ಪಾಸ್‌ನ ಸೌಲಭ್ಯ**: ರಾಜ್ಯದಾದ್ಯಂತ ವಿದ್ಯಾಭ್ಯಾಸದಲ್ಲಿ ತೊಡಗಿರುವ ನೋಂದಾಯಿತ ಕಾರ್ಮಿಕರ ಇಬ್ಬರು ಮಕ್ಕಳಿಗೆ (ಈ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ)
19. **ತಾಯಿ ಮಗು ಸಹಾಯ ಹಸ್ತ**: ಮಹಿಳಾ ಫಲಾನುಭವಿಯು ಮಗುವಿಗೆ ಜನ್ಮ ನೀಡಿದ ಸಂದರ್ಭದಲ್ಲಿ ಆಕೆಯ ಮಗುವಿನ ಶಾಲಾ ಪೂರ್ವ ಶಿಕ್ಷಣ ಮತ್ತು ಪೌಷ್ಠಿಕತೆಗಾಗಿ ಮಗುವಿಗೆ ಮೂರು ವರ್ಷಗಳು ತುಂಬುವವರೆಗೆ ವಾರ್ಷಿಕ **ರೂ.6,000/-** ಗಳ ಸಹಾಯಧನ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1007

ಸದಸ್ಯರ ಹೆಸರು : ಶ್ರೀ ಪ್ರಿಯಾಂಕ್ ಎಂ. ಖರ್ಗೆ (ಚಿತ್ತಾಪುರ ವಿಧಾನಸಭಾ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 04-02-2021

ಉತ್ತರಿಸುವ ಸಚಿವರು : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ

ಪ್ರಶ್ನೆ	ಉತ್ತರ
(ಅ) ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನದಲ್ಲಿ 3 ಸರ್ಕಾರಿ ಶಾಲೆಗಳನ್ನು ದತ್ತು ಪಡೆದುಕೊಂಡು ಅಭಿವೃದ್ಧಿ ಪಡಿಸುವಂತೆ ಶಿಕ್ಷಣ ಇಲಾಖೆಯಿಂದ ಜಿಲ್ಲಾಧಿಕಾರಿಗಳಿಗೆ ಯಾವ ಮಾನದಂಡದ ಮೇಲೆ ಸೂಚಿಸಲಾಗಿದೆ;	2020-21ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ.98 ರಂತೆ ಹಾಗೂ ಕರ್ನಾಟಕ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಮಾರ್ಗಸೂಚಿಗಳು-2014ರ ಅನುಬಂಧ-III ರ ಕಂಡಿಕೆ 12 ರಂತೆ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ ಅಡಿಯಲ್ಲಿ 3 ಸರ್ಕಾರಿ ಶಾಲೆಗಳನ್ನು ದತ್ತು ಪಡೆದುಕೊಂಡು ಅಭಿವೃದ್ಧಿ ಪಡಿಸಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ. ಸರ್ಕಾರದ ಆದೇಶದ ಪ್ರತಿ ಲಗತ್ತಿಸಿದೆ (ಅನುಬಂಧ-I).
(ಆ) ಶಾಲೆಗಳ ಮೂಲಭೂತ ಸೌಕರ್ಯಗಳಿಗೆ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನವನ್ನು ಉಪಯೋಗಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ	ಹೌದು. ಬಂದಿದೆ.
(ಇ) ಬಂದಿದ್ದರೆ ಶಾಲೆಗಳ ಅಭಿವೃದ್ಧಿಗೆ ಪ್ರತ್ಯೇಕ ಅನುದಾನವನ್ನು ಮೀಸಲಿಡಲು ಸರ್ಕಾರದ ಮಟ್ಟದಲ್ಲಿ ಚರ್ಚಿಸಲಾಗಿದೆಯೇ;	ಕಳೆದ ಮೂರು ವರ್ಷಗಳಲ್ಲಿ ಮುಂದುವರೆದ ಯೋಜನೆ ಅಡಿಯಲ್ಲಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಮೂಲಭೂತ ಸೌಕರ್ಯಕ್ಕಾಗಿ ಈ ಕೆಳಕಂಡಂತೆ ಅನುದಾನ ಬಿಡುಗಡೆಗೊಳಿಸಲಾಗಿದೆ

ವರ್ಷ	ಶಾಲೆಗಳ ಸಂಖ್ಯೆ	ಕೊಠಡಿಗಳ ಸಂಖ್ಯೆ	ಬಿಡುಗಡೆಯಾದ ಅನುದಾನ (ರೂ. ಲಕ್ಷಗಳಲ್ಲಿ)
2017-18	1023	1299	13038.72
2018-19	1909	2966	17445.68

2019–20	611	942	21648.71
ಒಟ್ಟು	**3541**	**5207**	**52133.11**

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯಡಿ ಅಂದಾಜು 48 ಸಾವಿರ ಸರ್ಕಾರಿ ಶಾಲೆಗಳು ಕಾರ್ಯನಿರ್ವಹಿಸುತ್ತಿದ್ದು, ಸದರಿ ಶಾಲೆಗಳಿಗೆ ಏಕಕಾಲಕ್ಕೆ ಮೂಲಭೂತ ಸೌಕರ್ಯ ಒದಗಿಸುವುದು ಕಷ್ಟಸಾಧ್ಯವಾಗಿದೆ. ಈ ನಿಟ್ಟಿನಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಗೆ ಮೂಲಭೂತ ಸೌಕರ್ಯಕ್ಕಾಗಿ ಒದಗಿಸಲಾದ ಅನುದಾನವನ್ನು ಹೊರತುಪಡಿಸಿ ಶಾಸಕರ ಪ್ರದೇಶಾಭಿವೃದ್ಧಿ ಯೋಜನೆ ಅಡಿಯಲ್ಲಿ ಮಾನ್ಯ ಶಾಸಕರಿಗೆ ಒದಗಿಸಲಾದ ಅನುದಾನದಡಿ 3 ಸರ್ಕಾರಿ ಶಾಲೆಗಳನ್ನು ದತ್ತು ತೆಗೆದುಕೊಳ್ಳುವ ಯೋಜನೆಗೆ ಚಾಲನೆ ನೀಡಲಾಗಿದೆ.

(ಈ) ಚರ್ಚಿಸಿದ್ದಲ್ಲಿ ಎಷ್ಟು ಶಾಲೆಗಳ ಅಭಿವೃದ್ಧಿಗೆ ಎಷ್ಟೆಷ್ಟು ಅನುದಾನ ಮೀಸಲಿಡಲಾಗುತ್ತದೆ? (ವಿವರ ನೀಡುವುದು)	ಶಾಸಕರ ಪ್ರದೇಶಾಭಿವೃದ್ಧಿ ಯೋಜನೆ ಅಡಿಯಲ್ಲಿ ಒದಗಿಸಲಾದ ಅನುದಾನದಡಿ ಮಾನ್ಯ ಶಾಸಕರ ವಿವೇಚನೆಯಂತೆ ಪ್ರತಿ ವಿಧಾನಸಭಾ ಕ್ಷೇತ್ರದ ಕನಿಷ್ಠ 3 ಸರ್ಕಾರಿ ಶಾಲೆಗಳನ್ನು ದತ್ತು ತೆಗೆದುಕೊಂಡು ಅಭಿವೃದ್ಧಿಪಡಿಸಬಹುದಾಗಿದೆ.

ಇಪಿ 11 ಯೋಯೋಕ 2021

(ಎಸ್. ಸುರೇಶ್ ಕುಮಾರ್)

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ

ಸಕಾಲ ಸಚಿವರು

1007

ಅನುಬಂಧ-1

ಕರ್ನಾಟಕ ಸರ್ಕಾರದ ನಡವಳಿಗಳು.

ವಿಷಯ: 2020-21ನೇ ಸಾಲಿನ ಶಾಸಕರ ಪ್ರದೇಶಾಭಿವೃದ್ಧಿ ಯೋಜನೆ ಅಡಿಯಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರದ ಮೂರು ಸರ್ಕಾರಿ ಶಾಲೆಗಳನ್ನು ದತ್ತು ತೆಗೆದುಕೊಂಡು ಅಭಿವೃದ್ಧಿಪಡಿಸುವ ಬಗ್ಗೆ

ಓದಲಾಗಿದೆ:
1. 2020-21ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 98.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ:ಯೋ(1)ಮೂ.ಶಾ.ಪ್ರ.01/2020-21, ದಿನಾಂಕ:12.06.202
3. ಸರ್ಕಾರದ ಅಧಿಕೃತ ಜ್ಞಾಪನ ಪಿಡಿಎಸ್ 46 ಕೆಎಲ್ಎಸ್ 2020, ದಿನಾಂಕ:08.06.2020

******

ಪ್ರಸ್ತಾವನೆ

ದಿನಾಂಕ:05.03.2020 ರಂದು ಸನ್ಮಾನ್ಯ ಮುಖ್ಯ ಮಂತ್ರಿಯವರು ವಿಧಾನ ಮಂಡಲದಲ್ಲಿ ಮಂಡಿಸಿದ 2020-21ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಮೇಲೆ ಓದಲಾದ ಕ್ರಮಾಂಕ (1) ರ ಕಂಡಿಕೆ 98 ರಲ್ಲಿ ಈ ಕೆಳಕಂಡಂತೆ ಘೋಷಿಸಿರುತ್ತಾರೆ

"ಶಾಸಕರುಗಳಿಂದ ತಮ್ಮ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಮೂರು ಸರ್ಕಾರಿ ಶಾಲೆಗಳನ್ನು ದತ್ತು ತೆಗೆದುಕೊಂಡು ಅಭಿವೃದ್ಧಿಪಡಿಸಲು ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯಡಿ ಕ್ರಮ ಕೈಗೊಳ್ಳಲಾಗುವುದು.

ಮೇಲೆ ಓದಲಾದ ಕ್ರಮಾಂಕ (2) ರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರದಲ್ಲಿ ಶಾಸಕರ ಪ್ರದೇಶಾಭಿವೃದ್ಧಿ ಯೋಜನೆ ಅಡಿಯಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರದ ಮೂರು ಸರ್ಕಾರಿ ಶಾಲೆಗಳನ್ನು ದತ್ತು ತೆಗೆದುಕೊಂಡು ಅಭಿವೃದ್ಧಿಪಡಿಸುವ ಬಗ್ಗೆ ಪ್ರಸ್ತಾಪಿಸಿರುತ್ತಾರೆ.

ಮೇಲೆ ಓದಲಾದ ಕ್ರಮಾಂಕ (3) ರ ಯೋಜನಾ ಇಲಾಖೆಯ ಅಧಿಕೃತ ಜ್ಞಾಪನದಲ್ಲಿ ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಮಾರ್ಗಸೂಚಿಗಳು-2014ರ ಅನುಬಂಧ-III ರ ಮಾಧ್ಯಮಿಕ ಮತ್ತು ಪ್ರೌಢ ಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳು ವಿಭಾಗದ ಕಂಡಿಕೆ 12ರಲ್ಲಿ ಶಾಸಕರುಗಳಿಂದ ತಮ್ಮ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಮೂರು ಸರ್ಕಾರಿ ಶಾಲೆಗಳನ್ನು ದತ್ತು ತೆಗೆದುಕೊಂಡು ಅಭಿವೃದ್ಧಿಪಡಿಸಲು ಅವಕಾಶ [illegible]

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಇಪಿ 29 ಎಂಪಿಇ 2020 (ಭಾಗ-1) ಬೆಂಗಳೂರು
ದಿನಾಂಕ: 3ನೇ ಜುಲೈ 2020

2020-21ನೇ ಸಾಲಿಗೆ ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಲ್ಲಿ, ಪ್ರತಿ ವಿಧಾನಸಭಾ ಕ್ಷೇತ್ರದ ಮೂರು ಸರ್ಕಾರಿ ಶಾಲೆಗಳನ್ನು ಶಾಸಕರ ಪ್ರದೇಶಾಭಿವೃದ್ಧಿ ಯೋಜನೆ ಅಡಿಯಲ್ಲಿ ದತ್ತು ತೆಗೆದುಕೊಂಡು ಅಭಿವೃದ್ಧಿಪಡಿಸುವ ಯೋಜನೆಯನ್ನು ಅನುಷ್ಠಾನಗೊಳಿಸಲು ಹರ್ಷವಾಗುತ್ತದೆ.

ಸದರಿ ಯೋಜನೆಯನ್ನು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ನಿರ್ದೇಶನದಡಿ ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ), ಇವರು ಅನುಷ್ಠಾನಗೊಳಿಸತಕ್ಕದ್ದು.

ಸದರಿ ಯೋಜನೆಯ ಅನುಷ್ಠಾನಕ್ಕೆ ಅಗತ್ಯವಾದ ಅನುದಾನವನ್ನು ಸ್ಥಳೀಯ ಶಾಸಕರ ಪ್ರದೇಶಾಭಿವೃದ್ಧಿ ಯೋಜನೆ ಅಡಿಯಲ್ಲಿ ಲಭ್ಯವಿರುವ ಅನುದಾನದಿಂದ ನಿಯಮಾನುಸಾರ ಭರಿಸತಕ್ಕದ್ದು.

ಸ್ಥಳೀಯ ಶಾಸಕರ ಪ್ರದೇಶಾಭಿವೃದ್ಧಿ ಯೋಜನೆ ಅಡಿಯಲ್ಲಿ ಮೂರು ಶಾಲೆಗಳನ್ನು ದತ್ತು ತೆಗೆದುಕೊಳ್ಳಲು ಅನುಕೂಲವಾಗುವಂತೆ ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಪ್ರತಿ ಕ್ಷೇತ್ರದಲ್ಲಿ ಕನಿಷ್ಠ 10 ಅರ್ಹ ಶಾಲೆಗಳನ್ನು ಗುರುತಿಸಿ ಅಗತ್ಯವಿರುವ ಕಾಮಗಾರಿಗಳನ್ನೊಳಗೊಂಡ ಪ್ರಸ್ತಾವನೆ ತಯಾರಿಸಿ ಶಾಸಕರಿಗೆ ಸಲ್ಲಿಸಲು ತಿಳಿಸಿದೆ. ಮಾನ್ಯ ಶಾಸಕರಿಂದ ಅನುಮೋದನೆಗೊಂಡ ಕಾಮಗಾರಿಗಳ ಪಟ್ಟಿಯನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿ ಕಾರ್ಯದೇಶ ಜಾರಿಯಾಗುವಂತೆ ನೋಡಿಕೊಳ್ಳತಕ್ಕದ್ದು. ಆಯಾ ಜಿಲ್ಲಾ ಉಪನಿರ್ದೇಶಕರು ತಮ್ಮ ಜಿಲ್ಲೆಯ ಅನುಮೋದಿತ ಕಾಮಗಾರಿಗಳ ಪಟ್ಟಿಯನ್ನು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರಿಗೆ ಆಗಸ್ಟ್-2020ರ ಒಳಗೆ ಸಲ್ಲಿಸತಕ್ಕದ್ದು. ದತ್ತು ತೆಗೆದುಕೊಳ್ಳುವ ಮೂರು ಸರ್ಕಾರಿ ಶಾಲೆಗಳ ಪೈಕಿ ಆದ್ಯತೆಯ ಮೇರೆಗೆ ಒಂದು ಕರ್ನಾಟಕ ಪಬ್ಲಿಕ್ ಶಾಲೆ ಇರುವಂತೆ ಕ್ರಮವಹಿಸತಕ್ಕದ್ದು. ಆಗಸ್ಟ್-2020ರ ಅಂತ್ಯದೊಳಗೆ ದತ್ತು ಪಡೆದ ಮೂರು ಶಾಲೆಗಳ ಅಭಿವೃದ್ಧಿ ಕಾರ್ಯಾರಂಭ ಮಾಡಲು ಕ್ರಮವಹಿಸತಕ್ಕದ್ದು.

ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಸದರಿ ಕಾರ್ಯಕ್ರಮ ಅನುಷ್ಠಾನ ಸಂಬಂಧ ಮೇಲುಸ್ತುವಾರಿವಹಿಸತಕ್ಕದ್ದು ಹಾಗೂ ಯಾವುದೇ ಕಾರಣಕ್ಕೂ ಅನುದಾನವನ್ನು ವ್ಯಪಗತವಾಗದಂತೆ 2020-21ನೇ ಸಾಲಿನ ಆರ್ಥಿಕ ವರ್ಷಾಂತ್ಯದೊಳಗೆ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಕ್ರಮವಹಿಸತಕ್ಕದ್ದು.

2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತಶಾಖೆ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು.
4. ಆಂತರಿಕ ಆರ್ಥಿಕ ಸಲಹೆಗಾರರ ಆಪ್ತ ಸಹಾಯಕರು, ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

1007

ಕರ್ನಾಟಕ ಸರ್ಕಾರ

ಸಂಖ್ಯೆ: ಪಿಡಿಎಸ್ 46 ಕೆಎಲ್‌ಎಡಿಎಸ್ 2021

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:06.[illegible].2021

ಅಧಿಕೃತ ಜ್ಞಾಪನ

ವಿಷಯ: ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಮಾರ್ಗಸೂಚಿಗಳು-2014 ಸೇರ್ಪಡೆ ಮಾಡುವ ಬಗ್ಗೆ

*****

ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ ಅಡಿ ಈ ಕೆಳಕಂಡ ಕಾಮಗಾರಿಯನ್ನು ಕೈಗೊಳ್ಳಲು ಮಾರ್ಗಸೂಚಿಗಳಲ್ಲಿ ಅವಕಾಶ ಕಲ್ಪಿಸಿ ಮಾರ್ಗಸೂಚಿಗಳ ಅನುಬಂಧ-IIIರಲ್ಲಿ ಸೇರ್ಪಡೆ ಮಾಡಲಾಗಿದೆ

12. ಶಾಸಕರುಗಳಿಂದ ತಮ್ಮ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಮೂರು ಸರ್ಕಾರಿ ಶಾಲೆಗಳನ್ನು ದತ್ತು ತೆಗೆದುಕೊಂಡು ಅಭಿವೃದ್ಧಿಪಡಿಸಲು ಅವಕಾಶ ಕಲ್ಪಿಸಿದೆ.

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

Sowbhagya
(ಸೌಭಾಗ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ)-1&2
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ

ಇವರಿಗೆ,

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು-ರಾಜ್ಯ ಪತ್ರದಲ್ಲಿ ಪ್ರಕಟಿಸಲು ಮತ್ತು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಗೆ 1000 ಪ್ರತಿಗಳನ್ನು ಪೂರೈಸಲು

ಇವರಿಗೆ

1. ಪ್ರಧಾನ ಮಹಾಲೇಖಪಾಲರು (ಲೆಕ್ಕಪತ್ರ)/(ಲೆಕ್ಕಪರಿಶೋಧನೆ)ಮತ್ತು 1&2, ಕರ್ನಾಟಕ, ಬೆಂಗಳೂರು-0[illegible]
2. ವಿಧಾನಸಭೆ/ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಸದಸ್ಯರುಗಳು
3. ಸರ್ಕಾರದ ಮುಖ್ಯಕಾರ್ಯದರ್ಶಿಯವರು, ವಿಧಾನಸೌಧ
4. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಯವರು, ವಿಧಾನಸೌಧ
5. ಸನ್ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಯವರು
6. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಯವರ, ಅಭಿವೃದ್ಧಿ ಆಯುಕ್ತರು ಮತ್ತು ಅಪರ ಮುಖ್ಯ ಕಾರ್ಯದರ್ಶಿ, ಯೋಜನೆ ಇಲಾಖೆ
7. ಎಲ್ಲಾ ಜಿಲ್ಲಾಧಿಕಾರಿಗಳು/ಉಪವಿಭಾಗಾಧಿಕಾರಿಗಳು
8. ಎಲ್ಲಾ ಜಿಲ್ಲಾ ಪಂಚಾಯತ್ ಗಳ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1016
ಸದಸ್ಯರ ಹೆಸರು	:	ಶ್ರೀ ಅರಗ ಜ್ಞಾನೇಂದ್ರ
ಉತ್ತರಿಸುವ ದಿನಾಂಕ	:	04.02.2021.
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಸಚಿವರು.

ಕ್ರ.ಸಂ.	ಪ್ರಶ್ನೆ	ಉತ್ತರ
(ಅ)	2020-21ನೇ ಸಾಲಿನ ಆಯವ್ಯಯದಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ವಿವಿಧ ಕಾರ್ಯಕ್ರಮಗಳಗಾಗಿ ನಿಗಮದಿಪಡಿಸಿದ ಅನುದಾನವೆಷ್ಟು; (ಯೋಜನೆ/ಕಾರ್ಯಕ್ರಮವಾರು ವಿವರ ನೀಡುವುದು)	ಸಮಾಜ ಕಲ್ಯಾಣ ಇಲಾಖೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣಕ್ಕಾಗಿ 2020-21ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾದ ಅನುದಾನ ಹಾಗೂ ದಿನಾಂಕ: 31-12-2020ರವರೆಗೆ ವೆಚ್ಚ ಮಾಡಲಾದ ಯೋಜನೆ/ಕಾರ್ಯಕ್ರಮವಾರು ವಿವರಗಳನ್ನು **ಅನುಬಂಧ-1** ಮತ್ತು **ಅನುಬಂಧ-2ರಲ್ಲಿ** ಒದಗಿಸಲಾಗಿದೆ.
(ಆ)	ದಿನಾಂಕ:31.12.2020ರ ವರೆಗೆ ಆಗಿರುವ ವೆಚ್ಚ ಎಷ್ಟು (ಯೋಜನೆ/ಕಾರ್ಯಕ್ರಮವಾರು ವಿವರ ನೀಡುವುದು)	
(ಇ)	ಶಿವಮೊಗ್ಗ ಜಿಲ್ಲೆಗೆ 2020-21ನೇ ಸಾಲಿನಲ್ಲಿ ನಿಗದಿಪಡಿಸಲಾದ ಅನುದಾನದಲ್ಲಿ ಬಿಡುಗಡೆ ಮಾಡಲಾದ ಅನುದಾನ ಹಾಗೂ ಆಗಿರುವ ಆರ್ಥಿಕ ಪ್ರಗತಿಯನ್ನು ಕಾರ್ಯಕ್ರಮವಾರು ವಿವರ ನೀಡುವುದು;	2020-21ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಗೆ ಪರಿಶಿಷ್ಟ ಜಾತಿಯವರ ಕಲ್ಯಾಣಕ್ಕಾಗಿ ನಿಗದಿಪಡಿಸಲಾದ ಅನುದಾನ ಹಾಗೂ ಬಿಡುಗಡೆ ಮಾಡಲಾದ ಕಾರ್ಯಕ್ರಮವಾರು ವಿವರಗಳನ್ನು **ಅನುಬಂಧ-3ರಲ್ಲಿ** ಒದಗಿಸಲಾಗಿದೆ. ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ ಪ್ರೇರಣಾ ಕಿರುಸಾಲ ಯೋಜನೆಯಡಿ ರೂ.18.75 ಲಕ್ಷಗಳನ್ನು ವೆಚ್ಚ ಮಾಡಿದೆ ಹಾಗೂ ಶಿರಾಳಕೊಪ್ಪದಲ್ಲಿ ವಾಲ್ಮೀಕಿ ಭವನದ ಮೂಲಭೂತ ಸೌಕರ್ಯಕ್ಕಾಗಿ ಹೆಚ್ಚುವರಿ ಅನುದಾನ ರೂ.50.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.
(ಈ)	ನಿಗದಿತ ಗುರಿ ಸಾಧಿಸಲಾಗಿದೆಯೇ; ಇಲ್ಲದಿದ್ದಲ್ಲಿ ಕಾರಣಗಳೇನು?	ಕೋವಿಡ್-19ರ ಸಾಂಕ್ರಾಮಿಕ ರೋಗದ ನಿಮಿತ್ತ ಲಾಕ್‌ಡೌನ್ ಮಾಡಲಾಗಿದ್ದರಿಂದ 2020-21ನೇ ಸಾಲಿಗೆ ವಿದ್ಯಾರ್ಥಿ ನಿಲಯಗಳ ಪ್ರಾರಂಭ, ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡುವಿಕೆ, ಬಹುಮಾನ ಹಣ, ಅಂತರಜಾತಿ, ಸರಳ ವಿವಾಹ ಒಳಸಮುದಾಯ ವಿವಾಹ ಮತ್ತು ಪರಿಶಿಷ್ಟ ಜಾತಿ ಕಾಲೋನಿಗಳಿಗೆ ಮೂಲಭೂತ ಸೌಕರ್ಯ ಒದಗಿಸುವ ಕಾರ್ಯಕ್ರಮವು ನಿಗಧಿತ ಗುರಿ ಸಾಧಿಸುವಲ್ಲಿ ವಿಳಂಬವಾಗಿದೆ. ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿವೇತನ ಮಂಜೂರಾತಿಗಾಗಿ ಆನ್‌ಲೈನ್ ಪ್ರಕ್ರಿಯೆಯು ಪ್ರಾರಂಭವಾಗಿದ್ದು, ಇಲಾಖೆಯ ಎಲ್ಲಾ ಕಾರ್ಯಕ್ರಮಗಳನ್ನು ನಿಗದಿತ ಅವಧಿಯಲ್ಲಿ ಅನುಷ್ಠಾನಗೊಳಿಸಲು ಕ್ರಮವಹಿಸಲಾಗುವುದು. 2020-21ನೇ ಸಾಲಿನಲ್ಲಿ ನಿಗಮಗಳ ವಿವಿಧ ಯೋಜನೆಗಳಡಿ ಸೌಲಭ್ಯ ಕಲ್ಪಿಸಲು ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. ಆಯ್ಕೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಪ್ರಗತಿ ಸಾಧಿಸಲಾಗುವುದು.

ಸಂಖ್ಯೆ: ಸಕಇ 41 ಎಸ್‌ಡಿಸಿ 2021

(ಬಿ.ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು.

1016

ಅನುಬಂಧ-1

ಪ್ರಶ್ನೆ ಸಂಖ್ಯೆ: 1016 ಕ್ಕೆ ಅನುಬಂಧ-1

ಸಮಾಜ ಕಲ್ಯಾಣ ಇಲಾಖೆ

(ಪರಿಶಿಷ್ಟ ಜಾತಿ ಕಲ್ಯಾಣ)

2020-21ನೇ ಸಾಲಿನ ಕಾರ್ಯಕ್ರಮಗಳು ಡಿಸೆಂಬರ್-2020 ರ ಮಾಹೆಯ ಅಂತ್ಯಕ್ಕೆ ಪ್ರಗತಿ ವರದಿ.

ಕ್ರ. ಸಂ	ಕಾರ್ಯಕ್ರಮ / ಲೆಕ್ಕಶೀರ್ಷಿಕೆ	ಅನುದಾನ	ಪರಿಷ್ಕೃತ ಅನುದಾನ	ಬಿಡುಗಡೆ	ಖರ್ಚು
		ಒಟ್ಟು		ಒಟ್ಟು	ಒಟ್ಟು
1	2	2	3	4	5
A)	ರಾಜ್ಯ ವಲಯ				
I)	ಸಮಾಜ ಕಲ್ಯಾಣ ಆಯುಕ್ತರ ಕಛೇರಿ				
1	ನಿರ್ದೇಶನ ಮತ್ತು ಆಡಳಿತ 2225-01-001-0-01	1255.00	1255.00	1149.00	746.25
2	ಡಾ:ಬಿ.ಆರ್.ಅಂಬೇಡ್ಕರ್ ರವರ ಜನ್ಮ ದಿನಾಚರಣೆ 2225-01-102-0-09	3.00	3.00	2.25	1.50
3	ವಿಚಾರಗೋಷ್ಠಿ ಮತ್ತು ಕಮ್ಮಟಗಳನ್ನು ನಡೆಸಲು 2225-01-277-0-66	300.00	300.00	225.00	25.52
4	ಅಸ್ಪೃಶ್ಯತಾ ನಿರ್ಮೂಲನೆ 2225-01-277-0-67	6000.00	6000.00	4500.00	2941.80
5	ಪ.ಜಾತಿ / ಪ.ವರ್ಗದ ಸಂತ್ರಸ್ತರಿಗೆ ಪರಿಹಾರ 2225-01-796-0-01	3000.00	3000.00	2250.00	1500.00
6	ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013ರಡಿ ಬಳಕೆಯಾಗದೆ ಇರುವ ಮೊತ್ತ 2225-01-001-0-08 (SC/ST)	7275.00	7275.00	5454.00	3636.00
7	ಪರಿಶಿಷ್ಟ ಜಾತಿಯವರಿಗೆ ವಿವಿಧ ಅಭಿವೃದ್ಧಿ ಯೋಜನೆ 2225-01-796-0-02	24000.00	24000.00	18060.00	11583.65
8	ವಿಶೇಷ ಘಟಕ ಯೋಜನೆಗಾಗಿ ವಿಶೇಷ ಕೇಂದ್ರೀಯ ಸಹಾಯ 2225-01-793-0-01	10000.00	10000.00	7500.00	5000.00
9	ವಸತಿ ಗೃಹ ಕಟ್ಟಡಗಳ ನಿರ್ಮಾಣ 4225-01-277-2-01	500.00	500.00	0.00	0.00
10	ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ (ರಾಜ್ಯ ಯೋಜನೆ) 4225-01-277-2-03	26000.00	16000.00	13000.00	2000.00
11	ಪರಿಶಿಷ ಜಾತಿಯವರಿಗೆ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳು 4225-01-796-0-01	36375.00	26375.00	18187.50	18187.50
12	ವಸತಿ ಶಾಲೆಗಳ ನಿರ್ವಹಣೆ ಮತ್ತು ವಸತಿ ದುರಸ್ಥಿ ಶಾಲೆಗಳ ನಿರ್ವಹಣೆ - ಇತರ ವೆಚ್ಚಗಳು 2225-01-277-0-19	2500.00	1500.00	1250.00	625.00
13	ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013ರಡಿ ಬಳಕೆಯಾಗದೆ ಇರುವ ಮೊತ್ತ 4225-01-190-0-06	11624.00	11624.00	8718.00	5812.00
14	ಡಾ:ಬಿ.ಆರ್.ಅಂಬೇಡ್ಕರ್ ವಸತಿ ಯೋಜನೆ (ಆರ್.ಜಿ.ಹೆಚ್.ಸಿ.ಎಲ್ ಮೂಲಕ) 2225-01-283-0-10	20000.00	20000.00	15000.00	10000.00
15	ಖಾಲಿ ಹುದ್ದೆಗಳಗಾಗಿ ಅನುದಾನ 2225-01-800-0-22	11097.00	8805.00	0.00	0.00
	ಒಟ್ಟು (I)	159929.00	136637.00	95295.75	62059.22

ಕ್ರ. ಸಂ	ಕಾರ್ಯಕ್ರಮ / ಲೆಕ್ಕಶೀರ್ಷಿಕೆ	ಅನುದಾನ ಒಟ್ಟು	ಪರಿಷ್ಕೃತ ಅನುದಾನ	ಬಿಡುಗಡೆ ಒಟ್ಟು	ಖರ್ಚು ಒಟ್ಟು
1	2	2	3	4	5
II)	ಪ್ರಾಂಶುಪಾಲರು, ಪರೀಕ್ಷಾ ಪೂರ್ವ ತರಬೇತಿ ಕೇಂದ್ರ				
16	ತರಬೇತಿ ಮತ್ತು ಅದಕ್ಕೆ ಸಂಬಂಧಿತ ಯೋಜನೆಗಳು (ಕೇಂ.ಪು.ಯೋ) 2225-01-277-0-02	1435.00	436.00	436.00	404.91
	ಒಟ್ಟು (II)	1435.00	436.00	436.00	404.91
III)	ನಿರ್ದೇಶಕರು, ಡಾ|| ಬಿ.ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆ				
17	ಡಾ:ಬಿ.ಆರ್.ಅಂಬೇಡ್ಕರ್ ರವರ ಜನ್ಮ ಶತಾಬ್ದಿ ಕಾರ್ಯಕ್ರಮದಡಿ ಸಂಶೋಧನಾ ಸಂಸ್ಥೆ 2225-01-001-0-06	130.00	130.39	88.75	46.47
	ಒಟ್ಟು (III)	130.00	130.39	88.75	46.47
IV)	ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ				
18	ಅಸ್ಪೃಶ್ಯತಾ ಅಪರಾಧಗಳ ಅಧಿನಿಯಮ 1955 (ಕೇಂ.ಪು.ಯೋ) 2225-01-001-0-05	1994.00	1994.00	1903.75	1269.27
	ಒಟ್ಟು (IV)	1994.00	1994.00	1903.75	1269.27
V)	ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ				
19	ಸಮುದಾಯ ನೀರಾವರಿ ಯೋಜನೆ ಗಂಗಾ ಕಲ್ಯಾಣ 2225-01-102-0-11	5000.00	2500.00	0.00	0.00
20	ಸ್ವಯಂ ಉದ್ಯೋಗ ಯೋಜನೆ (ಇತರೆ ವೆಚ್ಚಗಳು) 2225-01-190-2-01	7500.00	2500.00	0.00	0.00
21	ಸ್ವ ಸಹಾಯ ಸಂಘಗಳ ಮೂಲಕ ಪರಿಶಿಷ್ಟ ಜಾತಿಯವರಿಗೆ ಕಿರು ಸಾಲ ಯೋಜನೆ – ಸಹಾಯಧನ 2225-01-190-2-09	1000.00	500.00	0.00	0.00
22	ಸ್ವ ಸಹಾಯ ಸಂಘಗಳ ಮೂಲಕ ಪರಿಶಿಷ್ಟ ಜಾತಿಯವರಿಗೆ ಕಿರು ಸಾಲ ಯೋಜನೆ – (ಹೂಡಿಕೆ) 4225-01-190-0-03	550.00	300.00	0.00	0.00
	ಒಟ್ಟು (V)	14050.00	5800.00	0.00	0.00
VI)	ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ				
23	ವಸತಿ ಶಾಲೆಗಳ ಸಂಘ – ಇತರೆ ವೆಚ್ಚಗಳು 2225-01-277-0-53	500.00	500.00	375.00	250.00
24	ವಸತಿ ಶಾಲೆಗಳ ನಿರ್ವಹಣೆ- ಇತರೆ ವೆಚ್ಚಗಳು 2225-01-277-0-65	51500.00	31500.00	25750.00	25750.00
	ಒಟ್ಟು (V)	52000.00	32000.00	26125.00	26000.00
VII)	ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ				
25	ಬಂಜಾರ ಸಮುದಾಯ ಅಭಿವೃದ್ಧಿ – ಇತರೆ ವೆಚ್ಚಗಳು 2225-01-190-2-10	5000.00	2500.00	1250.00	1250.00
	ಒಟ್ಟು (VII)	5000.00	2500.00	1250.00	1250.00
VIII)	ಡಾ|| ಬಾಬು ಜಗಜೀವನರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ				
26	ಡಾ|| ಬಾಬು ಜಗಜೀವನರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ 4225-01-190-0-05	3000.00	1500.00	0.00	0.00
	ಒಟ್ಟು (VIII)	3000.00	1500.00	0.00	0.00
IX)	ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ				
27	ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ 2225-01-277-0-69	164.00	196.00	133.25	87.42
	ಒಟ್ಟು (IX)	164.00	196.00	133.25	87.42

ಕ್ರ. ಸಂ	ಕಾರ್ಯಕ್ರಮ / ಲೆಕ್ಕಶೀರ್ಷಿಕೆ	ಅನುದಾನ ಒಟ್ಟು	ಪರಿಷ್ಕೃತ ಅನುದಾನ	ಬಿಡುಗಡೆ ಒಟ್ಟು	ಖರ್ಚು ಒಟ್ಟು
1	2	2	3	4	5
X)	ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ				
28	ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ 2225-01-001-0-07	289.00	289.00	245.25	140.25
	ಒಟ್ಟು (X)	289.00	289.00	245.25	140.25
XI)	ಭೋವಿ ಅಭಿವೃದ್ಧಿ ನಿಗಮ				
29	ಭೋವಿ ಅಭಿವೃದ್ಧಿ ನಿಗಮ 2225-01-190-4-01	4000.00	2000.00	0.00	0.00
30	ಭೋವಿ ಅಭಿವೃದ್ಧಿ ನಿಗಮ ಷೇರು ಬಂಡವಾಳ 4225-01-190-0-07	2000.00	1000.00	0.00	0.00
	ಒಟ್ಟು (XI)	6000.00	3000.00	0.00	0.00
XII)	ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ				
31	ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ 2225-01-190-3-01	5000.00	2500.00	0.00	0.00
32	ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ ಬಂಡವಾಳ ಹೂಡಿಕೆ 4225-01-190-0-09	4000.00	2000.00	0.00	0.00
	ಒಟ್ಟು (XII)	9000.00	4500.00	0.00	0.00
ಒಟ್ಟಾರೆ ಮೊತ್ತ (ರಾಜ್ಯ ವಲಯ) (ಅ) (I)-(XII)		252991.00	188982.39	125477.75	91257.54
B)	ಜಿಲ್ಲಾ ವಲಯ				
(i)	ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳು				
1	ನಿರ್ದೇಶನ ಮತ್ತು ಆಡಳಿತ ಕಾರ್ಯನಿರ್ವಾಹಕ ಸಿಬ್ಬಂದಿ 2225-00-101-0-30	10315.18	10315.18	10315.00	5786.30
2	ಸರ್ಕಾರಿ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ನಿರ್ವಹಣೆ 2225-00-101-0-29	15781.17	15781.17	15781.17	7958.61
3	ಕಾಲೇಜು ವಿದ್ಯಾರ್ಥಿಗಳಿಗೆ ನೆರವು / ಇತರ ರಿಯಾಯಿತಿಗಳು / ಪ್ರತಿಭಾವಂತ ಪ.ಜಾತಿಯ ವಿದ್ಯಾರ್ಥಿಗಳಿಗೆ ನೆರವು 2225-00-101-0-37	10400.00	10400.00	10400.00	5536.55
4	ಖಾಸಗಿ ವಿದ್ಯಾರ್ಥಿನಿಲಯಗಳಿಗೆ ಸಹಾಯಾನುದಾನ 2225-00-101-0-42	1050.00	735.00	735.00	15.50
5	ಪರಿಶಿಷ್ಟ ಜಾತಿಯವರಿಗೆ ನಿವಾಸಿ ಶಾಲೆಗಳು 2225-00-101-0-32	2612.62	2223.00	2223.00	1075.21
6	ಪರಿಶಿಷ್ಟ ಜಾತಿಯ ಮಹಿಳೆಯರಿಗೆ ಹೊಲಿಗೆ ತರಬೇತಿ ಕೇಂದ್ರಗಳು 2225-00-101-0-47	31.72	31.72	31.72	19.82
7	ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ 2225-00-101-0-27	23000.00	23000.00	23000.00	5868.92
	ಒಟ್ಟು (i)	63190.69	62486.07	62485.89	26260.91

ಕ್ರ. ಸಂ	ಕಾರ್ಯಕ್ರಮ / ಲೆಕ್ಕಶೀರ್ಷಿಕೆ	ಅನುದಾನ	ಪರಿಷ್ಕೃತ ಅನುದಾನ	ಬಿಡುಗಡೆ	ಖರ್ಚು
		ಒಟ್ಟು		ಒಟ್ಟು	ಒಟ್ಟು
1	2	2	3	4	5
(ii)	ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳು				
1	ಪ.ಜಾತಿ ಕಾನೂನು ಪದವೀಧರರಿಗೆ ಪ್ರೋತ್ಸಾಹಧನ 2225-00-101-0-80	**500.02**	**500.02**	**500.02**	**254.69**
